ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

14 ಜನವರಿ 2015 ಪುಟ 20 ರೂ. 15/-

ಗಾಂಧಿವಾದ ಕೊಲ್ಲುತ್ತಿರುವ ಗೋಡ್ಸೆವಾದ





ಚರ್ಚ್‌ಸ್ಟ್ರೀಟ್ ಸ್ಫೋಟ

ನಿಗೂಢ ಪ್ರಶ್ನೆಗಳು

ದಕ್ಷಿಣ ಕನ್ನಡ

ಹಳ್ಳ ಹಿಡಿದಿದೆ ಕಾಂಗ್ರೆಸ್

ಮಂಡ್ಯ

ಅಂಬಿಗೆ ಸಿದ್ರಾಜು ತಿರುಮಂತ್ರ

ಹುಬ್ಬಳ್ಳಿ


ಕನ್ನ ಹಾಕಿದ ಕರಡಿಗಳು



ಪಶ್ಚಿಮ ಘಟ್ಟ

ಪರಿಸರ ರಕ್ಷಣೆ ಓಕೆ

ಜನರ ಒಕ್ಕಲೆಬ್ಬಿಸುವಿಕೆ ಯಾಕೆ?



ಕಾಲ ಬಲುಬೇಗ ಬರತ್ತೈತೆ

ಹೊಸ ವರ್ಷದೆಡೆಗೆ ಮುಖ ಮಾಡಿ ನಿಂತಿದ್ದೇವೆ. ಹೊಸ ಕಾಲದೆಡೆಗೆ ಮುಖ ಮಾಡಿದ್ದೇವಾ? ಈ ಜಿಜ್ಞಾಸೆಗೊಂದು ಕಾರಣವಿದೆ. ಮೂರು ದಿನದ ಕೆಳಗೆ ಮುಗಿದ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಸಮ್ಮೇಳನವು ಕೆಟ್ಟ ಕಾಲಕ್ಕೆ ಸಿದ್ಧರಾಗೋಣ ಎಂದು ಕರೆ ಕೊಟ್ಟಿದೆ. ಕಮ್ಯುನಿಸ್ಟರ ಒಂದು ಪಂಥ 'ಕಷ್ಟ ಹೆಚ್ಚಾದಷ್ಟೂ ಕ್ರಾಂತಿ ಬೇಗ ಆಗುತ್ತದೆ' ಎನ್ನುತ್ತದೆ. ಮೋದಿಯ ಅಚ್ಛೇ ದಿನ್ ಎಂದರೆ, ಅದನ್ನು 'ಕೆಟ್ಟ ದಿನಗಳು' ಎಂದು ಅನುವಾದಿಸಿಕೊಂಡು ನಮ್ಮಂಥವರು ಅದನ್ನೇ ಪದೇಪದೇ ಬರೆದದ್ದೇನೂ ಸುಳ್ಳಾಗಲಿಲ್ಲ. ಈ ಮಧ್ಯೆ ಬೆಳಗ್ಗಿನಿಂದ 'ಹ್ಯಾಪಿ ನ್ಯೂ ಇಯರ್' ಶುಭಾಶಯಗಳೂ ಸಹ ಮುಂಬರುವ ವರ್ಷ ಒಳ್ಳೆಯದಾಗಲೀ ಎಂದು ನೂರಾರು ಬಾರಿ ಹಾರೈಸಿವೆ. ಎಲ್ಲರದ್ದೂ ಅವರದ್ದೇ ಆದ ಅಂದಾಜು, ಭವಿಷ್ಯದ ಬಗ್ಗೆ. ಯುಗಾದಿ ಹಬ್ಬದ ದಿನ ಅಧಿಕೃತವಾಗಿಯೇ ವರ್ಷ ಫಲವನ್ನು ಬಿತ್ತರಿಸುವ ಟಿವಿ ಚಾನೆಲ್‌ಗಳು ಈ ಸಾರಿ ಕ್ರಿಸ್ತನ ಕ್ಯಾಲೆಂಡರ್ ವರ್ಷಾರಂಭದ ದಿನವೂ ಅದನ್ನು ಶುರು ಹಚ್ಚಿಕೊಂಡಿದ್ದಾರೆ.

ಹೀಗಿರುವ ಈ ಹೊಸ ವರ್ಷದ ಮೊದಲ ದಿನದಂದು, 'ಭವಿಷ್ಯ' ಹೇಳಿದ್ದ ಇನ್ನೆರಡು ಸಹಜೀವಿಗಳು ನೆನಪಾಗುತ್ತಾರೆ. ಒಬ್ಬರು ಡಾ.ಸಿ.ಬಂದೀಗೌಡರು. 12 ವರ್ಷಗಳ ಕೆಳಗೆ ಅವರು ಬಿಎಂಐಸಿ ವಿರೋಧಿ ಹೋರಾಟದಲ್ಲಿ ನಮ್ಮೆಲ್ಲರ ಜೊತೆಗಿದ್ದಾಗ ಒಂದು ಮಾತು ಹೇಳಿದ್ದರು. 'ನೀವೆಲ್ಲರೂ ಬಹಳ ಒಳ್ಳೆಯ ಕೆಲಸ ಮಾಡ್ತಿದ್ದೀರಿ. ನನಗನ್ನಿಸುತ್ತೆ ನಿಮಗೆ ಯಾರೋ ಸರಿಯಾದ ತರಬೇತಿ ಕೊಟ್ಟು ಇದನ್ನೆಲ್ಲಾ ಮಾಡಿಸ್ತಿದ್ದಾರೆ. ಅಷ್ಟು ವ್ಯವಸ್ಥಿತವಾಗಿದೆ ಈ ಆಂದೋಲನ. ಇನ್ನು 10 ವರ್ಷಗಳಲ್ಲಿ ಈ ಸಮಾಜ ಇವತ್ತಿರುವ ರೀತಿ ಇರುವುದಿಲ್ಲ, ದೊಡ್ಡ ಜನಾಂದೋಲನ ಉಂಟಾಗುತ್ತೆ, ಸಮಾಜದಲ್ಲಿ ದೊಡ್ಡ ಸಂಚಲನ ಉಂಟಾಗುತ್ತೆ, ಆಗ ಅದರ ಮುಂಚೂಣಿಯಲ್ಲಿ ನೀವೆಲ್ಲಾ ಇರ್ತೀರಿ'. 10 ವರ್ಷದ ಮೇಲೆ ಇನ್ನೂ ಎರಡು ವರ್ಷಗಳಾದವು. ಅಂಥ ಸಂಚಲನವೇನೂ ಆಗಿಲ್ಲ.

ಇದೇ ರೀತಿಯ ಭವಿಷ್ಯ ಹೇಳಿದ್ದ ಇನ್ನೊಬ್ಬ ವ್ಯಕ್ತಿ ಬಿ.ಜಿ.ಕೃಷ್ಣಮೂರ್ತಿ. ಈಗ ಪಶ್ಚಿಮ ಘಟ್ಟದ ಯಾವುದಾದರೂ ಒಂದು ಮೂಲೆಯಲ್ಲಿ ತಾನು ನಂಬಿರುವ ಧ್ಯೇಯಕ್ಕಾಗಿ ಬಂದೂಕನ್ನು ಹೊತ್ತು ಓಡಾಡುತ್ತಿರಬಹುದು. ಆತನೂ 2000ರಲ್ಲಿ ತನ್ನ ಜೊತೆಗೆ ಹೋರಾಟಕ್ಕೆ ಬಂದಿದ್ದ ಗೆಳೆಯರಿಗೆ ಇನ್ನು 15 ವರ್ಷಗಳಲ್ಲಿ ಈ ದೇಶದಲ್ಲಿ ಕ್ರಾಂತಿಯಾಗುತ್ತದೆ ಎಂಬ ಭವಿಷ್ಯವನ್ನು ಹೇಳಿದ್ದ. ಅದನ್ನು ಕೇಳಿದ್ದ ಗೆಳೆಯರು, ಆತ ಅದೆಲ್ಲೇ ಇರಲಿ, 2015 ಬಂದ ನಂತರ ನಾವು ಹುಡುಕಿಕೊಂಡು ಹೋಗಿ ಕೃಷ್ಣಮೂರ್ತಿಯನ್ನು ಕೇಳೇ ಕೇಳುತ್ತೀವಿ ಎಂದು ಹೇಳುತ್ತಿರುತ್ತಾರೆ.

ಏಕೆಂದರೆ ಕ್ರಾಂತಿ ಸಮೀಪದಲ್ಲಿ ಎಲ್ಲೂ ಕಾಣುತ್ತಿಲ್ಲ.

ಕಳೆದ ವರ್ಷದಲ್ಲಿ ಕುಪ್ಪಳಿಯ ಕವಿಶೈಲದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಂದಿಗೆ ಸೇರಿಕೊಂಡು ಒಂದು ಕಾರ್ಯಕ್ರಮ ನಡೆಯಿತು. ಮೋದಿ ಗೆದ್ದು ಕೆಲವೇ ದಿನಗಳಾಗಿದ್ದವು. ಕೋಮುವಾದಿಗಳ ಅಬ್ಬರವನ್ನೂ, ಅಟ್ಟಹಾಸವನ್ನೂ ಬಹು ಹತ್ತಿರದಿಂದ ದಿನನಿತ್ಯ ನೋಡುವ ಕರಾವಳಿಯ ಗೆಳೆಯರು ಆತಂಕಿತರಾಗಿದ್ದರು. ಅಲ್ಲಿ ನಾನು ತೆಲುಗಿನ ಕವಿ ಶ್ರೀ ಶ್ರೀಯವರ 'ಮರೋ ಪ್ರಪಂಚಂ'ಅನ್ನು ಮತ್ತೊಮ್ಮೆ ಅನುವಾದಿಸಿ ವಾಚಿಸಿದೆ. ಆ ಇನ್ನೊಂದು ಪ್ರಪಂಚ ಇಲ್ಲೇ ಹತ್ತಿರದಲ್ಲೇ ಇದೆ; ಕೇಳಿಸ್ತಿಲ್ಲವೇನ್ ಅದರ ಜಲಪಾತದ ಸದ್ದು... ನಡೆಯಿರಿ, ನಡೆಯಿರಿ ಎಂದು ಹುರಿದುಂಬಿಸುವ ಕವನ ಅದು.

ಕವನದ ಸಂದರ್ಭ ಮತ್ತು ಅದು ಸ್ಫುರಿಸುವ ಅರ್ಥವನ್ನು ನನಗಿಂತ ಚೆನ್ನಾಗಿ ತಿಳಿದಿದ್ದ ಹಿರಿಯರಾದ ಫಣಿರಾಜ್ ಅವರು ಆಕ್ಷೇಪವೆತ್ತಿದರು. ಇಂದು ಅಂತಹ ಸಂದರ್ಭ ನಮ್ಮ ಮುಂದಿಲ್ಲ ಎನ್ನುವುದೇ ವಾಸ್ತವ. ಈ ವಾಸ್ತವವನ್ನು ನಾವು ತಿಳಿವಿನ ಮೂಲಕ ಅರಿತುಕೊಂಡು, ಮನೋಬಲದ ಆಶಾವಾದದ ಮೂಲಕ ಎದುರುಗೊಳ್ಳಬೇಕು ಎಂಬುದು ಅವರ ತಕರಾರು. ಸುಂದರ ಭವಿಷ್ಯದ ಕನಸನ್ನು ಅವಾಸ್ತವದ ನೆಲೆಯಲ್ಲಿ ಕಟ್ಟಿಕೊಡಬಾರದು, ಫ್ಯಾಸಿಸಂ ಹೊಸ್ತಿಲಲ್ಲಿರುವ ಸಂದರ್ಭದಲ್ಲಿ ಇದ್ದದ್ದನ್ನು ಇದ್ದ ಹಾಗೆಯೇ ಹೇಳಿ, ಅಲ್ಲಿಂದಲೇ ಹೊಸ ಆಶೆಯನ್ನೂ ಚಿಗುರುವ ಹಾಗೆ ಕಟ್ಟಿಕೊಡಬೇಕೆಂಬ ನಿಲುವು ಅವರದ್ದು.

ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಸುಂದರ ಘೋಷಣೆಯನ್ನು ಮುಂದಿಟ್ಟ ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯು ಪ್ರಜಾಪ್ರಭುತ್ವದ ಹೆಸರಿನಲ್ಲಿ ಜನಸಾಮಾನ್ಯರ, ಅದರಲ್ಲೂ ಬಹುಸಂಖ್ಯಾತ ದುಡಿವವರ ಬದುಕನ್ನು ತೀವ್ರವಾಗಿ ಹಿಂಡುತ್ತಿದ್ದ ಕಾಲದಲ್ಲಿ, 'ಇನ್ನು ಕ್ರಾಂತಿಯಾಗುತ್ತದೆ' ಎಂದು ಮಾರ್ಕ್ಸ್ ಸಾರಿದ್ದರು. ಮಾರ್ಕ್ಸ್‌ರು ಮುಂಗಂಡಂತೆ, ಜರ್ಮನಿ ಮತ್ತು ಇಂಗ್ಲೆಂಡ್‌ಗಳಲ್ಲಿ ಕ್ರಾಂತಿಯಾಗಲಿಲ್ಲ. ಮೂರು ದಶಕ ಕಳೆದ ನಂತರ ರಷ್ಯಾದಲ್ಲಿ ಕ್ರಾಂತಿಯಾಯಿತು. ಅಲ್ಲಿಂದ ಮೂರು ದಶಕಗಳಾಚೆ ಚೀನಾದಲ್ಲಿ ಕ್ರಾಂತಿಯಾಯಿತು. ಪ್ರಪಂಚದಲ್ಲಿ ತಲ್ಲಣವೂ, ಸಂಚಲನವೂ ಉಂಟಾಯಿತು. ಇಂದು ಅವೆರಡೂ ದೇಶಗಳ ದುಡಿವವರು ಸುಖದಲ್ಲಿದ್ದಾರೆಂದೂ, ಜಗತ್ತಿಗೇ ಮಾದರಿಯಾಗಿವೆಯೆಂದೂ ಹೇಳಲಾಗದು. ಆದರೆ ಹೊಸ ಜಗತ್ತಿನ ಸಾಧ್ಯತೆಯನ್ನು ಅವು ಒಂದು ಕಾಲದಲ್ಲಿ ಜಗತ್ತಿನ ಮನುಷ್ಯರ ಮುಂದೆ ಇಟ್ಟಿದ್ದಂತೂ ನಿಜ.

ಈ ಹೊಸ ವರ್ಷ ಬರುವ ಹೊತ್ತಿಗೆ, ಜಾಗತಿಕ ಕಾರ್ಪೋರೇಟ್ ಕುಳಗಳು ಜಗತ್ತನ್ನು ಆಳುತ್ತಿವೆ. ಕಳೆದ 7-8 ವರ್ಷಗಳಲ್ಲಿ ಹಲವು ಬಗೆಯ ಪಲ್ಲಟಗಳು ದಕ್ಷಿಣ ಅಮೆರಿಕದಲ್ಲಿ, ಈಜಿಪ್ಟ್‌ನಲ್ಲಿ, ಅರಬ್‌ನಲ್ಲಿ, ಅಮೆರಿಕದಲ್ಲಿ, ಭಾರತದಲ್ಲಿ, ನೇಪಾಳದಲ್ಲಿ ಸಂಭವಿಸಿವೆ. ಕೆಲವರು ಮಾರ್ಕ್ಸ್ ಹೇಳಿದ್ದು ನಿಜವಾಗುತ್ತಿದೆ, ಮಾರ್ಕ್ಸ್ ಮತ್ತೆ ಪ್ರಸ್ತುತ, ಮಾರ್ಕ್ಸ್ ಎಂದೆಂದೂ ಪ್ರಸ್ತುತವೇ ಎಂದೆಲ್ಲಾ ಹೇಳುತ್ತಿದ್ದಾರೆ. ಮಾರ್ಕ್ಸ್‌ರಂಥವರು ಹೇಳಿದ್ದನ್ನು ಹಾಗೆಲ್ಲಾ ಒಪ್ಪಿ ಬಿಡುವುದು ಹಲವರಿಗೆ ಅಪಥ್ಯ. ಮಾರ್ಕ್ಸ್ ಹೇಳಿದ್ದನ್ನು ಹಾಗೆ ಹಾಗೆಯೇ ಒಪ್ಪಿಬಿಡಬೇಕು ಎಂತಲೂ ಏನಿಲ್ಲ. ಆದರೆ ಹೊಸದೊಂದು ಜಗತ್ತು ಸಾಧ್ಯವೇ, ಸಾಧ್ಯವಿಲ್ಲವೇ ಎಂಬ ಕುರಿತು ಹೊಸ ವರ್ಷದ ಸಂದರ್ಭದಲ್ಲಿ ಆಲೋಚಿಸುವ ಅಗತ್ಯವಂತೂ ಇದೆ.

ಮಾರ್ಕ್ಸ್‌ರನ್ನು, ಡಾ.ಬಂದೀಗೌಡರನ್ನು, ಬಿ.ಜಿ.ಕೃಷ್ಣಮೂರ್ತಿಯನ್ನು ಎಲ್ಲರನ್ನೂ ಸ್ವಲ್ಪ ಪಕ್ಕಕ್ಕಿಡೋಣ. ಈ ನೆಲದ ಒಬ್ಬ ಸೂಫಿಸಂತ, 150 ವರ್ಷಗಳ ಕೆಳಗೆ ನಮಗೆ ಅಚ್ಚರಿಯೆನಿಸುವ ಮಾತುಗಳನ್ನು ಬರೆದುಹೋಗಿದ್ದಾರೆ. ಅವರು ಗುರು ಖಾದರಿ ಪೀರಾ. ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ಸಾಲಗುಂದಾ ಎಂಬ ಪುಟ್ಟ ಹಳ್ಳಿಯಲ್ಲಿ ತನ್ನ ಬದುಕು ನಡೆಸಿದ ಬಸವಪ್ರಿಯ ಸೂಫಿ ಅವರು. ಸಾರ್ವಕಾಲಿಕವೂ, ಸಾರ್ವತ್ರಿಕವೂ ಆದ ಆಶಯಾತ್ಮಕ ಮಾತುಗಳನ್ನಷ್ಟೇ ಆತ ಹೇಳಿದ್ದರೆ, ಎಲ್ಲಾ ಮನುಷ್ಯ ಪ್ರೇಮಿಗಳೂ ಆಡಬಹುದಾದ ಮಾತಷ್ಟೇ ಎಂದು ತಳ್ಳಿ ಹಾಕಿಬಿಡಬಹುದಿತ್ತು. ಆದರೆ ಆತನ ಕಾಲದಿಂದ 130 ವರ್ಷಗಳ ನಂತರ ನಡೆದ ವೈಜ್ಞಾನಿಕ ಆವಿಷ್ಕಾರಗಳ ಕುರಿತೂ 'ಭವಿಷ್ಯ' ನುಡಿಯಲು ಆತನಿಗೆ ಹೇಗೆ ಸಾಧ್ಯವಾಯಿತು?

ಹೀಗೆಂದ ಕೂಡಲೇ, ಗುರು ಖಾದರಿ ಪೀರಾ ಅವರನ್ನು ನಮಗೆ ಪರಿಚಯಿಸಿದ ರಂಜಾನ್ ದರ್ಗಾ ಅವರು ಮಾರುತ್ತರ ನೀಡಿದರು. 'ಆತ ಭವಿಷ್ಯ ನುಡಿದಿಲ್ಲ, ಜ್ಯೋತಿಷ್ಯಕ್ಕೆ ವಿರೋಧಿ ಆತ. ಆದರೆ ಆತನ ತಾರ್ಕಿಕ ಚಿಂತನೆ, ಜಗತ್ತಿನ ಭವಿಷ್ಯವನ್ನು ನೋಡುವ ಸಾಮರ್ಥ್ಯವನ್ನು ನೀಡಿದೆ ಅಷ್ಟೇ'. ರಂಜಾನ್ ದರ್ಗಾ ಅವರು 'ಬಸವಪ್ರಿಯ ಗುರು ಖಾದರೀ ಪೀರಾ' ಎಂಬ ಪುಸ್ತಕವನ್ನು ಬರೆದಿದ್ದಾರೆ. ಕೋಮು ಸೌಹಾರ್ದ ವೇದಿಕೆಯ 4ನೇ ರಾಜ್ಯ ಸಮ್ಮೇಳನದಲ್ಲಿ ಅದು ಬಿಡುಗಡೆಯಾಗಿದೆ. ಅದರಲ್ಲಿ ಹೆಚ್ಚಿನ ವಿವರ ಪಡೆಯಬಹುದು.

ಆದರೆ ಭವಿಷ್ಯಕ್ಕೆ ಸಂಬಂಧಿಸಿದ ಆತನ ಒಂದು ವಚನ ನಮಗೆ ಈ ದಿನ ಪ್ರಸ್ತುತವಿದೆ.

"ಕಾಲ ಬಲುಬೇಗ ಬರತ್ತೈತೆ ಈ ದೇವರೆಲ್ಲ ನಾಶವಾಗುವ ಕಾಲ।
ಬಲುಬೇಗ ಬರತ್ತೈತೆ॥
ಗೊತ್ತಿಲ್ಲದೆ ಗಳಿಸಿದ ಆಸ್ತಿ ಬಡವರ ಪಾಲಾಗುವ ಕಾಲ।
ಜಾತಿಭೇದಗಳು ನಾಶವಾಗಲು ದ್ವೇಷವಿಲ್ಲದೆ ಬದುಕುವ ಕಾಲ॥

ಮಠದಲ್ಲಿಯ ಘಟದ ದೇವರಿಗೆ ಹಟದಿಂದ ಕಡಿಯುವ ಕಾಲ।
ಹೊಗಳುತಿದ್ದ ನಾಯಿಗಳೆಲ್ಲ ಹಡಪತ್ತಿ ಅವು ಸಾಯುವ ಕಾಲ॥
ಹೆಚ್ಚಿನ ಬೆಳೆಯನು ತಂತ್ರಜ್ಞಾನದಿ ಯಂತ್ರದಿಂದ ಬೆಳೆಯುವ ಕಾಲ।
ಧಾನ್ಯ ರಸವನು ಮಾಸ್ಯ ಮಾಡಿಸಿ ಗುಳಿಗೆ ಮಾಡಿ ನುಂಗಿ ಬದುಕುವ ಕಾಲ॥

ಗಂಡು ಹೆಣ್ಣುಗಳ ಭೇದ ಅಳಿಯುವುದು; ಹೆಣ್ಣು ತನ್ನ ತಾ।
ತಿಳಿದು ಬಾಳುವುದು; ಕೃತಕ ಗರ್ಭಧಾರಣದಿಂದ ಮಕ್ಕಳು ಜನ್ಮಪಡೆಯುವ ಕಾಲ॥
ದೇವರಿಂದ ಆಗದ ಕೆಲಸಕೆ ಮಾನವ ಸಾಧಿಸಿ ತೋರುವ ಕಾಲ।
ಒಂದೆ ಕ್ಷಣದಿ ನಿರ್ಜೀವ ಲೋಹದಿ ಅಲ್ಲೆ ವಸ್ತು ಇಲ್ಲಿ ಕಾಣುವ ಕಾಲ॥

ಬಡವರು ಶ್ರೀಮಂತರಾಗುವರು, ಶ್ರೀಮಂತರು ಬಡವರಾಗುವರು।
ಕಷ್ಟ ಪಟ್ಟವರು ಸುಖಭೋಗಿಸುವ ಸತ್ಯವೆಂಬ ನಿತ್ಯದ ಕಾಲ॥
ಉತ್ತರದಿಂ ನಾಶವಾಗುವರು ದಕ್ಷಿಣದಿಂ ರಾಜ್ಯವಾಳುವರು।
ಚಪಲ ಮೋಸ ವಂಚನೆಯಲ್ಲ ಹಾಳಾಗಿ ಹಲ್ ಕಿಸಿಯುವ ಕಾಲ॥

ಸತ್ಯ ಮಿಥ್ಯಕೆ ಜಗಳಾಗುವುದು ಮಿಥ್ಯ ನಿತ್ಯ।
ನಾಶ ಆಗುವುದು ಸತ್ಯಗುರು ಖಾದರಿ ಪೀರನು। ಹೇಳಿದ ಸತ್ಯ ನೋಡುವ ಕಾಲ॥

'ಒಂದೇ ಕ್ಷಣದಿ ನಿರ್ಜೀವ ಲೋಹದಿ ಅಲ್ಲೆ ವಸ್ತು ಇಲ್ಲಿ ಕಾಣುವ ಕಾಲ' ಬಂದೀತೆಂದು ಹೇಳಿದಾತ ಪವಾಡ ಪುರುಷನಲ್ಲ, ಪವಾಡದಲ್ಲಿ ನಂಬಿಕೆಯಿಲ್ಲದಿದ್ದ ವ್ಯಕ್ತಿ! ಗುರು ಖಾದರಿ ಪೀರಾ ಹೇಳಿದ ಉಳಿದ ಮಾತುಗಳೂ ಸತ್ಯವಾಗುತ್ತವೆ. ಏಕೆಂದರೆ, ಸತ್ಯಕ್ಕೆ, ಒಳಿತಿಗೆ, ಕಷ್ಟಕ್ಕೆ ಜಯವಾಗಲೇಬೇಕು. ಅದನ್ನು ನಿಜ ಮಾಡುವುದಕ್ಕಾಗಿ ಮತ್ತಷ್ಟು ದುಡಿಯಲು ಈ ಹೊಸ ವರ್ಷದ ದಿನ ನಾವು ನೀವೆಲ್ಲರೂ ಪಣ ತೊಡಬೇಕು.



"ಕೋತಿ ಕರಡಿ ರಾಕ್ಷಸರು ನಾವು ಹಿಂದೆ ಉಳಿದವರು।
ದೇವಿದೇವತರೆಲ್ಲ ಮುಂದೊರೆದ ಹಾರುವರು॥
ಗುಡಿಗಳು ಹುಟ್ಟಲು ಕಾರಣರ್ಯಾರು; ಅದಕೆ ಪೂಜಾರಿ ಅವರು।
ದಾನ ನೀಡಲು ಹಿಂದುಳಿದವರು; ಬೇಡುವವರೇ ಹಿರಿಯರು॥

ಸಹಾಯ ಮಾಡಿದ ಜಾಂಬುವಂತಗೆ ಕರಡಿಯೆಂದು ಕರೆದವರ್ಯಾರು।
ಅಪಹಾರ ಮಾಡಿದವರು ದೇವರಾಗಿ ಮೆರಿತಿಹರು।
ಜಾನಕಿಯ ತಂದವರ್ಯಾರು; ಕಪಿಸೈನ್ಯ ನಮ್ಮವರ ಹೆಸರು।
ಕಷ್ಟದಿಂದ ಪಾರು ಮಾಡಲು ನಾವೇ ಪ್ರಜೆಗಳು, ಅವರೆ ರಾಜರು॥

ಯಲ್ಲಮ್ಮ ಯಾರವರು; ಹಿಂದುಳಿದ ನಾವೇ ಜೋಗಮ್ಮನವರು।
ಕೊರಳಲ್ಲಿ ಕೆಡು ಕಟ್ಟಿಕೊಂಡು ಬೆತ್ತಲಾಗಿ ನಮ್ಮವರು॥
ದೇವರ ಹೆಸರಿನಲ್ಲಿ ವ್ಯಭಿಚಾರ ಮಾಡುವವರ್ಯಾರು; ಯಾಗದ ನೆಪದಲ್ಲಿ।
ಕುರಿಕೋಣಕೋಳಿ ನುಂಗಿ ಮಂತ್ರ ಹೇಳಿದವರ್ಯಾರು॥

ತಪ್ಪು ಕೇಳಬಾರದು ಯಾರು, ಹಿಂದುಳಿದ ನಾವೇ ಶೂದ್ರ ಜನರು।
ಸತ್ತರೆ ಸುಡುವರ್ಯಾರು ನಾವೆ ಸಂಕಟರಮಣರು॥
ಗುರುಪೀರ ನಮ್ಮವರು ಬೈಲುಮಾಡಿ ತೋರಿದರು ಶೂದ್ರರಲ್ಲಾ।
ನಾವೇ ರಾಜರು ಎಂದು ಸತ್ಯ ಹೇಳಿದವರು ಇವರೆ ನಮ್ಮ ಗುರುಗಳು॥

"ಈ ಧರ್ಮವ್ಯಾಕೊ ಈ ಜಾತಿಯಾಕೊ।
ಮೊದಲಿಗೆ ಮಾನವ ನೀನಾಗು ಸಾಕು॥
ಕರುಣೆಯೇ ನಿಜಧರ್ಮ ತಿಳಿದರೆ ಸಾಕು; ಪ್ರೀತಿಯೇ ನಿಜಪೂಜೆ ಈ ಬೇಧವ್ಯಾಕೋ।
ಸ್ನೇಹದಿ ನೀ ಸನಿಹ ಬರಲಿಲ್ಲವ್ಯಾಕೋ ಮೊದಲಿಗೆ ಮಾನವ ನೀನಾಗು ಸಾಕು॥

ತಿಳಿಯದೆ ಏನೇನು ನೀ ಮಾಡಿ ಕೆಟ್ಟೆ; ದೇವರ ಹೆಸರೇಳಿ ನೀನೆ ತಂದಿಟ್ಟೆ।
ನಿರಾಕಾರ ನಿರಾಹಾರ; ಇಲ್ಲದವನುಗ್ಗಯಾಕೋ, ಕಲ್ಲಿಗೆ ಎಡೆ ಮಾಡಿ ಕೆಡಿಸುವುದ್ಯಾಕೋ॥
ಮಾನವರೆಲ್ಲರೊಂದೆ ಎಂದ್ಹೇಳುವುದ್ಯಾಕೋ; ನಾಲ್ಕು ವರ್ಣ ಭೇದ ಬಿಡುನೀ ಸಾಕು।
ಸತ್ಯವೇ ಶಿವರೂಪ ನೀನಾಗಬೇಕು॥

ಹಸಿದ ಹೊಟ್ಟೆಗೆ ಹಿಟ್ಟು ಕೊಡಲಿಲ್ಲವ್ಯಾಕೊ ಕಲ್ಲುದೇವರಿಗೆಂದು ಎಡೆ ಮಾಡುವದ್ಯಾಕೋ।
ಬೇಡುವವನಿಗೆ ನೀಡು ಕೆಡುವುದ್ಯಾಕೊ; ಉಡುವ ತಿನ್ನುವ ವಸ್ತು ನೀ ಸುಡುವುದ್ಯಾಕೋ॥
ಈ ಗೊಳ್ಳು ಧರ್ಮ ಈ ಜೊಳ್ಳು ಜಾತಿ: ಪ್ರೀತಿ ತಿಳಿಯದೇ ನೀನು ಹಿಂಗ್ಯಾಕ ಸಾಯ್ತಿ।
ಈ ಕ್ರೋಧವ್ಯಾಕೋ ಈ ಭೇದ ಸಾಕೊ; ಮೊದಲಿಗೆ ಮಾನವ ನೀನಾಗು ಸಾಕು॥

ಕೈಯೊಳಗಿನ ಗಂಟೆ ನೋಡಲಿಲ್ಲವ್ಯಾಕೊ; ಆರತಿ ಬೆಳಕಲ್ಲಿ ಶಿವ ಕಾಣಲಿಲ್ಯಾಕೊ।
ನೀ ದೇವನಾಗಿರುವಿ ತಿಳಿದರೆ ಸಾಕೊ; ಕಣ್ಣು ಮುಚ್ಚಿ ಬೆಕ್ಕಿನಂತೆ ಹಾಲು ಕುಡಿಯುವುದ್ಯಾಕೋ॥
ಪುರ ಸಾಲಗುಂದದೊಳಗೆ ಕೂಡಲಿಲ್ಲವ್ಯಾಕೊ; ತಿಳಿದು ಮತ್ತಿದರೊಳಗೆ ಬೆರಿಲಿಲ್ಲವ್ಯಾಕೊ।
ಗುರುಪೀರ ಖಾದರಿಯ ದಯವೊಂದೇ ಸಾಕೊ; ಪ್ರೀತಿಯ ನಿಜಧರ್ಮ ತಿಳಿದೆಡುವುದ್ಯಾಕೊ॥

ಹುಚ್ಚರ ಸಂತೆಯೂ, ಜಾತ್ಯತೀತರ ವಿವೇಕವೂ...




• ಗೌರಿ ಲಂಕೇಶ್
editorlankesh@gmail.com


ಕಳೆದ ಭಾನುವಾರ ಕರ್ನಾಟಕ ಕೋಮು ಸೌಹಾರ್ದ ...ಯ ತಿಂಥಣಿಯಲ್ಲಿ ಆಯೋಜಿಸಿದ್ದ 'ಸೌಹಾರ್ದ ...ಮ' ದಲ್ಲಿ ನಾಡಿನ ಸೌಹಾರ್ದಪ್ರಿಯರೊಂದಿಗೆ ...ಕೊಂಡ ಅನಿಸಿಕೆಗಳನ್ನು ನಮ್ಮ ಓದುಗರೊಂದಿಗೂ ...ಕೊಳ್ಳಬೇಕು ಅನ್ನಿಸಿದ್ದರಿಂದ ನಾನು ಅವತ್ತು ಆಡಿದ ...ಗಳನ್ನೇ ಇಲ್ಲಿ ದಾಖಲಿಸುತ್ತಿದ್ದೇನೆ.

...ೋನಪ್ಪಯ್ಯ ಯಾನೆ ಮೌನುದ್ದೀನ್ ನಮ್ಮ ವೇದಿಕೆಯ ... ನಿಂತಿರುವಾಗ ಒಂದು ಸೂಫಿ ಕತೆಯನ್ನು ಈ ...ರ್ಭದಲ್ಲಿ ಹೇಳುವುದು ಸೂಕ್ತ ಎನಿಸುತ್ತದೆ. ಆ ಕತೆ ...ದಿ:

...ಮ್ಮೆ ದಾರ್ಶನಿಕನೊಬ್ಬ ಒಂದು ಊರಿಗೆ ಬಂದು ...ಗೂ ಎಚ್ಚರಿಕೆಯನ್ನು ಕೊಟ್ಟ. ಅದೇನೆಂದರೆ, ಸದ್ಯದಲ್ಲೇ ...ಬಾವಿ, ಕೆರೆ, ನದಿಗಳಲ್ಲಿ ಹರಿಯುವ ನೀರು ಬತ್ತಿ ...ಗುತ್ತದೆ. ಆಮೇಲೆ ಅಲ್ಲೆಲ್ಲ ಹೊಸ ನೀರು ...ಯುತ್ತದೆ. ಆದರೆ ಹೊಸ ನೀರು ಕುಡಿದವರಿಗೆ ... ಹಿಡಿಯುತ್ತದೆ ಎಂಬುದಾಗಿತ್ತು.

...ಬ್ಬನ ಹೊರತಾಗಿ ಊರಿನ ಜನರೆಲ್ಲಾ ಆ ದಾರ್ಶನಿಕನ ...ನ್ನು ನಿರ್ಲಕ್ಷಿಸಿದರು. ಸದ್ಯದಲ್ಲೇ ಅನಾಹುತ ಕಾದಿದೆ ... ಅರ್ಥಮಾಡಿಕೊಂಡ ಆ ಒಬ್ಬ ಮಾತ್ರ ಸಾಧ್ಯವಾದಷ್ಟು





...ನ್ನಿ ಸಂಗ್ರಹಿಸಿಟ್ಟ. ಹಲವು ದಿನಗಳ ನಂತರ ದಾರ್ಶನಿಕ ...ಸಿದ್ದಂತೆ ಎಲ್ಲಾ ಬಾವಿಗಳು, ಕೆರೆಗಳು ಮತ್ತು ನದಿಗಳು ...ಹೋದವು. ಜನ ಕಂಗಾಲಾದರು. ಆದರೆ ಸ್ವಲ್ಪ ...ಯದ ನಂತರ ಎಲ್ಲೆಡೆ ಹೊಸ ನೀರು ಹರಿಯ...ಭಿಸಿತು. ದಾರ್ಶನಿಕನ ಎಚ್ಚರಿಕೆಯನ್ನು ಮರೆತಿದ್ದ ...ಹೊಸ ನೀರನ್ನು ಕುಡಿದರು. ತಾನು ಸಂಗ್ರಹಿಸಿಟ್ಟಿದ್ದ ...ನ್ನು ಮಾತ್ರ ಕುಡಿಯುತ್ತಿದ್ದ ಒಬ್ಬನ ಹೊರತಾಗಿ ಮಿಕ್ಕ ...ಗೂ ಹುಚ್ಚು ಹಿಡಿಯಿತು.

ಈ ಕತೆಗೆ ಇಲ್ಲೊಂದು ಸಣ್ಣ ಬ್ರೇಕ್ ಕೊಟ್ಟು ಇದನ್ನು ... ಹೇಳುತ್ತಿದ್ದೇನೆ ಎಂದು ವಿವರಿಸುತ್ತೇನೆ. ಈ ವರ್ಷ ...ವ, ಸರ್ಕಾರದ ಹಲವಾರು ಹಗರಣಗಳು, ...ಚಾರಗಳು ಇತ್ಯಾದಿಗಳಿಂದ ಭಾರತೀಯರು ಬೇಸತ್ತಿದ್ದರು. ಹೊಸದಕ್ಕಾಗಿ ಕಾತುರಗೊಂಡಿದ್ದರು. ಆಗ ಕಾರ್ಪೊರೇಟ್ ಕಂಪನಿಗಳು ಮತ್ತು ಕೋಮುವಾದಿಗಳು ಜೊತೆಗೂಡಿ ಮೋದಿ ಎಂಬ 'ಅಭಿವೃದ್ಧಿಯ ಹರಿಕಾರ'ನ ಪ್ರಚಾರಾಂದೋಲನವನ್ನು ಪ್ರಾರಂಭಿಸಿದವು. ಎಲ್ಲಿ ನೋಡಿದರಲ್ಲಿ ಮೋದಿ ಎಂಬ ಟೊಳ್ಳು ನಾಯಕನ ಹುಚ್ಚು ಹೊಳೆ ಹರಿಯಲಾರಂಭಿಸಿತು. ಆಗ ಸೂಫಿ ಕತೆಯ ದಾರ್ಶನಿಕನಂತೆ ನಮ್ಮ ವೇದಿಕೆ ಮತ್ತು ಇತರೆ ಜಾತ್ಯತೀತ ಸಂಘಟನೆಗಳು ಮತ್ತು ವ್ಯಕ್ತಿಗಳು ಜನರನ್ನು ಎಚ್ಚರಿಸಿದರು. ಈ ಮೋದಿ ಎಂಬ ಕೊಚ್ಚೆ ನೀರನ್ನು ಕುಡಿದರೆ ಹುಚ್ಚು ಹಿಡಿಯುತ್ತದೆ, ಕುಡಿಯಬೇಡಿ ಎಂದು ಮತ್ತೆ ಮತ್ತೆ ಹೇಳಿದರು. ಆದರೆ ಜನ ನಮ್ಮ ಮಾತನ್ನು ಕೇಳಿಸಿಕೊಳ್ಳಲಿಲ್ಲ, ಮೋದಿ ಎಂಬ ಕೊಚ್ಚೆ ನೀರನ್ನು ಕುಡಿದು ಹುಚ್ಚು ಹಿಡಿಸಿಕೊಂಡರು. ಅದರ ಪರಿಣಾಮವಾಗಿ ಇವತ್ತು ನಮ್ಮ ದೇಶವೇ ಹುಚ್ಚರ ಸಂತೆಯಂತಾಗಿದೆ.

ಈ ಹುಚ್ಚರ ಸಂತೆಯಲ್ಲಿ ಕೇಳಿಬರುತ್ತಿರುವ ಮಾತುಗಳಾದರೂ ಎಂಥವು? ದೇಶ ಉದ್ಧಾರವಾಗಬೇಕೆಂದರೆ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಲೇ ಬೇಕು! ಅಲ್ಪಸಂಖ್ಯಾತರು ಹರಾಮಜಾದೆಗಳು! ಮಹಾತ್ಮ ಗಾಂಧಿಯವರನ್ನು ಕೊಂದ ನಾಥೂರಾಮ್ ಗೋಡ್ಸೆ ದೇಶಭಕ್ತನಾಗಿದ್ದ! ಸಾವಿರಾರು ವರ್ಷಗಳ ಹಿಂದೆಯೇ ಭಾರತೀಯರಿಗೆ ಕ್ಲೋನಿಂಗ್, ಸ್ಟೆಮ್ ಸೆಲ್ ವಿಜ್ಞಾನ, ಅಣು ಬಾಂಬ್, ಏರೋಪ್ಲೇನ್ ಗೊತ್ತಿತ್ತು! ಭಗವದ್ಗೀತೆ ನಮ್ಮ ದೇಶದ ಧರ್ಮ ಗ್ರಂಥವಾಗಬೇಕು! ಕ್ರಿಸ್‌ಮಸ್ ಹಬ್ಬದ ಬದಲು 'ಒಳ್ಳೆಯ ಆಡಳಿತ ದಿವಸ್' ಆಚರಿಸಬೇಕು! ಘರ್ ವಾಪಸೀ ಮೂಲಕ ಎಲ್ಲರನ್ನೂ ಹಿಂದೂ ಧರ್ಮಕ್ಕೆ ಮರು ಮತಾಂತರ ಮಾಡಬೇಕು! ಗಾಂಧಿ ಹತ್ಯೆಯ ದಿನವನ್ನು ಶೌರ್ಯ ದಿವಸ್ ಎಂದು ಆಚರಿಸಬೇಕು! ಇದು ಹುಚ್ಚರ ಸಂತೆಯಲ್ಲದೆ ಇನ್ನೇನು?

ಇನ್ನು ಈ ಹುಚ್ಚರ ಸಂತೆಯಲ್ಲಿ ಕಂಡುಬರುತ್ತಿರುವ ದೃಶ್ಯಗಳಾದರೂ ಯಾವುವು? ಕಸಪೊರಕೆ ಹಿಡಿದು ಭಾರತವನ್ನು ಸ್ವಚ್ಛ ಮಾಡುವ ಢೋಂಗಿ ನಾಟಕ. ಪ್ರಧಾನಿ ಆಗುತ್ತಿದ್ದಂತೆ ಸಿಯಾಚಿನ್‌ಗೆ ಹೋಗಿ ಅಲ್ಲಿ ಸೈನಿಕರ ಜೊತೆ ಫೋಟೋ ತೆಗೆಸಿಕೊಂಡ ಮೋದಿ ಎಂತಹ ಬೂಟಾಟಿಕೆಯ ಮನುಷ್ಯ ಎಂಬುದಕ್ಕೆ ಒಂದು ಪ್ರಕರಣವೇ ಸಾಕ್ಷಿ. ಇತ್ತೀಚೆಗೆ ನಮ್ಮ ಸುಪ್ರೀಂಕೋರ್ಟ್ ಒಂದು ಮಹತ್ವದ ತೀರ್ಪನ್ನು ನೀಡಿದರೂ ಹೆಚ್ಚಿನ ಮಾಧ್ಯಮಗಳು ಈ ಬಗ್ಗೆ ವರದಿಯನ್ನು ಮಾಡಲಿಲ್ಲ, ಆ ತೀರ್ಪು ನಮ್ಮ ಸೈನಿಕರಿಗೆ ಸಂಬಂಧಿಸಿದ್ದು.

ನಮ್ಮ ದೇಶದ ರಕ್ಷಣೆಯಲ್ಲಿ ತೊಡಗಿದ್ದ ಸಾವಿರಾರು ಸೈನಿಕರು ಅಂಗವಿಕಲರಾಗಿದ್ದಾರೆ. ಅವರೆಲ್ಲ ಹೆಚ್ಚಿನ ಪಿಂಚಣಿ ಕೋರಿದಾಗ ಸರ್ಕಾರ ಅದನ್ನು ನಿರಾಕರಿಸಿತ್ತಲ್ಲದೆ ಸೈನಿಕರ ಬೇಡಿಕೆಯ ವಿರುದ್ಧ ನ್ಯಾಯಾಲಯಕ್ಕೆ ದೂರು ಸಲ್ಲಿಸಿತ್ತು. ಅಂಗವಿಕಲ ಸೈನಿಕರ ಪಿಂಚಣಿ ಹೆಚ್ಚಿಸಿದರೆ ಸರ್ಕಾರದ ಬೊಕ್ಕಸದ ಮೇಲೆ 1,500 ಕೋಟಿ ರೂಪಾಯಿಗಳ ಭಾರ ಹಾಕಿದಂತಾಗುತ್ತದೆಂದು ಮೋದಿ ಸರ್ಕಾರ ಸುಪ್ರೀಂಕೋರ್ಟ್ ಮುಂದೆ ವಾದಿಸಿತು. ಇದರಿಂದ ಸಿಟ್ಟಿಗೆದ್ದ ಕೋರ್ಟ್ "ಈ ಸೈನಿಕರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ನಮ್ಮನಿಮ್ಮೆಲ್ಲರನ್ನು ರಕ್ಷಿಸುತ್ತಾರೆ. ಪ್ರತಿನಿತ್ಯ ಈ ದೇಶಕ್ಕಾಗಿ ಸಾಯುತ್ತಿರುವವರು ಸೈನಿಕರು. ಅವರಿಗೆ ಹೆಚ್ಚಿನ ಪಿಂಚಣಿ ಕೊಡಲು ಹಣವಿಲ್ಲ ಎಂದು ಸರ್ಕಾರ ಹೇಳಕೂಡದು. ಇಷ್ಟನ್ನೂ ಮಾಡದಿದ್ದರೆ ಸೈನಿಕರ ತ್ಯಾಗಕ್ಕಾಗಿ ಸ್ಮಾರಕಗಳು ಇತ್ಯಾದಿಗಳು ಇದ್ದು ಏನು ಪ್ರಯೋಜನ? ಸರ್ಕಾರ ಸೈನಿಕರ ಬೇಡಿಕೆಯ ವಿರುದ್ಧ ನ್ಯಾಯಾಲಯದ ಮೊರೆ ಹೋಗುವುದು ಸರಿಯಲ್ಲ. ಅವರ ಪಿಂಚಣಿಯನ್ನು ಹೆಚ್ಚಿಸಿ" ಎಂದು ಮೋದಿ ಸರ್ಕಾರಕ್ಕೆ ಛೀಮಾರಿ ಹಾಕಿತ್ತು.

ಅಂಗವಿಕಲ ಸೈನಿಕರಿಗೆ 1,500 ಕೋಟಿ ರೂಪಾಯಿಗಳನ್ನು ಕೊಡಲು ನಿರಾಕರಿಸುವ ಮೋದಿ 20,000 ಕೋಟಿ ವೆಚ್ಚದಲ್ಲಿ ಸರ್ದಾರ್ ವಲ್ಲಭಬಾಯಿ ಪಟೇಲರ ಮೂರ್ತಿ ಸ್ಥಾಪಿಸುತ್ತಾನಂತೆ. ಇವತ್ತು ಹುಚ್ಚರ ಸಂತೆಯಂತಾಗಿರುವ ಭಾರತಕ್ಕೆ ಈತನೇ ಹುಚ್ಚು ನಾಯಕ ಎಂದು ಈ ಉದಾಹರಣೆಯಿಂದಲೇ ಗೊತ್ತಾಗುತ್ತದೆ.

ಈಗ ಸೂಫಿ ಕತೆಗೆ ಹಿಂದಿರುಗೋಣ. ಹೊಸ ನೀರು ಕುಡಿದು ಹುಚ್ಚರಾಗಿದ್ದ ಜನರನ್ನು ಮಾತನಾಡಿಸಲು ಹುಚ್ಚು ಹಿಡಿಯದೇ ಇದ್ದ ಒಬ್ಬ ಪ್ರಯತ್ನಿಸಿದಾಗ ಎಲ್ಲರೂ ಆತನಿಗೇ ಹುಚ್ಚು ಹಿಡಿದಿದೆ ಎಂದರು, ಅವನನ್ನು ತುಚ್ಛವಾಗಿ ಕಂಡರು. ಮೊದಲೆಲ್ಲ ಆತ ಹೊಸ ನೀರನ್ನು ಕುಡಿಯದೇ ತಾನು ಸಂಗ್ರಹಿಸಿಟ್ಟಿದ್ದ ನೀರನ್ನೇ ಕುಡಿಯುತ್ತಿದ್ದರಿಂದ ಅವನು ಚೆನ್ನಾಗಿಯೇ ಇದ್ದ. ಆದರೆ ದಿನಗಳು ಉರುಳಿದಂತೆ ತಾನು ಎಲ್ಲರಿಗಿಂತ ವಿಭಿನ್ನವಾಗಿರುವುದು, ಬೇರೆ ರೀತಿಯಲ್ಲಿ ಚಿಂತಿಸುವುದು ಮತ್ತು ವರ್ತಿಸುವುದು ಆತನಿಂದ ಸಹಿಸಲಾಗಲಿಲ್ಲ. ಆತನನ್ನು ಏಕಾಂಗಿತನ ಕಾಡಲಾರಂಭಿಸಿತು. ಇದರಿಂದ ಬೇಸರಗೊಂಡ ಆತ ಕೊನೆಗೆ ತಾನೂ ಹೊಸ ನೀರನ್ನು ಕುಡಿದು ಎಲ್ಲರಂತಾಗಲು ನಿರ್ಧರಿಸಿದ. ಪರಿಣಾಮವಾಗಿ ಅವನಿಗೂ ಹುಚ್ಚು ಹಿಡಿಯಿತು.

ಆದರೆ ಜಾತ್ಯತೀತರಾದ, ಸೌಹಾರ್ದ ಪ್ರಿಯರಾದ ನಾವು ಆತನಂತೆ ಏಕಾಂಗಿಗಳಲ್ಲ, ಯಾಕೆಂದರೆ ಇವತ್ತು ನಮ್ಮ ದೇಶದ ಕೇವಲ 31 ಪರ್‌ಸೆಂಟ್ ಜನ ಮೋದಿತ್ವ ಮತ್ತು ಹಿಂದೂತ್ವದ ಹುಚ್ಚು ಹಿಡಿಸಿಕೊಂಡಿದ್ದಾರೆ. ಆದರೆ ಅದೃಷ್ಟವಶಾತ್ ನಮ್ಮಂತೆ ಉಳಿದ 69 ಪರ್‌ಸೆಂಟ್ ಜನ ಇನ್ನೂ ಆ ಹುಚ್ಚು ಹಿಡಿಸಿಕೊಳ್ಳದೆ ವಿವೇಕಿಗಳಾಗಿದ್ದಾರೆ. ನಾವು ಮೋದಿ ಎಂಬ ಕೊಚ್ಚೆ ನೀರನ್ನು ಕುಡಿಯದೆ ನಮ್ಮ ದೇಶದ ಪರಂಪರೆ ಮತ್ತು ಇತಿಹಾಸ ನಮ್ಮೆಲ್ಲರಿಗೆ ಸಂಗ್ರಹಿಸಿಟ್ಟಿರುವ ಜಾತ್ಯತೀತ ನೀರನ್ನೇ ಕುಡಿಯುತ್ತಾ ಮುಂದೆ ಸಾಗೋಣ ಮತ್ತು ಸದ್ಯದಲ್ಲೇ ಮೋದಿಯ ಹುಚ್ಚು ಹಿಡಿಸಿಕೊಂಡಿರುವವರ ಹುಚ್ಚು ಬಿಡಿಸೋಣ! ●

...ಸುಮ್ಮನಿರಬೇಡಿ, ದನಿ ಎತ್ತಿ": ಅತ್ಯಾಚಾರಕ್ಕೆ ಗುರಿಯಾದ ಮಹಿಳೆ

...ಅವತ್ತು ರಾತ್ರಿ ನಾನು ಸುರಕ್ಷಿತವಾಗಿ ಮನೆ ...ಸಲೆಂದೇ ಯುಬೆರ್ ಟ್ಯಾಕ್ಸಿ ಒಂದನ್ನು ಬುಕ್ ಮಾಡಿದ್ದೆ. ...ಕ್ಕೂ ಮುನ್ನ ನಾನು ಹಲವಾರು ಬಾರಿ ಪ್ರತಿಷ್ಠಿತ ...ಬೆರ್ ಟ್ಯಾಕ್ಸಿಯನ್ನೇ ಅವಲಂಬಿಸಿದ್ದರಿಂದ ಆ ಕಂಪನಿಯ ... ನನಗೆ ಭರವಸೆ ಇತ್ತು, ಆದರೆ ಆಮೇಲೆ ...ಗೊತ್ತಾಗಿದ್ದೇನೆಂದರೆ ಟ್ಯಾಕ್ಸಿ ಡ್ರೈವರ್ ಶಿವ್‌ಕುಮಾರ್ ...ದವ್‌ನ ಹಿನ್ನೆಲೆ ಬಗ್ಗೆ ಯುಬೆರ್ ಕಂಪನಿಯವರು ...ರಣೆ ನಡೆಸಿರಲಿಲ್ಲ ಮಾತ್ರವಲ್ಲ, ನನಗೂ ಮುನ್ನ ... ವಿರುದ್ಧ ಇನ್ನೋರ್ವ ಮಹಿಳೆ ದೂರು ನೀಡಿದ್ದರೂ ... ವಿರುದ್ಧ ಕ್ರಮ ತೆಗೆದುಕೊಂಡಿರಲಿಲ್ಲ. ಆ ...ನಿಯವರ ಈ ತಪ್ಪಿನಿಂದಾಗಿ ನನ್ನ ಜೀವನದಲ್ಲಿ ...ಬಾರದ್ದು ಆಗಿಹೋಯಿತು. ಈ ಪ್ರಕರಣದಿಂದ ...ಸಿಕೊಳ್ಳುವುದು ನನಗೂ ನನ್ನ ಕುಟುಂಬದವರಿಗೂ ...ಾ ಕಷ್ಟವಾಗುತ್ತಿದೆ.

...ಇವತ್ತಿಗೂ ನನಗೆ ಸರಿಯಾಗಿ ನಿದ್ದೆ ಮಾಡಲಾಗುತ್ತಿಲ್ಲ. ...ಮುಚ್ಚಿದಾಕ್ಷಣ ಆ ಕರಾಳರಾತ್ರಿಯ ದೃಶ್ಯಗಳು ನನ್ನನ್ನು ...ತ್ತವೆ. ಭಯ ನನ್ನನ್ನು ಆವರಿಸಿರುವುದರಿಂದ ನಿದ್ದೆ ...ದು ಮರೀಚಿಕೆಯಾಗಿದೆ. ಇವತ್ತಿಗೂ ಒಬ್ಬಳೆ ಹೊರಗೆ ...ಗಲು ನನಗೆ ಹೆದರಿಕೆ ಆಗುತ್ತದೆ.

...ನಾನು ಈ ಹಿಂದೆ ಹೀಗೆ ಹೆದರುತ್ತಿರಲಿಲ್ಲ, ನನಗೆ ...ತೊಂದರೆ ಯಾವುದಕ್ಕೂ ಹೆದರದೆ ಅದನ್ನು ...ಎದುರಿಸುತ್ತಿದ್ದೆ, ಯಾಕೆಂದರೆ ನಾನು ಬೆಳೆದದ್ದೇ ಹಾಗೆ. ...ಂದಲೇ ನನ್ನ ಮೇಲೆ ಅತ್ಯಾಚಾರ ನಡೆದನಂತರ ... ನನ್ನ ಅಪ್ಪ ಮತ್ತು ಅಪ್ಪನಿಗೆ ಫೋನ್ ಮಾಡುವ ...ೆ ಪೊಲೀಸರಿಗೆ ಫೋನ್ ಮಾಡಿದೆ. ಹಾಗೆಯೇ



ಡಿಸೆಂಬರ್ 2012ರಲ್ಲಿ 'ನಿರ್ಭಯ' ಮೇಲೆ ಸಾಮೂಹಿಕ ಅತ್ಯಾಚಾರ ನಡೆದಾಗ ನಾನೂ ಬೀದಿಗೆ ಬಂದು ಪ್ರತಿಭಟಿಸಿದ್ದೆ.

ಮಹಿಳೆಯರ ರಕ್ಷಣೆ ಇವತ್ತು ಅತಿ ಮುಖ್ಯವಾಗಿದೆ. ಸರ್ಕಾರ ಕ್ರಮ ತೆಗೆದುಕೊಂಡಿದ್ದರೂ ಸಮಾಜ ಬದಲಾಗಿಲ್ಲ, ಆದ್ದರಿಂದಲೇ ಅತ್ಯಾಚಾರ ಪ್ರಕರಣಗಳು ಸಂಭವಿಸುತ್ತಿವೆ. ಎರಡು ವರ್ಷಗಳ ಹಿಂದೆ ನಡೆದ ಘಟನೆಯಿಂದಾಗಿ ಯುಬೆರ್ ಡ್ರೈವರ್ ತರಹದವರು ಬದಲಾಗುವ ಬದಲು ನನಗೂ ಕಬ್ಬಿಣದ ರಾಡಿನಿಂದ ಬಡಿಯುವುದಾಗಿ ಬೆದರಿಸಿದ. ಅವನಿಗೂ ಮತ್ತು ಯುಬೆರ್ ಕಂಪನಿಗೂ ತಕ್ಕ ಶಿಕ್ಷೆ ಆಗಬೇಕು ಎಂದು ಆಶಿಸುತ್ತೇನೆ. ಇಲ್ಲವೆಂದರೆ ನಾವು ಒಂದು ಸಮಾಜವಾಗಿ, ಒಂದು ದೇಶವಾಗಿ, ಮನುಷ್ಯರಾಗಿ ಮಹಿಳೆಯರಿಗೆ ರಕ್ಷಣೆ ನೀಡುವುದರಲ್ಲಿ ಸೋಲುತ್ತೇವೆ ಎಂದೇ ಅರ್ಥ.

ಈ ಪ್ರಕರಣದ ನಂತರ ಕೆಲವರು ನನ್ನನ್ನೇ ಕೆಟ್ಟದಾಗಿ ನೋಡುತ್ತಿದ್ದಾರೆ. ನಾನೇ ತಪ್ಪು ಮಾಡಿದ್ದೇನೆ ಎನ್ನುವಂತಿದೆ ಅವರ ವರ್ತನೆ. ನಾನು ದೂರು ಕೊಟ್ಟಾಗ ಒಬ್ಬ ಮಹಿಳೆ ನನ್ನ ತಾಯಿಗೆ ಫೋನ್ ಮಾಡಿ "ದೂರು ಯಾಕೆ ಕೊಟ್ಟಿರಿ? ನಿಮಗೇ ಕೆಟ್ಟ ಹೆಸರು ಬರುತ್ತೆ" ಎಂದರು. ಆದಕ್ಕೆ ನನ್ನ ಅಮ್ಮ "ಕೆಟ್ಟ ಹೆಸರು ಬರುವುದು ಈ ಕೃತ್ಯವನ್ನು ಎಸಗಿದವನಿಗೆ, ನಮಗಲ್ಲ" ಎಂದು ಉತ್ತರಿಸಿದರು. ಆಫೀಸಿನಲ್ಲೂ ಕೆಲವರು "ನೀನು ಸುಮ್ಮನಿರಬೇಕಿತ್ತು" ಎಂದರು. ಆದರೆ ಹೆಚ್ಚಿನವರು ನನ್ನ ಬೆಂಬಲಕ್ಕೆ ನಿಂತರು, ಸಹಾಯ ಮಾಡಿದರು. ಇದರಿಂದ ನಿಜವಾಗಲೂ ನನ್ನ ಮಿತ್ರರು ಯಾರು ಎಂಬುದು ನನಗೆ ಅರಿವಾಯಿತು.

ನನ್ನ ಮೇಲೆ ಈ ದಾಳಿಯಾದ ನಂತರ ಮಹಿಳೆಯರು ಏನು ಮಾಡಬೇಕು? ಅಣ್ಣನೋ, ಅಪ್ಪನೋ, ಮತ್ತ್ಯಾವ ಪುರುಷ ರಕ್ಷಕನೋ ಇಲ್ಲದಿದ್ದರೆ ಮಹಿಳೆಯರು ತಮ್ಮ ಮನೆಗಳಿಂದ ಹೊರಗೆ ಹೆಜ್ಜೆ ಇಡಕೂಡದಾ? ನಮಗೂ ಹೊರಗೆ ಹೋಗುವ, ವೃತ್ತಿಯಲ್ಲಿ ತೊಡಗುವ ಹಕ್ಕು ಇಲ್ಲವಾ? ನಾನು ಯಾವ ಭಯವೂ ಇಲ್ಲದೆ ವಿದೇಶಗಳನ್ನು ಸುತ್ತಿದ್ದೇನೆ. ಆದರೀಗ ಈ ನಗರದಲ್ಲಿ ಹೊರಗೆ ಹೋಗಲೂ ಭಯವಾಗುತ್ತಿದೆ.

ಮಹಿಳೆಯರಿಗೆ ರಕ್ಷಣೆ ನೀಡುವ ನಿಟ್ಟಿನಲ್ಲಿ ಸಮಾಜದಲ್ಲಿ ಸಂವೇದನಶೀಲತ್ವವನ್ನು ಹೆಚ್ಚಿಸಬೇಕಿದೆ. ಭಾರತದಲ್ಲಿ ಪುರುಷ ಪ್ರಧಾನತ್ವ ಇದೆ. ಇದು ಬದಲಾಗಬೇಕೆಂದರೆ ಮಹಿಳೆಯರಿಗೂ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಕಲ್ಪಿಸಬೇಕು. ಸರಿಯಾದ ಶಿಕ್ಷಣ ಕೂಡ ಮಹಿಳೆಯರ ಹಕ್ಕುಗಳ ಬಗ್ಗೆ ಸೂಕ್ತ ರೀತಿಯಲ್ಲಿ ಎಳೆಯರ ಮನಸ್ಸುಗಳನ್ನು ರೂಪಿಸುತ್ತದೆ.

ಇನ್ನು ಹೊಸ ತಲೆಮಾರಿನವರಿಗೆ, ಅದರಲ್ಲಿ ನನ್ನ ವಯಸ್ಸಿನವರಿಗೆ, ನಾನು ಹೇಳಬಯಸುವುದು ಇಷ್ಟು: ಮಹಿಳೆಯರ ಮೇಲೆ ದಮನ ನಡೆಯುತ್ತಿದ್ದರೆ ನೀವು ಸುಮ್ಮನಿರಬೇಡಿ. ದನಿ ಎತ್ತಿ.


(ಇತ್ತೀಚೆಗೆ ದೆಹಲಿಯಲ್ಲಿ ಯುಬೆರ್ ಟ್ಯಾಕ್ಸಿ ಡ್ರೈವರ್‌ನಿಂದ ಅತ್ಯಾಚಾರಕ್ಕೆ ಗುರಿಯಾದ ಮಹಿಳೆ ಹೇಳಿದ್ದನ್ನು ಇಲ್ಲಿ ಸಂಗ್ರಹರೂಪದಲ್ಲಿ ನೀಡಲಾಗಿದೆ) ●


ದಕ್ಷಿಣ ಕನ್ನಡ: ಹಳ್ಳ ಹಿಡಿದಿದೆ ಕಾಂಗ್ರೆಸ್!!


ದಕ್ಷಿಣ ಕನ್ನಡದ ಕಾಂಗ್ರೆಸ್ ಬರಡೆದ್ದು ಹೋಗಿದೆ. ಬತ್ತಿದರೆ ಬೆಳೆಯಾಗದ ಜೊಳ್ಳು-ಟೊಳ್ಳುಗಳೇ ಜಿಲ್ಲಾ ಕಾಂಗ್ರೆಸ್‌ನಲ್ಲಿ ಹಾರುಹತ್ಯ ನಡೆಸುತ್ತಿವೆ. ಜಿಲ್ಲಾ ಮಂತ್ರಿ ರಮಾನಾಥ ರೈ ಅವರ ಹುಚ್ಚಾಟ ಮತ್ತು ಆತನ ಬೆನ್ನಿಗೆ ನಿಂತು ಮಜಾ ನೋಡುತ್ತಿರುವ ಎಐಸಿಸಿ ಮಟ್ಟದ ಸೆಟ್‌ದೋಸೆಗಳಾದ ಆಸ್ಕರ್ ಫರ್ನಾಂಡಿಸ್, ಜನಾರ್ದನ್ ಪೂಜಾರಿ ಮತ್ತು ವೀರಪ್ಪ ಮೊಯ್ಲಿಗಳ ವಿಕಟವ್ಯಂಗ್ಯದಿಂದ ಜಿಲ್ಲಾ ಕಾಂಗ್ರೆಸ್ ಎಂಬುದು ಬರ್ಬಾದಾಗಿ ಹೋಗಿದೆ! ಅಧಿಕಾರಕ್ಕೆ ಬಂದು ಒಂದೂವರೆ ವರ್ಷ ಕಳೆದರೂ ಕಾಂಗ್ರೆಸ್‌ನ ಖಾಲಿ ಬುರುಡೆಯ ಕಿಂಗ್‌ಗಳಿಗೆ ಜಿಲ್ಲೆಗೆ ನೆಮ್ಮದಿ ತರುವ ಒಂದು ಅಭಿವೃದ್ಧಿ ಯೋಜನೆ ಅಥವಾ ಸಂಘ ಪರಿವಾರದ ಕೇಸರಿ ಕರಾಮತ್ತು ಮಟ್ಟ ಹಾಕುವ ಯೋಚನೆ ಮಾಡಲಾಗಿಲ್ಲ.


ಬಿಜೆಪಿಯ ಕಾಲಖಂಡದಲ್ಲಿ ಚೆಡ್ಡಿಗಳು ನಡೆಸಿದ ಬರ್ಬರ ಹೇಯ ಜೀವವಿರೋಧಿ ರಾಜಕಾರಣದಿಂದ ಕಂಗಾಲಾಗಿದ್ದ ಜಿಲ್ಲೆಯ ಜನರು ಕಾಂಗ್ರೆಸ್‌ನ್ನು ನಂಬಿದ್ದರು. ಎಂಟು ಅಸೆಂಬ್ಲಿ ಕ್ಷೇತ್ರದಲ್ಲಿ ಏಳರಲ್ಲಿ ಕಾಂಗ್ರೆಸ್‌ನ್ನು ಗೆಲ್ಲಿಸಿದ್ದರು. ಇವರಲ್ಲಿ ಬರೋಬ್ಬರಿ ಮೂವರು ಮಂತ್ರಿ ಮಾಂಡಲೀಕರೂ ಆಗಿಹೋದರು. ಆದರೆ ಜಿಲ್ಲೆಗೇನು ಬಂತು ಭಾಗ್ಯ? ಜಿಲ್ಲಾಡಳಿತದಲ್ಲಿ ಹಾಸುಹೊಕ್ಕಾಗಿರುವ ಕೇಸರಿ ಕಲ್ಮಶವನ್ನೇ ಈವರೆಗೆ ಸದ್ರಿ ಮಂತ್ರಿಗಳಿಂದ ತೊಳೆಯಲಾಗಿಲ್ಲ. ಪೊಲೀಸ್ ಮತ್ತಿತರ ಇಲಾಖೆಯ ಆಯಕಟ್ಟಿನ ಜಾಗದಲ್ಲಿ ಇವತ್ತಿಗೂ ಸಂಘಪರಿವಾರದ ಪುಂಡಾಟದ ಪೋಷಕರೇ ಗೂಟವೂರಿ ಕೂತಿದ್ದಾರೆ. ಅತ್ತ ಗೆಲ್ಲಿಸಿದ- ಅತುಲ ಅಧಿಕಾರ ನೀಡಿದ ಸ್ವ-ಪಾರ್ಟಿಯ ಋಣ ತೀರಿಸುವ ಕೆಲಸವೇನಾದರೂ ಮಾಡಿದ್ದಾರಾ ಅಂತ ನೋಡಿದರೆ ಊಹುಂ, ಅದೂ ಇಲ್ಲ....

ಜಿಲ್ಲಾ ಕಾಂಗ್ರೆಸ್‌ನ ದುರಂತ ನೋಡಿದರೆ, ಉಸ್ತುವಾರಿ ಮಂತ್ರಿ ರಮಾನಾಥ ರೈ ಮತ್ತವರ ಬಾಸ್‌ಗಳಾದ ಆಸ್ಕರ್-ಪೂಜಾರಿ-ಮೊಯ್ಲಿಗಳೇ ಕಾಂಗ್ರೆಸ್ ಮುಕ್ತ ದಕ್ಷಿಣ ಕನ್ನಡಕ್ಕೆ ಪಣತೊಟ್ಟಂತೆ ಭಾಸವಾಗುತ್ತದೆ! ಹಾಗಂತ ನಿಷ್ಠಾವಂತ ಕಾಂಗ್ರೆಸ್ಸಿಗರೇ ಅಲವತ್ತುಕೊಳ್ಳುತ್ತ ಹಣೆ-ಹಣೆ ಚಚ್ಚಿಕೊಳ್ಳುತ್ತಿದ್ದಾರೆ. ಜಿಲ್ಲಾ ಕಾಂಗ್ರೆಸ್‌ಗೆ ಪೂರ್ಣಾವಧಿ ಅಧ್ಯಕ್ಷರಿಲ್ಲದೆ ಹೆಚ್ಚುಕಮ್ಮಿ ಎರಡು ವರ್ಷಗಳೇ ಕಳೆದುಹೋಗಿದೆ! ಮಂತ್ರಿಗಿರಿ ದರ್ಬಾರಿನಲ್ಲಿದ್ದರೂ ಜಿಲ್ಲಾಧ್ಯಕ್ಷತೆ ಬಿಡುವ ಮನಸ್ಸು ರಮಾನಾಥ ರೈಗೆ ಇಲ್ಲ, ಪಕ್ಷ ಸಂಘಟಿಸುವ ಅರ್ಪಣಾಭಾವ-ಚಾಕಚಕ್ಯತೆ ಎರಡೂ ಇವರಿಗಿಲ್ಲ, ಆರೋಗ್ಯ ಬೇರೆ ಕೈ ಕೊಡುತ್ತಿದೆ.


ಮೊಯ್ಲಿ


ಆಸ್ಕರ್ ಫರ್ನಾಂಡಿಸ್


ಜನಾರ್ದನ ಪೂಜಾರಿ


ರಮಾನಾಥ ರೈ

ಒಬ್ಬರಿಗೆ ಒಂದೇ ಹುದ್ದೆ ಎಂದು ಕೆಪಿಸಿಸಿ ಫರ್ಮಾನು ಹೊರಡಿಸಿದಾಗಲೂ ರೈ ತನ್ನ ಆಜ್ಞಾನುಧಾರಿ ಕೋಡಿಬಾಲ್ ಇಬ್ರಾಹಿಂ ಎಂಬ ರಿಯಲ್ ಎಸ್ಟೇಟ್ ಕುಳನನ್ನು ಜಿಲ್ಲಾ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷನಾಗಿ ಮಾಡಿಸಿಕೊಂಡಿದ್ದಾರೆ. ಮುಸ್ಲಿಮರೇ ನಂಬದ ಈ ಇಬ್ರಾಹಿಂ ದೊರೆಯ ಇಷ್ಟಾನಿಷ್ಟ ಅರಿತು ಹೆಜ್ಜೆ ಹಾಕುತ್ತಿದ್ದಾನೆಯೇ ಹೊರತು ಕಾಂಗ್ರೆಸ್ ಕಟ್ಟುವ ಯೋಚನೆ ಕನಸಲ್ಲೂ ಮಾಡುತ್ತಿಲ್ಲ. ರೈ ಸಾಹೇಬರ ಕೃಪಾಕಟಾಕ್ಷ ಪಡೆದು ಮಂಗಳೂರು ಅಭಿವೃದ್ಧಿ ಪ್ರಾಧಿಕಾರ (ಮೂಡಾ)ದ ಅಧ್ಯಕ್ಷನಾಗಬೇಕೆಂಬುದೊಂದೇ ಇಬ್ರಾಹಿಂ ಗುರಿ. ಇದಕ್ಕೆ ಲ್ಯಾಂಡ್ ಮಾಫಿಯಾದ ಲಾಬಿಯೂ ತನು-ಮನ-ಧನದಿಂದ ಸಹಕರಿಸುತ್ತಿದೆ.

ಸಿದ್ದು ಸಂಪುಟದಲ್ಲಿ ಮಂತ್ರಿಯಾಗುತ್ತಿದ್ದಂತೆಯೇ ರೈ ಜಾತಿವಾದಿಯಾಗಿದ್ದಾರೆ. ಜಿಲ್ಲಾ ಕಾಂಗ್ರೆಸ್‌ನ್ನು ಸ್ವಜಾತಿ ಬಂಟರ ಯಾನೆ ತುಂಟರ ಸಂಘದಂತೆ ಮಾಡಿಬಿಟ್ಟಿದ್ದಾರೆ. ದಕ್ಷಿಣ ಕನ್ನಡದ ಬಹುತೇಕ ಬ್ಲಾಕ್ ಕಾಂಗ್ರೆಸ್ ಆಧಿಪತ್ಯ ಬಂಟರ ಭೂಪರ ಕೈವಶವಾಗಿದೆ. ಜಿಲ್ಲಾ ಕಾಂಗ್ರೆಸ್‌ನ ಉಪಾಧ್ಯಕ್ಷರು-ಕಾರ್ಯದರ್ಶಿ-ಪ್ರಧಾನ ಕಾರ್ಯದರ್ಶಿಗಳಲ್ಲಿ ಬಂಟರದೇ ಪ್ರಾಬಲ್ಯ ಜೋರಾಗಿದೆ. ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಮಿಥುನ್ ರೈ ಬಂಟರ ಕುಲೋದ್ಧಾರಕನೇ. ಮಂಗಳೂರು ಮೇಯರ್ ಬಂಟ ಸಮುದಾಯದ ಸರದಾರ. ಹೀಗೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಎಲ್ಲಿ ನೋಡಿದರೂ ಅಲ್ಲಿ ಮಂತ್ರಿ ರೈಗಳ ಜಾತಿಬಂಧುಗಳದೇ ಅಟ್ಟಹಾಸ.


ದಕ್ಷಿಣ ಕನ್ನಡ ಕಾಂಗ್ರೆಸ್ ಬಲಾಢ್ಯ ಬಂಟರ ಮತ್ತು ಪಾಳೆಗಾರಿಕೆ ಜಾಯಮಾನದ ಜೈನರ ಹಿಡಿತದಲ್ಲಿದೆ. ಕೆಲಸಕ್ಕೆ ಬಾರದ ಜಗಳಗಂಟ ಅಭಯಕುಮಾರ್ ಜೈನ್‌ನ ಮಂತ್ರಿಗಿರಿ ಜಿಲ್ಲಾ ಕಾಂಗ್ರೆಸ್‌ಗೆ ಹೊರಲಾಗದ ಹೊರೆಯಂತಾಗಿದೆ. ಈತನಿಗೆ ಸಾಮಾಜಿಕ ನ್ಯಾಯವಾಗಲಿ, ಕನಿಷ್ಠ ನಾಗರಿಕ ಪ್ರಜ್ಞೆಯಾಗಲಿ ಇಲ್ಲ. ಯಾರ ಕಂಡರೂ ತೋಳೇರಿಸಿ ಹೋಗುವ ಗುಣ-ಧರ್ಮದ ಅಭಯನಿಂದಾಗಿ ಕಾಂಗ್ರೆಸಿಗರಿಗೇ ಭಯ ಮೂಡಿದೆ. ಮುಸ್ಲಿಮ್ ಸಮುದಾಯದ ಖಾದರ್ ಮಂತ್ರಿಯಾಗಿದ್ದರೂ ಆತನ ಧ್ವನಿ ಕೇಳದಷ್ಟು ದೊಡ್ಡದಾಗಿ ಬಂಟರ ಭಂಡ ರಮಾನಾಥ ರೈ ಸದಾ ಬೊಬ್ಬೆ ಹೊಡೆಯುತ್ತಿರುತ್ತಾರೆ. ಎತ್ತಿಂದೆತ್ತ ನೋಡಿದರೂ ದಕ್ಷಿಣ ಕನ್ನಡ ಕಾಂಗ್ರೆಸ್‌ನಲ್ಲಿ ಅಹಿಂದ ಲೆಕ್ಕಾಚಾರವೇ ಕಾಣಿಸದು.

ಶೇಕಡಾ 78ರಷ್ಟು ಹಿಂದುಳಿದ ವರ್ಗದ ಜನಸಮುದಾಯ ದಕ್ಷಿಣ ಕನ್ನಡದಲ್ಲಿದೆ. ಇದೊಂದು ಬ್ಯಾಕ್‌ವರ್ಡ್ ಕ್ಲಾಸ್ ಕೋಟೆ. ಈ ಸರಳ ಸತ್ಯ ರೈಗಿರಲಿ, ಸೋಕಾಲ್ಡ್ ಸೆಕ್ಯುಲರ್ ಆಸ್ಕರ್-ಮೊಯ್ಲಿ-ಪೂಜಾರಿ ಎಂಬ ಮಹಾಮಹಿಮರಿಗೂ ಅರ್ಥವಾಗಿಲ್ಲ. ಪಕ್ಷದ ಪದಾಧಿಕಾರಿಗಳ ಆಯ್ಕೆಯಲ್ಲಿ ಮತ್ತು ನಿಗಮ-ಮಂಡಳಿ-ಮಂತ್ರಿ-ಎಮ್ಮೆಲ್ಸಿ ಅಧಿಕಾರ ಹಂಚಿಕೆಯಲ್ಲಿ ಸೋಷಿಯಲ್ ಇಂಜಿನಿಯರಿಂಗ್ ಸೂತ್ರವನ್ನು ಕಾಂಗ್ರೆಸರು ಅನುಸರಿಸಿದ್ದ ಇಲ್ಲ. ಪಕ್ಷಕ್ಕೆ-ಸಮಾಜಕ್ಕೆ ಪ್ರಯೋಜನ ಇಲ್ಲದ ಚೇಲಾಗಳಿಗೆ ಜಾತಿ ಗಣಿತ ಅನ್ವಯಿಸಿ ಅಧಿಕಾರ-ಪದಾಧಿಕಾರ ಕೊಟ್ಟು ಕಾಂಗ್ರೆಸ್ ಎಂದರೆ ವೇಸ್ಟ್ ಬಾಡಿಗಳ ಸಂಘದಂತಾಗಿಸಿದ್ದಾ ಆಸ್ಕರ್-ಮೊಯ್ಲಿ-ಪೂಜಾರಿ-ರೈ!! ಈ ಸ್ವ-ಜನಪಕ್ಷಪಾ ವ್ಯರ್ಥ ಓಟ್‌ಬ್ಯಾಂಕ್ ಕಸರತ್ತಿನಿಂದಾಗಿ ಇವತ್ತು ಜಿಲ್ಲಾ ಕಾಂಗ್ರೆಸ್‌ಗೆ ಬಿಜೆಪಿ ಬಡಿವಾರ ಎದುರಿಸಲಾಗುತ್ತಿಲ್ಲ. ಬಿಜೆ ವಿರೋಧಿಸುವವರಿಗೂ ಕಾಂಗ್ರೆಸ್‌ನ ವಿಶ್ವಾಸಾರ್ಹತೆ ಪ್ರಶ್ನಾ ಆಗಿಬಿಟ್ಟಿದೆ.

ಕಾಂಗ್ರೆಸ್‌ನ, ಆಸ್ಕರಣ್ಣ ಪಟಾಲಮ್‌ನ 'ಧರ್ಮಕಾರಣ ಅದೆಷ್ಟು ಅನಾಹುತಕಾರಿ ಆಗಿಹೋಗಿದೆಯೆಂದರೆ, ಸಂಘ ಪರಿವಾರಕ್ಕೆ ಮುಸ್ಲಿಮ್ ಮತ್ತು ಕ್ರಿಶ್ಚಿಯನ್‌ರ ಟಾರ್ಗೆಟ್ ಮಾಡಿಕೊಂಡು ಬೇಳೆಬೇಯಿಸಿಕೊಳ್ಳಲು ಅನುಕೂಲಕರವಾ ಪರಿಣಮಿಸಿದೆ. ಪ್ರಜ್ಞಾವಂತ ಕ್ರಿಶ್ಚಿಯನ್ ಮತ್ತು ಮುಸ್ಲಿಮರು ನಮಗೆ ಕಾಂಗ್ರೆಸ್‌ನ ಯಾವ ಅಧಿಕಾರ-ಪದಾಧಿಕಾರ ಬೇಡ ಎನ್ನುತ್ತಿದ್ದಾರೆ. ಕಾಂಗ್ರೆಸಿಗರು ಅಲ್ಪಸಂಖ್ಯಾತರ ಅಡ್ನಾಡಿಗಳಿಗೆ ಅವಕಾಶ ಕೊಟ್ಟಂತೆಲ್ಲ ಇಡೀ ಮುಸ್ಲಿಂ ಕ್ರಿಶ್ಚಿಯನ್ ಸಮುದಾಯದ ಮೇಲೆ ಹಿಂದುಳಿದ ಹಿಂದೂಗಳಿಗೆ ಛೂಬಿಡಲು ಭಜರಂಗಿ-ಬಿಜೆಪಿಗಳಿಗೆ ಅಸ್ತ್ರವಾಗುತ್ತಿದೆ ಕಾಂಗ್ರೆಸ್‌ನ ಓಟ್‌ಬ್ಯಾಂಕ್ ಅಧಿಕ ಪ್ರಸಂಗದಿಂದ ಹರಾಮಿ ಹಿಂದೂಗಳ ಪಡೆಯ ಕೆಂಗಣ್ಣು ಅಲ್ಪಸಂಖ್ಯಾತ ಸಮುದಾಯದ ಮೇಲೆ ಬೀಳುವಂತಾಗಿದೆ.

ಹಗುರ ವ್ಯಕ್ತಿತ್ವದ ಐವಾನ್ ಡಿಸೋಜಾರನ್ನು ಈಚೆಗೆ ಎಮ್ಮೆಲ್ಸಿ ಮಾಡಿದಾಗಲೇ ಜಿಲ್ಲೆಯ ಕ್ಯಾಥೋಲಿಕ್ ಕ್ರಿಶ್ಚಿಯನ್ ಸಮುದಾಯಕ್ಕೆ ಕಾಂಗ್ರೆಸ್ ಮೇಲೆ ಬೇಸರ ಬಂದಿತ್ತು. ಮಂಗಳೂರು ದಕ್ಷಿಣದಲ್ಲಿ ಜೆ.ಆರ್. ಲೋಬೊ ಶಾಸಕನಾಗಿರುವಾಗ ಅದೇ ಸಮುದಾಯದ, ಅದೇ ಏರಿಯಾದ ಗಂಡಾಗುಂಡಿ ಐವಾನ್‌ಗೆ ಎಮ್ಮೆಲ್ಸಿ ಮಾಡಿದ್ದು ಕೆಥೋಲಿಕ್‌ರಿಗೇ ಸರಿ ಕಾಣಿಸಿರಲಿಲ್ಲ. ಬಿಷಪ್‌ಗಳು ಲಾಬಿ ಮಾಡಿ ಆಸ್ಕರ್ ಫರ್ನಾಂಡಿಸ್‌ರನ್ನು ಒಲಿಸಿಕೊಂಡಿದ್ದರು. ಐವಾನ್ ಜಿಲ್ಲಾ ಕಾಂಗ್ರೆಸ್‌ಗೆ ಕಂಟಕಕಾರಿಯಾಗಿದ್ದಾರೆ. ಈತನನ್ನು ಎಮ್ಮೆಲ್ಸಿ ಮಾಡಿರುವುದರಿಂದ ಹಿಂದುಳಿದ ವರ್ಗದ ಬಿಲ್ಲವ-ಮೊಗವೀರ-ಕುಲಾಲ-ದಲಿತರಿಗೂ ಸಿಟ್ಟು ಬಂದಿದೆ. ಈ ಐವಾನ್‌ನಿಂದ ಜಿಲ್ಲಾ ಕಾಂಗ್ರೆಸ್‌ಗೆ ಮೂರು ಬಿಲ್ಲಿ ಪ್ರಯೋಜನವಿಲ್ಲ ಎಂಬುದು ಕಾಂಗ್ರೆಸಿಗರ ಅಳಲು. ಆಸ್ಕರ್ ಗ್ಯಾಂಗ್‌ನ ಇಂಥ ಎಡವಟ್ಟು ನಿರ್ಧಾರಗಳೇ ಜಿಲ್ಲೆಯಲ್ಲಿ ಬಿಜೆಪಿಯನ್ನು ಬ್ರಹ್ಮರಾಕ್ಷಸನಂತೆ ಬೆಳೆಸುತ್ತಿದೆ.


ಮೊನ್ನೆ-ಮೊನ್ನೆಯಷ್ಟೇ ನಡೆದ ನಿಗಮ-ಮಂಡಳಿ ಕುರ್ಚಿ ಕಾರು ಹಂಚಿಕೆಯಲ್ಲೂ ಕರಾವಳಿ ಕಾಂಗ್ರೆಸ್ ಯಜಮಾನರು ಸಾಮಾಜಿಕ ನ್ಯಾಯ ಅಥವಾ ಸೋಷಿಯಲ್


ನಾಭಿರಾಜ್ ಜೈನ್


ದಿವ್ಯ ಪ್ರಭ


ವೆರೋನಿಕಾ


ಕೃಪಾ ಆಳ್ವ


ಐವಾನ್ ಡಿಸೋಜಾ

ಗುಡ್ ಗಫೂರ್!!

ಉಡುಪಿ ಜಿಲ್ಲಾ ಕಾಂಗ್ರೆಸ್‌ಗೆ ಹಲವು ವರ್ಷ ಅಧ್ಯಕ್ಷರಾಗಿದ್ದ ಗಫೂರ್ ಮುಸ್ಲಿಮ್ ಸಮುದಾಯದ ಸೂಕ್ಷ್ಮ ಸಂವೇದನೆಯ ರಾಜಕಾರಣಿ; ಆತನ ಪಕ್ಷ ನಿಷ್ಠೆ-ಪಕ್ಷ ಸೇವೆ ಪ್ರಶ್ನಾತೀತ. ಎಐಸಿಸಿ ದಿಗ್ಗಜ ಆಸ್ಕರ್ ಫರ್ನಾಂಡಿಸ್‌ರ ಪರಮಾಪ್ತ ಎನ್ನುವ 'ಗುರುತು' ಗಫೂರ್‌ಗೆ ಇದ್ದರೂ ಆತ ಇವತ್ತಿಗೂ ಬಸ್‌ನಲ್ಲೇ ಓಡಾಡುತ್ತಿದ್ದಾರೆ. "ಆಸ್ಕರಣ್ಣ ನಂಗೆ ಕೈ ಕೊಟ್ರು..." ಎಂದು ಎಂದೂ ಅಲವತ್ತುಕೊಂಡವರಲ್ಲ.

ಹಾಗೆ ನೋಡಿದರೆ ಈ ಮಾಜಿ ಜಿಪಂ ಸದಸ್ಯನನ್ನು ಆಸ್ಕರ್ ಎಂದೋ ಎಮ್ಮೆಲ್ಸಿ ಅಥವಾ ನಿಗಮ-ಮಂಡಳಿಗೆ ನೇಮಿಸಬೇಕಿತ್ತು, ಆದರೆ ರಚ್ಚೆ ಹಿಡಿದು ಅಧಿಕಾರಕ್ಕೆ ಹಪಹಪಿಸದ ಗಫೂರ್‌ಗಿಂತ ದಗಲುಬಾಜಿ ಲಾಬಿದಾರ ಐವಾನ್ ಡಿಸೋಜಾನಂಥ ನಾಲಾಯಕರು-ವಲಸಿಗರು ಮಹತ್ವದ ಸ್ಥಾನ-ಮಾನ ಲಪಟಾಯಿಸುತ್ತಿದ್ದಾರೆ. ಗಫೂರ್ ಎಮ್ಮೆಲ್ಸಿ ಅಥವಾ ನಿಗಮ-ಮಂಡಳಿಗೆ ಆಯ್ಕೆಯಾಗಲು ಐವಾನ್, ಕಳ್ಳಿಗೆ ತಾರಾನಾಥ ಶೆಟ್ಟಿ, ವೆರೋನಿಕಾ, ನಿವೇದಿತ್ ಆಳ್ವ, ಕೃಪಾರಂಥವರಿಗಿಂತ ಸಾವಿರ ಪಾಲು ಬೆಟರ್ ಅಭ್ಯರ್ಥಿ!

ಐವಾನ್ ಎಮ್ಮೆಲ್ಸಿಯಾದ ಸಂದರ್ಭದಲ್ಲೇ ಗಫೂರ್ ಹೆಸರೂ ಕೇಳಿಬಂದಿತ್ತು, ಆದರೆ ಆಸ್ಕರ್ ಫರ್ನಾಂಡಿಸ್ ಬಿಷಪ್‌ಗಳ ಲಾಬಿಗೆ ಮಣಿದು ತನ್ನ ಲಾಗಾಯ್ತಿನ ಹಿಂಬಾಲಕನಿಗೆ ಅನ್ಯಾಯ ಮಾಡಿದ್ದರು. ಈಗಲೂ ಅಲ್ಪಸಂಖ್ಯಾತ ಆಯೋಗಕ್ಕೆ ಗಫೂರ್ ನೇಮಕವಾಗುವ ಅವಕಾಶ ಬಂದಿತ್ತು, ಆದರೆ ಕೊನೆಗಳಿಗೆಯಲ್ಲಿ ಆಸ್ಕರಣ್ಣನ ಎಡಬಿಡಂಗಿತನದಿಂದ ಗಫೂರ್‌ಗೆ ವಂಚನೆಯಾಯ್ತು.

ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷತೆಗೆ ಗಫೂರ್‌ರನ್ನು ರಾಜಿ ಅಭ್ಯರ್ಥಿಯಾಗಿ ಒಂದು ಹಂತದಲ್ಲಿ ಕೆಪಿಸಿಸಿ ನಿರ್ಧರಿಸಿತ್ತು. ಮೀನುಗಾರರಲ್ಲಿ ನಿಗಮಕ್ಕಾಗಿ ಎಂಟ್ಹತ್ತು ಜನ ಶಿಪ್ಪರಲಾಗ ಹಾಕುತ್ತಿದ್ದಾರೆ. ಇವರ ಜಗಳದಿಂದ ಆ ಕಾರ್ಪೊರೇಷನ್ ಖಾಲಿ ಬಿದ್ದಿದೆ. ಗಫೂರ್ ಮನ ಒಲಿಸಲಾಗುತ್ತಿದೆ. ಆದರೆ ಗಫೂರ್ ನಾನೊಲ್ಲೆ ಎನ್ನುತ್ತಿದ್ದಾರೆ. "ಆ ಕಾರ್ಪೊರೇಷನ್ ಫಿಶರ್‌ಮನ್‌ಗಾಗಿ ಮೀಸಲಿರುವಂಥದ್ದು.. ಅದು ಅವರ ಹಕ್ಕು... ಮೀನುಗಾರರಿಗೇ ಆ ಸ್ಥಾನ ಸಿಗಬೇಕಾದ್ದು ನ್ಯಾಯ... ನಂಗದು ಬೇಡವೇ ಬೇಡ..." ಎಂದು ಗಫೂರ್ ಕಡ್ಡಿ ಮುರಿದಂತೆ ಹೇಳುತ್ತಿದ್ದಾರೆ. ದೊಡ್ಡವರು ಮೀನುಗಾರರ ನಡುವಿನ ಜಗಳ ಬಿಡಿಸಿ ಬಚಾವಾಗಲು ಗಫೂರ್‌ರ ದಾರಿ ತಪ್ಪಿಸಲು ನೋಡುತ್ತಿದ್ದಾರೆ.

ಅತ್ತ ದಕ್ಷಿಣ ಕನ್ನಡದಲ್ಲಿ ಮಾಜಿ ಶಾಸಕ ವಿಜಯಕುಮಾರ್ ಶೆಟ್ಟಿ ನಿಗಮ-ಮಂಡಳಿ ಸಿಗದೇ ಹತಾಶರಾಗಿದ್ದಾರೆ. ವಿಜಯಕುಮಾರ್‌ಗೆ ಮೀನುಗಾರ ಅಭಿವೃದ್ಧಿ ನಿಗಮ ಬಳುವಳಿಯಾಗಿ ಕೊಟ್ಟು ಸಮಾಧಾನಿಸಲು ದೊಡ್ಡ ಹೆಡ್ಡರು ಒಂದು ಹಂತದಲ್ಲಿ ಸ್ಕೆಚ್ ಹಾಕಿದ್ದರು. ಇದರಿಂದ ಮೀನುಗಾರ ಸಮುದಾಯದ ಆಕ್ರೋಶಕ್ಕೆ ತುತ್ತಾಗಬೇಕಾಗೀತೆಂದು ಸದ್ಯ ಸುಮ್ಮನಿದ್ದಾರೆ. ಆದರೆ ಜಾತಿವಾದಿಯಾಗಿ ಬದಲಾಗಿರುವ ಸೆಕ್ಯೂಲರ್ ಮಂತ್ರಿ ರಮಾನಾಥ್ ರೈ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷತೆ ತಾನು ತೆರವು ಮಾಡಿದ ತಕ್ಷಣ ಅಲ್ಲಿ ವಿಜಯಕುಮಾರ್ ಶೆಟ್ಟರನ್ನು ಪ್ರತಿಷ್ಠಾಪಿಸಲು ನಿರ್ಧರಿಸಿದ್ದಾರೆ. ಆಕಸ್ಮಾತ್ ವಿಜಯಕುಮಾರ್ ಶೆಟ್ಟಿ ಡಿಸಿಸಿ ಅಧ್ಯಕ್ಷರಾದರೆ ಕಾಂಗ್ರೆಸ್ ಬಿಜೆಪಿಗೆ ಬಲಿಯಾಗೋದು ಗ್ಯಾರಂಟಿ! ಬಹುಸಂಖ್ಯಾತ ದುರ್ಬಲ ವರ್ಗದವರನ್ನು ಎತ್ತಿ ಕಟ್ಟಿ ಕಿತಾಪತಿ ಮಾಡಲು ಕಾಂಗ್ರೆಸ್‌ನ ಎಡವಟ್ಟು ಬಿಜೆಪಿಗೆ ವರವಾಗಲಿದೆಯಷ್ಟೇ!!

...ಯರಿಂಗ್ ಸೂತ್ರ ಬಳಸಿಲ್ಲ! ಯಾವ್ಯಾವುದೋ ...ಕಣೆ-ಒತ್ತಡ-ತೆವಲು ತೀರಿಸಿಕೊಳ್ಳುವ ...)ರಾಲೋಚನೆಯಿಂದ ಅವಿಭಜಿತ ದಕ್ಷಿಣ ಕನ್ನಡದ ...ನ್ನು ನಿಗಮ-ಮಂಡಳಿಗೆ ನೇಮಿಸಲಾಗಿದೆ. ಕಳೆದ ...ಂಗಳಲ್ಲಿ ಇದ್ದಕ್ಕಿದ್ದಂತೆ ಸುಳ್ಯದ ದಿವ್ಯಪ್ರಭ ಚಿಲ್ತಡ್ಕ ... ಸಮಾಜ ಕಲ್ಯಾಣ ಮಂಡಲಿಯ ಅಧ್ಯಕ್ಷೆಯಾಗಿ ...ಸಿದಾಗ ಜಿಲ್ಲಾ ಕಾಂಗ್ರೆಸ್‌ನಲ್ಲಿ ಎದ್ದಿದ್ದ ಅಸಮಾಧಾನದ ... ಈಗ ಬೆಂಕಿಯಾಗಿ ಧಗಧಗಿಸುತ್ತಿದೆ. ಈಕೆ ...ೂವ್ಮೆ ಸುಳ್ಯ ಮಹಿಳಾ ಕಾಂಗ್ರೆಸ್‌ನ ...ಯಾಗಿದ್ದರೆಂಬುದು ಬಿಟ್ಟರೆ ಈಕೆಯಿಂದ ಪಕ್ಷಕ್ಕೆ ...ೇನೂ ಆಗಿಲ್ಲ ಮುಂದಾಗುವ ಸಾಧ್ಯತೆಯೂ ಇಲ್ಲ. ... ಮಾರಾಯ್ತಿಗೆ ಅಧಿಕಾರ ಕೊಟ್ಟಾಗ ನಿಷ್ಠಾವಂತ ...ಗರು ತಿರುಗಿ ಬಿದ್ದಿದ್ದರು.

...ಕೆ. ಶಿವಕುಮಾರ್ ಮತ್ತು ಶಿವರಾಮೇಗೌಡರ ...'ದಿಂದ ದಿವ್ಯಪ್ರಭ ವಜನಿನ ಮಂಡಳಿ ಪೀಠ ...ಮಿಸಿದ್ದರು. ಅರೆಭಾಷೆ ಗೌಡ ಸಮುದಾಯದ ...ಗೇ ಅವಕಾಶ ಕೊಡಬೇಕೆಂಬ ಹಠ ಡಿಕೆಶಿ-...ರ್‌ಎಸ್‌ಗೆ ಇದ್ದರೆ ದಿವ್ಯಪ್ರಭೆಗಿಂತ ಸಮರ್ಥರಾದವರು ...ಪುತ್ತೂರು ಕಾಂಗ್ರೆಸ್‌ಲ್ಲೇ ಇದ್ದರು. ಹೀಗೆ ದಿವ್ಯಪ್ರಭಾಗೆ ... ಅಧಿಕಾರ ರಾತ್ರೋರಾತ್ರಿ ಸಿಕ್ಕಿದ್ದು ಜಿಲ್ಲೆಯಲ್ಲಿ ...ಸ್‌ನ್ನು ನಗೆಪಾಟಲಿಗೀಡುಮಾಡಿಬಿಟ್ಟಿದೆ. ಕಳೆದ ...ರ್‌ನಲ್ಲಿ ನಿಗಮ ಮಂಡಳಿ ನೇಮಕಾತಿ ನಡೆದಾಗಲೂ ... ಬಿಲ್ಲವ-ಮೀನುಗಾರ-ದಲಿತ ಮುಂತಾದ ಅಹಿಂದ ... ಮತ್ತೆ ಮೋಸ ಮಾಡಲಾಗಿದೆ.

...ಕ್ಕಳ ಹಕ್ಕುಗಳ ಆಯೋಗದ ಗೂಟದ ಕಾರ್ ...ರುವ ಕೃಪಾ ಆಳ್ವರಿಗೆ ಹೇಗೆ ಮಂತ್ರಿ ರೈ ಶಿಫಾರಸು ...ಕೊಟ್ಟಿದ್ದಾರೋ ಹಾಗೇ ಬಲಾಢ್ಯ ಮೇಲ್ವರ್ಗದ ...ತಳಿ ನಾಭಿರಾಜ್ ಜೈನ್‌ಗೂ ದಯ ಪಾಲಿಸಿದ್ದರು! ... ದಳ ಪೂರ್ವಾಶ್ರಮದ ಈ ನಾಭಿರಾಜ್ ಜೈನ್ ... ಪುತ್ತೂರು ಆದರೂ ಬೇರುಗಳಿರುವುದು ...ೂರಲ್ಲಿ, ಪುತ್ತೂರಲ್ಲಿ ಈತನ ಪರಿಚಯವೇ ಇಲ್ಲ. ...ಲ್ಲಿದ್ದಾಗ ದೇವೇಗೌಡ ಮತ್ತು ಸಿದ್ದು ನಡುವೆ ಈತ ...ನಾಂತರ ಕಾದುಕೊಂಡು ಚಮಚಾಗಿರಿ ...ಕೊಂಡಿದ್ದ. ದೇವೇಗೌಡ್ರು ಪಿಎಂ ಆಗಿದ್ದಾಗ ಅವರ ...ದೇವಿ ಈತ ನೋಡಿಕೊಳ್ಳುತ್ತಿದ್ದ. ಹಾಗಾಗಿ ಗೌಡ್ರ ...ಲಿ ಬೇನಾಮಿ ದುಡ್ಡು ಈ ನಾಭಿರಾಜ್‌ನಲ್ಲಿದೆ ಎಂದು ...ವವರೂ ಇದ್ದಾರೆ. ದೇವೇಗೌಡರ ಪದ್ಮನಾಭನಗರದ ...ೇಲ್ ಬಂಕ್ ಈತನೇ ನಡೆಸುತ್ತಾನೆ. ಗೌಡರ ...ಗಳನ್ನೆಲ್ಲ ಆತನ ಕಡು ಶತ್ರು ಸಿದ್ದುಗೆ ತಿಳಿಸುತ್ತಿದ್ದ ...ಾಡಿಕೋರ ಅದ್ಯಾವಾಗ ಕಾಂಗ್ರೆಸ್ ಸೇರಿದನೋ ...ೇ ಗೊತ್ತಿಲ್ಲ. ದಕ್ಷಿಣ ಕನ್ನಡ ಕಾಂಗ್ರೆಸಿಗರ ಪ್ರಕಾರ ...ಜ್ ಪಕ್ಷದ ಸದಸ್ಯನೇ ಅಲ್ಲ. ಸಿಎಂ ಸಿದ್ದು ಖುದ್ದು ...ಹಿಸಿ ತನ್ನ 'ಬೇಗುಹಾರ' ನಾಭಿರಾಜ್‌ಗೆ ಪ್ರೊಗದಸ್ತಾದ ...ಸಿ ನಿಗಮ ಇನಾಮಾಗಿ ಕೊಟ್ಟಿದ್ದಾರೆ.

...ಡುಪಿ ಜಿಲ್ಲೆಯ ವೆರೋನಿಕಾ ಕರೋಲಿನಾ ಎಂಬ ...ಗೆ ಮಹತ್ವದ ಕರ್ನಾಟಕ ಸೋಪ್ಸ್ ಅಂಡ್ ...ಂಟ್ಸ್ ಕಂಪನಿಯ ಗದ್ದುಗೆ ನೀಡಲಾಗಿದೆ. "ಈಕೆ ...ಬಲವರ್ಧನೆಗೆ ಸಲ್ಲಿಸಿರುವ ಸೇವೆ ಏನು...?" ಎಂದು ...ತ ಕಾಂಗ್ರೆಸಿಗರು ಆಸ್ಕರ್ ಫರ್ನಾಂಡಿಸ್‌ಗೆ ಮೂತಿಯ ... ಹೊಡೆದಂತೆ ಕೇಳುತ್ತಿದ್ದಾರೆ. ಎಮ್ಮೆಲ್ಲೆ ಎಮ್ಮೆಲ್ಸಿ ...ಭಾ ಸದಸ್ಯತ್ವ ಕ್ಯಾಥೋಲಿಕ್ ಕ್ರಿಶ್ಚಿಯನ್ನರಿಗೆ ...ರುವಾಗ ವೆರೋನಿಕಾರ ಅವಶ್ಯಕತೆ ಏನಿತ್ತು? ...ಳಿದ ಬಿಲ್ಲವ-ಮೊಗವೀರ-ಗಾಣಿಗ-ದಲಿತರನ್ನು ...ಸಬಹುದಿತ್ತಲ್ಲ? ಎಂಬ ವಾದ ಜಿಲ್ಲಾ ಕಾಂಗ್ರೆಸ್‌ನಲ್ಲಿ ...ದ್ದಿದೆ. ಇದರಿಂದ ಒಂಚೂರು ಕಂಗಾಲಾಗಿರುವ ... "ವೆರೋನಿಕಾ ಆಯ್ಕೆಯಲ್ಲಿ ನನ್ನದೇನೂ ...ಇಲ್ಲ..." ಎಂದು ತಡಬಡಿಸುತ್ತಿದ್ದಾರೆ.

...ದು ಮೂಲದ ಪ್ರಕಾರ ಮಾಜಿ ಸಿಎಂ ಮೊಯ್ಲಿ ...ನೇ ವೆರೋನಿಕಾರ ಗಾಡ್‌ಫಾದರ್. ಮೊಯ್ಲಿಯ ...ರು ಕಾರ್ಕಳದ ಮಹಿಳಾ ಪುಢಾರಿಣಿ ಈ ...ನಿಕಮ್ಮ. ಹೀಗಾಗಿ ಮುಂದೆ ತನ್ನ ಮಗನ ...ರಿ ಕನಸಿಗೆ ವೆರೋನಿಕಾಳ ಕ್ರಿಶ್ಚಿಯನ್ನರಿಂದ ಬೆಂಬಲ ...ಬದು ಮೊಯ್ಲಿ ಮಸಲತ್ತು ಒಂದಂತೂ ಖರೆ. ...ಾಂಗ್ರೆಸ್‌ನ ಜಾತಿ ಲೆಕ್ಕಾಚಾರ ಸಮದೂಗಿಸುವ ...ಸ್ಕರ್‌ಗೆ ಇದ್ದಿದ್ದರೆ ಆತ ವೆರೋನಿಕಾರ ಆಯ್ಕೆ ...ಹಿಂದುಳಿದ ವರ್ಗದವರೊಬ್ಬರಿಗೆ ಚಾನ್ಸ್ ...ಬಹುದಿತ್ತು; ತನ್ಮೂಲಕ ಬಿಜೆಪಿಯ ಹಿಂದೂತ್ವದ ...ಕಾರಣಕ್ಕೆ ಟಾಂಗ್ ಕೊಡಬಹುದಿತ್ತು. ಒಟ್ಟಿನಲ್ಲಿ ...ಮೊಯ್ಲಿಗೆಲ್ಲ ಅವರವರದ್ದೇ ಲಾಭ-ನಷ್ಟದ ಗಣಿತವೇ ... ಪಕ್ಷದ ಹಿತದ ಚಿಂತೆಯಿಲ್ಲ!

...ಂತವೆಂದರೆ ಕರಾವಳಿ ಕಾಂಗ್ರೆಸ್ ಮೇಲೆ ...ನಿಷ್ಠೇ ಅಲ್ಲ, ಏನು, ಅಲ್ಪಾನೂ ಈಗ ...ಂದು ಬಿದ್ದಿದ್ದಾರೆ. ಅಧಿಕಾರಸ್ಥ ಕಾಂಗ್ರೆಸಿಗರ ...ಷದ ಪರಿಣಾಮ ಬರಲಿರುವ ಪಂಚಾಯತ್ ...ಯಲ್ಲಿ ಪ್ರತಿಫಲಿಸುವುದು ಖಂಡಿತ!!

● ನಹುಷ

ಬರಲಿರುವುದು ಅಚ್ಛಾ ದಿನವಲ್ಲ, ಚೆಡ್ಡಿಗಳ ಕೊಚ್ಚೆ ದಿನವಂತಲ್ಲಾ

ಧೂತ್ತೇರಿ

ಸ್ವಾತಂತ್ರ್ಯ ಪೂರ್ವದಿಂದಲೂ ಒಬ್ಬ ರಾಷ್ಟ್ರನಾಯಕನಿಲ್ಲದೆ ನರಳುತ್ತಿದ್ದ ಭಾರತದ ಚೆಡ್ಡಿಗಳು ಇತ್ತೀಚೆಗೆ ಸರ್ದಾರ್ ವಲ್ಲಭಬಾಯ್ ಪಟೇಲರನ್ನು ತಮ್ಮ ಉಕ್ಕಿನ ನಾಯಕನೆಂದು ಘೋಷಿಸಿಕೊಂಡವಂತಲ್ಲಾ. ಜೊತೆಗೆ ಸರ್ದಾರರ ಕಬ್ಬಿಣದ ಪ್ರತಿಮೆ ಮಾಡಿ ನಿಲ್ಲಿಸಲು ಶಪಥ ಮಾಡಿದ್ದೂ ಅಲ್ಲದೆ ದೇಶಾದ್ಯಂತ ಗುಜರಿ ಕಬ್ಬಿಣವನ್ನೆಲ್ಲಾ ಹುಡುಕಿ ರಾಶಿ ಹಾಕಿಕೊಂಡವಂತಲ್ಲಾ. ಆದರೇನು ಪಟೇಲರ ಹೆಸರಿಲ್ಲದೆ ಅಧಿಕಾರ ಹಿಡಿಯಬಹುದೆಂದು ಅರಿತುಕೊಂಡ ಚೆಡ್ಡಿಗಳು, ಗುಜರಿ ಕಬ್ಬಿಣ ಮರೆತು ಕಳೆದ ಚುನಾವಣೆಯಲ್ಲಿ ಮರೆಮಾಚಿದ್ದ ಅಜೆಂಡಾಗಳನ್ನ ಯಾವ ಅಳುಕೂ ಇಲ್ಲದೆ ಅನಾವರಣಗೊಳಿಸುತ್ತಿವೆಯಂತಲ್ಲಾ.

ಆ ಪೈಕಿ ಕಳೆದ ದಶಕದಿಂದಲೂ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮನನ್ನು ನೆನಪಿಸುವಂತೆ ಮಲಗಿರುವ ವಾಜಪೇಯಿಗೆ ಭಾರತ ರತ್ನ ಕೊಟ್ಟ ಚೆಡ್ಡಿ ಪಡೆ ಒಬ್ಬರಿಗೆ ಕೊಟ್ಟರೆ ಸರಿಹೋಗುವುದಿಲ್ಲವೆಂದರಿತು, ನಿಷ್ಠಾವಂತ ಕಾಂಗ್ರೆಸ್ ನಾಯಕ ಮತ್ತು ಹಿಂದೂ ವಿ.ವಿ. ಸ್ಥಾಪಕ ಮದನಮೋಹನ ಮಾಳವೀಯರಿಗೂ ಕೊಟ್ಟವಂತಲ್ಲಾ. ಇದರ ಬಗ್ಗೆ ಭಾರತದ ಸಾಮಾನ್ಯ ಪ್ರಜೆಯ ಅಭಿಪ್ರಾಯ ಕೇಳಿದರೆ, "ತಮಿಳುನಾಡಿನ ರಸಿಕ ಎಂಜಿಆರ್ ಮತ್ತು ಅಪ್ರಬುದ್ಧ ರಾಜಕಾರಣಿ ರಾಜೀವ ಗಾಂಧಿ ಇಂತವರಿಗೆಲ್ಲಾ ಕೊಟ್ಟು ದುರುಪಯೋಗಗೊಂಡಿರುವ ಭಾರತ ರತ್ನ ಪ್ರಶಸ್ತಿಯನ್ನು ವಾಜಪೇಯಿಗೆ ಮತ್ತು ಮಾಳವೀಯರಿಗೆ ಕೊಡುತ್ತಾರೆಂದರೆ ಗ್ಯಾರಂಟಿ ಚೆಡ್ಡಿಗಳಿಗೆ ತಲೆ ಕೆಟ್ಟಿರಬೇಕು'' ಎಂದು ಉತ್ತರಿಸುತ್ತಾರಂತಲ್ಲಾ. ಅದಕ್ಕೆಂದೇ ಚಿತ್ರದುರ್ಗ ಪ್ರಾಂತ್ಯದ ಆಂಜನೇಯ ಈ ಬಗ್ಗೆ ಪ್ರತಿಕ್ರಿಯಿಸಿ "ಬಿಜೆಪಿಗಳು ಬಿಡಿ, ಮುಂದೊಂದು ದಿನ ಗೋಡ್ಸೆಗೂ ಭಾರತ ರತ್ನ ಪ್ರಶಸ್ತಿಯನ್ನು ಕೊಡುತ್ತಾರೆ'' ಎಂದುದಕ್ಕೆ ಮೈಸೂರು ಕಡೆಯ ವಾನರವೊಂದು ಆಂಜನೇಯನನ್ನು ಕೋತಿ ಎಂದು ಜರಿದನಂತಲ್ಲಾ, ಧೂತ್ತೇರಿ!!



****

ಗಾಂಧಿ ಕೊಂದವರ ಕೈಗೆ ದೇಶ ಸಿಕ್ಕಿದಂದಿನಿಂದ ಮಂಕಾಗಿದ್ದ ನಮ್ಮ ಬುದ್ಧಿಜೀವಿ ವಲಯಕ್ಕೆ ಮರ್ಮಾಘಾತ ವಾಗುವಂತಹ ಘಟನೆಗಳು ದಿನೇದಿನೇ ಜರುಗುತ್ತಿದೆ ಯಂತಲ್ಲಾ. ಸದರಿ ಘಟನೆಗಳೆಲ್ಲಾ ತನ್ನ ಆಣತಿಯಂತೆ ಕರಾರುವಾಕ್ಕಾಗಿ ನಡೆಯುತ್ತಿರುವುದನ್ನು ಕಂಡು ಮೋದಿ ಸೋಗಿನ ವೇಶದಲ್ಲಿ ಸುಮ್ಮನಿರುವುದನ್ನು ಕಂಡು ಇಡೀ ರಾಷ್ಟ್ರ ದಿಗ್ಭ್ರಮೆಗೊಂಡಿದೆಯಂತಲ್ಲಾ. ಚೆಡ್ಡಿಗಳ ಅವ್ಯಾಹತ ಕಾರ್ಯಕ್ರಮಗಳನ್ನು ಗ್ರಹಿಸಿದರೆ, ಮುಂಬರುವ ದಿನಗಳಲ್ಲಿ ದೇಶಕ್ಕೆ ಅಚ್ಛಾ ದಿನಗಳ ಬದಲಾಗಿ ಚೆಡ್ಡಿಗಳ ಕೊಚ್ಚೇ ದಿನಗಳು ಗ್ಯಾರಂಟಿ ಎಂಬಂತಾಗಿದೆಯಲ್ಲಾ.

ಮೊದಲನೆಯದಾಗಿ ಬಸ್ಸಾಂಡಿನಲ್ಲಿ ಅಲೆಯುವ ಗಬ್ಬದ ಹಸುವಿನಂತೆ ಕಾಣುವ ಸುಷ್ಮಾ ಸ್ವರಾಜ್ ಎಂಬ ಮಹಿಳೆ ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥ ಮಾಡಲು ಹೊರಟಿದ್ದು, ಅದಕ್ಕಿಂತ ಮೊದಲು ಈ ದೇಶದಿಂದಲೇ ಗಾಂಧಿ ಹೆಸರನ್ನು ಗುಡಿಸಿ ಹಾಕಲು ಪಣ ತೊಟ್ಟ ಮೋದಿ ಪಡೆ ಕಸಪೊರಕೆ ಹಿಡಿದು ಕಸವಿಲ್ಲದ ಜಾಗದಲ್ಲಿ ಗುಡಿಸಿ ಫೋಟೋ ತೆಗೆಸಿಕೊಂಡಿದ್ದು. ಅದೂ ಗಾಂಧಿ ಜಯಂತಿಯ ದಿವಸ. ಇನ್ನ ವಾಜಪೇಯಿ ಹುಟ್ಟಿದ ದಿನ ಸ್ಥಾಪಿಸಲು ಕ್ರಿಸ್‌ಮಸ್ ದಿನವನ್ನು ಬಲಿಕೊಡಲು ಹೊರಟಿದ್ದು, ಬಡ ಮುಸ್ಲಿಮರನ್ನ ಕರೆದು ಘರ್‌ವಾಪಸಿ ಕಾರ್ಯಕ್ರಮ ಮಾಡಿ ಉಗಿಸಿಕೊಂಡಿದ್ದು, ಇನ್ನ ಮೋಹನ್ ಭಾಗವತ್ ಎಂಬ ಮಹಾ ಮೂರ್ಖನ ಪ್ರಕಾರ ಎಂಟು ನೂರು ವರುಷಗಳ ಆನಂತರ ಭಾರತದಲ್ಲಿ ಅಂದರೆ ದೆಹಲಿಯ ಗದ್ದುಗೆಯನ್ನು ಹಿಂದೂಗಳು ಹಿಡಿದಿದ್ದಾರಂತೆ. ಈ ಮಾತಿನಿಂದ ಆತನೇ ಸಿಕ್ಕಿಬಿದ್ದಿದ್ದಾನೆ. ಈ ಬೃಹತ್ ಜನಸಂಖ್ಯಾ ರಾಷ್ಟ್ರದ ಜನರ ಆಲೋಚನೆಯನ್ನೇ ನಾಶ ಮಾಡಿ, ಪರಕೀಯರು ಬಂದು ಎಂಟು ನೂರು ವರ್ಷ ಆಳುವಾಗ ಈತನ ಸಂತತಿ ಎಲ್ಲಿತ್ತು ಎಂದು ಚರ್ಚೆ ಮಾಡಿದ್ದಾದರೆ, ಸಿಕ್ಕಿ ಬೀಳುವವನು ತಾನೇ ಎಂಬುದನ್ನೇ ಮರೆತು ಮಾತನಾಡಿರುವ ಭಾಗವತ, ನಿಜಕ್ಕೂ ಚೆಡ್ಡಿಗಳ ಕೇರಿಯ ಬುದ್ಧಿಮಾಂದ್ಯನಂತಲ್ಲಾ, ಧೂತ್ತೇರಿ!!

****

ಬರಬರುತ್ತ ನಮ್ಮ ಸಾಬರ ಪಡೆ ವಕಾಲತ್ತು ವಹಿಸಿ ಮಾತನಾಡುವಂತಹ ಸಾಮಗ್ರಿಗಳೇ ಕಡಿಮೆಯಾಗುತ್ತಿವೆಯಲ್ಲಾ. ಮೊದಲನೆಯದಾಗಿ ಮಂಗಳೂರು ಕಡೆಯ ಸನ್ಮಾರ್ಗ ಎಂಬ ಪತ್ರಿಕೆ ಸಾಬರ ಜೊತೆಗೆ ಅವರ ಬಗ್ಗೆ ಅನುಕಂಪವಿರುವವರಿಗಾದರೂ ಒಂದು ಮಾರ್ಗ ತೋರುತ್ತದೆಂದು ಭಾವಿಸಿದರೆ, ಮಲಾಲಾ ಪಡೆದ ನೊಬೆಲ್ ಪ್ರಶಸ್ತಿಯನ್ನು ಆಡಿಕೊಂಡಿದೆಯಲ್ಲಾ. ಪುಟ್ಟ ಹುಡುಗಿಯಾದ ಮಲಾಲ, ಹಲವು ದೇಶಗಳಲ್ಲಿ ಹತ್ಯೆಗೊಂಡ- ಮುಖ್ಯವಾಗಿ ಇಸ್ರೇಲಿಗಳಿಂದ ಹತರಾದ ಪ್ಯಾಲಿಸ್ತೇನಿ ಜೀವಗಳ ಬಗ್ಗೆ- ಯಾವ ಅನುಕಂಪದ ಹೇಳಿಕೆಯನ್ನೂ ಕೊಟ್ಟಿಲ್ಲವಂತೆ. ಹೀಗೆ ಪ್ರಪಂಚದ ನಾಯಕರ ಲೆವೆಲ್ಲಿಗಿಟ್ಟು, ಮಲಾಲಾಳಿಂದ ಅಭಿಪ್ರಾಯ ನಿರೀಕ್ಷಿಸಿ ಖಂಡಿಸುವ ಈ ಸಾಬರ ಸನ್ಮಾರ್ಗಕ್ಕೂ, ಚೆಡ್ಡಿಗಳ ವಿಕ್ರಮ ಆರ್ಗನೈಜರ್‌ಗೂ ಅಂತಹ ವ್ಯತ್ಯಾಸವೇ ಕಾಣಬರುತ್ತಿಲ್ಲವಂತಲ್ಲಾ.

ಇದೆಲ್ಲಕ್ಕಿಂತ ಮುಖ್ಯವಾಗಿ ಚೆಡ್ಡಿಗಳಿಗೆ ಸವಾಲಾಗಿ ನಿಂತಿರುವ ಶಿವಮೊಗ್ಗದ ಸಾಬರು. ಇತ್ತೀಚೆಗೆ ಇಸ್ರೇಲಿಗಳು ಪ್ಯಾಲಿಸ್ತೇನಿಗಳ ಮೇಲೆ ನಡೆಸಿದ ದಾಳಿಯನ್ನ ಖಂಡಿಸಿ ಬೃಹತ್ ಮೆರವಣಿಗೆ ನಡೆಸಿದರಂತೆ. ಆದರೆ ಪಾಕಿಸ್ತಾನದಲ್ಲಿ ಮಕ್ಕಳ ಮಾರಣಹೋಮ ನಡೆದ ಬಗ್ಗೆ ಶಿವಮೊಗ್ಗದ ಸಾಬರು ಚಕಾರವೆತ್ತಿಲ್ಲವಂತೆ. ಹಾಗೆಂದು ಅಲ್ಲಿನ ಮಕ್ಕಳಪ್ರಿಯರನ್ನ ನಿರ್ದಯಿಗಳೆಂದು ಭಾವಿಸುವಂತಿಲ್ಲ. ಸಾಬರನ್ನು ಕಂಡರಾಗದವನ ವ್ಯಾಖ್ಯಾನದ ಪ್ರಕಾರ, ಸಾಬರು ಸಾಬರನ್ನು ಕೊಂದುಕೊಳ್ಳಬಹುದಂತೆ. ಆದರೆ ಬೇರೆಯವರು ಸಾಬರನ್ನ ಕೊಲ್ಲುವಂತಿಲ್ಲವಂತೆ. ಆಗ ಮಾತ್ರ ಕೆರಳುತ್ತಾರಂತೆ. ಇದಕ್ಕೆ ಕೊಡಬಹುದಾದ ಹಲವಾರು ದುಷ್ಟಾಂತಗಳು ಭಾರತದಲ್ಲೇ ಇವೆಯಂತೆ. ಆದೇ ನಮ್ಮಲ್ಲಿ ಮಕ್ಕಳನ್ನು ಕೊಲ್ಲಲ್ಲ, ಅಪಹರಿಸಿ ಸಾಕಿ, ಸಲುಹಿ, ಅವರಪ್ಪ ಅಮ್ಮನ ಮೇಲೆ ಛೂಬಿಡುವ ಪದ್ಧತಿ ನಮ್ಮದು ಎಂದನಲ್ಲಾ, ಧೂತ್ತೇರಿ!!

****

ಸ್ನೇಹಕ್ಕೂ ಸೈ ಸಮರಕ್ಕೂ ಸೈ, ನೀವು ಬಂದರೆ ನಿಮ್ಮ ಜೊತೆಯಲ್ಲಿ, ನೀವು ಬಾರದಿದ್ದರೆ ನಿಮ್ಮನ್ನು ಬಿಟ್ಟು, ಅಡ್ಡಿಪಡಿಸಿದರೆ ಅದುಮಿಟ್ಟು ಕಟ್ಟುವೆವು ರಾಮಚಂದ್ರಾಪುರದ ಮಠವನ್ನು ಎಂಬ ರಾಘು ವಾಕ್ಯವನ್ನು ಘೋಷಣೆ ಮಾಡಿಕೊಂಡಿರುವ ರಾಮಚಂದ್ರಾಪುರದ ವಾನರಸೇನೆ ದಲಿತ ಸಂಘದ ಜಿಲ್ಲಾ ಸಂಚಾಲಕ ಪರಮೇಶ್ವರ್ ಮೇಲೆ ದಾಳಿ ಮಾಡಿ ಪರಚಿವೆಯಂತಲ್ಲಾ. ಇದರಿಂದ ಸಿಟ್ಟುಗೊಂಡ ಕೋಮು ಸೌಹಾರ್ದಿಗಳು ಪೊಲೀಸರಿಗೆ ದೂರು ಕೊಡುವಷ್ಟರಲ್ಲಿ ಹವ್ಯಕರ ವಾನರ ಸೇನೆ "ದಲಿತರು ನಮ್ಮ ಹೆಣ್ಣು ಮಕ್ಕಳ ಮೇಲೆ ಬಿದ್ದರು. ಇದನ್ನು ಸಹಿಸಲು ಸಾಧ್ಯವೇ?" ಎಂದು ದೂರು ಕೆರೆದುಕೊಂಡು ಹೆಣ್ಣುಮಕ್ಕಳ ಮೊರೆ ಹೋಗಿವೆಯಂತಲ್ಲಾ. ಮಹಿಳೆಗೆ ರಾಮಪ್ರವಚನ ನೀಡುವುದಾಗಿ ಏಕಾಂತಕ್ಕೊಯ್ದು ಅತ್ಯಾಚಾರ ಮಾಡಿರುವ ಸ್ವಾಮಿಯ ಪರ ಸಭೆ ಮಾಡುತ್ತಿರುವ ಜನವೇ ದಲಿತರು ನಮ್ಮ ಹೆಣ್ಣುಮಕ್ಕಳ ಮೇಲೆ ಬಿದ್ದರೆಂಬ ದೂರು ಕೊಡುವುದನ್ನು ನೋಡಿದ ಪೊಲೀಸರು, "ಹೆಣ್ಣು ಮಕ್ಕಳ ಮೇಲೆ ಬಹಿರಂಗವಾಗಿ ಬೀಳುವುದು ತಪ್ಪು. ಬೇಕಾದರೆ ಏಕಾಂತದಲ್ಲಿ ಏನಾದರೂ ಮಾಡಿಕೊಳ್ಳಲಿ" ಎಂದು ದೂರು ದಾಖಲಿಸಿಕೊಂಡರಂತಲ್ಲಾ. ಇದೇನಾದರಾಗಲಿ ಸಾಗರದ ಹವ್ಯಕರ ಕೇರಿಯಲ್ಲಿ ಹರಿದಾಡುತ್ತಿರುವ ಸುದ್ದಿಯ ಪ್ರಕಾರ, ರಾಘವನ ಏಕಾಂತ ಪ್ರವಚನಕ್ಕೆಂದು ಹೋಗಿದ್ದ ಎಲ್ಲಾ ಮನೆಯಲ್ಲೂ ಅರ್ಥೈಸಲಾಗದ ಮುನಿಸು, ಕೋಪ, ಅಸಹನೆಗಳು ಬುಗಿಲೆದ್ದಿದೆಯಂತೆ. ಹೆಂಗಸರ ಸಂಖ್ಯೆಯೇ ಕಡಿಮೆಯಿರುವ ಹವ್ಯಕರು ಎಲ್ಲವನ್ನು ಅದುಮಿಕೊಂಡಿದ್ದಾರಂತೆ. ಭಾರತದ ಚರಿತ್ರೆಯಲ್ಲಿ ಜಗದ್ಗುರುವೊಬ್ಬ ಒಂದು ಸಮುದಾಯವನ್ನೇ ಸಂಕಟಕ್ಕೀಡುಮಾಡಿದ ಉದಾಹರಣೆಯೇ ಇಲ್ಲವಂತಲ್ಲಾ, ಧೂತ್ತೇರಿ!!!


****

ತೀರ್ಥಹಳ್ಳಿ ಪ್ರಕರಣ ಗೊತ್ತಲ್ಲ... ಅದೇ ನಂದಿತಾ ಎಂಬ ಹೆಣ್ಣುಮಗಳಿಗೆ ಚೆನ್ನಾಗಿ ಓದಿ ಒಳ್ಳೆ ಮಾರ್ಕ್ಸ್ ತರಲು ಒತ್ತಡ ತಂದು, ಅದವಳಿಗೆ ಸಾಧ್ಯವಾಗದೆ ಕಡೆಗೆ ವಿಷ ತೆಗೆದುಕೊಂಡದ್ದು, ಅದನ್ನು ಬಚ್ಚಿಟ್ಟ ತಂದೆ ಯಾಕೋ ನನ್ನ ಮಗಳು ವಾಂತಿ ಮಾಡುತ್ತಿದ್ದಾಳೆಂದು ವೈದ್ಯರಿಗೆ ಸುಳ್ಳು ಹೇಳಿ, ಅದರಿಂದ ಸಾಮಾನ್ಯ ಚಿಕಿತ್ಸೆಗೆ ತುತ್ತಾಗಿ ಸಾವನ್ನಪ್ಪಿದ ನಂದಿತಾ, ಸಾವಿನಲ್ಲಿ ಅಪ್ಪನೇ ಮೊದಲ ಅಪರಾಧಿಯಾದದ್ದು ಹಳೆಯ ಕತೆ. ಆದರೆ ಮಗಳ ಸಾವನ್ನು ಸಾಬರ ಕಡೆಗೆ ತಿರುಗಿಸಿದ ಅಪ್ಪ, ಮೂವರು ಸಾಬರ ಹುಡುಗರನ್ನು ಸೃಷ್ಟಿಸಿ, ಅದರಲ್ಲಿ ಇರ್ಫಾನ್ ಎಂಬುವನ ಲೀಡರ್‌ಶಿಪ್ಪಿನಲ್ಲಿ ಮಗಳ ಮೇಲೆ ಅತ್ಯಾಚಾರ ಮಾಡಿಸಿ, ವಿಷಪ್ರಾಶನ ಮಾಡಿಸಿ, ಇಡೀ ನಾಡಿಗೆ ಕೊಳ್ಳಿ ಇಡಲು ಚೆಡ್ಡಿಗಳೊಂದಿಗೆ ಕೈಜೋಡಿಸಿದ್ದ ಕೃಷ್ಣಪ್ಪ ಕಡೆಗೆ ತಾನೇ ಬಲಿಯಾಗುವ ಸಂದರ್ಭ ತಂದುಕೊಂಡಿದ್ದಾನಂತಲ್ಲಾ. ಇರ್ಫಾನ್ ಎಂಬ ಹುಡುಗ ಮದುವೆಯಾಗಿರುವ ಗೃಹಸ್ಥ. ಕೃಷ್ಣಪ್ಪನ ಅಂಗಡಿಯಲ್ಲೇ ಮನೆಗೆ ಬೇಕಾದ ಸಾಮಾನು ಸರಂಜಾಮು ತೆಗೆದುಕೊಳ್ಳುತ್ತಿದ್ದವನು. ವಿನಾಕಾರಣ ಆತನ ಮೇಲೆ ಕೇಸು ಕೊಟ್ಟು ಕಾಡಿಸಿದ್ದಕ್ಕೆ ಈಗ ಇರ್ಫಾನ್ "ನಾನು ಅಂತಹ ಕೃತ್ಯ ಮಾಡಿದ್ದೇನೆ ಎಂದು ಕಲ್ಕುಟುಕ ದೇವರ ಗುಡಿಗೆ ಬಂದು ಪ್ರಮಾಣ ಮಾಡು. ನಾನು ನನ್ನ ಮಕ್ಕಳೊಂದಿಗೆ ಬಂದು ಪ್ರಮಾಣ ಮಾಡುತ್ತೇನೆ'' ಎಂದು ಸವಾಲು ಹಾಕಿದ್ದಾನಂತಲ್ಲಾ. ಕಲ್ಕುಟುಕ ದೇವರೆಂದರೆ ಸಾಮಾನ್ಯವೆ. ಸುಳ್ಳು ಹೇಳಿದವರು ರಕ್ತಕಾರಿ ಸಾಯುತ್ತಾರಂತೆ. ಇದು ಗೊತ್ತಿರುವ ನಂದಿತಾ ತಂದೆ ಊಳಿಡುವುದನ್ನು ನಿಲ್ಲಿಸಿ ಬೆಚ್ಚಿ ಬಿದ್ದಿದ್ದಾನಂತಲ್ಲಾ. ಕರ್ನಾಟಕದ ಆಡಳಿತ, ಕೋರ್ಟು, ಪೊಲೀಸು ಯಾವುದಕ್ಕೂ ಕೇರ್ ಮಾಡದ ಕೃಷ್ಣಪ್ಪ ಕಲ್ಕುಟುಕನಿಗೆ ಹೆದರುವುದನ್ನು ನೋಡಿದರೆ, ಈ ನಾಡನ್ನು ಆಳುತ್ತಿರುವವರು ಯಾರು ಎಂಬುದನ್ನು ನೆನೆಸಿಕೊಂಡರೆ ದಿಗ್ಭ್ರಮೆಯಾಗುತ್ತದಂತಲ್ಲಾ, ಧೂತ್ತೇರಿ!!!

ಖಾದರ್ ಮತ್ತು 'ಪಿಕೆ'!

ಅಮೀರ್ ಖಾನ್ ನಟನೆಯ ಹೊಸಚಿತ್ರ 'ಪಿಕೆ' ದೇಶಾದ್ಯಂತ ನಾನಾರೀತಿಯ ಸುದ್ದಿಗೆ ಗ್ರಾಸವಾಗಿದೆ. ಇಲ್ಲಿ ಹೇಳಹೊರಟಿರುವುದು ಅದಲ್ಲ, ಅದಕ್ಕಿಂತಲೂ ಭಿನ್ನವಾದ ಮತ್ತೊಂದು ಸುದ್ದಿ, ಆದರೆ 'ಪಿಕೆ'ಗೆ ಸಂಬಂಧಿಸಿದ್ದು.

ಎರಡು-ಮೂರು ದಿನಗಳ ಹಿಂದೆ ಸಚಿವ ಯು.ಟಿ.ಖಾದರ್ ಅವರ ವಾಟ್ಸಪ್‌ಗೆ ಒಂದು ಇಮೇಜ್ ಬಂತು. 'ಪಿಕೆ' ಚಿತ್ರದಲ್ಲಿ ನಗ್ನವಾಗಿ ಅಮೀರ್ ಖಾನ್ ಹಳೇ ಟೇಪ್ ರೆಕಾರ್ಡರ್ ಹಿಡಿದಿರುವ ಫೋಟೋದ ದೇಹಕ್ಕೆ ಯು.ಟಿ.ಖಾದರ್ ಅವರ ತಲೆಯನ್ನಿಟ್ಟ ಇಮೇಜ್ ಅದಾಗಿತ್ತು. ಈ ಫೋಟೋ ಎಲ್ಲರ ಮೊಬೈಲ್‌ನಲ್ಲಿ ಹರಿದಾಡುವುದನ್ನು ಕಂಡು ಖಾದರ್ ಅವರ ಪರಿಚಯಸ್ಥರು ಅವರಿಗೂ ಕಳುಹಿಸಿದ್ದರು. ಇದನ್ನು ನೋಡಿದ ಸಚಿವರು ಮುಗುಳ್ನಕ್ಕು, ಈ ಇಮೇಜ್ ಕ್ರಿಯೇಟ್ ಮಾಡಿದವನ ಭಾವನೆಯಲ್ಲಿ "ನಾನು ಅಮೀರ್ ಖಾನ್‌ಗಿಂತಲೂ ಸುಂದರವಾಗಿದ್ದೇನೆ ಅನಿಸುತ್ತದೆ'' ಎಂದು ಹೇಳಿ ಅಲ್ಲಿಗೇ ಆ ವಿಚಾರವನ್ನು ಬಿಟ್ಟಿದ್ದರು.



ಆದರೆ ಖಾದರ್ ಅಭಿಮಾನಿಗಳಾದ ಚಂದ್ರಹಾಸ ರೈ ಪಿಲಾರು ಮತ್ತು ಹಮೀದ್ ಮಾಡೂರು ಅಷ್ಟು ಸುಲಭದಲ್ಲಿ ಬಿಡುತ್ತಾರೆಯೇ? ಈ ಫೋಟೋ ವಿರುದ್ಧ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಯೇ ಬಿಟ್ಟರು. ಪೊಲೀಸರು ತನಿಖೆ ನಡೆಸಿ ಇಮೇಜ್ ಕ್ರಿಯೇಟ್ ಮಾಡಿದ ಮತ್ತು ಅದನ್ನು ವಾಟ್ಸಪ್‌ಗಳಿಗೆ ಫಾರ್ವರ್ಡ್ ಮಾಡಿದ ಶರತ್ ಮತ್ತು ಇನ್ನಿಬ್ಬರನ್ನು ಬಂಧಿಸಿದರು.


ವಿಷಯ ತಿಳಿದ ಆರೋಪಿಗಳ ಹೆತ್ತವರು ಸಚಿವ ಖಾದರ್ ಅವರ ಮನೆಗೆ ಬಂದು ತಪ್ಪಿಗೆ ಕ್ಷಮೆಯಾಚಿಸಿ ತಮ್ಮ ಮಕ್ಕಳನ್ನು ಬಿಡುಗಡೆಗೊಳಿಸುವಂತೆ ವಿನಂತಿಸಿದರು. ತಕ್ಷಣ ಸ್ಪಂದಿಸಿದ ಯು.ಟಿ.ಖಾದರ್ "ಪಾಪ ಆ ಹುಡುಗರು ಜೈಲಿಗೆ ಹೋಗಬಾರದು. ಅವರ ಭವಿಷ್ಯವನ್ನು ಕಟ್ಟಿಕೊಳ್ಳಲಿ'' ಎಂದು ಹೇಳಿ ಪೊಲೀಸ್ ಕೇಸನ್ನು ಹಿಂಪಡೆಯಲು ಕೇಸು ದಾಖಲಿಸಿದವರಲ್ಲಿ ಹೇಳಿದರು. ಈಗ ಬಂಧಿತ ಆರೋಪಿಗಳನ್ನು ಬಿಡುಗಡೆಗೊಳಿಸಲಾಗಿದೆ. ಆರೋಪಿಗಳು ಸಚಿವರಿಗೆ ಫೋನ್ ಮಾಡಿ ನಮ್ಮದು ತಪ್ಪಾಯಿತೆಂದು ಹೇಳಿ ಕ್ಷಮೆಯಾಚಿಸಿದ್ದಾರೆ.

ಖಾದರ್ ಕೃಪೆಯಿಂದ ಆರೋಪಿಗಳು ಜೈಲಲ್ಲಿ ಕೊಳೆಯುವುದು ತಪ್ಪಿ ಪ್ರಕರಣ ಸುಖಾಂತ್ಯಗೊಂಡಿದೆಯಾದರೂ ಸೈಬರ್ ಕ್ರೈಂನವರು ತನಿಖೆ ಮುಂದುವರಿಸಿದ್ದಾರೆ.

ಒಟ್ಟಾರೆ ಖಾದರ್ ಅವರ ನಿಷ್ಕಲ್ಮಷ ಉದಾರ ಮನಸ್ಸನ್ನು ಮೆಚ್ಚಲೇಬೇಕು. ಬೇರೆ ರಾಜಕಾರಣಿಗಳ ಫೋಟೋ ಹೀಗೆ ಬಂದಿದ್ದರೆ ಆರೋಪಿಗಳು ಕಂಬಿ ಎಣಿಸುವುದು ಬಿಡಿ ಇನ್ನೇನೇನು ಆಗುತ್ತಿತ್ತೋ ಏನೋ?

- ರಾಜ್ ವಿಟ್ಲ

ಗಾಂಧೀವಾದವನ್ನು ಕೊಲ್ಲುತ್ತಿರುವ ಗೋಡ್ಸೆವಾದ!



ಸ್ವತಂತ್ರಭಾರತದ ಪ್ರಪ್ರಥಮ ಭಯೋತ್ಪಾದಕ ಯಾರು? ಇತಿಹಾಸದ ಸರಿಯಾದ ಜ್ಞಾನವಿರುವ ಯಾರನ್ನೇ ಈ ಪ್ರಶ್ನೆ ಕೇಳಿದರೆ ಅವರು "ಗಾಂಧೀಜಿ ಹಂತಕ ನಾಥೂರಾಂ ಗೋಡ್ಸೆ" ಎಂದು ಉತ್ತರಿಸುತ್ತಾರೆ. ಯಾಕೆಂದರೆ ತಮಗೆ ಇಷ್ಟವಾಗದ ನೀತಿಯನ್ನು ಪ್ರತಿಪಾದಿಸಿದರು ಎಂಬ ಒಂದೇ ಒಂದು ಕಾರಣಕ್ಕೆ ಗೋಡ್ಸೆ ಗಾಂಧೀಜಿಯನ್ನು ಕೊಂದು ಹಾಕಿದ್ದ. ಜಗತ್ತಿನ ಎಲ್ಲಾ ಭಯೋತ್ಪಾದಕರೂ ಹೀಗೆಯೇ.

ಹಾಗೆ "ಪ್ರಪ್ರಥಮ ಭಯೋತ್ಪಾದಕ ಸಂಘಟನೆ ಯಾವುದು?" ಎಂಬ ಪ್ರಶ್ನೆ ಹಾಕಿಕೊಂಡು ಇತಿಹಾಸವನ್ನೊಮ್ಮೆ ಕೆದಕಿ ನೋಡಿ. ಗಾಂಧೀಜಿ ಕೊಲೆಯಂಥ ಹೀನಕೃತ್ಯ ಮಾತ್ರವಲ್ಲದೆ, ಸ್ವತಂತ್ರ ಭಾರತದಲ್ಲಿ ನಾನಾ ಗಲಭೆಗಳನ್ನು ದೊಂಬಿಗಳನ್ನು ಸೃಷ್ಟಿ ಮಾಡುತ್ತದ್ದೆಂಬ ಕಾರಣಕ್ಕೆ ನಿಷೇಧಕ್ಕೊಳಗಾದ ಆರೆಸ್ಸೆಸ್ ಸಂಘಟನೆಯೇ ಇಂಥಾ ಹಣೆಪಟ್ಟಿಗೆ ಅರ್ಹವಾದುದು ಎಂಬ ಸತ್ಯದ ಅರಿವಾಗುತ್ತದೆ. ಇನ್ನೂ ಗೊಂದಲಗಳಿದ್ದರೆ ಅಂದಿನ ಗೃಹ ಮಂತ್ರಿಯಾಗಿದ್ದ ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರು ಹಿಂದೂ ಮಹಾಸಭಾದ ಮುಖಂಡ ಶಾಮ್ ಪ್ರಸಾದ್ ಮುಖರ್ಜಿಗೆ ಬರೆದ ಪತ್ರದಲ್ಲಿ ಈ ಸಂಘಟನೆಯ ಕೃತ್ಯಗಳ ಬಗ್ಗೆ ನೀಡಿರುವ ವಿವರಗಳನ್ನು ಓದಿದರೆ ಅಥವಾ ಅಧಿಕೃತ ದಾಖಲೆಗಳನ್ನು ನೋಡಿದರೂ ಆರೆಸ್ಸೆಸ್‌ನ ಇತಿಹಾಸ ನಿಚ್ಚಳವಾಗುತ್ತದೆ.

ಇದು ಇತಿಹಾಸಕ್ಕೆ ಸಂಬಂಧಿಸಿದ ವಿಷಯವಾಯಿತು. ವರ್ತಮಾನದಲ್ಲಿ ಏನು ನಡೆಯುತ್ತಿದೆ?

"ನಾಥೂರಾಮ್ ಒಬ್ಬ ಮಹಾನ್ ದೇಶಭಕ್ತನಾಗಿದ್ದ" ಎಂಬ ಹೇಳಿಕೆ ಪಾರ್ಲಿಮೆಂಟಿನ ಆವರಣದಿಂದಲೇ ಕೇಳಿಬರುತ್ತದೆ.

ಯಾರೋ ತಲೆ ಕೆಟ್ಟ ಹಿಂದು ಮತೋನ್ಮಾದಿಯೊಬ್ಬನ ಒಣ ಬಡಬಡಿಕೆ ಇದು ಎಂದುಕೊಂಡೀರಿ, ಜೋಕೆ!

ಉತ್ತರ ಪ್ರದೇಶದ ಉನ್ನಾವ್ ಲೋಕಸಭಾ ಕ್ಷೇತ್ರದಿಂದ ಆರಿಸಿ ಬಂದಿರುವ ಬಜೆಪಿಯ ಸಂಸದ ಸಾಕ್ಷಿ ಮಹಾರಾಜ್ ಎಂಬುವವನ ಹೇಳಿಕೆ ಇದು. ಈತ ಉತ್ತರ ಪ್ರದೇಶದ ವಿವಿಧ ಕ್ಷೇತ್ರಗಳ ಅಭ್ಯರ್ಥಿಯಾಗಿ 4 ಬಾರಿ ಎಂಪಿಯಾಗಿರುವ ಕಾಷಾಯಧಾರಿ ಸನ್ಯಾಸಿ. ಈ ಹೇಳಿಕೆಯಿಂದ ಪಾರ್ಲಿಮೆಂಟಿನಲ್ಲೂ, ದೇಶದ ಬೀದಿಗಳಲ್ಲೂ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ಮನುಷ್ಯ ನೆಪಮಾತ್ರಕ್ಕೆ ತನ್ನ ಹೇಳಿಕೆಯಿಂದ ತಪ್ಪಾಗಿದೆ ಎಂದೂ, ತಪ್ಪಾಗಿ ಅರ್ಥೈಸಲಾಗಿದೆ ಎಂದೂ ಹೇಳಿ ನುಣುಚಿಕೊಂಡ.

ಈ ಗದ್ದಲ ಪೂರ್ತಿ ಕಡಿಮೆಯಾಗುವ ಮೊದಲೇ ಹಿಂದೂ ಮಹಾಸಭಾದ ಅಧ್ಯಕ್ಷ ಚಂದ್ರಪ್ರಕಾಶ್ ಕೌಶಿಕ್ ಎಂಬುವವನು ಎಕನಾಮಿಕ್ ಟೈಮ್ಸ್ ಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ ಹೀಗೆ ಹೇಳಿದ:

"ಭಾರತದಾದ್ಯಂತ ಪ್ರಮುಖ ನಗರಗಳಲ್ಲಿ ನಾಥೂರಾಮ್ ಗೋಡ್ಸೆಯ ಪ್ರತಿಮೆಗಳನ್ನು ಸ್ಥಾಪಿಸಲು ಸ್ಥಳ ಕೊಡುವಂತೆ ನಾವು ಸರ್ಕಾರವನ್ನು ಆಗ್ರಹಿಸುತ್ತೇವೆ. ಒಂದು ವೇಳೆ ಸರ್ಕಾರ ನಮಗೆ ಸ್ಥಳ ಕೊಡದೇ ಹೋದರೆ ನಮ್ಮದೇ ಸ್ಥಳಗಳಲ್ಲಿ ನಾವು ಪ್ರತಿಮೆ ಸ್ಥಾಪಿಸುತ್ತೇವೆ."

ವಾಜಪೇಯಿ, ಅಡ್ವಾಣಿ, ಜೋಷಿ ಮುಂತಾದವರ ಆರೆಸ್ಸೆಸ್ ಹಿನ್ನೆಲೆಯ ಬಗ್ಗೆ ಪ್ರಶ್ನೆ ಬಂದಾಗ ಈ ಮಂದಿ ಬಹಿರಂಗವಾಗಿಯೇ ತಾವು ಆರೆಸೆಸ್‌ನಲ್ಲಿ ಬೆಳೆದು ಬಂದವರೆಂದು ಹೇಳಿಕೊಂಡಿದ್ದರು. ಹಾಗಾದರೆ ಗಾಂಧಿ ಹಂತಕ ನಾಥೂರಾಮ್ ಗೋಡ್ಸೆ ಕೂಡ ಆರೆಸ್ಸೆಸ್‌ನವನಲ್ಲವೆ ಎಂಬ ಪ್ರಶ್ನೆಗೆ "ಗೋಡ್ಸೆ ಗಾಂಧಿ ಕೊಲೆಗೆ ಮುಂಚೆಯೇ ಆರೆಸ್ಸೆಸ್ ತೊರೆದಿದ್ದ" ಎಂದು ಅಡ್ವಾಣಿ ಮುಖ ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದರು.

ಆದರೆ ನಾಥೂರಾಮ್ ಗೋಡ್ಸೆಯ ತಮ್ಮ ಗೋಪಾಲ್ ಗೋಡ್ಸೆ 'ನಾನು ಗಾಂಧಿಯನ್ನು ಕೊಂದಿದ್ದೇಕೆ?' ಎಂಬ ಕೃತಿ ಬಿಡುಗಡೆಯ ಸಂದರ್ಭದಲ್ಲಿ ಈ ವಾದವನ್ನು ತಳ್ಳಿಹಾಕಿ ನಾಥೂರಾಮ್ ಆರೆಸ್ಸೆಸ್‌ನ ಸಕ್ರಿಯ ಕಾರ್ಯಕರ್ತನಾಗಿದ್ದ ಎಂಬುದನ್ನು ಬಹಿರಂಗಪಡಿಸಿದ್ದಾನೆ. ಗೋಡ್ಸೆ ಆರೆಸ್ಸೆಸ್ ತೊರೆದಿರುವುದಾಗಿ ಹೇಳಿಕೆ ನೀಡಿದ್ದರ ಬಗ್ಗೆ ಪ್ರಶ್ನಿಸಿದಾಗ ಆತ ಹೇಳಿದ್ದೇನೆಂದರೆ "ಗಾಂಧಿ ಕೊಲೆಯ ನಂತರ ಗೋಲ್ವಾಲ್ಕರ್ ಮತ್ತು ಆರೆಸ್ಸೆಸ್‌ನ ಇತರ ನಾಯಕರ ಮೇಲೆ ಬಹಳ ಒತ್ತಡ ಉಂಟಾಗಿತ್ತು, ಆದ್ದರಿಂದ ಆ ರೀತಿ ಹೇಳಿಕೆ ನೀಡಿದ್ದ" ಎಂದೂ, "ನಾಥೂರಾಮ್ ಆರೆಸ್ಸೆಸ್ ತೊರೆದಿದ್ದ ಎಂದು ಅಡ್ವಾಣಿ ಮುಂತಾದವರು ಹೇಳುತ್ತಿರುವುದು ಹೇಡಿತನದ ಸಂಕೇತ" ಎಂದೂ ಉತ್ತರಿಸಿದ್ದ.

ಹೀಗೆ ಆಯಾ ಸಂದರ್ಭಕ್ಕೆ ತಕ್ಕಂತೆ ಎರಡೆರಡು ನಾಲಿಗೆ ಬಳಸುವುದು ಇವರಿಗೆ ಹೊಸದೇನೂ ಅಲ್ಲ. ಆದರೆ ನಿತ್ಯದ ಆಚರಣೆಯಲ್ಲಿ ತಮ್ಮ ಹಿಡನ್ ಅಜೆಂಡಾವನ್ನು ಅವರೆಂದೂ ಕೈಬಿಟ್ಟಿಲ್ಲ.

ಆರೆಸ್ಸೆಸ್ ಸಂಘಟನೆಗೆ ಹುತಾತ್ಮ ದಿನ ಯಾವುದು ಎಂದುಕೊಂಡಿದ್ದೀರಿ? ಇದೇ ಗೋಡ್ಸೆಯನ್ನು ಗಲ್ಲಿಗೇರಿಸಿದ ನವೆಂಬರ್ 15. ಆರೆಸ್ಸೆಸ್ ಸಕ್ರಿಯವಾಗಿರುವ ಕಡೆಯಲ್ಲೆಲ್ಲ ಈ ದಿನವನ್ನು ಹುತಾತ್ಮ ದಿನವನ್ನಾಗಿ ಆಚರಿಸಲಾಗುತ್ತದೆ. ಅಂದು 'ಮೈ ನಾಥೂರಾಮ್ ಗೋಡ್ಸೆ ಬೋಲ್‌ತೆ ಹೂಂ' ಎಂಬ ಕುಪ್ರಸಿದ್ಧ ನಾಟಕದ ಪ್ರದರ್ಶನ ಏರ್ಪಡಿಸಲಾಗುತ್ತದೆ. ನಾಥೂರಾಮನ 'ಆದರ್ಶ'ಗಳನ್ನು ಮೈಗೂಡಿಸಿಕೊಳ್ಳುವಂತೆ ಬೋಧಿಸಲಾಗುತ್ತದೆ!

ಅವರು ಇಷ್ಟಕ್ಕೆ ತೃಪ್ತರಾಗಿಲ್ಲ, ಉತ್ತರಪ್ರದೇಶದ ಸೀತಾಪುರ್ ಜಿಲ್ಲೆಯಲ್ಲಿ ಗೋಡ್ಸೆಗಾಗಿ ಒಂದು ಮಂದಿರವನ್ನು ನಿರ್ಮಿಸಲು ಹಿಂದೂ ಮಹಾಸಭಾ ಯೋಜನೆ ರೂಪಿಸಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಜನವರಿ 30ರಂದು ಶೌರ್ಯ ದಿನವನ್ನಾಗಿ ಆಚರಿಸುವ ಯೋಜನೆ ಇರುವುದಾಗಿಯೂ ಅಲ್ಲಲ್ಲಿ ಹೇಳಿಕೆಗಳು ಹೊರಬಿದ್ದಿವೆ. ಮಹಾರಾಷ್ಟ್ರದಲ್ಲಿ ಈ 'ಶೌರ್ಯ ದಿನ' ಆಚರಣೆ ನಡೆದಿದೆ ಎಂದೂ, ಬಿಜೆಪಿಯ ಇಬ್ಬರು ಮಾಜಿ ಎಂಎಲ್‌ಎಗಳು ಅಲ್ಲಿ ಹಾಜರಿದ್ದರೆಂದೂ ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದೆ.

ಜನವರಿ 30ರಂದು ಈ ಭಾರತ ಭೂಮಿಯಲ್ಲಿ ಎಂಥಾ ಶೌರ್ಯದ ಪ್ರದರ್ಶನವಾಗಿತ್ತು ಎಂದು ಕೆದಕಿ ನೋಡಿದರೆ ಈ ಮಂದಿಯ ಸಿದ್ಧಾಂತದ ಬಗ್ಗೆ ಮತ್ತಷ್ಟು ಹೇಸಿಗೆ ಹುಟ್ಟುತ್ತದೆ. ತುಂಡು ಲಂಗೋಟಿ ಕಟ್ಟಿಕೊಂಡು, 'ಶಾಂತಿ, ಅಹಿಂಸೆ' ಎಂದು ಜಪಿಸುತ್ತಾ ದೇಶದ ಉದ್ದಗಲಕ್ಕೂ ಸಂಚರಿಸುತ್ತಿದ್ದ, ನಿರಾಯುಧನಾಗಿ ಫಕೀರನಂತಿದ್ದ ಒಬ್ಬ ವಯೋವೃದ್ಧನನ್ನು ಆರೆಸ್ಸೆಸ್-ಹಿಂದೂ ಮಹಾಸಭಾದ ಮತೋನ್ಮಾದಿಗಳ ಗುಂಪೊಂದು ಗುಂಡಿಟ್ಟು ಕೊಂದಿತ್ತು, ಇಡೀ ದೇಶ 'ಮಹಾತ್ಮ' ಎಂದು ಗೌರವಿಸುವ ಎಂ.ಕೆ.ಗಾಂಧಿ ಹತ್ಯೆಯಾದ ದಿನವದು. ಯಾವ ಮಾನದಂಡದಿಂದ ನೋಡಿದರೂ ಇದರಲ್ಲಿ ಶೌರ್ಯದ ಲವಲೇಶವಾದರೂ ಕಂಡುಬರುತ್ತದೆಯೆ? ಉಹುಂ, ಇಲ್ಲವೇ ಇಲ್ಲ, ಆರೆಸ್ಸೆಸ್‌ನಂಥ ದೇಶಭಕ್ತರಿಗೆ ಇದರಲ್ಲಿ ಎಂಥಾ ಶೌರ್ಯ ಕಂಡುಬಂದಿದೆಯೆಂಬುದನ್ನು ಶ್ರೀರಾಮನೇ ಬಲ್ಲ!

ಇದು ಗೋಡ್ಸೆಯ ವಿಷಯಕ್ಕೆ ಸೀಮಿತವಾಗುವುದಿಲ್ಲ. ವಿದೇಶಾಂಗ ಮಂತ್ರಿ ಸುಷ್ಮಾ ಸ್ವರಾಜ್ ಒಂದು ತಿಂಗಳ ಹಿಂದೆ "ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥ ಎಂದು ಘೋಷಿಸಬೇಕು" ಎಂದು ಹೇಳಿಕೆ ನೀಡಿದ್ದರು.

ಅಂಬೇಡ್ಕರ್ ನಿಧನ ಹೊಂದಿದ ಡಿಸೆಂಬರ್ 6ನೇ ತಾರೀಖನ್ನು ದೇಶಾದ್ಯಂತ ಅವರ ಅನುಯಾಯಿಗಳು, ಅಭಿಮಾನಿಗಳು 'ಮಹಾಪರಿನಿರ್ವಾಣ ದಿನ'ವೆಂದು ಆಚರಿಸುತ್ತಿದ್ದಾರೆಂಬುದು ನಮಗೆಲ್ಲಾ ಗೊತ್ತಿದೆ. ಹೀಗಿದ್ದಾಗ ಬಾಬ್ರಿ ಮಸೀದಿ ಕೆಡವಲು ಈ ಕೇಸರಿ ಕೂಟ ಇದೇ ಡಿಸೆಂಬರ್ 6ನ್ನು ಆರಿಸಿಕೊಂಡಿತ್ತು ಎಂಬುದನ್ನು ನಾವು ಮರೆಯಬಾರದು.

ಇದು ಇಷ್ಟಕ್ಕೆ ಮುಗಿಯುವಂಥದ್ದಲ್ಲ, ಜಗತ್ತಿಗೇ ಉತ್ತಮ ಮೌಲ್ಯಗಳನ್ನು ಸಾರಿದ ಯೇಸು ಕ್ರಿಸ್ತನ ಹುಟ್ಟುಹಬ್ಬವಾದ ಡಿಸೆಂಬರ್ 25ರಂದು 'ಉತ್ತಮ ಆಡಳಿತದ ದಿನ'ವನ್ನಾಗಿ ಆಚರಿಸುತ್ತೇವೆಂದು ಮತ್ತೊಬ್ಬರು ಮಂತ್ರಿ ಘೋಷಿಸುತ್ತಿದ್ದಾರೆ. ಅದಕ್ಕೆ ಅವರಿಗೆ ಸಿಕ್ಕಿರುವ ನೆಪ ಡಿಸೆಂಬರ್ 25 ವಾಜಪೇಯಿ ಹುಟ್ಟಿದ ದಿನ ಎಂಬುದು. ತಾನು ಪ್ರತಿನಿಧಿಸುವ ವಾರಣಾಸಿ ಕ್ಷೇತ್ರಕ್ಕೆ ಡಿಸೆಂಬರ್ 25ರಂದೇ ಭೇಟಿಕೊಟ್ಟ ಪ್ರಧಾನಿ ಮೋದಿ ಇದೇ ಮಾತುಗಳನ್ನು ಪುನರುಚ್ಚರಿಸಿದ್ದಾನೆ.

ವಾಜಪೇಯಿ ಆಡಳಿತ ಎಷ್ಟು ಉತ್ತಮವಾಗಿತ್ತು ಎಂಬುದನ್ನು ನಾವೆಲ್ಲಾ ನೋಡಿದ್ದೇವೆ. ಕಾರ್ಗಿಲ್ ಯುದ್ಧಭೂಮಿಯಲ್ಲಿ ಸತ್ತ ಯೋಧರ ಶವಪೆಟ್ಟಿಗೆಯಲ್ಲೂ ಭ್ರಷ್ಟಾಚಾರ ತಾಂಡವವಾಡಿದ್ದು ವಾಜಪೇಯಿ ಸರ್ಕಾರದಲ್ಲಿ. ಅಷ್ಟೇ ಏಕೆ? ಈಗ ಗೋಡ್ಸೆ ದೇಶಭಕ್ತ ಎಂದು ಹೇಳಿಕೆ ಕೊಟ್ಟಿರುವ ಬಿಜೆಪಿ ಸಂಸದ ಸಾಕ್ಷಿ ಮಹಾರಾಜ್ 1999ರ ಸೆಪ್ಟೆಂಬರ್‌ನಲ್ಲಿ ವಾಜಪೇಯಿ ಬಗ್ಗೆ ಹೇಳಿದ್ದ ಮಾತುಗಳನ್ನು ನೋಡಿ:

"ವಾಜಪೇಯಿ ಒಬ್ಬ ಅಪ್ಪಟ ಅಪಾಥಭೂತಿ, ಹೆಣಗಳನ್ನು ಮುಂದಿಟ್ಟು ಓಟು ಕಸಿಯುವ ಕಲೆ ಆತನಿಗೆ ಚನ್ನಾಗಿ ಗೊತ್ತು, ಅದು ಅಯೋಧ್ಯ ಆಗಿರಬಹುದು; ಕಾರ್ಗಿಲ್ ಆಗಿರಬಹುದು ಆತನ ಪಾಲಿಗೆ ಎಲ್ಲಾ ಒಂದೇ." ಔಟ್‌ಲುಕ್ ಪತ್ರಿಕೆಯ ಸಂದರ್ಶನದಲ್ಲಿ ಇಂಥಾ ಇನ್ನೂ ಎಷ್ಟೋ ವಿಷಯಗಳ ಬಗ್ಗೆ ಮಾತನಾಡಿದ್ದ.

ಆಗ ಈ ಸಾಕ್ಷಿ ಮಹಾರಾಜ್ ಉತ್ತರ ಪ್ರದೇಶದ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್‌ಗೆ ಆಪ್ತನಾಗಿದ್ದ. ಕಲ್ಯಾಣ್ ಸಿಂಗ್‌ನನ್ನು ಪಕ್ಷದಿಂದ ಉಚ್ಚಾಟಿಸಿದ ಕಾರಣಕ್ಕೆ ಈತ ಬಿಜೆಪಿ ವಿರುದ್ಧ ತಿರುಗಿ ಬಿದ್ದಿದ್ದ. ಆ ಕಾರಣಕ್ಕೆ ಈತನಿಗೆ ಬಿಜೆಪಿ ಟಿಕೆಟ್ ನಿರಾಕರಿಸಿತ್ತು, ಆನಂತರದ ದಿನಗಳಲ್ಲಿ ಬಿಜೆಪಿ ವಿರೋಧಿ ರ್‍ಯಾಲಿಗಳನ್ನು ರಾಜ್ಯಾದ್ಯಂತ ಸಂಘಟಿಸಿ ಬಿಜೆಪಿ ನಾಯಕರಿಗೆ ಸೆಡ್ಡು ಹೊಡೆದಿದ್ದ ಉತ್ತರ ಪ್ರದೇಶದಲ್ಲಿ ಶೇಕಡ 8ರಷ್ಟಿರುವ ಲೋಧ್ ಜಾತಿಯ ಓಟುಗಳು ಬಿಜೆಪಿ ವಿರುದ್ಧವಾಗುವಂತೆ ಮಾಡುತ್ತೇನೆಂದು ಬಹಿರಂಗ ಶಪಥ ಮಾಡಿದ್ದ. ನಂತರದ ದಿನಗಳಲ್ಲಿ ರಾಜೀ ಪಂಚಾಯ್ತಿಗಳು ನಡೆದು ಈತ ಮತ್ತೆ ಬಿಜೆಪಿ ತೆಕ್ಕೆಗೆ ಮರಳಿದ್ದಾನೆಂಬುದು ಬೇರೆ ಮಾತು.

ಮೋದಿ ಸರ್ಕಾರ ಇನ್ನಷ್ಟು ಮುಂದುವರೆದು ವಾಜಪೇಯಿ ಹಾಗೂ ಹಿಂದೂ ಮಹಾಸಭಾದ ಸ್ಥಾಪಕ ಮದನಮೋಹನ ಮಾಳವೀಯ ಇಬ್ಬರಿಗೂ ಭಾರತ ರತ್ನ ಪ್ರಶಸ್ತಿ ಕೊಡುವುದಾಗಿ ಘೋಷಿಸಿದೆ. ಭಾರತ ರತ್ನದಲ್ಲೂ ಮತೋನ್ಮಾದದ ವಾಸನೆಯೇ ಹರಡಿಕೊಂಡಿದೆ.

ಈ ಎಲ್ಲ ವಿದ್ಯಮಾನಗಳ ಹಿಂದಿನ ಹುನ್ನಾರವೇನು?

ಈ ದೇಶದಲ್ಲಿ ಅಳಿದುಳಿದ ಶಾಂತಿ, ಸಹಬಾಳ್ವೆ, ಸಹಿಷ್ಣುತೆ, ಜಾತ್ಯತೀತತೆ ಮುಂತಾದ ಉದಾತ್ತ ಮೌಲ್ಯಗಳಿಗೆ ಘೋರಿ ಕಟ್ಟಿ, ತಮ್ಮ ಪುರೋಹಿತಶಾಹಿ ಮೌಲ್ಯಗಳನ್ನು ಪ್ರತಿಷ್ಠಾಪಿಸುವ ಷಡ್ಯಂತ್ರದ ಭಾಗವಾಗಿ ಈ ಮೇಲಿನ ಬೆಳವಣಿಗೆಗಳು ನಡೆಯುತ್ತಿವೆ!! ಆರೆಸ್ಸೆಸ್ ದುಷ್ಟಕೂಟ ಗಾಂಧೀಜಿಯ ಜಾಗದಲ್ಲಿ ಗೋಡ್ಸೆಯನ್ನು ವ್ಯವಸ್ಥಿತವಾಗಿ ಪ್ರತಿಷ್ಠಾಪಿಸುತ್ತಿರುವುದು ಈ ದೇಶ ಅನುಸರಿಸುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳ ಮೇಲಿನ ವ್ಯವಸ್ಥಿತ ದಾಳಿ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಈ ಬೆಳವಣಿಗೆಗಳು ದಿಢೀರನೇ ಮೋದಿ ಪಟ್ಟಕ್ಕೇರಿರುವುದರಿಂದ ಶುರುವಾಗಿಲ್ಲ, ಅನಾದಿಯಿಂದಲೂ ನಡೆಯುತ್ತಾ ಬಂದಿವೆ. ವಾಜಪೇಯಿ ಆಡಳಿತ ಕಾಲದಲ್ಲಿ ಒಂದಷ್ಟು ಹೆಚ್ಚಾಗಿ ಕಂಡುಬಂದಿದ್ದವು. ಆಗ ಸಮ್ಮಿಶ್ರ ಸರ್ಕಾರದ ಒತ್ತಡವಿದ್ದುದರಿಂದ ಇಷ್ಟು ಬಹಿರಂಗ ಸ್ವರೂಪ ಪಡೆದುಕೊಂಡಿರಲಿಲ್ಲ ಅಷ್ಟೆ.


ಹೀಗೆ ಪ್ರತಿನಿತ್ಯ ಹೊಸಹೊಸ ವಿವಾದಗಳನ್ನು ಸೃಷ್ಟಿಸುವುದರ ಹಿಂದೆ ಮತ್ತೊಂದು ಷಡ್ಯಂತ್ರವೂ ಇದೆ. ಮೋದಿ ಸರ್ಕಾರ ಜಾರಿಗೆ ತರುತ್ತಿರುವ ಜನ ವಿರೋಧಿ ನೀತಿಗಳಿಂದ ವಿರೋಧ ಪಕ್ಷಗಳ ಗಮನವನ್ನು ಬೇರೆಡೆಗೆ ಸೆಳೆಯುವುದು; ಆ ಮೂಲಕ ಮಾಧ್ಯಮಗಳ ತುಂಬಾ ಅನಗತ್ಯ ವಿವಾದಗಳೇ ತುಂಬಿರುವಂತೆ ನೋಡಿಕೊಂಡು ಒಟ್ಟಾರೆ ದೇಶದ ಜನಸಾಮಾನ್ಯರ ಗಮನವನ್ನು ದಿಕ್ಕು ತಪ್ಪಿಸುವುದು. ಹೀಗೆ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಯನ್ನು ಹೊಡೆಯಲು ಮೋದಿ ಕೂಟ ಪ್ರಯತ್ನಿಸುತ್ತಿದೆ.

ಮಂಪರು ನಿದ್ರೆಯಲ್ಲಿರುವ ಈ ದೇಶ ಎಚ್ಚೆತ್ತುಕೊಳ್ಳುವುದು ಯಾವಾಗ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

'ಭಾರತ ರತ್ನ' ಮದನ್ ಮೋಹನ್ ಮಾಳವಿಯಾ ಎಂಥವನಾಗಿದ್ದ?

ಹಿಂದೂ ಮಹಾಸಭಾ ಎಂಬ ಮೂಲಭೂತವಾದಿ ಸಂಘಟನೆಗೆ ಜನ್ಮ ನೀಡಿದ್ದು ಇದೇ ಮದನ್ ಮೋಹನ್ ಮಾಳವಿಯಾ. ಈತ ಎಂಥ ಕರ್ಮಠ ಬ್ರಾಹ್ಮಣನೆಂದರೆ ಕೆಳ ಜಾತಿಯವರು ದೇವಸ್ಥಾನಗಳನ್ನು ಪ್ರವೇಶಿಸ ಕೂಡದು ಎಂಬುದು ಈತನ ನಿಲುವಾಗಿತ್ತು, ಬೇಕಿದ್ದರೆ ಬ್ರಾಹ್ಮಣೇತರರಿಗೆ ಪ್ರತ್ಯೇಕ ದೇವಸ್ಥಾನಗಳು ಮತ್ತು ಶಾಲೆಗಳಿರಬೇಕು ಎನ್ನುತ್ತಿದ್ದ.



ಒಮ್ಮೆ ಬ್ರಾಹ್ಮಣರೊಬ್ಬರು ಬೇರೆ ಜಾತಿಯ ಜನರೊಂದಿಗೆ ಊಟಕ್ಕೆ ಕೂತ 'ಪಾಪ'ಕ್ಕೆ ಆತನನ್ನು ಬ್ರಾಹ್ಮಣ ಜಾತಿಯಿಂದಲೇ ಹೊರ ಹಾಕಿಸಿದ್ದ ಈ ಮಾಳವಿಯಾ ಎಂಬ ಪುಣ್ಯಾತ್ಮ.

ಈತ ಬೆನಾರಸ್ ಹಿಂದೂ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕೆ ಬ್ರಾಹ್ಮಣರಿಂದ ಮಾತ್ರವಲ್ಲ, ಬ್ರಾಹ್ಮಣೇತರರಿಂದಲೂ ಹಣ ಸಂಗ್ರಹಿಸಿದ್ದ. ಯಾಕೆಂದರೆ ಹಣಕ್ಕೆ ಜಾತಿ ಇಲ್ಲವಲ್ಲ ಅದಕ್ಕೆ. ಆದರೆ ಆ ವಿಶ್ವವಿದ್ಯಾಲಯದಲ್ಲಿ ಬ್ರಾಹ್ಮಣರು ಇತರೆ ಜಾತಿಯವರೊಂದಿಗೆ ಬೆರೆಯಬಾರದೆಂದು ಹೇಳುತ್ತಿದ್ದ. ಇನ್ನು ಈತನ ವಿಶ್ವವಿದ್ಯಾಲಯದಲ್ಲಿ ದಲಿತರಿಗೆ ಪ್ರವೇಶವೇ ಇರಲಿಲ್ಲ.

ಬ್ರಿಟಿಷ್ ಪ್ರಧಾನಿ ರಾಮ್ಸೆ ಮ್ಯಾಕ್‌ಡೊನಾಲ್ಡ್ ಅವರು ಹಾಜರಿದ್ದ ಎರಡನೆ ದುಂಡು ಮೇಜಿನ ಸಭೆಯಲ್ಲಿ ಒಮ್ಮೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಇದೇ ಮದನ್ ಮೋಹನ್ ಮಾಳವಿಯಾಯಾಗೆ ಒಂದು ಲೋಟದಲ್ಲಿ ಕುಡಿಯುವ ನೀರನ್ನು ಕೊಟ್ಟಿದ್ದರು. ಆದರೆ ಮನುಸ್ಮೃತಿಯಲ್ಲಿ ಗಾಢ ನಂಬಿಕೆ ಹೊಂದಿದ್ದ ಮಾಳವಿಯಾ ಅಂಬೇಡ್ಕರ್ ಅವರು ಕೊಟ್ಟ ನೀರನ್ನು ಕುಡಿಯಲು ನಿರಾಕರಿಸಿದ್ದ!


ಗಾಂಧಿಯವರು ಅಸ್ಪೃಶ್ಯತೆ ವಿರುದ್ಧ ಆಂದೋಲನ ನಡೆಸುತ್ತಿದ್ದಾಗ ಈ ಮಾಳವಿಯಾ ದಲಿತರಿಂದ ಹೂಮಾಲೆಗಳನ್ನು ಸ್ವೀಕರಿಸುತ್ತಿದ್ದ. ಆದರೆ ಹಾಗೆ ಸ್ವೀಕರಿಸಿದ ನಂತರ ತೊಟ್ಟ ಬಟ್ಟೆಯ ಮೇಲೆಯೇ ಗಂಗಾ ಜಲವನ್ನು ಸುರಿದುಕೊಂಡು 'ಸ್ವಚ್ಛ'ವಾಗುತ್ತಿದ್ದ.

ಇದೆಲ್ಲಕ್ಕಿಂತ ಮುಖ್ಯವಾಗಿ ಈಗ ಚೆಡ್ಡಿಗಳು ಎಲ್ಲೆಡೆ ಕ್ರಿಮಿನಲ್ ಉದ್ದೇಶದಿಂದ ಆಚರಿಸುತ್ತಿರುವ 'ಘರ್ ವಾಪಸಿ' ಯೋಜನೆಗೆ ಈ ಮಾಳವಿಯಾ 1932ರಲ್ಲೇ ಕರೆ ಕೊಟ್ಟಿದ್ದ.

ಈತ ಎಂತಹ ದೇಶ ದ್ರೋಹಿ ಆಗಿದ್ದನೆಂದರೆ ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸುವುದಿರಲಿ, ಈತ ಗಾಂಧಿಯವರ 'ದೇಶ ಬಿಟ್ಟು ತೊಲಗಿ' ಚಳವಳಿಯನ್ನೇ ವಿರೋಧಿಸಿ ಬ್ರಿಟಿಷರ ಪರ ನಿಂತಿದ್ದ.

ಇವತ್ತು ಚೆಡ್ಡಿಗಳಿಂದಾಗಿ ಇಂತಹ ಮನುಷ್ಯನನ್ನು ಭಾರತ ರತ್ನ ಎನ್ನುವ ದೌರ್ಭಾಗ್ಯ ನಮ್ಮದಾಗಿದೆ. ಇದು ದೊಡ್ಡ ದುರಂತ.

ವಾಜಪೇಯಿ ಎಂತಹ ದೇಶಭಕ್ತ?




ಚೆಡ್ಡಿಗಳಿಗೆ ಈ ವಾಜಪೇಯಿ ಅಪ್ಪಟ ದೇಶಭಕ್ತ ಮತ್ತು ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸಿದ್ದ ಯೋಧ. ಆದರೆ ವಾಸ್ತವವಾಗಿ ವಾಜಪೇಯಿ ಓರ್ವ ದೇಶದ್ರೋಹಿ. ಈತ ಯುವಕನಾಗಿದ್ದಾಗ ಈತನ ಊರಿನಲ್ಲಿ ಬ್ರಿಟಿಷರ ವಿರುದ್ಧ ಒಂದು ಪ್ರತಿಭಟನೆ ನಡೆದು ಹಲವಾರು ಜನರನ್ನು ಬಂಧಿಸಲಾಗಿತ್ತು. ಆಗ ಇದೇ ವಾಜಪೇಯಿ ಮತ್ತು ಆತನ ಸಹೋದರರನ್ನೂ ಬಂಧಿಸಿದ್ದರು. ಆದರೆ ವಾಜಪೇಯಿ ನ್ಯಾಯಾಲಯದ ಮುಂದೆ ತಾನು ಮತ್ತು ತನ್ನ ಸಹೋದರರು ಆ ಪ್ರತಿಭಟನೆಯಲ್ಲಿ ಭಾಗವಹಿಸಿರಲಿಲ್ಲವೆಂದೂ, ಕೇವಲ ವೀಕ್ಷಕರಾಗಿದ್ದೆವೆಂದೂ ಹೇಳಿದ್ದನಲ್ಲದೆ, ಆ ಪ್ರತಿಭಟನೆಯನ್ನು ಆಯೋಜಿಸಿದ್ದ ನಾಯಕರ ಹೆಸರನ್ನು ಬಹಿರಂಗಪಡಿಸುವ ಮೂಲಕ ನಿಜವಾದ ಸ್ವಾತಂತ್ರ ಯೋಧರು ಜೈಲುಪಾಲಾಗುವಂತೆ ಮಾಡಿದ್ದ.


ಈ ವಾಜಪೇಯಿ ಎಂತಹ ಗೋಮುಖವ್ಯಾಘ್ರನೆಂದರೆ ಬಾಬ್ರಿ ಮಸೀದಿಯನ್ನು ಚೆಡ್ಡಿಗಳು ಕೆಡವಿದ ದಿನ 'ಇದು ನನ ಪಾಲಿಗೆ ದುಃಖದ ದಿನ' ಎಂದಿದ್ದ. ಆದರೆ ಮಸೀದಿಯನ್ನು ಕೆಡವುವ ಹಿಂದಿನ ದಿನವೇ ಈ ವಾಜಪೇಯಿ ಚೆಡ್ಡಿಗಳನ್ನು ಪ್ರೋತ್ಸಾಹಿಸಿ ಮಸೀದಿ ಇರುವ ಜಾಗದಲ್ಲಿ ಮಂದಿರವನ್ನು ಸ್ಥಾಪಿಸಬೇಕು ಎಂದಿದ್ದ.

ಈತನೂ ಈಗ ಭಾರತದ ರತ್ನ! ಛೀ!

ಮಂಡ್ಯ ನಗರಸಭೆ

ಅಂಬಿಗೆ ತಿರುಮಂತ್ರ ಹಾಕಿದ ಸಿದ್ದರಾಜು





ಅಂಬಿಯ ರಾಜಕಾರಣ ದಿನದಿಂದ ದಿನಕ್ಕೆ ...ಯುತ್ತಲೇ ಬರುತ್ತಿದೆ. ರಾಜ್ಯ ಮಟ್ಟದಲ್ಲಿ ತನ್ನ ...ಗಿರಿಯನ್ನು ಉಳಿಸಿಕೊಳ್ಳಲು ಹೆಣಗಾಡಬೇಕಾದ ...ಲ್ಲಿರುವ ಅಂಬಿಗೆ ತವರು ನೆಲ ಮಂಡ್ಯದಲ್ಲೇ ಭರ್ಜರಿ ...ಗಳಾಗುತ್ತಿವೆ. ತನ್ನ ಪರಮಾಪ್ತ ಅಮರಾವತಿ ಚಂದ್ರನಿಗೆ ... ಮಂಡಳಿ ಅಧ್ಯಕ್ಷಗಿರಿ ಕೊಡಿಸಲು ಏನೆಲ್ಲಾ ...ಹಸ ಪಟ್ಟರೂ ಅಂಬಿ ಯಶ ಕಾಣಲಿಲ್ಲ, ಬದಲಾಗಿ, ...ೇಧಿ ಬಣವಾದ ಕೃಷ್ಣ ಪಾಳಯದ ಇಬ್ಬರು ನಿಗಮ ...ಳಿಯ ಯಜಮಾನಿಕೆಯನ್ನು ದಕ್ಕಿಸಿಕೊಂಡರು. ಆ ...ಮಾನದಿಂದ ಸುಧಾರಿಸಿಕೊಳ್ಳುವ ಮುನ್ನವೇ ಇದೀಗ ...್ಯ ನಗರ ಸಭೆ ಅಧ್ಯಕ್ಷ ಕಂ ಅಂಬಿಯ ನೆಚ್ಚಿನ ಭಂಟ ...ಜು ಗುರುವಿಗೇ ತಿರುಮಂತ್ರ ಹಾಕಿ ವಸತಿ ಸಚಿವರ ...ಪ್ಪು ಕಳೆಯಲು ಸ್ಕೆಚ್ ಹಾಕಿದ್ದಾನೆ.


ಸಿದ್ದರಾಜು ಪಕ್ಷೇತರ ಸದಸ್ಯನಾಗಿದ್ದರೂ ಸಚಿವ ಅಂಬಿ ...ಗೆ ಅಡ್ಡ ಬಿದ್ದು ನಗರಸಭೆ ಅಧ್ಯಕ್ಷ ಸ್ಥಾನ ...ದುಕೊಂಡಿದ್ದ. 'ಒಂದು ಓಟು, ಕನಕಾಂಬರ ನೋಟು' ... ಸ್ಲೋಗನನ್ನು ಕಾರ್ಯರೂಪಕ್ಕೆ ತಂದ ಸಿದ್ದರಾಜು ...ಬ್ಬ ಸದಸ್ಯನಿಗೂ ರೇಟು ಫಿಕ್ಸ್ ಮಾಡಿಯೇ ಅಧ್ಯಕ್ಷ ...ನ್ನು 15 ತಿಂಗಳ ಅವಧಿಗೆ ಖರೀದಿಸಿದ್ದ. ಅವತ್ತು ...ಿ ಅಂಬಿಯೇ ಸಿದ್ದರಾಜುನನ್ನು ಅಧ್ಯಕ್ಷನನ್ನಾಗಿಸಲು ...ಸ್ ಸದಸ್ಯರ ಓಟುಗಳನ್ನೆಲ್ಲ ಅವನತ್ತ ತಿರುಗಿಸಿದ್ದರು. ...ಾ ಅವತ್ತಾದ ಒಪ್ಪಂದದಂತೆ ನಗರಸಭಾ ಅಧ್ಯಕ್ಷ ... ಜ.2ರಂದು ಅಂದರೆ ಸರಿಯಾಗಿ 15 ತಿಂಗಳ ... ಸಿದ್ದರಾಜು ರಾಜೀನಾಮೆ ನೀಡಬೇಕು.

ಆದರೆ ಸದ್ಯಕ್ಕೆ ಆ ಸಾಧ್ಯತೆ ಕಾಣುತ್ತಿಲ್ಲ. ಅಧಿಕಾರದ ...ಕಂಡಿರುವ ಸಿದ್ದರಾಜು ಅಂಬಿಗೇ ತಿರುಮಂತ್ರ ತೀಡಿ ...ಹಿಂದಿನಂತೆಯೇ ದುಡ್ಡು ಚೆಲ್ಲಿ ಅಧ್ಯಕ್ಷನಾಗಿಯೇ ...ದುವರೆಯಲು ಹವಣಿಸುತ್ತಿದ್ದಾನೆ. ಈ ಸುಳಿವು ಹಿಡಿದ ... ಇತ್ತೀಚೆಗೆ ತನ್ನ ಭಂಟ ಅಮರಾವತಿ ಚಂದ್ರನಿಗೆ ...ೆ ವರ್ಷದ ಮೂರನೇ ದಿನ ಸಿದ್ದರಾಜು ಕೈಯಲ್ಲಿ ...ನಾಮೆ ಕೊಡಿಸುವಂತೆ ಹುಕುಂ ಹೊರಡಿಸಿದ್ದಾರೆ. ...ಯಿಂದ ರಾಜೀನಾಮೆ ಪ್ರಸ್ತಾಪ ಬರುತ್ತಿದ್ದಂತೆಯೇ ...ಮಂಗಲ ಶಾಸಕ ಎನ್.ಚಲುವರಾಯಸ್ವಾಮಿಯ ಆಪ್ತ ...ಾದ ನಗರಸಭಾ ಸದಸ್ಯನೊಬ್ಬನ ಮೂಲಕ ಅವರನ್ನು ...ೂರಿನ ಜಯನಗರದ ನಿವಾಸದಲ್ಲಿ ಭೇಟಿ ... ಅವಿಶ್ವಾಸ ಮಂಡನೆ ಸಂದರ್ಭ ಬಂದರೆ ...ಗೆ ಸಪೋರ್ಟ್ ನೀಡುವಂತೆ ಕೇಳಿ ...ದ್ದಾನೆ. ಇದು ಕನ್ವರ್‌ಲಾಲ್ ಅಂಬಿಯ ...ತ್ತಿಗೇರುವಂತೆ ಮಾಡಿದೆ. ಒಂದು ವೇಳೆ ...ಸ ಗೊತ್ತುವಳಿಯಲ್ಲೂ ದುಡ್ಡಿನ ಧಣಿ ...ಜು ಗೆದ್ದು ಬಿಟ್ಟರೆ ಕುಸಿದಿರುವ ಅಂಬಿ ... ಮಣ್ಣು ಪಾಲಾಗುವುದು ನೂರಕ್ಕೆ ...ರಷ್ಟು ಸತ್ಯ.

...ಗೆ ಆಗಬೇಕು ಮತ್ತು ಆ ಮೂಲಕ ... ವರ್ಚಸ್ಸು ಕುಸಿಯಬೇಕು ಎಂದು ...ಸ್ಸಿದ ಅಂಬಿ ವಿರೋಧಿ ಬಣ ...ತ್ತಿದೆ. ಕಾಂಗ್ರೆಸ್ ಸದಸ್ಯನಲ್ಲದ ...ಾದ ಸಿದ್ದರಾಜುಗೆ ನಗರಸಭೆ ಅಧ್ಯಕ್ಷ ...ೀಡಿದ್ದಲ್ಲದೆ, ಈಗ ಆತ ಅಂಬಿ ಮಾತಿಗೆ ಕ್ಯಾರೆ ... ದಳಪತಿಗಳ ಜೊತೆ ಕೈಜೋಡಿಸಿರುವುದನ್ನೇ ...ಂದು ಕಾಂಗ್ರೆಸ್ ಪರಿಷ್ಕರ ಮುಂದೆ ಬಾಡಿ ಹೇಳಲು ...ರೋಧಿಗಳು ಕುದಿಗಾಲಲ್ಲಿ ನಿಂತಿದ್ದಾರೆ.

...ಡ್ಯ ನಗರಸಭೆಯಲ್ಲಿ ಕಾಂಗ್ರೆಸ್ 15, ಜಾ.ದಳ ...ದ 10 ಹಾಗೂ ಬಿಜೆಪಿ ಒಬ್ಬ ಸದಸ್ಯ ಸೇರಿದಂತೆ 35 ಸದಸ್ಯ ಬಲವಿದೆ. ಕ್ಯಾಶ್ ಪಾಲಿಟಿಕ್ಸ್‌ನಲ್ಲಿ ...ನ ಕಾಂಗ್ರೆಸ್‌ನ 12 ಮಂದಿ ಸದಸ್ಯರ ಸಹಿ ...ದ್ದರಾಜು ಪರ ಬಿದ್ದಿದೆ. ಹಾಗೆಯೇ ಸಿದ್ದರಾಜು ...ಕ್ಷದಲ್ಲಿ ಮುಂದುವರೆಯಲಿ ಎಂದು 7 ಮಂದಿ ...ಸದಸ್ಯರೂ ಸಹಿ ಹಾಕಿದ್ದಾರೆ. ಉಳಿದವರ ಸಹಿ ... ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ...

ಟಿ.ಕೆ.ರಾಮಲಿಂಗಯ್ಯ ನೇತೃತ್ವದಲ್ಲಿ ಸಿದ್ದರಾಜು ಬೆಂಬಲಿಗರ ಗುಂಪು ಸದಸ್ಯರ ಮನೆ ಬಾಗಿಲಿಗೆ ಎಡತಾಕುತ್ತಿದೆ. ಅಧ್ಯಕ್ಷನಾಗುವ ಸಂದರ್ಭದಲ್ಲಿ ಸಿದ್ದರಾಜು ಕೊಟ್ಟ ಪ್ರಸಾದದ ಸವಿಯನ್ನು ಇನ್ನೂ ಆಸ್ವಾದಿಸುತ್ತಿರುವ ಸದಸ್ಯರು ಅಭಿವೃದ್ಧಿಯ ಹರಿಕಾರ, ನಗರಸಭೆ ರಕ್ಷಿಸಲು ಬಂದ ವೀರ ಎಂದು ಬಹುಪರಾಕ್ ಹಾಕುತ್ತಾ ಸಿದ್ದರಾಜು ಬೆಂಬಲಕ್ಕೆ ನಿಂತುಬಿಟ್ಟಿದ್ದಾರೆ. ಕಾಂಗ್ರೆಸ್ ಸದಸ್ಯರಾದ ಬೋರೇಗೌಡ, ಲೋಕೇಶ್, ಸುಮಾರಾಣಿ ಬಿಟ್ಟು ಅನಂತಪದ್ಮನಾಭ, ಟಿ.ಕೆ.ರಾಮಲಿಂಗಯ್ಯ ಅನಿಲ್‌ಕುಮಾರ್, ಮಹೇಶ್, ಸುಕುಮಾರ್ ಸೇರಿದಂತೆ 12 ಮಂದಿ ಸದಸ್ಯರು ಸಿದ್ದರಾಜು ಅಧ್ಯಕ್ಷನಾಗಿ ಮುಂದುವರಿಯಲಿ ಎಂದು ಸಹಿ ಹಾಕಿದ್ದಾರೆ. ಇನ್ನು ಪಕ್ಷೇತರ ಸದಸ್ಯರಾದ ನಯಾಜ್, ನರಸಮ್ಮ, ಪುಟ್ಟತಾಯಮ್ಮ, ಚಂದ್ರಕುಮಾರ್, ರಾಜೇಶ್, ಬಿಜೆಪಿಯ ಶಿವಪ್ರಕಾಶ್‌ಬಾಬುಗಳ ಸಹಿ ಕೂಡಾ ಸಿದ್ದರಾಜು ಪರವಾಗಿಯೇ ಬಿದ್ದಿವೆ. ಕಾಂಗ್ರೆಸ್ ಸದಸ್ಯರಾದ ಹೊಸಹಳ್ಳಿ ಬೋರೇಗೌಡ ಹಾಗೂ ಲೋಕೇಶ್ ಮೊದಲ ಅವಧಿಯ ಉಳಿದ 15 ತಿಂಗಳಿಗೆ ನಗರಸಭೆ ಅಧ್ಯಕ್ಷರಾಗಲು ಇಸ್ತ್ರಿ ಮಾಡಿಸಿದ ಗರಿಗರಿ ಬಟ್ಟೆ ಹಾಕಿಕೊಂಡು ಹಗಲುಗನಸು ಕಾಣುತ್ತಿದ್ದರೆ, ಅವರ ಕನಸುಗಳಿಗೆ ಸಿದ್ದರಾಜು ನೋಟುಗಳಲ್ಲೆ ಕೊಳ್ಳಿ ಇಡುತ್ತಿದ್ದಾನೆ. ಸಿದ್ದರಾಜು ಅದೆಷ್ಟು ಮುಂದಾಲೋಚನೆಯ ಮನುಷ್ಯನೆಂದರೆ ಒಂದೊಮ್ಮೆ ಅವಿಶ್ವಾಸದ ಸಂದರ್ಭ ಎದುರಾದರೆ ಜೆಡಿಎಸ್ ಸದಸ್ಯರ ಬೆಂಬಲವನ್ನೂ ದಕ್ಕಿಸಿಕೊಳ್ಳುವ ನಿಟ್ಟಿನಲ್ಲಿ ಚಲುವರಾಯ ಸ್ವಾಮಿಯನ್ನೂ ಎಡತಾಕಿ ಬಂದಿದ್ದಾನೆ.



ಜೆಡಿಎಸ್ ಬೆಂಬಲ ಸಿಗುವುದೇ?

ತನ್ನ ಅಧಿಕಾರದ ಅವಧಿಯಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇನೆ. ಮತ್ತಷ್ಟು ಅಭಿವೃದ್ಧಿ ಕೆಲಸಗಳು ಅನುಷ್ಠಾನಗೊಂಡಿದ್ದು ಅವುಗಳನ್ನು ಪೂರೈಸಲು ಇನ್ನಷ್ಟು ದಿನ ಅಧಿಕಾರ ಬೇಕಿದೆ. ಆ ಕಾರಣದಿಂದ ತಾನು ರಾಜೀನಾಮೆ ಕೊಡಲು ಸಾಧ್ಯವಿಲ್ಲ ಎಂದು ಅಂಬಿ ಬಲಗೈ ಬಂಟ ಅಮರಾವತಿ ಚಂದ್ರಶೇಖರ್ ಮುಂದೆ ಹೇಳಿರುವ ಸಿದ್ದರಾಜು ತನ್ನ ಪರ 19 ಮಂದಿ ಸದಸ್ಯರು ಸಹಿ ಹಾಕಿರುವ ಪತ್ರವನ್ನು ಕೊಟ್ಟು ಬಂದಿದ್ದಾನೆ. ಅಲ್ಲದೆ ಸಹಿ ಸಂಗ್ರಹ ಪತ್ರವನ್ನು ಸಿಎಂ, ಕೆಪಿಸಿಸಿ ಅಧ್ಯಕ್ಷ ಹಾಗೂ ಅಂಬಿಗೆ ಕಳುಹಿಸಲು ಮುಂದಾಗಿದ್ದಾನೆ.

ಈಗಾಗಲೇ ಜೆಡಿಎಸ್‌ನ ಕೆಲವು ಸದಸ್ಯರು ಕೂಡ ಸಿದ್ದರಾಜು ಕ್ಯಾಶ್ ಪಾಲಿಟಿಕ್ಸ್‌ಗೆ ಶರಣಾಗಿ ಆತನೊಂದಿಗೆ ಕೂಡಿಕೆ ಮಾಡಿಕೊಂಡಿರುವ ವಾಸನೆ ಹರಿದಾಡುತ್ತಿದೆ.

ಮಂಡ್ಯ ಪಾಲಿಟಿಕ್ಸ್‌ನಲ್ಲಿ ಚಲುವರಾಯಸ್ವಾಮಿಗೆ ತನ್ನದೇ ಆದ ತೂಕವಿದೆ. ಕುಮಾರಸ್ವಾಮಿಯಷ್ಟೇ ಚಲುವರಾಯ ಸ್ವಾಮಿ ಕೂಡಾ ಬೆಂಬಲಿಗರನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಆದರೂ ನಗರಸಭೆ ಅಧ್ಯಕ್ಷ ಸಿದ್ದರಾಜು ವಿಚಾರದಲ್ಲಿ ಕುಮಾರಸ್ವಾಮಿ ಮಾತೇ ಫೈನಲ್. ಸದ್ಯದ ಪರಿಸ್ಥಿತಿಯಲ್ಲಿ ಚಲುವರಾಯಸ್ವಾಮಿಗೂ ಕುಮಾರಸ್ವಾಮಿಗೂ ಅಷ್ಟಕಷ್ಟೆ. ಆದರೆ ಈ ಇಬ್ಬರೂ ಅಂಬಿ ಜೊತೆ ಚೆನ್ನಾಗಿಯೇ ಇದ್ದಾರೆ. ಅಂಬಿಯನ್ನು ಎದುರು ಹಾಕಿಕೊಂಡು ಸಿದ್ದರಾಜುಗೆ ಅವರಿಬ್ಬರೂ ಸಾಥ್ ನೀಡುವುದು ಡೌಟು. ಹಾಗಾಗಿ ಸಿದ್ದರಾಜುನ ಈ ಪ್ರಯತ್ನ ಅಷ್ಟೇನೂ ಫಲ ಕೊಡದು ಎಂಬ ಮಾತುಗಳೂ ಜೆಡಿಎಸ್ ಪಾಳೆಯದಿಂದಲೇ ಕೇಳಿಬರುತ್ತಿವೆ.

ಕಡಿದು ಹಾಕಿದ್ದು ಅಷ್ಟರಲ್ಲೇ

ಈ ಬೆಳವಣಿಗೆ ಮಂಡ್ಯ ನಗರಸಭೆಗಂತೂ ಭಾರೀ ನಷ್ಟವನ್ನೇ ಉಂಟು ಮಾಡಲಿದೆ. ಅಂಬಿಯ ವಿರೋಧ ಕಟ್ಟಿಕೊಂಡರೆ ಸಿದ್ದರಾಜುಗೆ ವೈಯಕ್ತಿಕ ಕಷ್ಟ ಎದುರಾಗುವುದರ ಜೊತೆಗೆ ನಗರಸಭೆಗೆ ವಿಶೇಷ ಅನುದಾನಗಳನ್ನು ತರುವುದೂ ಕಷ್ಟವಾಗಲಿದೆ. ಯಾಕೆಂದರೆ ಸ್ವತಃ ಅಂಬಿಯೇ ಜಿಲ್ಲಾ ಉಸ್ತುವಾರಿ ಸಚಿವ. ಹಾಗೆ ನೋಡಿದರೆ, ಸಿದ್ದರಾಜು ಪ್ರಯತ್ನದ ಹಿಂದೆ ಅಧಿಕಾರಲಾಲಸೆ ಕಾಣುತ್ತಿದೆಯೇ ಹೊರತು ಮತ್ತೇನೂ ಅಲ್ಲ. ಈ ಹಿಂದಿನ ಅಧ್ಯಕ್ಷರುಗಳಿಗಿಂತ ಸಿದ್ದರಾಜು ಸ್ವಲ್ಪ ಪರವಾಗಿಲ್ಲ ಎನ್ನಬಹುದೇ ಹೊರತು ವಿಶೇಷ ಅಭಿವೃದ್ಧಿನ್ನೇನೂ ಆತ ಮಂಡ್ಯಕ್ಕೆ ತಂದು ಗುಡ್ಡೆಹಾಕಿಲ್ಲ. ಅಭಿವೃದ್ಧಿ ಬಗ್ಗೆ ಪುಂಖಾನುಪುಂಖವಾಗಿ, ಗಂಟೆಗಟ್ಟಲೆ ಮಾತನಾಡುವ ಸಿದ್ದರಾಜು ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಅಷ್ಟೇನೂ ಯಶಸ್ವಿಯಾಗಿಲ್ಲ. ಬಿಜೆಪಿ ಅಧಿಕಾರದ ಅವಧಿಯಲ್ಲಿ ಮಂಡ್ಯ ನಗರದ ಅಭಿವೃದ್ಧಿಗೆಂದು ಬಂದ 30 ಕೋಟಿ ಅನುದಾನ ಕೆಲಸವೇ ಇಂದಿಗೂ ನಡೆಯುತ್ತಿದೆಯೇ ಹೊರತು ಕಾಂಗ್ರೆಸ್ ಸರ್ಕಾರ ಬಂದು ಎರಡು ವರ್ಷಗಳಾದರೂ ಹೊಸ ಅನುದಾನ ಹೊತ್ತು ತರಲು ಸಿದ್ದರಾಜುಗೆ ಸಾಧ್ಯವಾಗಿಲ್ಲ.

ಅಧ್ಯಕ್ಷನಾದ ಸಂದರ್ಭದಲ್ಲಿ ಸಿದ್ದರಾಜು ಕೊಟ್ಟ ಭರವಸೆಗಳೆಲ್ಲ ಕೇವಲ ಕಾಗದದ ಮೇಲಷ್ಟೇ ಉಳಿದಿದೆ. ಅಲ್ಲೊಂದು ಇಲ್ಲೊಂದು ಬಿಟ್ಟರೆ ಏನೇನೂ ಕೆಲಸಗಳಾಗಿಲ್ಲ. ಮಂಡ್ಯದ ಸ್ಲಂ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದಷ್ಟೇ ಬಂತು. ನಯಾಪೈಸೆ ಕೆಲಸ ಮಾತ್ರ ಆಗಿಲ್ಲ. ಒಂದೆರಡು ಪಾರ್ಕ್‌ಗಳನ್ನು ಬಿಟ್ಟರೆ ಉಳಿದವೆಲ್ಲ ಜನರೇ ಹೋಗದಷ್ಟು ಕೆಟ್ಟದಾಗಿವೆ.


ನಗರಸಭೆ ಆದಾಯದಲ್ಲಿ ಸೋರಿಕೆಯಾಗುತ್ತಿದೆ ಎನ್ನುವ ಸಿದ್ದರಾಜು ಅದನ್ನು ತಡೆಯಲು ಅಧ್ಯಕ್ಷನಾದ 15 ತಿಂಗಳಲ್ಲಿ ಯಾವ ಕ್ರಮ ಕೈಗೊಂಡಿದ್ದೀರಿ ಎನ್ನುವ ಪ್ರಶ್ನೆಗೆ ನೋಟಿಸ್ ಕೊಟ್ಟಿದ್ದೇನೆ ಎಂದು ಹೇಳಿ ಸುಮ್ಮನಾಗುತ್ತಾರೆ. ನಗರಸಭೆಯ ಆದಾಯಕ್ಕೆ ಕನ್ನ ಹಾಕಿರುವ ಕೆಲವು ಸಿಬ್ಬಂದಿಯ ಆದಾಯ ಮಾತ್ರ ದಿನೇದಿನೇ ಹೆಚ್ಚಾಗುತ್ತಿದೆ. ನಗರಸಭೆಯ ಬಿಲ್‌ಬುಕ್‌ಗ್ಳೇ ಮಾಯ ಮಾಡಿರುವ ಚಾಲಾಕ್ಷ ಶಿವರಾಜ್ ವಿರುದ್ಧ ಇನ್ನೂ ಕ್ರಮ ಕೈಗೊಂಡಿಲ್ಲ. ನಗರಸಭೆ ಕಾನೂನಿಗೆ ವಿರುದ್ಧವಾಗಿ ಅಂಗಡಿ-ಮಳಿಗೆಗಳನ್ನು ಒಳಬಾಡಿಗೆ ಕೊಡಲಾಗಿದೆ. ನಗರಸಭೆ ಅಂಗಡಿ-ಮಳಿಗೆಗಳನ್ನು ಒಡೆದು ವಿಸ್ತರಿಸಿಕೊಂಡರೂ ಕೇಳುತ್ತಿಲ್ಲ. ನಗರಸಭೆಯ ನಿವೃತ್ತ ಸಿಬ್ಬಂದಿಯೊಬ್ಬ ತನ್ನದಲ್ಲದ ನಗರಸಭೆ ಜಾಗದಲ್ಲೇ ಬೋಗಸ್ ಖಾತೆ ಮಾಡಿಕೊಂಡು ಮನೆ ಕಟ್ಟಿಕೊಂಡಿದ್ದಾನೆ. ಕಾವೇರಿ ನರ್ಸಿಂಗ್ ಹೋಂನ ಡಾ.ಕೃಷ್ಣ ಮನೆ ಕಟ್ಟಲು ಅನುಮತಿ ಪಡೆದು, ಫುಟ್‌ಪಾತ್ ಅತಿಕ್ರಮಿಸಿ ನರ್ಸಿಂಗ್ ಹೋಂ ಕಟ್ಟಿದರೂ ಕೇಳುವವರಿಲ್ಲ. ರಾಜಾಕಾಲುವೆ ಜಾಗವನ್ನು ಒತ್ತುವರಿ ಮಾಡಿಕೊಂಡು ಪುನೀತಾ ಕಾಂಪ್ಲೆಕ್ಸ್ ಮಾಲೀಕ ಸ್ಕೂಟರ್ ಸ್ಟ್ಯಾಂಡ್ ನಿರ್ಮಿಸಿಕೊಂಡಿದ್ದಾನೆ. ಶ್ರೀನಿಧಿ ಗೋಲ್ಡ್, ಶ್ರೀನಿವಾಸ ಮೆಡಿಕಲ್ಸ್‌ನಿಂದ ಬಾಡಿಗೆ ಹಣಕ್ಕೆ ಖೋತಾ ಆಗಿದೆ. ಬಸ್‌ಬೇ ಯೋಜನೆಯಲ್ಲಿ ಲಕ್ಷಾಂತರ ಹಣ ಅವ್ಯವಹಾರ ನಡೆದಿದೆ. ನಗರೋತ್ಥಾನ ಕಾಮಗಾರಿ ಕಳಪೆಯಾಗಿದೆ. ಹೇಳುತ್ತಾಹೋದರೆ ಹತ್ತಾರು ಪ್ರಕರಣಗಳನ್ನು ಮುಂದಿಡಬಹುದು. ಇವೆಲ್ಲಾ ಸಿದ್ದರಾಜುನ ಸಾಚಾತನಗಳನ್ನು ಬಿಚ್ಚಿಡುತ್ತವೆ.


ಎಸ್‌ಎಫ್‌ಸಿ, 13ನೇ ಹಣಕಾಸು ಯೋಜನೆಯಡಿ ಬಂದಿರುವ ಹಣ ಬಿಟ್ಟರೆ ಸರ್ಕಾರದ ಬೇರೆ ಅನುದಾನ ತರುವಲ್ಲಿ ಸಿದ್ದರಾಜು ವಿಫಲನಾಗಿದ್ದಾನೆ. ಮಾರುಕಟ್ಟೆ ಸಂಕೀರ್ಣ ನಿರ್ಮಾಣ ಕಾಮಗಾರಿ, ನಗರಸಭೆ ಹಳೆ ಕಟ್ಟಡ ಕೆಡವಿ ಹೊಸ ಆಡಳಿತ ಕಚೇರಿ ನಿರ್ಮಾಣ ಸೇರಿದಂತೆ ಒಂದಷ್ಟು ಬಿಗ್ ಪ್ರಾಜೆಕ್ಟ್ ಮಾಡುತ್ತೇನೆಂದು ಯೋಜನೆ ರೂಪಿಸಿರುವ ಸಿದ್ದರಾಜು ಹೇಳಿದ್ದನ್ನೆಲ್ಲಾ ಮಾಡಲು 15 ತಿಂಗಳು ಅಧಿಕಾರಾವಧಿ ಏನೇನೂ ಸಾಲದು. ಕನಿಷ್ಠ 10 ವರ್ಷಗಳಾದರೂ ಬೇಕು. ಅಲ್ಲಿಯವರೆಗೂ ಸಿದ್ದರಾಜು ಅಧ್ಯಕ್ಷರಾಗಿರುವುದು ಸಾಧ್ಯವೇ ಇಲ್ಲ. ಹೀಗಿರುವಾಗ ಇನ್ನುಳಿದ 15 ತಿಂಗಳ ಅಧಿಕಾರದ ಆಸೆಗಾಗಿ ಸುಳ್ಳುಗಳ ಸರಮಾಲೆಯನ್ನು ಪೋಣಿಸಿ 'ಅಭಿವೃದ್ಧಿಯ ಹರಿಕಾರ' ಎನಿಸಿಕೊಳ್ಳುವ ಹುನ್ನಾರ ನಡೆಸಿದ್ದಾನಷ್ಟೆ.


ದುಡ್ಡಿದ್ದವನೇ ಅಧ್ಯಕ್ಷ

ಮಂಡ್ಯ ನಗರಸಭೆಯಲ್ಲಿ ಇತ್ತೀಚಿನ ಕೆಲವರ್ಷಗಳಿಂದ ದುಡ್ಡಿದ್ದವನದ್ದೇ ಆರ್ಭಟ ಎಂಬಂತಾಗಿ ಹೋಗಿದೆ. ಇಲ್ಲದಿದ್ದರೆ ಪಕ್ಷೇತರ ಸದಸ್ಯನೊಬ್ಬ ಕಾಂಗ್ರೆಸ್ ಸದಸ್ಯರನ್ನು ಹಿಂದಿಕ್ಕಿ ನಗರಸಭೆ ಅಧ್ಯಕ್ಷನಾಗುವುದು ಸುಲಭದ ಮಾತಲ್ಲ. ತನ್ನ ಕ್ಯಾಶ್ ಪಾಲಿಟಿಕ್ಸ್‌ನಿಂದ ಅಪೆಕ್ಸ್ ಬ್ಯಾಂಕ್ ನಿರ್ದೇಶಕನಾದ ಸಿದ್ದರಾಜು ಈಗ ಅದೇ ಸಿದ್ಧಾಂತವನ್ನೂ ನಗರಸಭೆಯಲ್ಲೂ ಮುಂದುವರಿಸಿ ಮೊದಲ ಅವಧಿಯ 15 ತಿಂಗಳು ಪೂರೈಸಿದ್ದಾನೆ. ಈ ಹಿಂದೆ ಅಂಬಿಯ ಮುಂದೆ ನಡೆದಿರುವ ಮಾತಿನಂತೆ ಇನ್ನುಳಿದ 15 ತಿಂಗಳ ಅಧಿಕಾರದ ಅವಧಿಯನ್ನು ಕಾಂಗ್ರೆಸ್ ಸದಸ್ಯರಾದ ಹೊಸಹಳ್ಳಿ ಬೋರೇಗೌಡ ಅಥವಾ ಲೋಕೇಶ್‌ರವರಲ್ಲಿ ಒಬ್ಬರಿಗೆ ಹಸ್ತಾಂತರಿಸಬೇಕಿದೆ. ಆದರೆ ಪ್ರಸ್ತುತ ಬೆಳವಣಿಗೆಗಳನ್ನು ನೋಡುತ್ತಿದ್ದರೆ ಸಿದ್ದರಾಜು ಸುಲಭವಾಗಿ ಅಂಬಿ ಮಾತಿಗೆ ಮನ್ನಣೆ ನೀಡುತ್ತಾನೆ ಎನ್ನಲಾಗದು. ಈಗಾಗಲೇ 19 ಮಂದಿ ಸದಸ್ಯರು ಸಿದ್ದರಾಜು ಕ್ಯಾಂಪ್‌ನಲ್ಲಿದ್ದು, ಲೋಕೇಶ್ ಹಾಗೂ ಬೋರೇಗೌಡ ಅಂಬಿಯ ಮೇಲೆ ಭಾರ ಹಾಕಿ ಕಾಯುತ್ತಿದ್ದಾರೆ. ಪಕ್ಷೇತರ ಸದಸ್ಯನೊಬ್ಬ ದುಡ್ಡು ಚೆಲ್ಲಿ ಅಧ್ಯಕ್ಷನಾಗುವುದಾದರೆ ಜೆಡಿಎಸ್‌ನ ಎಂ.ಜೆ.ಚಿಕ್ಕಣ್ಣನಂತಹವರು ಮುಂದಿನ ದಿನಗಳಲ್ಲಿ ಒಂದು ಆಟ ಹಾಕಬಹುದು. ಜೆಡಿಎಸ್‌ನ 9 ಮಂದಿ ಸದಸ್ಯರು ಪಕ್ಷೇತರ 10 ಮಂದಿ ಹಾಗೂ ಬಿಜೆಪಿಯ ಒಬ್ಬ ಸದಸ್ಯನ ಮೇಲೆ ಬಂಡವಾಳ ಹಾಕಿದರೆ ಸುಲಭವಾಗಿ ಎಂ.ಜೆ.ಚಿಕ್ಕಣ್ಣ ಕೂಡಾ ಅಧ್ಯಕ್ಷನಾಗಿ ಬಿಡಬಹುದು. ಅಂತಹ ದುಸ್ಥಿತಿ ಇಲ್ಲಿದೆ.

ಒಟ್ಟಿನಲ್ಲಿ ತನ್ನ ಪಕ್ಷದ ಸದಸ್ಯರಿದ್ದರೂ ಪಕ್ಷೇತರನೊಬ್ಬನನ್ನು ಅಧ್ಯಕ್ಷ ಸ್ಥಾನಕ್ಕೇರಿಸಿದ ಅಂಬಿ ಈಗ ಅದಕ್ಕೆ ಸರಿಯಾದ ತೆರಿಗೆಯನ್ನೇ ಕಟ್ಟಬೇಕಾಗಿದೆ.







ಇಷ್ಟೇ ಆಗಿದ್ದಿದ್ದರೆ ಪರವಾಗಿಲ್ಲ, 'ಅಂಬಿ ಹಾಗೂ ಆತನ ಶಿಷ್ಯ ಅಮರಾವತಿ ಚಂದ್ರ ಆ ಕಾರ್ಯಕ್ರಮಕ್ಕೆ 2 ಲಕ್ಷ ಕೊಡು, ಇವರಿಗೆ 3 ಲಕ್ಷ ಕೊಡು ಅಂತ ಕೇಳ್ತಾರೆ. ಪ್ರತಿ ಬಾರಿ ಅಷ್ಟೊಂದು ದುಡ್ಡು ಎಲ್ಲಿಂದ ತರ್ಲಿ, ಹಣ ಕೊಡಲು ಸಾಧ್ಯವಿಲ್ಲ ಎಂದಿದ್ದಕ್ಕೆ ನನ್ನನ್ನು ಕೆಳಗಿಳಿಸುತ್ತಿದ್ದಾರೆ. ಅವರಿಗೆ ಕೊಡುವ ಲಕ್ಷ ಲಕ್ಷ ಹಣವನ್ನು ಕೌನ್ಸಿಲರ್‌ಗಳಿಗೆ ಕೊಟ್ರೆ ಅವರೇ ನಮ್ಮ ಬೆಂಬಲಕ್ಕೆ ನಿಲ್ತಾರೆ' ಎಂದು ಸಿದ್ದರಾಜು ತನ್ನ ಆಪ್ತರ ಬಳಿ ಹೇಳಿಕೊಂಡು ತಿರುಗಾಡುತ್ತಿರೋದು ಅಂಬಿ ಮತ್ತು ಅಮರಾವತಿಯನ್ನು ಮತ್ತಷ್ಟು ಕೆರಳಿಸಿದೆ. ಕಾಂಗ್ರೆಸ್ ಹಾಗೂ ಪಕ್ಷೇತರ ಸದಸ್ಯರಿಗೆ ಬಂಡವಾಳ ಹಾಕಿ ತನ್ನ ಪರ ಮಾಡಿಕೊಂಡಿರುವ ಸಿದ್ದರಾಜುಗೆ ಜೆಡಿಎಸ್ ಬೆಂಬಲ ಸಿಕ್ಕಿಬಿಟ್ಟರೆ ಇನ್ನು 15 ತಿಂಗಳು ನಿರಾಯಾಸವಾಗಿ ಅಧ್ಯಕ್ಷ ಸ್ಥಾನದಲ್ಲಿ ಕೂರಬಹುದು.

● ಮಂಡ್ಯ ನಾಗೇಶ್

ಪಶ್ಚಿಮಘಟ್ಟ: ಪರಿಸರ ರಕ್ಷಣೆ ಸರಿ, ಜನರ ಒಕ್ಕಲೆಬ್ಬಿಸುವಿಕೆ ಸರಿಯಲ್ಲ

ಪಶ್ಚಿಮಘಟ್ಟಗಳ ಸಂರಕ್ಷಣೆಯ ವಿಚಾರದಲ್ಲಿ ಈಗ ಕರ್ನಾಟಕದ ಕೆಲವು ಭಾಗ ಹಾಗೂ ಕೇರಳ ರಾಜ್ಯದಲ್ಲಿ ಪರ ಹಾಗೂ ವಿರೋಧ ಕೇಳಿಬರುತ್ತಿರುವುದು ಕಸ್ತೂರಿ ರಂಗನ್ ಸಮಿತಿ ವರದಿಯ ಅನುಷ್ಠಾನದ ವಿಚಾರದಲ್ಲಿ; ಪಶ್ಚಿಮಘಟ್ಟವನ್ನು ಸಂರಕ್ಷಿಸಬೇಕು ಎಂಬ ವಿಚಾರಕ್ಕಾಗಿ ಕೇಂದ್ರ ಸರಕಾರ ಪ್ರೊ. ಮಾಧವ ಗಾಡ್ಗಿಲ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತ್ತು, ಈ ಸಮಿತಿಯು ನೀಡಿದ ವರದಿಯನ್ನು ಜನವಿರೋಧಿ ಎಂದು ಹೇಳಿಕೊಂಡು ಬಹುತೇಕ ಪಶ್ಚಿಮಘಟ್ಟದ ಎಲ್ಲಾ ರಾಜ್ಯಗಳು ವಿರೋಧವನ್ನು ವ್ಯಕ್ತಪಡಿಸಿದವು. ಈ ಹಿನ್ನೆಲೆಯಲ್ಲಿ ಡಾ. ಕಸ್ತೂರಿರಂಗನ್‌ರವರ ನೇತೃತ್ವದಲ್ಲಿ ಮತ್ತೊಂದು ಸಮಿತಿಯನ್ನು ರಚಿಸಲಾಯಿತು. ಕೆಲವೊಂದು ಮಾರ್ಪಾಡುಗಳನ್ನು ಮಾಡಿ, ಕಸ್ತೂರಿರಂಗನ್ ಸಮಿತಿಯು ವರದಿಯನ್ನು ನೀಡಿತು. ಈ ವರದಿಗೂ ಆಕ್ಷೇಪಗಳು ಕೇಳಿಬಂದವು.

ಆಗ ಗೋವಾ ಫೌಂಡೇಷನ್‌ನವರು ಹಸಿರು ಪೀಠದಲ್ಲಿ ಅರ್ಜಿ ಸಲ್ಲಿಸಿದಾಗ ಕೇಂದ್ರ ಸರಕಾರವು ತಾವು ಕಸ್ತೂರಿರಂಗನ್ ಸಮಿತಿಯ ವರದಿಯನ್ನು ಅಂಗೀಕರಿಸುವುದಾಗಿ ಹಾಗೂ ಈ ಸಂಬಂಧ ಕರಡು ಅಧಿಸೂಚನೆಯನ್ನು ಹೊರಡಿಸಿರುವುದಾಗಿ, ಈ ಪ್ರದೇಶದ ಹಿತಾಸಕ್ತರಿಂದ (stake holders) ಆಕ್ಷೇಪಣೆಗಳು ಬಂದನಂತರ ಅದನ್ನು ಪರಿಶೀಲಿಸಿ ಅಂತಿಮವಾದ ಅಧಿಸೂಚನೆಯನ್ನು ಹೊರಡಿಸುವುದಾಗಿ ಪ್ರಮಾಣಪತ್ರವನ್ನು ಸಲ್ಲಿಸಿತು. ನಂತರ ಕರಡು ಅಧಿಸೂಚನೆಯನ್ನು ಜಾರಿಗೊಳಿಸಿತು. ಈಗ ಇದನ್ನು ವಿರೋಧಿಸಿ ಪ್ರತಿಭಟನೆಗಳು ಆರಂಭವಾಗಿದೆ. ಕರ್ನಾಟಕ ವಿಧಾನಸೌಧದಲ್ಲಿ ಇದನ್ನು ವಿರೋಧಿಸಿ, ಬೆಳಗಾಂ ಅಧಿವೇಶನದಲ್ಲಿ ಚರ್ಚೆ ನಡೆದಿದ್ದು ಮಾತ್ರವಲ್ಲ, ವಿಧಾನಸಭಾ ಅಧ್ಯಕ್ಷ ಕಾಗೋಡು ತಿಮ್ಮಪ್ಪನವರು ಕೂಡ ಇದರ ವಿರುದ್ಧ ಗಡಸು ಧ್ವನಿಯಲ್ಲಿ ಮಾತನಾಡಿ, ಇದನ್ನು ಜಾರಿಗೊಳಿಸ ಬಾರದೆಂದು ಅವಿರೋಧವಾದ ನಿರ್ಣಯವನ್ನು ಕೈಗೊಂಡಿತು. ರಾಜ್ಯ ಸರಕಾರದ ನಿರ್ಣಯಗಳಿಗೆ ಕೇಂದ್ರವು ಕವಡೆ ಕಾಸಿನ ಕಿಮ್ಮತ್ತು ನೀಡುವುದಿಲ್ಲ, ಹಿಂದೆಯೂ ಪಶ್ಚಿಮಘಟ್ಟ ಪ್ರದೇಶವನ್ನು ವಿಶ್ವಪಾರಂಪರಿಕ ತಾಣಕ್ಕೆ ಒಪ್ಪಿಸುವ ವಿಚಾರದಲ್ಲಿ ಕರ್ನಾಟಕ ರಾಜ್ಯವು ವಿರೋಧ ವ್ಯಕ್ತಪಡಿಸಿದ್ದರೂ ಅದನ್ನು ಗಣನೆಗೇ ತೆಗೆದುಕೊಳ್ಳದೆ, ಕೇಂದ್ರ ಸರಕಾರವೇ ಗಟ್ಟಿಯಾದ ಲಾಬಿಯನ್ನು ಮಾಡಿ, ವಿಶ್ವಪಾರಂಪರಿಕ ಪಟ್ಟಿಗೆ ಸೇರ್ಪಡೆಗೊಳಿಸಿಕೊಂಡಿತು.

ಪಶ್ಚಿಮಘಟ್ಟ ಸಂರಕ್ಷಣೆಯ ಹುನ್ನಾರ

ಕಸ್ತೂರಿರಂಗನ್ ಸಮಿತಿಯ ವರದಿಯನ್ನು ವಿರೋಧಿಸುತ್ತಿರುವ ಹಿನ್ನೆಲೆಯಲ್ಲಿ ಇದರ ಪರವಾಗಿ ಇರುವವರು ಪ್ರಬಲವಾಗಿ ಈ ವರದಿ ಜಾರಿಯಾಗಬೇಕೆಂದು ಕೂಗು ಎಬ್ಬಿಸಿದ್ದಾರೆ ಮತ್ತು ಪಶ್ಚಿಮಘಟ್ಟವನ್ನು ಸಂರಕ್ಷಿಸಲು ವಿರೋಧಿಸುವುದು ಸರಿಯೇ ಎಂಬ ಪ್ರಶ್ನೆಯನ್ನು ಒಡ್ಡಿದ್ದಾರೆ. ಈ ಭಾಗದ ಜನತೆ ಕಸ್ತೂರಿರಂಗನ್ ಸಮಿತಿಯ ವರದಿಯನ್ನು ವಿರೋಧಿಸುತ್ತಿದ್ದಾರೆಯೇ ವಿನಹ ಪಶ್ಚಿಮಘಟ್ಟದ ಸಂರಕ್ಷಣೆಯನ್ನು ಅಲ್ಲ, ಈ ವರದಿಯನ್ನು ಈ ಭಾಗದ ಜನರು ಏತಕ್ಕಾಗಿ ವಿರೋಧಿಸುತ್ತಿದ್ದಾರೆ ಎಂಬುದರ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದ ಇವರುಗಳು, ಮುಂದಿನ ಪೀಳಿಗೆಗಾಗಿ ಮತ್ತು ದಕ್ಷಿಣ ಭಾರತದ ಮಹಾನಗರಗಳ ಕೋಟ್ಯಾಂತರ ಜನರ ನೀರಿನ ಬೇಡಿಕೆಗಾಗಿ ಪಶ್ಚಿಮಘಟ್ಟವನ್ನು ಸಂರಕ್ಷಿಸಬೇಕು ಎಂದು ಭಾವನಾತ್ಮಕವಾಗಿ ಹೇಳಿಕೆಗಳನ್ನು ನೀಡುತ್ತಿದ್ದಾರೆ ಮತ್ತು ಸಾರ್ವಜನಿಕರಿಗೆ ತಪ್ಪು ಮಾಹಿತಿಯನ್ನು ರವಾನೆ ಮಾಡುತ್ತಿದ್ದಾರೆ.

ಪಶ್ಚಿಮಘಟ್ಟ ಎಂಬುದು ಗುಜರಾತಿನಿಂದ ಮೊದಲ್ಗೊಂಡು, ತಮಿಳುನಾಡಿನ ಕನ್ಯಾಕುಮಾರಿಯವರೆಗೆ ಒಟ್ಟು 1,600 ಕಿ.ಮೀ. ವ್ಯಾಪ್ತಿಗೆ ಹಬ್ಬಿಕೊಂಡಿದೆ. ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ, ತಮಿಳುನಾಡು ಸೇರಿ ಒಟ್ಟು ಆರು ರಾಜ್ಯಗಳನ್ನು ಇದು ಹಾದುಹೋಗುತ್ತದೆ. ಈ ಪ್ರದೇಶದಲ್ಲಿ ಪ್ರಮುಖ ನದಿಗಳಾದ ಕಾವೇರಿ, ಕೃಷ್ಣಾ ಹಾಗೂ ಗೋದಾವರಿ ಇದ್ದು, ಇದು ಜೀವ ವೈವಿಧ್ಯಗಳಿಂದ ಕೂಡಿದ ಪ್ರದೇಶವಾಗಿದೆ. ಇಲ್ಲಿ ಅಪರೂಪದ ಹೂವುಗಳು, ಪ್ರಾಣಿಗಳು, ಪಕ್ಷಿಗಳು ಇವೆ. ಭೂಮಿಯ ಹುಟ್ಟಿನಿಂದಲೇ ಈ ಪ್ರಾಣಿಗಳು ಇಲ್ಲಿ ವಾಸಿಸುತ್ತಿವೆ. ಈ ಪ್ರದೇಶದ ಕೆಲವು ಕಡೆ ಪರಿಸರದ ಮೇಲೆ ವ್ಯತಿರಿಕ್ತವಾದ ಪರಿಣಾಮ ಬೀರಬಲ್ಲ ಕಾರ್ಯಗಳು ಆಗಿದೆ ಎನ್ನುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ, ಆದರೆ ಹೆಚ್ಚಿನ ಪ್ರದೇಶ ಯಥಾಸ್ಥಿತಿಯಲ್ಲಿ ಸಂರಕ್ಷಿಸಲ್ಪಟ್ಟಿವೆ. ಹಾಗಿದ್ದರೂ ಅರಣ್ಯ ಹನನವಾಗುತ್ತಿದೆ, ಗಣಿಗಾರಿಕೆಯಾಗುತ್ತಿದೆ ಎಂಬ ಕೂಗುಗಳು ಕೇಳಿ ಬಂದು, ಪಶ್ಚಿಮಘಟ್ಟ ಪ್ರದೇಶವನ್ನು ಸಂರಕ್ಷಿಸಲೇಬೇಕು ಎನ್ನುವ ವಿಚಾರ ಹಂತ ಹಂತವಾಗಿ 2004ರಿಂದ ಪ್ರಚಾರ ಮಾಡುವಂತಹ ಕಾರ್ಯಗಳು ಆಗುತ್ತಾ ಬಂದಿದ್ದವು. ಅರಣ್ಯ ಹನನಕ್ಕೆ ಅರಣ್ಯ ಇಲಾಖೆ ಕಾರಣವೇ ವಿನಹ ಸಾರ್ವಜನಿಕರಲ್ಲ, ಆದರೆ ಸಾರ್ವಜನಿಕರಿಂದ ಅರಣ್ಯ ಹನನ ಆಗುತ್ತಿದೆ ಎಂಬ ಚಿತ್ರಣವನ್ನು ವ್ಯವಸ್ಥಿತವಾಗಿ ಬಿತ್ತುವ ಮೂಲಕ, ಪರಿಸರದ ವಿಚಾರದಲ್ಲಿ ತಪ್ಪು ಕಲ್ಪನೆಯನ್ನು ನೀಡುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಾ ಬರಲಾಗಿದೆ.

2003ರಲ್ಲಿ ಕೊಡಗು ಜಿಲ್ಲೆಯ ಪುಷ್ಪಗಿರಿ ವನ್ಯಧಾಮ, ತಲಕಾವೇರಿ ವನ್ಯಧಾಮ ಹಾಗೂ ಬ್ರಹ್ಮಗಿರಿ ವನ್ಯಧಾಮವನ್ನು



ಒಗ್ಗೂಡಿಸಿ ಗ್ರೇಟರ್ ತಲಕಾವೇರಿ ಎಂಬ ಯೋಜನೆಯನ್ನು ರೂಪಿಸಿ, ಅದನ್ನು ವಿಶ್ವಪಾರಂಪರಿಕ ತಾಣದ ವ್ಯಾಪ್ತಿಗೆ ತರುವ ಬಗ್ಗೆ ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರ ನೇತೃತ್ವದಲ್ಲಿ ವಿಧಾನಸೌಧದಲ್ಲಿ ಚರ್ಚೆಗಳು ನಡೆದಿದ್ದವು. ಈ ಚರ್ಚೆಯ ಬಗ್ಗೆ ಈ ಭಾಗದ ಯಾವುದೇ ಜನಪ್ರತಿನಿಧಿಗಳಿಗೆ ತಿಳಿದೇ ಇರಲಿಲ್ಲ ಎಂಬುದು ಗಮನಾರ್ಹವಾದ ವಿಚಾರ. ಅವರನ್ನು ಕತ್ತಲಲ್ಲಿ ಇಟ್ಟು ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನು ತಾವೇ ಹೊತ್ತುಕೊಂಡವರು ಮತ್ತು ಅದು ತಮ್ಮ ಕರ್ತವ್ಯ ಎನ್ನುವ ರೀತಿಯಲ್ಲಿ ಚಟುವಟಿಕೆಗಳನ್ನು ಮಾಡುತ್ತಿರುವ ಪರಿಸರವ್ಯಾಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

ಈ ಬಗ್ಗೆ 12-9-2003ರಲ್ಲಿ ಇದೇ ಪರಿಸರವ್ಯಾಧಿಗಳು ಪತ್ರವೊಂದನ್ನು ಅರಣ್ಯ ಅಧಿಕಾರಿಗಳಿಗೆ ಬರೆದು, ಆ ಪತ್ರದಲ್ಲಿ ಯೋಜನೆಗಳ ಸ್ವರೂಪವನ್ನು ತಿಳಿಸಿದ್ದು ಇದರಲ್ಲಿ ಅವರ ಹುನ್ನಾರಗಳು ಏನು ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಮೀಸಲು ಅರಣ್ಯದಲ್ಲಿ ಮರಗಳನ್ನು ಕಡಿಯುವುದನ್ನು ತಡೆಯುವುದು, ಸತ್ತ ಮರಗಳನ್ನು ತೆಗೆಯುವುದು ಮುಂತಾದವಕ್ಕೆ ಕಡಿವಾಣ ಹಾಕುವ ವಿಚಾರವನ್ನು ಈ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಮೊದಲ ಹಂತದಲ್ಲಿ ಕೆಲವು ಮೀಸಲು ಅರಣ್ಯಗಳನ್ನು ಒಂದುಗೂಡಿಸುವ ಕಾರ್ಯವನ್ನು ಮಾಡಬೇಕು. ಎರಡನೆಯ ಹಂತದಲ್ಲಿ ಇದನ್ನು ವಿಶ್ವಪಾರಂಪರಿಕ ತಾಣದ ವ್ಯಾಪ್ತಿಗೆ ಯುನೆಸ್ಕೋ ಮೂಲಕ ತರುವ ಪ್ರಯತ್ನಗಳು ಆಗಬೇಕು. ಹಾಗೆ ಆದಾಗ ವಿದೇಶಿ ಸಂಪನ್ಮೂಲಗಳು ಹರಿದುಬಂದು ಈ ಪ್ರದೇಶದಲ್ಲಿ ವಾಸಿಸುತ್ತಿರುವವರನ್ನು ತೆರವುಗೊಳಿಸಲು ಸಾಧ್ಯವಾಗುತ್ತದೆ ಎಂಬ ಅಂಶಗಳು ಇವೆ.



ಕೆ.ಎಂ. ಚಿಣ್ಣಪ್ಪ

ಇದರ ಮುಂದುವರೆದ ಭಾಗವೇ ಪಶ್ಚಿಮಘಟ್ಟ ಪ್ರದೇಶವನ್ನು ವಿಶ್ವಪಾರಂಪರಿಕ ತಾಣದ ವ್ಯಾಪ್ತಿಗೆ ಸೇರ್ಪಡೆಗೊಳಿಸಿದ್ದು ಮತ್ತು ಪಶ್ಚಿಮಘಟ್ಟವನ್ನು ಸಂರಕ್ಷಿಸಬೇಕು ಎಂದು ಹೇಳಿಕೊಂಡು ಮಾಧವ ಗಾಡ್ಗಿಲ್ ಹಾಗೂ ಕಸ್ತೂರಿರಂಗನ್ ಸಮಿತಿಯನ್ನು ರಚಿಸಿದ್ದಾಗಿದೆ. ಅರಣ್ಯ ಪ್ರದೇಶವನ್ನು ಸಂರಕ್ಷಿಸುವ ವಿಚಾರದಲ್ಲಿ ಯಾರ ತಕರಾರು ಇಲ್ಲ, ಆದರೆ ಖಾಸಗಿ ಪ್ರದೇಶವನ್ನು ಹಾಗೂ ಕಂದಾಯ ಗ್ರಾಮಗಳನ್ನು ಸೂಕ್ಷ್ಮ ಪರಿಸರ ವಲಯ ಎಂದು ಘೋಷಿಸುವುದಕ್ಕೆ ಮತ್ತು ಅವುಗಳ ಮೇಲೆ ನಿಯಂತ್ರಣಗಳನ್ನು ಹೇರುವುದಕ್ಕೆ ತಕರಾರುಗಳು ಇವೆ. ಪರಿಸರವಾದಿಗಳು ಎನ್ನುವವರಿಗೆ ಹತ್ತು ಹಲವು ಯೋಜನೆಗಳಿಗಾಗಿ ವಿದೇಶದಿಂದ ಆರ್ಥಿಕ ನೆರವು ಹರಿದುಬರುತ್ತದೆ. ಹಾಗಾಗಿ ಅವರುಗಳು ಪರಿಸರ ಸಂರಕ್ಷಣೆಯ ವಿಚಾರದಲ್ಲಿ ಅಪಾರವಾದ ಉತ್ಸುಕತೆಯನ್ನು ತೋರುತ್ತಾರೆ. ಪಶ್ಚಿಮಘಟ್ಟವಾಗಲಿ, ಪರಿಸರವಾಗಲಿ ಇಲ್ಲಿಯವರೆಗೆ ಸಂರಕ್ಷಿಸಲ್ಪಟ್ಟಿದ್ದು ಅರಣ್ಯ ಇಲಾಖೆಯವರಿಂದಲೂ ಅಲ್ಲ, ಪರಿಸರವಾದಿಗಳಿಂದಲೂ ಅಲ್ಲ, ಇದನ್ನು ರೈತಾಪಿ ವರ್ಗದವರು ಸಂರಕ್ಷಿಸಿಕೊಂಡು ಬಂದಿದ್ದಾರೆ.

ಒಂದು ಕಡೆ ಪಶ್ಚಿಮಘಟ್ಟ ಸಂರಕ್ಷಣೆಯ ವಿಚಾರಕ್ಕಾಗಿ ಮಾಧವ ಗಾಡ್ಗಿಲ್ ಸಮಿತಿ ರಚನೆಯಾಗಿದ್ದಾಗಲೇ, ಕರ್ನಾಟಕದಲ್ಲಿ ಅನಂತ ಹೆಗಡೆ ಆಶೀಸರ ಅವರ ಅಧ್ಯಕ್ಷತೆಯಲ್ಲಿ ಪಶ್ಚಿಮಘಟ್ಟ ಕಾರ್ಯಪಡೆ ಎಂಬುದು ಕಾರ್ಯ ನಿರ್ವಹಿಸುತ್ತಿತ್ತು, ಇದು ಕರ್ನಾಟಕದ ಹಲವಾರು ಪ್ರದೇಶಗಳನ್ನು ಸೂಕ್ಷ್ಮ ಪರಿಸರ ವಲಯ ಎಂದು ಘೋಷಿಸಿತ್ತು, ಸಂಪೂರ್ಣ ಕೊಡಗು ಜಿಲ್ಲೆಯನ್ನೇ ಇದರ ವ್ಯಾಪ್ತಿಗೆ ತರಲಾಗಿತ್ತು, ಪರಿಸರ ಸೂಕ್ಷ್ಮ ವಲಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡುವಂತಿಲ್ಲ ಎನ್ನುವ ನಿಯಂತ್ರಣವನ್ನು ಹೇರಲಾಗಿತ್ತು, ಇದನ್ನು ರಾಜ್ಯಪಾಲರ ಅಂಕಿತದೊಂದಿಗೆ ಅಧಿಕೃತಗೊಳಿಸಲಾಗಿತ್ತು, ಆ ನಂತರ ಇದು ಆಗಿನ ಸರಕಾರದ ಗಮನಕ್ಕೆ ಬಂದು, ಈ ಅಧಿಸೂಚನೆಯನ್ನು ತಾತ್ಕಾಲಿಕವಾಗಿ ಅಮಾನತ್ತಿನಲ್ಲಿ ಇಡಲಾಗಿತ್ತು,

ಇದು ಒಂದು ಭಾಗವಾದರೆ, ಮಾಧವ ಗಾಡ್ಗಿಲ್ ಸಮಿತಿಯವರು ವರದಿ ನೀಡುವ ವೇಳೆಯಲ್ಲಿ ಪಶ್ಚಿಮಘಟ್ಟ ಪ್ರದೇಶದಲ್ಲಿ ಪ್ರವಾಸ ಮಾಡಲೇ ಇಲ್ಲ, ಅಲ್ಲಿಯ ಜನರ ಅಭಿಪ್ರಾಯವನ್ನಾಗಲಿ, ಜನಪ್ರತಿನಿಧಿಗಳ ಅಭಿಪ್ರಾಯವನ್ನಾಗಲಿ ಸಂಗ್ರಹಿಸಲಿಲ್ಲ, ಸಮಿತಿಯ ರಚನೆಯ ವೇಳೆಯಲ್ಲಿ ಹಿತಾಸಕ್ತರ ಅಭಿಪ್ರಾಯವನ್ನು ಪಡೆಯಬೇಕು ಎಂದು ತಿಳಿಸಿದ್ದರೂ, ಭೇಟಿ ನೀಡದೆ, ಸೆಟಲೈಟ್ ಮೂಲಕ ಪ್ರದೇಶವನ್ನು ವೀಕ್ಷಿಸಿ, ಹಸಿರು ಕಂಡ ಪ್ರದೇಶವೆಲ್ಲವನ್ನೂ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಸೇರ್ಪಡೆಗೊಳಿಸಿತ್ತು ಮತ್ತು ಹಲವಾರು ಕಠಿಣ ನಿಯಂತ್ರಣಗಳನ್ನು ಹೇರಲಾಗಿತ್ತು, ಕೃಷಿ ಚಟುವಟಿಕೆಗೆ ಹಾಕಿದ್ದ ನಿಯಂತ್ರಣ ಕೃಷಿಕ ಕೃಷಿಯನ್ನು ತ್ಯಜಿಸುವಂತಹ ಪರಿಸ್ಥಿತಿಯನ್ನು ಉಂಟುಮಾಡಿತ್ತು, ಕೃಷಿಗೆ ರಾಸಾಯನಿಕ ಗೊಬ್ಬರವನ್ನು ಬಳಸಬಾರದು, ಸಾವಯವ ಗೊಬ್ಬರವನ್ನು ಮಾತ್ರ ಬಳಸಬೇಕು ಎಂದು ಶಿಫಾರಸ್ಸು ಮಾಡಲಾಗಿತ್ತು, ಇಂತಹ ಕಠಿಣ ನಿಯಂತ್ರಣಗಳ ವಿರುದ್ಧ ಈ ಭಾಗದ ಜನರು ಸಿಡಿದೆದ್ದ ಕಾರಣ, ಇದನ್ನು ಪರಿಶೀಲಿಸಲು ಕಸ್ತೂರಿರಂಗನ್ ಸಮಿತಿಯನ್ನು ರಚಿಸಲಾಗಿತ್ತು, ಈ ಸಮಿತಿ ಸಂಪೂರ್ಣವಾಗಿ ಅಧ್ಯಯನ ನಡೆಸದಿದ್ದರೂ, ಹವಾ ನಿಯಂತ್ರಿತ ಕೊಠಡಿಯಲ್ಲಿ ಕುಳಿತುಕೊಳ್ಳದೆ ಒಂದಿಷ್ಟು ಭಾಗಗಳಿಗೆ ಪ್ರವಾಸ ಮಾಡಿ, ಜನಾಭಿಪ್ರಾಯವನ್ನು ಸಂಗ್ರಹಿಸುವ ಪ್ರಯತ್ನವನ್ನು ಮಾಡಿತ್ತು.

ಇದರ ಫಲವಾಗಿ ಕಸ್ತೂರಿರಂಗನ್ ವರದಿಯಲ್ಲಿ ಪಶ್ಚಿಮಘಟ್ಟವನ್ನು ಎರಡು ಪ್ರದೇಶವನ್ನಾಗಿ ಗುರುತಿಸಿತು. ನೈಸರ್ಗಿಕ ವಲಯ ಮತ್ತು ಸಾಂಸ್ಕೃತಿಕ ವಲಯ ಎಂದು ಎರಡು ಭಾಗವನ್ನಾಗಿಸಿ, ಸಾಂಸ್ಕೃತಿಕ ವಲಯದಲ್ಲಿ ಯಾವುದೇ ನಿಯಂತ್ರಣವನ್ನು ಹೇರಬಾರದೆಂಬ ವಿಚಾರಕ್ಕೆ ಮುಂದಾಗಿತ್ತು. ವಾಸ್ತವದಲ್ಲಿ ಇದು ಸ್ವಾಗತಾರ್ಹವಾಗಿತ್ತು. ಅರಣ್ಯ ಪ್ರದೇಶವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಯಾರ ತಕರಾರೂ ಇಲ್ಲ, ಆದರೆ ಈ ವರದಿಯ ಆಧಾರದಲ್ಲಿ "ಅತೀ ಸೂಕ್ಷ್ಮ ವಲಯ" ಗುರುತಿಸುವಾಗ, ಕಂದಾಯ ಗ್ರಾಮಗಳನ್ನು ಅಂದರೆ ಜನಜೀವನವುಳ್ಳ ಪ್ರದೇಶವನ್ನು ಕೂಡ ಈ ವ್ಯಾಪ್ತಿಗೆ ತಂದಿತ್ತು, ಕರ್ನಾಟಕ ರಾಜ್ಯದಲ್ಲಿ ಒಟ್ಟು 1,200 ಗ್ರಾಮಗಳನ್ನು ಅತೀ ಸೂಕ್ಷ್ಮ ವಲಯಕ್ಕೆ ಸೇರ್ಪಡೆಗೊಳಿಸಿತು. ಇದರಿಂದಾಗಿ ಜನರು ಈ ವರದಿಯನ್ನು ವಿರೋಧಿಸಲು ತೊಡಗಿದರು.

ಕಸ್ತೂರಿರಂಗನ್ ವರದಿಯೊಂದನ್ನೇ ಗಮನದಲ್ಲಿಟ್ಟುಕೊಂಡು ಪರಿಸರ ಸಂರಕ್ಷಣೆಯ ವಿಚಾರದ ಬಗ್ಗೆ ಆಕ್ಷೇಪ ಎನ್ನುವ ಮಾತನ್ನು ಆಡುವಂತಿಲ್ಲ. ಪ್ರತಿಯೊಬ್ಬರು ಆಕ್ಷೇಪಿಸುತ್ತಿರುವುದು ಖಾಸಗಿ ಜಮೀನಿಗೆ ಸಂಬಂಧಪಟ್ಟಂತೆ ನಿಯಂತ್ರಣಗಳ ಬಗ್ಗೆ ಮಾತ್ರ ಎಂಬುದನ್ನು ಗಮನಿಸಬೇಕಾಗಿರುವುದು ಅಗತ್ಯವಾಗಿದೆ. ಈ ಭಾಗದ ಜನತೆಗೆ ಅಪಾಯ ವಿರುವುದು ಬಫರ್ ಜೋನ್ ಘೋಷಣೆ, ವಿಶ್ವಪಾರಂಪರಿಕ ತಾಣದ ಘೋಷಣೆ ಹಾಗೂ ಡೀಮ್ಡ್ ಫಾರೆಸ್ಟ್ ಘೋಷಣೆ, ಇದರ ಜೊತೆಯಲ್ಲಿಯೇ ಸೂಕ್ಷ್ಮ ಪರಿಸರತಾಣದ ಘೋಷಣೆ. ಬಫರ್ ಜೋನ್ ಎಂದರೆ ಅರಣ್ಯ ಪ್ರದೇಶಗಳಿಂದ 10 ಕಿ.ಮೀ.ವರೆಗೆ ಇರುವ ಪ್ರದೇಶಗಳಿಗೆ ನಿಯಂತ್ರಣ ಹೇರುವುದಾಗಿದೆ. ಈ ನಿಯಂತ್ರಣ ಬಂದಾಗ ಅಭಿವೃದ್ಧಿ ಕಾರ್ಯಗಳನ್ನು ಮಾಡುವಂತೆ ಇಲ್ಲ, ಅರಣ್ಯ ಇಲಾಖೆಯ ಅನುಮತಿಗಳು ಎಲ್ಲದಕ್ಕೂ ಬೇಕಾಗುತ್ತದೆ. ರಸ್ತೆ ಅಭಿವೃದ್ಧಿಯಿಂದ ಮೊದಲ್ಗೊಂಡು, ಕಟ್ಟಡ ದುರಸ್ತಿಗೂ ಅನುಮತಿಯನ್ನು ಅರಣ್ಯ ಇಲಾಖೆಯಿಂದ ಪಡೆಯಬೇಕಾಗುತ್ತದೆ. ಪರಿಸರವ್ಯಾಧಿಗಳು ಇಂತಹ ನಿಯಂತ್ರಣಗಳು ಇಲ್ಲ ಎಂದು ಹೇಳುತ್ತಾರೆ. ಈ ನಿಯಂತ್ರಣಗಳು ಲಿಖಿತವಾಗಿ ಇಲ್ಲ, ಆದರೆ ಅಭಿವೃದ್ಧಿ ಕಾರ್ಯಕ್ಕೆ ಮುಂದಾದಾಗ ಅರಣ್ಯ ಇಲಾಖೆ ಅದಕ್ಕೆ ತಡೆಮಾಡುತ್ತದೆ. ಇದಕ್ಕೆ ಒಂದು ನಿದರ್ಶನ

ಸುಳ್ಳುಗಳೇ ಕಾಯಕ

ಇತ್ತೀಚೆಗೆ ಈ ಭಾಗದ ಪರಿಸರವಾದಿ ಕೆ.ಎಂ.ಚಿಣ್ಣಪ್ಪ ಎಂಬವರು ಪತ್ರಿಕಾಗೋಷ್ಠಿಯೊಂದನ್ನು ನಡೆಸಿ "ನಾಗರಹೊಳೆ ಭಾಗದಲ್ಲಿ 50 ಸಾವಿರಕ್ಕೂ ಹೆಚ್ಚು ಜಾನುವಾರುಗಳನ್ನು ಮೇವಿಗಾಗಿ ಬಿಡುತ್ತಾರೆ. ಇದರಿಂದ ಕಾಡು ನಾಶವಾಗುತ್ತದೆ. ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ" ಎಂದು ಹೇಳಿದ್ದರು. ಇಷ್ಟೊಂದು ಗೋವುಗಳು ಎಲ್ಲಿ ಇವೆ ಎಂಬುದನ್ನು ಅವರೇ ಹೇಳಬೇಕು. ನಾಗರಹೊಳೆ ಭಾಗದಲ್ಲಿ ಯಾವ ಪ್ರವಾಸಿಗರೂ 50 ಸಾವಿರ ಹಾಗಿರಲಿ, 500 ಗೋವನ್ನು ಕೂಡ ಕಂಡಿರಲು ಸಾಧ್ಯವಿಲ್ಲ.

ಮತ್ತೊಂದು ಕಡೆ "ಈ ಗೋವುಗಳು ಉಚ್ಚೆ ಉಯ್ಯುವುದರಿಂದ ಮಣ್ಣು ಮತ್ತಾಗುತ್ತದೆ" ಎಂದು ಮತ್ತೊಬ್ಬ ಪರಿಸರವಾದಿ ಬರೆದಿದ್ದರು. ಹಾಗಾದರೆ ಈ ಪ್ರದೇಶದಲ್ಲಿ ಇರುವಂತಹ ಇತರೇ ಪ್ರಾಣಿಗಳು ಮಲಮೂತ್ರ ವಿಸರ್ಜನೆ ಮಾಡುವುದಿಲ್ಲವೇ ಎಂಬ ಬಗ್ಗೆಯೂ ಅವರೇ ವಿವರಣೆಯನ್ನು ನೀಡಬೇಕು.


ಕೊಡಗು ಜಿಲ್ಲೆಯಲ್ಲಿ ಖಾಸಗಿ ಜಮೀನಿನಲ್ಲಿ ಮರದ ಮೇಲೆ ಹಕ್ಕು ಇಲ್ಲಿಯವರೆಗೆ ನೀಡಿಲ್ಲ, ಈ ಬಗ್ಗೆ ಬಹಳಷ್ಟು ವರ್ಷಗಳಿಂದ ಎ.ಕೆ.ಸುಬ್ಬಯ್ಯ ಹೋರಾಟ ಮಾಡುತ್ತಿದ್ದಾರೆ. ಮರದ ಹಕ್ಕು ಎಂದರೆ ಮರ ಕಡಿಯಲು ಅವಕಾಶ ಎಂದಲ್ಲ, ಈಗ ಜಾಗ ಮಾಲಿಕನದ್ದು, ಮರ ಸರಕಾರದ್ದು ಎಂದಿದೆ. ಹಾಗಾಗಿ ತನ್ನದಲ್ಲದ ಮರವನ್ನು ಯಾರೂ ಸಂರಕ್ಷಿಸಲು ಪ್ರಯತ್ನಿಸುವುದಿಲ್ಲ, ತನ್ನ ತೋಟದಲ್ಲಿರುವ ಮರವನ್ನು ತಾನೇ ಕದ್ದು ಮಾರುತ್ತಾನೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಮರದ ಹಕ್ಕನ್ನು ಕೇಳಿದರೆ, ಕೆ.ಎಂ. ಚಿಣ್ಣಪ್ಪ ಎಂಬ ನಿವೃತ್ತ ಅರಣ್ಯಾಧಿಕಾರಿ ಹಾಗೂ ಸ್ವಯಂಸೇವಾ ಸಂಸ್ಥೆಯೊಂದರ ಮಾಲಿಕ (!) ಮಂಡ್ಯಕ್ಕೆ ತೆರಳಿ ಜಿ.ಮಾದೇಗೌಡರನ್ನು ಭೇಟಿಯಾಗಿ "ಕೊಡಗಿನಲ್ಲಿ ಅರಣ್ಯ ಪ್ರದೇಶದಲ್ಲಿ ಮರ ಕಡಿಯಲು ಅನುಮತಿ ಕೇಳುತ್ತಿದ್ದಾರೆ. ಹಾಗೆ ಮರ ಕಡಿದರೆ ಕೊಡಗಿನಲ್ಲಿ ಮಳೆಯಾಗುವುದಿಲ್ಲ, ಮಂಡ್ಯಕ್ಕೆ ನೀರು ಸಿಗುವುದಿಲ್ಲ" ಎಂದು ಅವರನ್ನು ಕೊಡಗಿನ ಜನರ ವಿರುದ್ಧ ಎತ್ತಿ ಕಟ್ಟಿದ್ದರು. ಪರಿಣಾಮವಾಗಿ ಮಾದೇಗೌಡರು ಕೊಡಗಿನ ಜನರಿಗೆ ಮರದ ಹಕ್ಕು ನೀಡಬಾರದು ಎಂಬ ಹೇಳಿಕೆಯನ್ನು ನೀಡಿದ್ದರು.

ಕೊಡಗಿನಲ್ಲಿ 6,000 ಎಕ್ರೆ ಮೀಸಲು ಅರಣ್ಯ ರಬ್ಬರ್ ತೋಟವಾಗಿದೆ. ಎಲ್ಲಾ ನಿರ್ಬಂಧಗಳನ್ನು ಉಲ್ಲಂಘನೆ ಮಾಡಿದ್ದಾರೆ. ಸರಕಾರಕ್ಕೆ ಗುತ್ತಿಗೆ ಮೊತ್ತವನ್ನು ಕೂಡ ಖಾಸಗಿ ಗುತ್ತಿಗೆದಾರರು 1904ರಿಂದ ಇಲ್ಲಿಯವರೆಗೆ ಪಾವತಿಸಿಲ್ಲ, ರಾಜ್ಯ ಉಚ್ಚ ನ್ಯಾಯಾಲಯ ಇವರನ್ನು ತೆರವುಗೊಳಿಸಬೇಕು ಎಂದು ಸಾಕಷ್ಟು ಬಾರಿ ಹೇಳಿದೆ. ಈ ಬಗ್ಗೆ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡೋಂಗಿ ಪರಿಸರವಾದಿಗಳು ಚಕಾರವೆತ್ತುವುದಿಲ್ಲ, ಕಂದಾಯ ಇಲಾಖೆಯ ಸಿ ಡಿ ಜಮೀನು ಅರಣ್ಯ ಇಲಾಖೆಗೆ ಹಸ್ತಾಂತರಿಸಲ್ಪಟ್ಟಿತ್ತು, ಅದನ್ನು ಕಂದಾಯ ಇಲಾಖೆ ಹಿಂದಕ್ಕೆ ಕೇಳಿದರೆ, ಅರಣ್ಯ ಇಲಾಖೆ ಆ ಜಮೀನು ತನ್ನದೆಂದು ಹೇಳುತ್ತಿದೆ. ಇದರಿಂದ ಕೊಡಗಿನಲ್ಲಿ ನಿರ್ವಸತಿಗರಿಗೆ ಮಂಜೂರು ಮಾಡಲು ಜಮೀನು ಇಲ್ಲದಂತಾಗಿದೆ. ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಾದರೂ ಅರಣ್ಯ ಇಲಾಖೆ ಇದನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಬೇಕಾಗಿದೆ. ಈ ಬಗ್ಗೆಯೂ ಡೋಂಗಿ ಪರಿಸರವಾದಿಗಳು ಮಾತನಾಡುವುದಿಲ್ಲ,

ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಪರಿಸರವಾದಿಗಳು ಒಬ್ಬರಿಗೆ ಒಬ್ಬರು ಪೂರಕವಾಗಿ ಕಾರ್ಯ ನಿರ್ವಹಿಸುತ್ತಾರೆ. ಬಹಳಷ್ಟು ಪರಿಸರವಾದಿಗಳು ಎನ್.ಜಿ.ಓ.ಗಳನ್ನು ರಚಿಸಿಕೊಂಡು ವಿದೇಶದಿಂದ ದೇಣಿಗೆಯನ್ನು ಪಡೆಯುತ್ತಾರೆ. ಎನ್.ಜಿ.ಓ. ರಚನೆಗೆ ಅರಣ್ಯ ಅಧಿಕಾರಿಗಳ ಕುಮ್ಮಕ್ಕು ಕೂಡ ಇರುತ್ತದೆ. ಕೆಲವು ಅರಣ್ಯ ಅಧಿಕಾರಿಗಳು ಬೇನಾಮಿ ಹೆಸರಿನಲ್ಲಿ ಕಾರ್ಯ ನಿರ್ವಹಿಸಿದರೆ, ಮತ್ತೆ ಕೆಲವರು ನಿವೃತ್ತಿಯ ನಂತರ ಎನ್.ಜಿ.ಓ.ಗಳನ್ನು ರಚಿಸುತ್ತಾರೆ. ವಿಶ್ವದ ತಾಪಮಾನ ಹೆಚ್ಚಾಗುತ್ತಿದೆ. ಹಾಗಾಗಿ ಹಸಿರು ಸಂರಕ್ಷಿಸಬೇಕು ಎಂದು ಜನರನ್ನು ಸುಲಭದಲ್ಲಿ ಮರುಳು ಮಾಡಬಲ್ಲ ವಿಚಾರವನ್ನು ಪ್ರಸ್ತಾಪಿಸಿ, ತಮ್ಮಿಂದಲೇ ಅರಣ್ಯ ಸಂರಕ್ಷಣೆ ಹಾಗೂ ವನ್ಯಪ್ರಾಣಿಗಳ ಸಂರಕ್ಷಣೆ ಎಂದು ಹೇಳಿಕೊಂಡು ಬಡ ಕೃಷಿಕ ವರ್ಗದವರನ್ನು ಹಿಂಸಿಸುವ ಹಲವಾರು ಯೋಜನೆಗಳನ್ನು ರೂಪಿಸುತ್ತಾ ಬಂದಿದ್ದಾರೆ. ಅಲ್ಲದೆ ಅರಣ್ಯದಲ್ಲಿರುವಂತಹ ಬುಡಕಟ್ಟು ಜನಾಂಗದವರನ್ನು ಮತ್ತು ತಲತಲಾಂತರಗಳಿಂದ ವಾಸಿಸುತ್ತಿರುವವರನ್ನು ಕಾಡಿನಿಂದ ಹೊರಹಾಕುವ ಸಂಚನ್ನು ರೂಪಿಸುತ್ತಾರೆ.

ಪಶ್ಚಿಮಘಟ್ಟ ಪ್ರದೇಶಕ್ಕೆ ವಿಶ್ವಪಾರಂಪರಿಕ ತಾಣದ ಪಟ್ಟ ದೊರೆಯುತ್ತದೆ. ಹಾಗಾಗಿ ಪಶ್ಚಿಮಘಟ್ಟವನ್ನು ಸಂರಕ್ಷಿಸಬೇಕು ಎಂದು ಪ್ರತಿಪಾದಿಸುತ್ತಾ ಎನ್.ಜಿ.ಓ.ಗಳು ಬಂದಿದ್ದವು. ಇದರಿಂದ ಆಗುವ ಪ್ರಯೋಜನವೇನು ಎಂದರೆ ಪ್ರವಾಸಿಗರನ್ನು ಆಕರ್ಷಿಸಲು ಸಾಧ್ಯ ಎಂದು ಪರಿಸರವಾ(ವ್ಯಾ)ದಿಗಳು ಹೇಳುತ್ತಿದ್ದರು. ಒಂದು ಕಡೆ "ಪ್ರವಾಸೋದ್ಯಮವನ್ನು ನಿಯಂತ್ರಿಸಬೇಕು ಪ್ರವಾಸೋದ್ಯಮದಿಂದ ನಮ್ಮ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಸಂಸ್ಕೃತಿ ನಾಶವಾಗುತ್ತದೆ" ಎಂದು ಹೇಳುವ ಮೂಲಭೂತವಾದದ ಮುಖವಾಡವನ್ನು ಹಾಕಿಕೊಳ್ಳುವ ಇದೇ ಪರಿಸರವಾದಿಗಳು, ಮತ್ತೊಂದು ಕಡೆ ಪ್ರವಾಸೋದ್ಯಮ ಹೆಚ್ಚಾಗುತ್ತದೆ ಎಂದು ಹೇಳುತ್ತಾರೆ ಅಂದರೆ ಅವರಲ್ಲಿ ದ್ವಂದ್ವ ಇದೆ ಎಂಬುದು ಖಚಿತ.


...ಹುಬ್ಬಳ್ಳಿ: 'ತಿರುಪತಿ' ಟ್ರೇಡರ್ಸ್‌ಗೆ ಕನ್ನ ಹಾಕಿದ ಕರಡಿಗಳು



...ತಿರುಪತಿ ಹುಂಡಿ ಭಕ್ತರ ಜೇಬು ಖಾಲಿ ಮಾಡಿಸು... ಕ್ಕೆ ಫೇಮಸ್ಸು. ಅಂಥಾ ತಿರುಪತಿಯ ಹೆಸರಿಟ್ಟುಕೊಂಡ ...ಡರ್ ಕಂಪನಿಯ ಅಜಮಾಸು ಒಂದು ಕೋಟಿಗೂ ...ಗಂಟನ್ನು ಕರಡಿಗಳು ಗೆಬರಿಕೊಂಡ ಘಟನೆ ...ಬ್ಬಳ್ಳಿಯಲ್ಲಿ ನಡೆದಿದೆ. ಗಾಬರಿ ಬೇಡ, ಕನ್ನ ಹಾಕಿದ್ದು ...ನ ಕರಡಿಗಳಲ್ಲ; ಹುಬ್ಬಳ್ಳಿಯ ದಿ ಗ್ರೇಟ್ ದಗಾಕೋರ ...ಮಾನಗಳಾದ ಮಲ್ಲಿಕಾರ್ಜುನ ಕರಡಿ ಮತ್ತು ಅವನ ಮಹಾಂತೇಶ ಕರಡಿ. ಅವರಿಗೆ ... ನೀಡಿದ್ದು ಮತ್ತೊಬ್ಬ ಘಟಿಂಗ ...ಶ್ ಕೋರಿ ಶೆಟ್ಟರ್. ಈ ಮೂವರೂ ...ಬ್ಬಳ್ಳಿ ಎಪಿಎಂಸಿಯ ಹೆಗ್ಗಣಗಳಿದ್ದಂತೆ. ... ಸಂತಾನಗಳು ಮಲ್ಲಿಕಾರ್ಜುನ ...ಡರ್ಸ್ ಹೆಸರಲ್ಲಿ ದಲ್ಲಾಳಿ ಅಂಗಡಿ ...ಟ್ಟಿಕೊಂಡಿದ್ದರೆ, ಪ್ರಕಾಶ್ ಕೋರಿ ...ರ್ ಟ್ರಾನ್ಸ್‌ಪೋರ್ಟ್ ಕಂಪನಿ ...ಮತ್ತಾನೆ. ಅಸಲಿಗೆ ಮಲ್ಲಿಕಾರ್ಜುನ ...ಯಾದಲಿ, ಅವನ ಮಗ ಮಹಾಂತೇಶ ...ಯಾಗಲಿ ಯಾರ ಎಗ್ಗಿಲ್ಲದಂತೆ ...ಯದರೋಡೆ ನಡೆಸುತ್ತಿರೋದಕ್ಕೆ ತಮ್ಮ ...ಗೆ ಬಿಜೆಪಿಯ ಶಂಕರಣ್ಣಾ ಮುನವಳ್ಳಿ ಇದ್ದಾನೆಂಬ ...ರ್ಯವೇ ಕಾರಣ. ಹೌದು, ಕರಡಿಗಳಿಗೆ ಶಂಕರ ಮುನವಳ್ಳಿ ...ದರ ಸಂಬಂಧಿ. ಅದಕ್ಕಿಂತಲೂ ಹೆಚ್ಚಾಗಿ ಅವರು ...ಡುವ ಆಲ್‌ಮೋಸ್ಟ್ ಎಲ್ಲಾ ಹಲ್ಕಾ ಕೆಲಸಗಳಿಗೆ ...ಡ್‌ಫಾದರ್! ಅಸಲಿಗೆ ಈ ಮುನವಳ್ಳಿ ತನ್ನ ಹೆಸರನ್ನೇ ... ಇಟ್ಟುಕೊಳ್ಳಲಾಗದ ಮನುಷ್ಯ, ಗುರು ಸಿದ್ದೇಶ್ವರ ...ಠಕಿನ ಅಪರಾತಪರಾದಲ್ಲಿ ಕೋರ್ಟ್ ಅಲೆಯುತ್ತಿರುವ ..., ಮೂರು ಸಾವಿರ ಮಠಕ್ಕೂ ಬತ್ತಿ ಇಟ್ಟು ಮಠದ ...ಮನ್ನೇ ಕೆಎಲ್‌ಇ ಸೊಸೈಟಿಗೆ ಧಾರೆ ಎರೆದು ಕೊಟ್ಟವನು. ... ದೊಡ್ಡ ಆಸ್ಪತ್ರೆ ತೆರೆದು ಬಡವರ ಆರೋಗ್ಯ ಸೇವೆ ...ಡುತ್ತೇನೆ ಅಂತಾ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ಮೂಲಕ ...ಗೆಗೆ ನಿಲ್ಲುವುದು ಈತನ ಮಾಸ್ಟರ್ ಪ್ಲಾನ್. ಈ ...ದೆ ಕಾಂಗ್ರೆಸ್‌ನಲ್ಲಿದ್ದು ಎಲ್ಲಾ ಸುಖ ಅನುಭವಿಸಿ ಒಮ್ಮೆ ...ಎಲ್‌ಎ ಚುನಾವಣೆಗೆ ನಿಂತು ಮಕಾಡೆ ಮಲಗಿ ನಂತರ ...ದೀಶ್ ಶೆಟ್ಟರನ ಬೆನ್ನು ಬಿದ್ದ ಅಕ್ಕಿ ವ್ಯಾಪಾರಿ ಮುನವಳ್ಳಿ ...ರಿ ಕೆಎಲ್‌ಇ ನಿರ್ದೇಶಕನೂ ಹೌದು. ಅಂತವನ ...ಪೋರ್ಟ್ ಇದೆ ಅಂತಲೇ ಕರಡಿಗಳು ಕಂಡಕಂಡವರ ಮೈಮೇಲೆ ಬಿದ್ದು ಪರಚಾಡುತ್ತಿರೋದು.

ಅಸಲೀ ಸಂಗತಿಗೆ ಬರುವುದಾದರೆ ಹುಬ್ಬಳ್ಳಿಯ ಆದರ್ಶ ನಗರದಲ್ಲಿ ವಾಸಿಸುವ ಅಶೋಕ್ ಗೋಯಲ್ ಎಂಬ ರಾಜಸ್ತಾನಿ ವ್ಯಾಪಾರಿ ತಾರಿಹಾಳದ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ತಿರುಪತಿ ಆಯಿಲ್ ಎಕ್ಸ್‌ಟ್ರಾಕ್ಟ್ ಪ್ರೈ. ಲಿಮಿಟೆಡ್ ಕಂಪನಿ ನಡೆಸುತ್ತಿದ್ದಾರೆ. ಹತ್ತಿಕಾಳಿನಿಂದ ಎಣ್ಣೆ ತೆಗೆದು ವಿವಿಧ ರಾಜ್ಯಗಳ ರಿಫೈನರಿ ಕಂಪನಿಗೆ ಕಳಿಸುವುದು ಅವರ ಕಸುಬು. ಇದಲ್ಲದೇ ಟೈಲ್ಸ್ ವ್ಯವಹಾರವೂ ಸೇರಿದಂತೆ ಹಲವಾರು ಉದ್ದಿಮೆಗಳಲ್ಲೂ ತೊಡಗಿರುವ ಆತ ತನ್ನ ಆಯಿಲ್ ಕಂಪನಿಯ ಸಂಪೂರ್ಣ ಜವಾಬ್ದಾರಿಯನ್ನು ಅಲ್ಲಿನ ಕೆಲಸಗಾರರ ಮೇಲೇ ಬಿಟ್ಟಿದ್ದ. ಸ್ವತಃ ನೋಡಿಕೊಳ್ಳುವ ವ್ಯವಧಾನವೂ ಆತನಿಗೆ ಇರಲಿಲ್ಲ.

ಒಂಬತ್ತು ವರ್ಷಗಳ ಹಿಂದೆ ಆರಂಭವಾದ ಈ ತಿರುಪತಿ ಟ್ರೇಡರ್ಸ್ ತನ್ನ ಪ್ರಾಮಾಣಿಕ ವ್ಯವಹಾರದಿಂದ ಗ್ರಾಹಕರ ವಿಶ್ವಾಸ ಗಳಿಸಿದೆ. ಹತ್ತಿಕಾಳು ಗೋಡೌನ್ ಸೇರಿದ ಕೂಡಲೇ ಚೆಕ್ ಮೂಲಕ ಸ್ಥಳದಲ್ಲೇ ಬಿಲ್ ಸೆಟ್ಲ್ ಮಾಡುವುದು ಇಲ್ಲಿನ ವಾಡಿಕೆ. ಹಾಗಾಗಿಯೇ ಧಾರವಾಡ, ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಗದಗ, ಹಾವೇರಿ ಮುಂತಾದ ಜಿಲ್ಲೆಗಳಿಂದ ವಿವಿಧ ವ್ಯಾಪಾರಸ್ಥರು ಹತ್ತಿ ಕಾಳನ್ನು ಪೂರೈಸುತ್ತಾರೆ.




ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದ ಖದೀಮ ಅಪ್ಪ-ಮಗ ಮಲ್ಲಿಕಾರ್ಜುನ ಕರಡಿ ಹಾಗೂ ಮಹಾಂತೇಶ ಕರಡಿ, ನಕಲಿ ಬಿಲ್ ಸೃಷ್ಟಿಸುವ ಚಾಲಾಕಿ ಪ್ರಕಾಶ ಕೋರಿ ಶೆಟ್ಟರ್ ಜೊತೆಗೂಡಿ ಅಶೋಕ್ ಗೋಯಲ್‌ನ ಖಜಾನೆ ಖಾಲಿ ಮಾಡಲು ಪ್ಲಾನ್ ಒಂದನ್ನು ಹೆಣೆದಿದ್ದರು. ಸಿಕ್ಕಿಬಿದ್ದರೆ ಗೂಂಡಾಗಿರಿಯಿಂದ ಬಚಾವಾಗುವುದು, ಅದಕ್ಕೂ ಮೀರಿ ಪ್ರಕರಣ ಪೊಲೀಸ್ ಠಾಣೆಯ ಮೆಟ್ಟಿಲೇರಿದರೆ ಶಂಕ್ರಣ್ಣಾ ಮುನವಳ್ಳಿ ಮೂಲಕ ಮ್ಯಾನೇಜ್ ಮಾಡುವುದು ಇವರ ತಂತ್ರವಾಗಿತ್ತು. ಅದರಂತೆ 2014 ಜನವರಿಯಿಂದ ತಮ್ಮ ಎಪಿಎಂಸಿಯ ಮಲ್ಲಿಕಾರ್ಜುನ ಟ್ರೇಡರ್ಸ್‌ನ ಮುಖಾಂತರ ಗೋಯಲ್‌ಗೆ ಹತ್ತಿಕಾಳು ಪೂರೈಸಲು ಪ್ರಾರಂಭಿಸಿದರು.

ಗೊಯೆಲ್‌ನ ಗೋಡೌನ್‌ನಲ್ಲಿರುವ ವ್ಯವಸ್ಥೆಯ ಪ್ರಕಾರ ಯಾವುದೇ ಒಂದು ಲಾರಿಯ ಲೋಡು ಬಂತೆಂದರೆ ಮೊದಲು ಮ್ಯಾನೇಜರ್ ಸಾಧಿಕ್ ಅಲಿ ಲಾರಿ ಸಮೇತ ತೂಕ ಹಾಕಿಕೊಳ್ಳುತ್ತಾನೆ. ನಂತರ ಹಮಾಲರು ಅದನ್ನು ಇಳಿಸಿಕೊಳ್ಳುತ್ತಾರೆ. ಕೊನೆಗೆ ಖಾಲಿ ಟ್ರಕ್‌ನ್ನು ತೂಕ ಮಾಡಿಸಿ, ಆ ತೂಕವನ್ನು ಲೋಡೆಡ್ ತೂಕದಲ್ಲಿ ಕಳೆದು ದಾಸ್ತಾನಿನ ತೂಕ ಇಂತಿಷ್ಟು ಅಂತ ಸಾಧಿಕ್ ಅಲಿ ಬರೆದ ನಂತರವಷ್ಟೆ ಕಚೇರಿಯ ಕಾರಕೂನ ವ್ಯಾಪಾರಿಗಳಿಗೆ ಚೆಕ್ ನೀಡುವುದು.

ಒಟ್ಟಾರೆ ವ್ಯವಹಾರದಲ್ಲಿ ಮ್ಯಾನೇಜರ್ ಸಾದಿಕ್ ಅಲಿಯೇ ಕೀ ಆಸಾಮಿ ಎಂಬುದನ್ನು ಲೆಕ್ಕ ಹಾಕಿದ ಕರಡಿ ಹಾಗೂ ಪ್ರಕಾಶ್ ಕೋರಿ ನಿಧಾನಕ್ಕೆ ಸಾಧಿಕ್‌ನನ್ನು ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದರು. ಅವನ ಮೂಲಕ ಹತ್ತಿಕಾಳುಗಳನ್ನೇ ತರದೆ ಮಲ್ಲಿಕಾರ್ಜುನ ಟ್ರೇಡರ್ಸ್‌ನಿಂದ ಇಂತಿಷ್ಟು ತೂಕದ ಲೋಡನ್ನು ಗೋಡೌನ್‌ನಲ್ಲಿ ಇಳಿಸಿಕೊಳ್ಳಲಾಗಿದೆ ಅಂತ ರಶೀದಿ ಪಡೆದು ಕಚೇರಿಯ ಕಾರಕೂನನ ಮುಂದೆ ಹಿಡಿಯುತ್ತಿದ್ದರು. ಸಾದಿಕ್‌ನ ಸಹಿ ಇದ್ದ ರಶೀದಿ ನೋಡುತ್ತಿದ್ದಂತೆಯೇ ಕಾರಕೂನ ಯಥಾಪ್ರಕಾರ ಚೆಕ್ ಕೊಟ್ಟು ಬಿಡುತ್ತಿದ್ದ. ಮಾಲು ಮಾರದೆಯೇ ಬೋಗಸ್ ರಶೀದಿ ಮೂಲಕ ಹೀಗೆ ಗೋಯಲ್ ಖಜಾನೆಯಿಂದ ಸತತ ಐದಾರು ತಿಂಗಳು ಕೋಟಿಗಟ್ಟಲೆ ಹಣ ಸುಲಿಯುತ್ತಲೇ ಬಂದಿದ್ದರು. ಇಂಥಾ ಹಡಿಬಿಟ್ಟಿ ದುಡ್ಡಿನಿಂದಲೇ ಸಾದಿಕ್ ಅಲಿ ಎರಡು ಹೊಸ ಮೋಟಾರ್ ಸೈಕಲ್‌ಗಳನ್ನು ಖರೀದಿಸಿದ್ದರೆ, ಟ್ರಾನ್ಸ್‌ಪೋರ್ಟ್ ಕಂಪನಿ ಮಾಲೀಕ ಕೋರಿಶೆಟ್ಟರ್ ಚಾವರ್‌ಲೆಟ್ ಕಾರನ್ನು ಖರೀದಿಸಿದ್ದ.

ಕೊನೆಗೂ ಬಯಲಾಯ್ತು

ಮ್ಯಾನೇಜರ್ ಸಾದಿಕನನ್ನೂ ಸೇರಿ ಆ ನಾಲ್ವರು ಖದೀಮರ ನಸೀಬು ಕೈಕೊಟ್ಟಿದ್ದು ಜುಲೈ 7ರಂದು. ಅವತ್ತು ಬೆಳ್ಳಂಬೆಳಗ್ಗೆ ಲಾರಿಯಿಂದ ಹತ್ತಿಕಾಳು ಇಳಿಸಿಕೊಂಡದ್ದಾಗಿ ಮ್ಯಾನೇಜರ್ ಸಾದಿಕ್ ಅಲಿಯಿಂದ ಬಿಲ್ ಪಡೆದು ರೂ. 4,83,285 ಚೆಕ್ಕನ್ನು ಪಡೆದಿದ್ದರು. ಅಚಾನಕ್ಕಾಗಿ ಅದೇ ದಿನ ಮಾಲೀಕ ಅಶೋಕ್ ಗೊಯೆಲ್ ಗೋಡೌನ್‌ಗೆ ಬಂದಿದ್ದ ಮಾಮೂಲಿಯಾಗಿ ವಿಚಾರಿಸುವಂತೆ ಎಷ್ಟು ಲೋಡ್ ಬಂದಿದೆ ಎಂದು ಮ್ಯಾನೇಜರ್ ಅಲಿಯನ್ನು ಆತ ವಿಚಾರಿಸಿದ್ದಾನೆ. ಉತ್ತರವಾಗಿ 3 ಟ್ರಕ್ ಅನ್‌ಲೋಡ್ ಆಗಿದೆ ಎಂದು ಸಾಧಿಕ್ ಹೇಳಿದ್ದ. ಪಕ್ಕಾ ವ್ಯಾಪಾರಸ್ಥನಾದ ಗೋಯೆಲ್‌ಗೆ ಇಷ್ಟು ಬೆಳಗ್ಗೆ 3 ಟ್ರಕ್ ಅನ್‌ಲೋಡ್ ಆಗಲು ಹೇಗೆ ಸಾಧ್ಯ? ಎನ್ನುವ ಅನುಮಾನ ಶುರುವಾಗಿತ್ತು. ಕೂಡಲೇ ಅಲ್ಲಿದ್ದ ಹಮಾಲಿಗಳನ್ನು ಕರೆದು ವಿಚಾರಿಸಿದಾಗ ಬೆಳಗ್ಗಿನಿಂದ ತಾವು ಅನ್‌ಲೋಡ್ ಮಾಡಿರುವುದು ಎರಡೇ ಟ್ರಕ್ಕು, ಒಂದು ಹುಬ್ಬಳ್ಳಿಯ ಅನಿಲ್ ಕುಮಾರ್ ಮತ್ತು ಕಂಪನಿಯಿಂದ ಬಂದದ್ದು ಮತ್ತೊಂದು ಅಣ್ಣಿಗೇರಿಯ ಶ್ರೀ ವೀರಭದ್ರೇಶ್ವರ ಕಾಟನ್ ಮತ್ತು ಆಗ್ರೋ ಇಂಡಸ್ಟ್ರೀಸ್‌ನಿಂದ ಬಂದದ್ದು ಎಂದು ಹೇಳಿದ್ದರು.



ಕೊಂಚ ಜಬರ್‌ದಸ್ತ್ ಮಾಡುತ್ತಿದ್ದಂತೆಯೇ 'ನಾನು ಒಬ್ಬನೇ ವಂಚನೆ ಮಾಡಿಲ್ಲ, ಮಲ್ಲಿಕಾರ್ಜುನ ಟ್ರೇಡರ್ಸ್‌ನ ಮಲ್ಲಿಕಾರ್ಜುನ ಕರಡಿ, ಮಗ ಮಹಾಂತೇಶ ಹಾಗೂ ಟ್ರಾನ್ಸ್‌ಪೋರ್ಟ್ ಕಂಪನಿಯ ಕೋರಿ ಶೆಟ್ಟರ್ ಜೊತೆಗೂಡಿ ನನ್ನಿಂದ ಕಳೆದ 6 ತಿಂಗಳಲ್ಲಿ ಸುಮಾರು 18 ಇಂತಹ ನಕಲಿ ಬಿಲ್ ತಯಾರಿಸಿ ಹಣ ತೆಗೆಸಿಕೊಂಡಿದ್ದಾರೆ. ಅದರಲ್ಲಿ ನನಗೂ ಸ್ವಲ್ಪ ಹಣ ನೀಡುತ್ತಿದ್ದರು' ಎಂದು ಬಾಯಿಬಿಟ್ಟ. ಆ ನಾಲ್ಕು ಲಕ್ಷದ ಚೆಕ್ ಅನ್ನು ಕ್ಯಾಶ್ ಮಾಡದಂತೆ ಬ್ಯಾಂಕಿಗೆ ತಿಳಿಸಿ ಬಂದೋಬಸ್ತ್ ಮಾಡುವ ವೇಳೆಯಲ್ಲೇ ಇತ್ತ ಮ್ಯಾನೇಜರ್ ಸಾಧಿಕ್ ಪರಾರಿಯಾಗಿದ್ದ. ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡ ಆತ ಒಂದು ವಾರವಾದರೂ ಯಾರ ಕಣ್ಣಿಗೂ ಬಿದ್ದಿರಲಿಲ್ಲ. ಕೊನೆಗೆ ಗೋಯೆಲ್ ಹುಬ್ಬಳ್ಳಿಯ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದರು (ಅಪರಾಧ ಸಂಖ್ಯೆ 0219/2014).

ಯಾವಾಗ ಕೇಸು ಪೊಲೀಸ್ ಠಾಣೆ ಮೆಟ್ಟಿಲೇರಿತೋ ಆಗ ಮಲ್ಲಿಕಾರ್ಜುನ ಟ್ರೇಡರ್ಸ್‌ನ ಅಪ್ಪ ಮಗ ಹಾಗೂ ಲಾರಿ ಮಾಲೀಕ ಕೋರಿ ಶೆಟ್ಟರ ಭೂಗತರಾದರು. ಬಿಜೆಪಿಯ ಶಂಕ್ರಣ್ಣಾ ಮುನವಳ್ಳಿಯ ಪ್ರಭಾವ ಬಳಸಿ ತನಿಖೆಯ ದಿಕ್ಕು ತಪ್ಪಿಸಲು ...



...ದೂಡಲು ಪ್ರಾರಂಭಿಸಿದರು. ಇನ್‌ಸ್ಪೆಕ್ಟರ್ ಸವರಗೋಳ ಕೂಡಾ ಭರ್ಜರಿ ಪ್ರಸಾದ ಸಿಕ್ಕವನಂತೆ ತಟಸ್ಥನಾಗಿದ್ದ.

ಕಳೆದುಕೊಂಡದ್ದು ಒಂದೆರಡು ಸಾವಿರವಲ್ಲ, ಸಾಧಿಕ್ ಹೇಳಿದ್ದನ್ನೇ ಲೆಕ್ಕ ಹಾಕಿದರೆ ಹತ್ತಿರತ್ತಿರ ಒಂದು ಕೋಟಿಯ ಲುಕ್ಸಾನು ಅದು. ಗೊಯೆಲ್ ತನ್ನ ವಕೀಲರೊಂದಿಗೆ ನೇರವಾಗಿ ಐಜಿ ಭಾಸ್ಕರ್ ರಾವ್ ಕೋಣೆ ಹೊಕ್ಕು ಇದ್ದ ವಿಷಯ ವಿವರಿಸಿದ್ದರು. ತಕ್ಷಣ ಸಿಪಿಐ ಸವರಗೋಳನ ಜನ್ಮ ಜಾಲಾಡಿದ ಭಾಸ್ಕರ್ ರಾವ್ ಪ್ರಕರಣವನ್ನು ಧಾರವಾಡ ಗ್ರಾಮೀಣ ಠಾಣೆಗೆ ವರ್ಗಾಯಿಸಿಬಿಟ್ಟರು. ಆನಂತರವೇ ತನಿಖೆ ಒಂಚೂರು ವೇಗ ಪಡೆದುಕೊಂಡದ್ದು, ಮ್ಯಾನೇಜರ್ ಸಾದಿಕ್ ಅಲಿ ಹಾಗೂ ಪ್ರಕಾಶ ಕೋರಿ ಶೆಟ್ಟರ್ ಜೈಲು ಪಾಲಾಗುವಂತಾದದ್ದು.

ಅಷ್ಟಾದರು ಮುಖ್ಯ ಕ್ರಿಮಿನಲ್‌ಗಳಾದ ಮಲ್ಲಿಕಾರ್ಜುನ ಕರಡಿ ಮತ್ತು ಮಹಾಂತೇಶ ಕರಡಿ ಇದುವರೆಗೂ ತಲೆ ಮರೆಸಿಕೊಂಡೇ ಇದ್ದಾರೆ. ಭೂಗತವಾಗಿಯೇ ಧಾರವಾಡ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದರಾದರು ಅದನ್ನು ಕೋರ್ಟ್ ತಿರಸ್ಕರಿಸಿತ್ತು. ಆಮೇಲೆ ಧಾರವಾಡ ಹೈಕೋರ್ಟ್‌ನಲ್ಲಿ ಜಸ್ಟೀಸ್ ಬಳಿಯಪ್ಪ ಎದುರು ಮಧ್ಯಂತರ ಜಾಮೀನು ಅರ್ಜಿ ಸಲ್ಲಿಸಿದ್ದರು. ಅದಕ್ಕೂ ನ್ಯಾಯಾಧೀಶರು ಕ್ಯಾರೇ ಎನ್ನಲಿಲ್ಲ. ಈಗ ಬೇರೊಬ್ಬ ವಕೀಲರ ಮೂಲಕ ಬೆಂಗಳೂರಿನ ಹೈಕೋರ್ಟ್‌ನಲ್ಲಿ ಜಾಮೀನು ಅರ್ಜಿ ಸಲ್ಲಿಸುವ ತಯಾರಿಯಲ್ಲಿದ್ದಾರೆ. ಈ ವಂಚನೆಯ ತೀವ್ರತೆಯನ್ನು ಅರಿತ ನ್ಯಾಯಾಲಯ ಮಲ್ಲಿಕಾರ್ಜುನ ಟ್ರೇಡರ್ಸ್‌ನ ಎಲ್ಲಾ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಸೂಚಿಸಿದೆ. ಅಷ್ಟು ಗಂಭೀರ ಪ್ರಕರಣವಾದರೂ ಪೊಲೀಸರು ಮೂರು ತಿಂಗಳ ಕಾಲವನ್ನು ಕೇವಲ ಹುಡುಕಾಟದಲ್ಲೇ ಕಳೆದಿದ್ದಾರೆ. ಈಗಲಾದರೂ ಪೊಲೀಸರು ತಮ್ಮ ಬಿರುಸು ತೋರದಿದ್ದರೆ ಜನ ಇಲಾಖೆ ಮೇಲಿನ ನಂಬಿಕೆಯನ್ನೇ ಕಳೆದುಕೊಳ್ಳ ಬೇಕಾಗುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ಇಂತಹ ಮತ್ತೊಂದಿಷ್ಟು ಕ್ರಿಮಿಗಳು ಧೈರ್ಯವಾಗಿ ಹುಟ್ಟಿಕೊಳ್ಳಲು ಪೊಲೀಸರೇ ದಾರಿ ಮಾಡಿಕೊಟ್ಟಂತಾಗುತ್ತದೆ.

● ಹುಬ್ಬಳ್ಳಿಯಾಂವ

...ರಹೊಳೆಯಲ್ಲಿ ಇದ್ದಂತಹ ಆಶ್ರಮ ಶಾಲೆಗೆ ಹಾಸ್ಟೆಲ್ ...ರ್ಮಾಣಕ್ಕಾಗಿ ಸರಕಾರದಿಂದ ಅನುದಾನ ಬಿಡುಗಡೆಯಾಗಿ, ...ಪಾಯಕ್ಕಾಗಿ ಗುಂಡಿ ತೋಡಿದ್ದರೂ, ಅರಣ್ಯ ಇಲಾಖೆ ...ನ್ನು ಆಕ್ಷೇಪಿಸಿ ಕಾಮಗಾರಿ ಸ್ಥಗಿತಗೊಂಡಿದೆ. ಗಿರಿಜನ ...ದ್ಯಾರ್ಥಿಗಳು ತ್ರಿಶಂಕುಸ್ಥಿತಿಯಲ್ಲಿ ಇದ್ದಾರೆ. ಈ ಬಗ್ಗೆ ...ಸರವಾದಿಗಳಿಗಾಗಲಿ, ಅರಣ್ಯ ಇಲಾಖೆಯವರಿಗಾಗಲಿ ...ತ್ತೂ ನೋವು ಇಲ್ಲ, ಏಕೆಂದರೆ ಅವರ ಮಕ್ಕಳು ...ಮ ಶಾಲೆಯಲ್ಲಿ ಓದುವುದಿಲ್ಲ, ಅದೇ ರೀತಿ ಮೈಸೂರಿ...ದ ಬಾವಲಿಗಾಗಿ ಕೇರಳಕ್ಕೆ ತೆರಳುವ ರಸ್ತೆಯನ್ನು ರಾತ್ರಿ ...ೆ ಮುಚ್ಚಲಾಗಿದೆ. ಇದಕ್ಕೆ ಸರ್ವೋಚ್ಛ ನ್ಯಾಯಾಲಯದ ...ೇಶ ಇದೆ ಎನ್ನುತ್ತಾರೆ. ಹಂಪಿಯ ಆನೆಗೊಂದಿ ಸೇತುವೆ ...ದಿದೆ. ಇದು ವಿಶ್ವಪಾರಂಪರಿಕ ತಾಣದ ವ್ಯಾಪ್ತಿಯಲ್ಲಿ ...ತ್ತದೆ. ಹಾಗಾಗಿ ಈ ಸೇತುವೆಯನ್ನು ಪುನರ್ ನಿರ್ಮಾಣ ...ಡಲು ಇಂದಿಗೂ ಸಾಧ್ಯವಾಗಿಲ್ಲ, ಕೊಡಗಿನಲ್ಲಿ ಹೆಚ್ಚು ... ಮಾಡಿದ್ದ ಕಡ್ಮಕಲ್ ರಸ್ತೆಯ ಅಭಿವೃದ್ಧಿ ಕಾರ್ಯ ...ಂಭ ಮಾಡಿದಾಗ, ಆಗಿನ ಸ್ಪೀಕರ್ ಕೆ.ಜಿ. ಬೋಪಯ್ಯ ...ಕರಾದ ಅಪ್ಪಚ್ಚು ರಂಜನ್ ಹಾಗೂ ಎಸ್.ಜಿ. ...ದಪ್ಪನವರ ವಿರುದ್ಧ ಸರ್ವೋಚ್ಛ ನ್ಯಾಯಾಲಯದಲ್ಲಿ ...ಸರವಾದಿಗಳು ನಿವೃತ್ತ ಸೇನಾ ಅಧಿಕಾರಿಗಳ ಹೆಸರಿನಲ್ಲಿ ...ಕದ್ದಮೆ ಹೂಡಿದ್ದಾರೆ.

ಈ ರಸ್ತೆ ಆ ಭಾಗದ ಜನರಿಗೆ ಅಗತ್ಯವಾಗಿ ...ಬೇಕಾಗಿದೆ. 14 ಕಿ.ಮೀ. ಪ್ರಯಾಣ ಮಾಡಬೇಕಾದವರು ...ರಸ್ತೆ ಇಲ್ಲದೆ ಇರುವ ಕಾರಣಕ್ಕಾಗಿ 110 ಕಿ.ಮೀ. ...ಯಾಣಿಸಬೇಕಾಗಿದೆ. ಅರಣ್ಯ ಇಲಾಖೆಯವರು ಮತ್ತು ...ಸರವಾದಿಗಳು ಕೇಂದ್ರ ಪರಿಸರ ಖಾತೆಯಿಂದ ...ನುಮತಿಯನ್ನು ಪಡೆದು ಕಾಮಗಾರಿಯನ್ನು ...ಡುಹುದು ಎಂದು ಹೇಳುತ್ತಾರೆ. ಆದರೆ ಈ ರಸ್ತೆ ನಿರ್ಮಾಣದ ಸಂಬಂಧ ಕೆ.ಜಿ. ಬೋಪಯ್ಯ ಸ್ಪೀಕರ್ ಆಗಿದ್ದ ವೇಳೆಯಲ್ಲಿಯೇ ನಿಯಮಗಳ ಪ್ರಕಾರ ಅರ್ಜಿಯನ್ನು ಕೇಂದ್ರ ಪರಿಸರ ಖಾತೆಗೆ ರಾಜ್ಯ ಪರಿಸರ ಖಾತೆಯ ಮೂಲಕ ಸಲ್ಲಿಸಿದ್ದರು. ಸುಮಾರು ಮೂರು ವರ್ಷ ಕಳೆದರೂ ಇದು ರಾಜ್ಯ ವನ್ಯಜೀವಿ ಮಂಡಳಿಯಲ್ಲಿಯೇ ಕೊಳೆಯುತ್ತಾ ಬಿದ್ದಿದೆ. ಅನಿಲ್ ಕುಂಬ್ಳೆ ಉಪಾಧ್ಯಕ್ಷರಾಗಿದ್ದ ಈ ಮಂಡಳಿಯಲ್ಲಿ ಕಡತ ಧೂಳು ಹಿಡಿದು ಬಿದ್ದಿದೆ. ಅದೇ ರೀತಿ 20 ಕಿ.ಮೀ. ಸಂಚಾರವನ್ನು ಕಡಿಮೆ ಮಾಡುವ ಕೂಟಿಯಾಲ ಎಂಬಲ್ಲಿ ರಾಜ್ಯ ಸರಕಾರದ ಅನುದಾನದಿಂದ 70 ಲಕ್ಷ ರೂಪಾಯಿ ವೆಚ್ಚದಲ್ಲಿ ಸೇತುವೆ ನಿರ್ಮಾಣವಾಗಿ 10 ವರ್ಷ ಕಳೆದಿದೆ. 600 ಮೀಟರ್ ಸಂಪರ್ಕ ರಸ್ತೆಗೆ ಅರಣ್ಯ ಇಲಾಖೆ ಅಡ್ಡಿಪಡಿಸುತ್ತಿದ್ದು, ಇದರ ಅನುಮತಿಗೂ ದಾಖಲೆಗಳನ್ನು ಸಲ್ಲಿಸಿ ಮೂರು ವರ್ಷ ಕಳೆದಿದೆ. ವಿಶೇಷವೆಂದರೆ ಪರಿಸರ ಖಾತೆಯ ನಿಯಮದ ಪ್ರಕಾರ ಯಾವುದೇ ಅರಣ್ಯ ಪ್ರದೇಶದಲ್ಲಿ ಸರಕಾರದ ಅಭಿವೃದ್ಧಿ ಕಾರ್ಯಕ್ಕೆ ಅರಣ್ಯ ಪ್ರದೇಶ ಬೇಕು ಎಂದಾದಲ್ಲಿ, ಲ್ಯಾಂಡ್ ಬ್ಯಾಂಕ್ ಮೂಲಕ ಅರಣ್ಯ ಇಲಾಖೆ ಅವರಿಂದ ಅಭಿವೃದ್ಧಿ ಕಾರ್ಯಕ್ಕೆ ಪಡೆದುಕೊಂಡ ಪ್ರದೇಶದ ಎರಡು ಪಟ್ಟು ಜಮೀನನ್ನು ಅರಣ್ಯ ಇಲಾಖೆಗೆ ದೇಶದ ಯಾವುದೇ ಪ್ರದೇಶದಲ್ಲಿ ಹಸ್ತಾಂತರಿಸಿದರೆ ಸಾಕು ಎಂದಿದೆ. ಆದರಂತೆ ಈ ಎರಡೂ ರಸ್ತೆಗಳಿಗೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯ ಸುಪರ್ದಿಯಲ್ಲಿ ಇದ್ದಂತಹ ಜಮೀನನ್ನು ಅರಣ್ಯ ಇಲಾಖೆಯ ಹೆಸರಿಗೆ ವರ್ಗಾಯಿಸಿಕೊಟ್ಟರೂ ಇಲ್ಲಿಯವರೆಗೆ ಅನುಮತಿಯನ್ನು ನೀಡಿಲ್ಲ.

ಇವೆಲ್ಲಾ ಉದಾಹರಣೆಗಳು ಒಮ್ಮೆ ಅರಣ್ಯ ಇಲಾಖೆಯ ನಿಯಂತ್ರಣಕ್ಕೆ ಒಳಪಟ್ಟರೆ ಏನಾಗುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ. ನಾಗರಹೊಳೆ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನ ಎಂದು ಘೋಷಿಸಿದ ನಂತರ ಅಲ್ಲಿ ತಲತಲಾಂತರದಿಂದ ವಾಸಿಸುತ್ತಿರುವ ಬುಡಕಟ್ಟು ಜನರಿಗೆ ಪರಿಸರವಾದಿಗಳೂ ಮತ್ತು ಅರಣ್ಯ ಇಲಾಖೆ ಇಲ್ಲದ ಕಿರುಕುಳ ನೀಡಿ ಹೊರದಬ್ಬುವ ಕಾರ್ಯಗಳು ನಿರಂತರವಾಗಿ ನಡೆಯುತ್ತಿದೆ. ಅರಣ್ಯ ಹಕ್ಕು ಕಾಯ್ದೆ ಜಾರಿಯಲ್ಲಿ ಇದ್ದರೂ, ನಿರಂತರವಾಗಿ ಶೋಷಣೆ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಗೆ ಮತ್ತು ಡೋಂಗಿ ಪರಿಸರವಾದಿಗಳಿಗೆ ನೆಲದ ಯಾವುದೇ ಕಾನೂನುಗಳು ಅನ್ವಯವಾಗುವುದಿಲ್ಲ.

ಮೇಲ್ವರ್ಗದವರ ಕುತಂತ್ರ

ಮೇಲ್ನೋಟಕ್ಕೆ ಈ ಎರಡೂ ಸಮಿತಿಗಳ ರಚನೆ ಮತ್ತು ಅರಣ್ಯ ಸಂರಕ್ಷಣೆ ಎಂಬುದು ಪಶ್ಚಿಮಘಟ್ಟಗಳನ್ನು ಸಂರಕ್ಷಿಸುವುದು ತನ್ಮೂಲಕ ಪರಿಸರವನ್ನು ಕಾಪಾಡುವುದು ಎಂದು ಕಂಡುಬಂದರೂ, ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದು ಕೃಷಿಕ ವರ್ಗ ಮತ್ತು ಕೆಳವರ್ಗದವರ ಮೇಲೆ ಮೇಲ್ವರ್ಗದವರ ಕುತಂತ್ರ ಎಂದು ಕಂಡುಬರುತ್ತದೆ. ಇದಕ್ಕೆ ಸ್ಪಷ್ಟವಾದ ನಿದರ್ಶನ ಬುಡಕಟ್ಟು ಜನಾಂಗದವರನ್ನು ಅರಣ್ಯ ಪ್ರದೇಶದಿಂದ ಹೊರಹಾಕುತ್ತಿರುವುದಾಗಿದೆ. ವಿಶ್ವಪಾರಂಪರಿಕ ತಾಣವನ್ನು ಘೋಷಣೆ ಮಾಡುವುದರ ಹಿಂದೆ ಇದ್ದಂತಹ ವ್ಯಕ್ತಿಗಳು ಯಾರು ಎಂದರೆ, ಕೇಂದ್ರ ಸಚಿವ ಅನಂತಕುಮಾರ್, ಸಂಸದ ಸುನಿಲ್ ಹೆಗಡೆ, ಪರಿಸರವಾದಿಗಳಾದ ಉಲ್ಲಾಸ ಕಾರಂತ, ಸಂಜಯ್ ಗುಬ್ಬಿ, ಅನಂತ ಹೆಗಡೆ ಆಶೀಸರ ಮುಂತಾದವರು. ಇವರುಗಳು ಈ ಪ್ರದೇಶದಲ್ಲಿ ವಾಸಿಸುತ್ತಿರುವ ಮತ್ತು ಕೃಷಿ ಮಾಡುತ್ತಿರುವ ಜನರನ್ನು ನಿರ್ವಸತಿಗರನ್ನಾಗಿ ಮಾಡುವ ಮೂಲಕ ಮತ್ತೆ ಜೀತ ವ್ಯವಸ್ಥೆಗೆ ತರಬೇಕು ಎನ್ನುವ ಹುನ್ನಾರವನ್ನು ಮಾಡುತ್ತಿದ್ದಾರೆ. ಹಿಂದೆ ದೇವರಾಜ ಅರಸುರವರು ಸಾಮಾಜಿಕ ನ್ಯಾಯದ ಅಡಿಯಲ್ಲಿ ತಂದ ಉಳುವವನೇ ಭೂಮಿಯ ಒಡೆಯ ನಿಯಮದ ಪ್ರಕಾರ ಸಾಕಷ್ಟು ಭೂ ಮಾಲಿಕರು ತಮ್ಮ ಭೂಮಿಯನ್ನು ಕಳೆದುಕೊಂಡಿದ್ದರು. ಆಗ ಭೂಮಿಯ ಒಡೆತನ ಇದ್ದದ್ದು ಮೇಲ್ವರ್ಗದವರ ಕೈಯಲ್ಲಿ, ಹೀಗೆ ತಮ್ಮ ಭೂಮಿಯನ್ನು ಕಳೆದುಕೊಂಡವರು ಕತ್ತಿ ಮಸೆಯುತ್ತಾ ಇದ್ದರು. ಅವರ ಪ್ರತಿನಿಧಿಗಳಾಗಿ ಇರುವ ಮೇಲೆ ಹೇಳಿದ ವ್ಯಕ್ತಿಗಳು ಈಗ ತಮ್ಮ ಅಧಿಕಾರವನ್ನು ಬಳಸಿಕೊಂಡು ವ್ಯವಸ್ಥಿತವಾಗಿ ಪಿತೂರಿಯನ್ನು ಮಾಡುತ್ತಿದ್ದಾರೆ. ಇದರ ಹಿಂದೆ ಇರುವಂತಹ ಪಿತೂರಿಗಳು ಮಾತ್ರ ಯಾರಿಗೂ ಗೋಚರಿಸುವುದಿಲ್ಲ, ಇದಕ್ಕೆ ಪುಷ್ಟಿ ನೀಡುವಂತೆ, ಕೇರಳ ರಾಜ್ಯದ ತಿರುವನಂತಪುರದಲ್ಲಿ ಆರ್.ಎಸ್.ಎಸ್. ಸಂಘಟನೆಯ ರಾಷ್ಟ್ರೀಯ ಕಾರ್ಯಕಾರಿಣಿ ಎರಡು ವರ್ಷಗಳ ಹಿಂದೆ ನಡೆದಾಗ, ಅಲ್ಲಿ ಅವರು ತೆಗೆದುಕೊಂಡ ತೀರ್ಮಾನ ಮಾಧವ ಗಾಡ್ಗಿಲ್ ವರದಿ ಯಥಾವತ್ತಾಗಿ ಜಾರಿಗೆ ಬರಬೇಕು ಎನ್ನುವುದಾಗಿತ್ತು, ಆದ್ದರಿಂದ ಈ ಬಗ್ಗೆ ಅಧ್ಯಯನ ನಡೆಸಿದರೆ ಈ ಕುತಂತ್ರಗಳೆಲ್ಲವೂ ಬಯಲಿಗೆ ಬರುವುದರಲ್ಲಿ ಸಂಶಯವಿಲ್ಲ. ಅರಣ್ಯ ಹಾಗೂ ಪಶ್ಚಿಮಘಟ್ಟ ಸಂರಕ್ಷಣೆಯಾಗಲೇಬೇಕು. ಆದರೆ ಖಾಸಗಿ ಜಮೀನುಗಳ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಬಾರದು. ಅವರ ಮೇಲೆ ಇಲ್ಲದ ನಿಯಂತ್ರಣಗಳು ಬರಬಾರದು. ಡೋಂಗಿ ಪರಿಸರವಾದಿಗಳನ್ನು ಹೊರಗಿಟ್ಟು, ಅರಣ್ಯ ಅಧಿಕಾರಿಗಳ ಆಟಾಟೋಪಕ್ಕೆ ಕಡಿವಾಣವನ್ನು ಹಾಕಿ, ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗದವರನ್ನು ವಿಶ್ವಾಸಕ್ಕೆ ತೆಗೆದುಕೊಂಡರೆ ಅರಣ್ಯ ತನ್ನಿಂದ ತಾನೇ ರಕ್ಷಣೆಯಾಗುತ್ತದೆ.

● ಬಿ.ಎಸ್. ಮನು ಶೆಟ್ಟಿ



ಚರ್ಚ್‌ಸ್ಟ್ರೀಟ್ ಸ್ಫೋಟ

ನಿಗೂಢ ಪ್ರಶ್ನೆಗಳು ವಿಚಿತ್ರ ಸಾಕ್ಷಿಗಳು

ಇದು ಮೊದಲನೆಯದ್ದೇನಲ್ಲ, ಬೆಂಗಳೂರಿನ ಮಟ್ಟಿಗೆ ಐದನೇ ವಿಧ್ವಂಸಕ ಕೃತ್ಯ. 2005ರ ಡಿಸೆಂಬರ್ 28ರಂದು ಟಾಟಾ ಇನ್‌ಸ್ಟಿಟ್ಯೂಟ್ ಅಂದರೆ ಭಾರತೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ನಿಗೂಢ ಬಂದೂಕುಧಾರಿಯೊಬ್ಬ ಮನಸೋಚ್ಛೆ ಗುಂಡು ಹಾರಿಸಿದ್ದಕ್ಕೆ ಬಲಿಯಾದ ಪ್ರೊಫೆಸರ್ ಸೇರಿದಂತೆ ಈತನಕ ಬಲಿಯಾದವರ ಸಂಖ್ಯೆ ಮೂರು ಮತ್ತು ಗಾಯಗೊಂಡವರು ನಲವತ್ತಕ್ಕೂ ಹೆಚ್ಚು.

2008ರ ಜುಲೈ 25ರ ಒಂದೇ ದಿನ ಬೆಂಗಳೂರಿನ ವಿವಿಧೆಡೆ ಸ್ಫೋಟಗೊಂಡ ಎಂಟು ಬಾಂಬುಗಳ ಜೊತೆಗೇ ಮಹಿಳೆಯೊಬ್ಬಳ ಹೆಣ ಬಿದ್ದಿದ್ದು, 2010ರ ಏಪ್ರಿಲ್ 17ರಂದು ಚಿನ್ನಸ್ವಾಮಿ ಸ್ಟೇಡಿಯಮ್ಮಿನ ಹೊರಗೆ ನಡೆದ ಸ್ಫೋಟಕ್ಕೆ 17 ಮಂದಿ ಗಾಯಗೊಂಡಿದ್ದು ಮತ್ತು ಇದಾಗಿ ಮೂರು ವರ್ಷಕ್ಕೆ ಸರಿಯಾಗಿ ಅಂದರೆ 2013ರ ಏಪ್ರಿಲ್ 17ರಂದು ಮಲ್ಲೇಶ್ವರದ ಬಿಜೆಪಿ ಕೇಂದ್ರ ಕಚೇರಿಯೆದುರು ಮತ್ತೆ 17 ಮಂದಿ ಸ್ಫೋಟಕ್ಕೆ ಸಿಲುಕಿ ಗಾಯಾಳುಗಳಾಗಿದ್ದನ್ನೂ ಸೇರಿಸಿದರೆ ಇದು ಐದನೇ ಸ್ಫೋಟ!


ಸಿಲಿಕಾನ್ ಸಿಟಿ, ದೇಶದ ಐಟಿ ರಾಜಧಾನಿ, ಅನೇಕಾನೇಕ ಅಮೆರಿಕನ್ ಕಂಪನಿಗಳ ಸಂಗಮತಾಣ ಎಂಬ ಹೆಗ್ಗಳಿಕೆಯೇ ಬೆಂಗಳೂರಿಗೆ ಮುಳುವಾಗುತ್ತಿದೆಯೇ ಅಥವಾ ಇವೆಲ್ಲವುಗಳ ಫಲಶ್ರುತಿಯಾದ ಮಾಹಿತಿ ತಂತ್ರಜ್ಞಾನವೆಂಬುದು ಎಂಥದೋ ಅಪಾಯವೊಂದಕ್ಕೆ ಬೆಂಗಳೂರಿನ ಸಂಪರ್ಕ ಕಲ್ಪಿಸುತ್ತಿದೆಯಾ ಗೊತ್ತಿಲ್ಲ. ಮೊನ್ನೆ ಐಸಿಸ್ ಉಗ್ರಜಾಲದ ಸಾಫ್ಟ್‌ವೇರ್ ಸಂಬಂಧಿಯೆಂದು ಯಾವ ಮೆಹದಿ ಮಸ್ರೂರ್ ಬಿಸ್ವಾಸ್ ಎಂಬ ಬಂಗಾಳಿ ಯುವಕನನ್ನು ಬೆಂಗಳೂರು ಪೊಲೀಸರು ಬಲೆಗೆ ಬೀಳಿಸಿ ಜೈಲಿಗಟ್ಟಿದರೋ ಅದರ ಪ್ರತೀಕಾರಾರ್ಥ ಕಟ್ಟಬೇಕಾದ ದಂಡವೇ ಭಾನುವಾರದ ಸ್ಫೋಟದ ರೂಪು ಧರಿಸಿತ್ತಾ?

ಮೆಹದಿಯ ಪ್ರತೀಕಾರ!

ಡಿಸಿಪಿ ಅಭಿಷೇಕ್ ಗೋಯಲ್‌ರ ಫೇಸ್‌ಬುಕ್ ಖಾತೆಗೆ



ಬಲಿಯಾದ ಭವಾನಿ



ಚರ್ಚ್‌ಸ್ಟ್ರೀಟ್‌ನಲ್ಲಿ ಸ್ಫೋಟದ ನಂತರ....



ಭವಾನಿಯ ಮಗಳು

ಮೆಹದಿ ಬಿಸ್ವಾಸ್ ಬಂಧನದ ವಿರುದ್ಧ ಬಂದ ಬೆದರಿಕೆ ಸಂದೇಶವನ್ನು ಬಹುಶಃ ಬೆಂಗಳೂರು ಪೊಲೀಸರು ಅಷ್ಟೊಂದು ಗಂಭೀರವಾಗಿ ಪರಿಗಣಿಸಿರಲಿಕ್ಕಿಲ್ಲ. ಡಿಸೆಂಬರ್ 28ರ ಭಾನುವಾರ ರಾತ್ರಿ ಚರ್ಚ್‌ಸ್ಟ್ರೀಟ್‌ನಲ್ಲಿ ಬಾಂಬ್ ಸ್ಫೋಟಕ್ಕೂ ಎರಡು ದಿನಗಳ ಹಿಂದಷ್ಟೇ ಕೇಂದ್ರೀಯ ಗುಪ್ತ ವಾರ್ತೆಯ ಅಧಿಕಾರಿಗಳು ಬೆಂಗಳೂರಿನಲ್ಲಿ ಏನೋ ಅನಾಹುತ ನಡೆಯಬಹುದೆಂದು ಎಚ್ಚರಿಸಿದ್ದಕ್ಕೂ ಸರ್ಕಾರ ಆ ಪಾಟ ತಲೆಕೆಡಿಸಿಕೊಂಡಿರಲಿಕ್ಕಿಲ್ಲ. ಹಾಗಂತ ಹಠಕ್ಕೆ ಬಿದ್ದ ಸಾವಿನ ಧೂತರಿಗೆ ಯಾವ ತಾಳ್ಮೆ, ಎಲ್ಲಿಯ ಕರುಣೆ? ರುಚಿ ಬಿದ್ದ ನಾಲಿಗೆಗೆ ರಕ್ತ ಬೇಕು!

ಡಿಸೆಂಬರ್ 28ರ ರಾತ್ರಿ ಮಾಮೂಲಿನ ಭಾನುವಾರ ದಂತೆಯೇ ಚರ್ಚ್‌ಸ್ಟ್ರೀಟ್ ಕಿಕ್ಕಿರಿದಿತ್ತು. ಕ್ರಿಸ್ಮಸ್ ಮತ್ತು ಹೊಸ ವರ್ಷಾಚರಣೆಯ ಹಿನ್ನೆಲೆಯಲ್ಲಿ ಆವತ್ತು ಹಿಂದಿಗಿಂತಲೂ ದೊಡ್ಡ ಮಟ್ಟದ ಜಂಗುಳಿಯಿತ್ತು. ಚರ್ಚ್‌ಸ್ಟ್ರೀಟ್ ಹೇಳಿಕೇಳಿ ಎಂ.ಜಿ ರಸ್ತೆ ಮತ್ತು ಬ್ರಿಗೇಡ್ ರಸ್ತೆಗಳ ದರ್ಬಾರ್ ಭವನದಂತಿವೆ. ಐಷಾರಾಮೀ ರೆಸ್ಟೋರೆಂಟ್‌ಗಳು, ಬಾರ್-ಪಬ್‌ಗಳು, ಬಟ್ಟೆ ಮಳಿಗೆ, ಲಾಡ್ಜ್‌ಗಳಿಂದಲೇ ತುಂಬಿ ಪ್ರವಾಸಿಗಳು ಓಡಾಡುವುದಷ್ಟೇ ಅಲ್ಲಿನ ದಿನಚರಿ. ಇಂಥ ರೆಸ್ಟೋರೆಂಟುಗಳ ಪೈಕಿ ಕೋಕೋನಟ್ ಗ್ರೋವ್ ಹಳೆಯದ್ದು ಮತ್ತು ಪ್ರತಿಷ್ಠಿತ ಕೂಡ. ಬೇರೆಲ್ಲ ಅಂಗಡಿ, ಹೋಟೆಲುಗಳು ಸಿಸಿ ಟಿವಿ ಅಳವಡಿಸಿದ್ದರೆ ಈ ರೆಸ್ಟೋರೆಂಟು ಮಾತ್ರ ಅದರಿಂದ ಹೊರತಾಗಿತ್ತು, ಅಕ್ಕಪಕ್ಕ ಸಿಸಿ ಟಿವಿಗಳಿರುವ ಅಂಗಡಿಗಳೂ ಇಲ್ಲದ್ದನ್ನು ಸೂಕ್ಷ್ಮವಾಗಿ ಗಮನಿಸಿಯೇ ಬಾಂಬ್ ಇಟ್ಟಿರಲೂಬಹುದು.

ರಾತ್ರಿ 8.30ರ ಹೊತ್ತಿಗೆ ಇದ್ದಕ್ಕಿದ್ದಂತೆ ಭೀಕರ ಸ್ಫೋಟವೊಂದು ಕೇಳಿಬಂತು. ಯಾರಾದರೂ ಬಾಂಬ್ ಇಡಬಹುದೆಂಬ ನಿರೀಕ್ಷೆಯಾದರೂ ಯಾರಿಗಿದ್ದೀತು? ಏನೋ ಗ್ಯಾಸ್ ಸಿಲೆಂಡರ್ ಸ್ಫೋಟಿಸಿರಬೇಕು ಅಥವಾ ಹೊಸ ವರ್ಷಕ್ಕೆ ಎರಡು ದಿನ ಮೊದಲೇ ಪಡ್ಡೆಗಳು ಪಟಾಕಿ ಸಿಡಿಸಿರಬೇಕೆಂದು ಲೆಕ್ಕ ಹಾಕಿದ ದಾರಿಹೋಕರಿಗೆ ಕಂಡ ದೃಶ್ಯ ಮಾತ್ರ ಎಂಥವರನ್ನೂ ಥರಗುಡಿಸುವಂತಿತ್ತು. ಕೋಕೋನಟ್ ಗ್ರೋವ್‌ನ ಹೆಬ್ಬಾಗಿಲ ಫುಟ್‌ಪಾತ್ ಪೂರ್ತಿ ಬಿದ್ದು ಒದ್ದಾಡುತ್ತಿದ್ದವರಿಂದ ತುಂಬಹೋಗಿತ್ತು. ನಲವತ್ತರ ಮಹಿಳೆಯೊಬ್ಬಳು ರಕ್ತದ ಮಡುವಿನಲ್ಲಿ ಬಿದ್ದು ನರಳಾಡುತ್ತಿದ್ದರೆ ಆಕೆಯ ಅಕ್ಕಪಕ್ಕ ಕುಸಿದು ಬಿದ್ದಿದ್ದ ಐದಾರು ಮಂದಿ ಚೀರಾಡುತ್ತಿದ್ದರು. ರಕ್ತ ಸುರಿಸುತ್ತಲೇ ಅರೆಪ್ರಜ್ಞೆಯಲ್ಲಿ ಒದ್ದಾಡುತ್ತಿದ್ದ ಭವಾನಿಯ ಸುತ್ತ ಆಕೆಯ ಮಕ್ಕಳು ಸಂಬಂಧಿಕರೆಲ್ಲ ಎದೆ ಬಡಿದುಕೊಂಡು ಬೊಬ್ಬಿಡುತ್ತಿದ್ದರು. ಸ್ಫೋಟಿಸಿದ್ದು ಬಾಂಬ್ ಎಂಬ ಬಗ್ಗೆ ಯಾರಲ್ಲೂ ಅನುಮಾನಗಳಿರಲಿಲ್ಲ.

ಪಳಗಿದ ಕೈಯಲ್ಲ...

ನಂತರ ನಡೆದದ್ದೆಲ್ಲವೂ ಯಥಾವತ್ ವಿಧ್ವಂಸಕೋತ್ತರ ಕಲ್ಲೋಲಗಳೇ. ಆಟೋ ಚಾಲಕನೊಬ್ಬ ರಕ್ತಸಿಕ್ತ ಭವಾನಿಯನ್ನು ಆಸ್ಪತ್ರೆಗೆ ಸಾಗಿಸಿದನಾದರೂ ಆಕೆ ಬದುಕುಳಿಯುವ ಸಾಧ್ಯತೆಗಳಿರಲಿಲ್ಲ. ಮೊಳೆ ಮತ್ತು ಲೋಹದ ತುಣುಕುಗಳು ಆಕೆಯ ತಲೆ, ಮೈಪೂರ್ತಿ ತೂತು ಕೊರೆದಿದ್ದವು. ಸ್ಥಳಕ್ಕೆ ಬಂದ ಪೊಲೀಸರಿಗೆ ಕಂಡಿದ್ದು ಬಾಂಬಿನ ಅವಶೇಷಗಳು ಮಾತ್ರ. ಅದು ಲಘು ಸ್ಫೋಟಕಗಳನ್ನು ಬಳಸಿ ಮಾಡಿದ್ದ ಕ್ರೂಡ್ ಬಾಂಬು. ಪುಟ್ಟ ಕೊಳವೆಯೊಂದಕ್ಕೆ ಮೊಳೆಗಳು, ಗಾಜು, ಲೋಹದ ತುಣುಕುಗಳನ್ನು ತುರುಕಿ ಸ್ಫೋಟಕ್ಕೆ ಪೂರಕವಾದ ಸಲ್ಫರ್, ರಂಜಕದ ಜೊತೆ ಸ್ಥಳೀಯವಾಗೇ ಸಿಗುವ ಟೈಮರ್‌ನ್ನು ಅಳವಡಿಸಲಾಗಿತ್ತು. ಅಂದರೆ ಇದು ಹೈಟೆಕ್ಕಾದ, ದೊಡ್ಡ ಮಟ್ಟದ ಹಾನಿಯ ಸಾಮಾನ್ಯವಾಗಿ ಪಳಗಿದ ಮಿಲಿಟೆಂಟ್‌ಗಳು ಬಳಸುವ ಬಾಂಬ್ ಆಗಿರಲಿಲ್ಲ.

ಅಂದರೆ ಬಾಂಬ್‌ನ ಉದ್ದೇಶ ದೊಡ್ಡ ಮಟ್ಟದ ಅನಾಹುತವಲ್ಲ. ರೈಲಿನಲ್ಲೋ, ಬಸ್ಸುಗಳಲ್ಲೋ, ಸಿನಿಮಾ ಥೇಟರುಗಳಲ್ಲೋ ಶಕ್ತಿಶಾಲಿ ಬಾಂಬು ಇಡುವುದು ಬೇರೆ. ಈ ರೀತಿ ಫುಟ್‌ಪಾತಿನಲ್ಲಿ ಅದರಲ್ಲೂ ಹೂಕುಂಡಗಳ ಮಧ್ಯೆ ಅಷ್ಟೇನೂ ಅಪಾಯಕಾರಿಯಲ್ಲದ ಅರೆ ಪರಿಣಾಮ ಕಾರಿ ಬಾಂಬ್ ಇಟ್ಟು ಸ್ಫೋಟಿಸುವುದು ಪೊಲೀಸರ ದೃಷ್ಟಿಯಲ್ಲೇ ಹುಡುಗಾಟಿಕೆಯಿದ್ದಂತೆ. ಸರ್ಕಾರದ ಕಚೇರಿ, ವಿಧಾನ ಸೌಧ, ಪೊಲೀಸ್ ಠಾಣೆಗಳು, ಮಿಲಿಟರಿ ಸ್ಥಾವರಗಳೆಲ್ಲವನ್ನೂ ಹೊರತುಪಡಿಸಿ ಫುಟ್‌ಪಾತಿನಲ್ಲಿ ಹೂಕುಂಡಗಳ ಮಧ್ಯೆ ಬಾಂಬಿಟ್ಟದ್ದರ ಉದ್ದೇಶವೇ ಬೆದರಿಕೆ. ಅಂದರೆ ಭಯ ಹುಟ್ಟಿಸುವುದು.

ಈ ರೀತಿ ಸರ್ಕಾರ, ಸಾರ್ವಜನಿಕರು, ಮೀಡಿಯಾಗಳಲ್ಲಿ ಭಯ ಹುಟ್ಟಿಸಿ ಸುದ್ದಿ ಮಾಡುವ ಉದ್ದೇಶ ತಾನೇ ಯಾರಿಗಿದ್ದೀತು?

ಇದು ಪೊಲೀಸರನ್ನು ಕಾಡುತ್ತಿರುವ ಪ್ರಶ್ನೆ. ಸ್ಫೋಟಕಗಳನ್ನು ಆಮೂಲಾಗ್ರ ಪರಿಶೀಲಿಸಿದ ಫೊರೆನ್ಸಿಕ್ ತಜ್ಞರು, ಸೆಂಟ್ರಲ್ ಇಂಟಲಿಜೆನ್ಸ್ ಮತ್ತು ಎನ್‌ಐಎ ಅಧಿಕಾರಿಗಳ ಗಮನಕ್ಕೆ ಬಂದ ಅತೀ ಮುಖ್ಯವಾದ ಕ್ಲೂ ಎಂದರೆ ಈ ಹಿಂದೆ ಬೆಂಗಳೂರಿನಲ್ಲಿ ಸಂಭವಿಸಿದ ಇತರೇ ಸ್ಫೋಟಗಳಿಗೂ ಇದಕ್ಕೂ ಸಾಮ್ಯತೆಯಿರುವುದು. ಎಲ್ಲಕ್ಕೂ ಮಿಗಿಲಾಗಿ ಇತ್ತೀಚೆಗೆ ಚೆನ್ನೈ ಮತ್ತು ಪುಣೆಗಳಲ್ಲಿ ಸಂಭವಿಸಿದ ಆ ಎರಡು ಸ್ಫೋಟಗಳೊಂದಿಗೆ ಇದಕ್ಕೆ ಹೆಚ್ಚು ಹೋಲಿಕೆಯಿದೆ. ಲಘು ಸಾಮರ್ಥ್ಯದ ಸ್ಫೋಟಕವನ್ನು ಬಳಸಿ ತಯಾರಿಸಲಾದ ಕ್ರೂಡ್ ಬಾಂಬ್‌ನ ಜೊತೆ ಸಿಕ್ಕ ಮತ್ತೊಂದು ಅದೇ ಮುಖ್ಯ 'ಕ್ಲೂ' ಎಂದರೆ ಸ್ಫೋಟಕವನ್ನು ತೆಲುಗಿನ ಆಂಧ್ರ ಜ್ಯೋತಿ ದಿನಪತ್ರಿಕೆಯ ಹೈದರಾಬಾದ್ ಆವೃತ್ತಿಯ ಕಾಗದದಲ್ಲಿ ಸುತ್ತಿಡಲಾಗಿತ್ತು.

ಆಂಧ್ರಜ್ಯೋತಿ


ಹಾಗೊಮ್ಮೆ ಸ್ಥಳೀಯರೇ ಈ ಕೃತ್ಯವೆಸಗಿದ್ದರೆ ಸ್ಥಳೀಯ ದಿನಪತ್ರಿಕೆಗಳ ಕಾಗದ ಬಳಕೆಯಾಗಬೇಕಿತ್ತು. ಆಂಧ್ರ ಜ್ಯೋತಿಯ ಬೆಂಗಳೂರು ಆವೃತ್ತಿಯಿರುವಾಗ ಹೈದರಾಬಾದ್‌ನ ಆವೃತ್ತಿಯ ಕಾಗದ ಬಳಸಲಾಗಿದೆಯೆಂದರೆ ಒಂದೋ ಬಾಂಬು ತಯಾರಾಗಿದ್ದು ಹೈದರಾಬಾದಿನಲ್ಲಿ ಅಥವಾ ಬಾಂಬ್ ಇಟ್ಟವರು ಹೈದರಾಬಾದಿನಿಂದ ಬಂದವರಾಗಿರಬೇಕು. ಈ ಎರಡು ಸಾಧ್ಯತೆಗಳಲ್ಲದೆ ಪೊಲೀಸರನ್ನು ದಿಕ್ಕು ತಪ್ಪಿಸಲೆಂದೇ ಆಂಧ್ರ ಜ್ಯೋತಿಯ ಹೈದರಾಬಾದ್ ಆವೃತ್ತಿಯ ಕಾಗದ ಬಳಸಿದ್ದೇ ಆಗಿದ್ದರೆ ಮುಂಬಯಿ, ದೆಹಲಿ, ಅಹ್ಮದಾಬಾದ್ ಇತ್ಯಾದಿ ಇನ್ನೂ ದೂರದ ಊರಿನ ಪುಕಾರೆಬ್ಬಿಸಲೂಬಹುದಿತ್ತು. ಇದರರ್ಥ ಆಂಧ್ರಜ್ಯೋತಿಯ ಹೈದರಾಬಾದ್ ಆವೃತ್ತಿಯ ಕಾಗದ ಬಳಕೆಯಾಗಿರುವುದು ಕೇವಲ ಸಾಂದರ್ಭಿಕವೇ ಹೊರತು ಪೊಲೀಸರನ್ನು ದಿಕ್ಕು ತಪ್ಪಿಸುವುದಕ್ಕಲ್ಲ.

ಅಮೋನಿಯಂ ನೈಟ್ರೇಟ್ ಮತ್ತು ಪಟಾಕಿ ಸ್ಫೋಟಕದ ಮರ್ಮ!

ಸಾಮಾನ್ಯವಾಗಿ ಮುಸ್ಲಿಂ ಉಗ್ರರು ಬಳಸುತ್ತಾರೆಂದು ಭಾವಿಸಲಾದ ಅಮೋನಿಯಂ ನೈಟ್ರೇಟ್ ಅನ್ನೇ ಚರ್ಚ್ ಸ್ಟ್ರೀಟ್ ಸ್ಫೋಟದಲ್ಲೂ ಬಳಸಿದ್ದಾರೆಂದು ಪತ್ರಿಕೆ, ಟೀವಿಗಳೆಲ್ಲ ಸಾಧಿಸುತ್ತಲೇ ಇವೆ.

ಅಮೋನಿಯಂ ನೈಟ್ರೇಟ್ ಇಲ್ಲೂ ಬಳಕೆಯಾಗಿದೆಯಾದ್ದರಿಂದ ಇದು ಕೂಡ ಸಿಮಿ, ಅಲ್ ಉಮ್ಮಾ, ಐಎಮ್ ಅಥವಾ ಐಸಿಸ್ ಕೃತ್ಯವಾಗಿರಬೇಕೆಂದೇ ವಿತಂಡ ತರ್ಕ ಮಂಡಿಸಲಾಗುತ್ತಿದೆ. ಆದರೆ ಪೊಲೀಸ್ ಅಧಿಕಾರಿಯೊಬ್ಬರ ಪ್ರಕಾರ ಯಾರೇ ಪಟಾಕಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿದವನೊಬ್ಬ ನಿರಾಯಾಸವಾಗಿ ಇಂಥ ಕಚ್ಚಾ ಬಾಂಬೊಂದನ್ನು ಸೃಷ್ಟಿಸಬಲ್ಲ. ಸಾಲದ್ದಕ್ಕೆ ಇಂಟರ್‌ನೆಟ್‌ನಲ್ಲಿ ಇಂಥ ಬಾಂಬ್ ತಯಾರಿಕೆ ಕುರಿತಂತೆ ಯಥೇಚ್ಛ ವೆಬ್‌ಸೈಟ್‌ಗಳಿವೆ. ವಿಪರ್ಯಾಸವೆಂದರೆ ಯಾವ ಮಾಧ್ಯಮಗಳು ಪದೇಪದೇ ಅಮೋನಿಯಂ ನೈಟ್ರೇಟಿಗೂ ಮುಸ್ಲಿಂ ಉಗ್ರರಿಗೂ ಸಂಬಂಧ ಕಲ್ಪಿಸುತ್ತಿದ್ದಾರೋ ಚರ್ಚ್ ಸ್ಟ್ರೀಟ್ ಸ್ಫೋಟದಲ್ಲಿ ಇದು ಬಳಕೆಯೇ ಆಗಿಲ್ಲ!

ಇದರರ್ಥ ಸ್ಥಳೀಯವಾಗಿ ಯಾರು ಬೇಕಾದರೂ ಸೃಷ್ಟಿಸಬಲ್ಲ ಲಘು ಬಾಂಬ್ ಇದು. ಪಳಗಿದ ಇಸ್ಲಾಮಿಕ್ ಉಗ್ರರ ಕೃತ್ಯವಾಗಿದ್ದರೆ ಎಲ್ಲೋ ಫುಟ್‌ಪಾತಿನ ಹೂಕುಂಡದ ನಡುವೆ ಬಾಂಬ್ ಇಡುವ ಅಗತ್ಯವಿತ್ತೆ?



ಒಂದೋ ಬಾಂಬು ಹೈದರಾಬಾದಿನಲ್ಲಿ ತಯಾರಾಗಿ ...ಕು ಅಥವಾ ಇಟ್ಟವರು ಹೈದರಾಬಾದಿನಿಂದ ...ರಬೇಕು. ಇದರ ಹೊರತಾಗಿ ಬೇರೇನಾದರೂ ಸಾಧ್ಯತೆ ...ಬಹುದೇ ಎಂಬ ಲೆಕ್ಕ ಹಾಕಿಯೇ ಜಂಟಿ ಪೊಲೀಸ್ ...ಷನರ್ ಅಲೋಕ್ ಕುಮಾರ್ ಕಾರ್ಯಾಚರಣೆಗೆ ...ವರು ಹಿಂದೆ ಯಾವತ್ತೂ ಇಲ್ಲದಂತೆ ಪೊಲೀಸರ ... ತಂಡಗಳನ್ನು ರಚಿಸಿದರು. ದೆಹಲಿ, ಚೆನ್ನೈ ಮತ್ತು ...ರಾಷ್ಟ್ರದಿಂದ ಬಂದಿದ್ದ ವಿಶೇಷ ತಂಡಗಳು ಸ್ಫೋಟದ ...ತಂತೆ ತಮ್ಮದೇ ದೃಷ್ಟಿಯಿಂದ ತನಿಖೆಗಿಳಿದರೆ ...ಳೂರು ಪೊಲೀಸರ ವಿವಿಧ ತಂಡಗಳು ಹೈದ್ರಾಬಾದ್, ...ಧುರೈ, ಪುಣೆ, ದೆಹಲಿಯ ಹಾದಿಹಿಡಿದಿದ್ದವು. ...ಸ್ಟ್ರೀಟ್‌ನ ಇತರೇ ಅಂಗಡಿ, ಮಳಿಗೆಗಳ ಸಿಸಿ ಟೀವಿಗಳ ...ಜುಗಳಿಂದಾದರೂ ಏನಾದರೂ ಪ್ರಯೋಜನವಿದೆಯೇ ... ಪೊಲೀಸರ ಪ್ರಶ್ನೆಗೂ ನಿಖರವಾದ ಉತ್ತರವಿರಲಿಲ್ಲ. ...ಏಕೆ ಸಿಸಿ ಟೀವಿಗಳಲ್ಲಿ ದಾರಿಹೋಕರು, ಗಿರಾಕಿಗಳ ...ಟದ ದೃಶ್ಯಾವಳಿಗಳಿದ್ದವು. ಆದರೆ ಅವ್ಯಾವುದೂ ...ಗಿರಲಿಲ್ಲ. ಇಂಥ ದೃಶ್ಯ ಮತ್ತದರ ವ್ಯಕ್ತಿಗಳ ಚಹರೆಯನ್ನು ...ಷ್ಟು ಸ್ಪಷ್ಟವಾಗಿ ಕಾಣಿಸುವಂತೆ ಮಾಡಲೆಂದೇ ವಿಶೇಷ ...ಕತೆ ಬಳಸಬೇಕು.

...ಇದರ ಹೊರತಾಗಿಯೂ ಪೊಲೀಸರ ವಿವಿಧ ತಂಡಗಳು ...ಕೂರು, ರಾಮನಗರ, ಚನ್ನಪಟ್ಟಣ, ಹೊಸಕೋಟೆ, ...ಲಾರ, ಚಿಕ್ಕಬಳ್ಳಾಪುರಗಳಿಗೆ ಹೋಗಿಬಂದರು. ...ಷವಾಗಿ ಅಲ್ಲಿನ ಮುಸ್ಲಿಂ ಏರಿಯಾಗಳು ಮತ್ತು ...ಅತ್‌ಗಳ ಚಟುವಟಿಕೆ ಮತ್ತು ಅವುಗಳ ಸಂಪರ್ಕದ ...ಬಂತೆ ಅಧ್ಯಯನ ಮಾಡುವುದು ಈ ಬಗ್ಗೆ ಏನಾದರೂ ಮಾಹಿತಿ ಸಿಗುತ್ತಾ ಎಂದು ಪರಿಶೀಲಿಸುವುದು ಇದರ ಉದ್ದೇಶವಾಗಿತ್ತು. ಹೋದ ತಂಡಗಳು ತಲೆಬುಡ ಕೆದಕಿ ತನಿಖೆಗಿಳಿದದ್ದೇ ಬಂತು. ಯಾವುದೇ ಪ್ರಯೋಜನ ಕಾಣಿಸಲಿಲ್ಲ. ಇದಲ್ಲದೆ ಬ್ರಿಗೇಡ್ ರಸ್ತೆ ಎಂ.ಜಿ. ರಸ್ತೆ ಸುತ್ತಮುತ್ತಲ ಲಾಡ್ಜುಗಳು ಮತ್ತು ಅದರಲ್ಲಿ ತಂಗಿದ್ದವರ ಬಗ್ಗೆ ಮಾಹಿತಿ ಕಲೆ ಹಾಕುವಂತೆ ಆದೇಶಿಸಲಾಯಿತು. ಬೆಂಗಳೂರಿನ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯ ಎಲ್ಲಾ ಲಾಡ್ಜುಗಳ ಸಿಸಿ ಟೀವಿಗಳು, ಅಲ್ಲಿ ತಂಗಿದ್ದವರ ಇತ್ಯೋಪರಿಯನ್ನೂ ಕೆದಕಲಾಯಿತು. ಹೇಳಿಕೊಳ್ಳುವಂತ ಯಾವುದೇ ಸೂಚನೆಗಳಿರಲಿಲ್ಲ.


ಸ್ಥಳೀಯರ ಕೃತ್ಯವೇ?

ಸಿಸಿ ಟೀವಿಯಿಲ್ಲದ, ಅಕ್ಕಪಕ್ಕದಲ್ಲೆಲ್ಲೂ ಸಿಸಿ ಟೀವಿಗಳೇ ಇಲ್ಲದ್ದನ್ನು ಹುಷಾರಾಗಿ ಗಮನಿಸಿಯೇ ಬಾಂಬ್ ಇಡಲಾಗಿತ್ತು!

ಇದರರ್ಥ ಬಾಂಬ್ ಇಟ್ಟವರಿಗೆ ಈ ಜಾಗ ಚಿರಪರಿಚಿತ ಅಥವಾ ಅನೇಕ ದಿನಗಳಿಂದ ಇಲ್ಲಿನ ಸಿಸಿ ಟೀವಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿಯೇ ಕೃತ್ಯವೆಸಗಿದ್ದಾರೆ. ಅಂದರೆ ಯಾರೋ ಸ್ಥಳೀಯರಲ್ಲದೆ ಹೊರಗಿನಿಂದ ಬಂದವರಿಗೆ ಇಂಥದ್ದೇ ರಸ್ತೆಯ ಸಿಸಿ ಟೀವಿ ವ್ಯವಸ್ಥೆಯ ಬಗ್ಗೆ ಇಷ್ಟೊಂದು ಕಮ್ಮಿ ಅವಧಿಯಲ್ಲಿ ಮಾಹಿತಿ ಕಲೆ ಹಾಕಲು ಸಾಧ್ಯವೇ ಇಲ್ಲ. ಇದು ಗೊತ್ತಾಗಿದ್ದೇ ಡಿಸಿಪಿ ಸಂದೀಪ್ ಪಾಟೀಲ್ ಬೇರೆಯದೇ ಜಾಡು ಹಿಡಿದು ತನಿಖೆಗಿಳಿದರು. ಅದು ಅಕ್ಕಪಕ್ಕದ ಅಂಗಡಿಗಳು, ಲಾಡ್ಜಿನ ಸಂಬಂಧಿ, ಫುಟ್‌ಪಾತ್ ವ್ಯಾಪಾರಿಗಳು, ಬೀಡಾ ಅಂಗಡಿಯವರ ವಿಚಾರಣೆ. ಕೋಕೋನಟ್ ಗ್ರೋವ್‌ನ ಗೇಟಿನಲ್ಲಿದ್ದ ಸೆಕ್ಯೂರಿಟಿ ಗಾರ್ಡ್, ಪಕ್ಕದ ಬೀಡಾ ಅಂಗಡಿಯಾತ ಮತ್ತು ಎದುರಿನ ಫುಟ್‌ಪಾತ್ ವ್ಯಾಪಾರಿಗಳಿಗೆ ಕನಿಷ್ಠ ಬಾಂಬ್ ಇಟ್ಟವರ ಚಲನವಲನವಾದರೂ ಗಮನಕ್ಕೆ ಬಂದಿರಲೇಬೇಕು ಅಥವಾ ಪ್ರಾಮಾಣಿಕ ದಾರಿಹೋಕರಲ್ಲದೆ ಅನುಮಾನಾಸ್ಪದವಾಗಿ ಓಡಾಡುತ್ತಿದ್ದವರನ್ನಾದರೂ ಅವರು ಗಮನಿಸಿರಲೇಬೇಕು.

ಈ ನಿಟ್ಟಿನಲ್ಲಿ ಒಬ್ಬೊಬ್ಬರನ್ನೇ ಕರೆದು ವಿಚಾರಣೆ ಶುರುವಿಟ್ಟ ಪೊಲೀಸರಿಗೆ ಬೀಡಾ ಅಂಗಡಿಯಾತ ಹೇಳಿದ್ದು ಸಂಜೆ ಆರೂವರೆ ಹೊತ್ತಿಗೆ ಯಾರೋ ಮೂವರು ಆಸಾಮಿಗಳು ಅನುಮಾನಾಸ್ಪದವಾಗಿ ಓಡಾಡುತ್ತಿದ್ದರೆಂಬ ಕಾಟಾಚಾರದ ಸಂಗತಿಯನ್ನು. ಬಹುಶಃ ಪೊಲೀಸರಿಂದ ಬಚಾವಾಗಲೆಂದು ತಲೆಗೆ ತೋಚಿದ್ದನ್ನು ಹೇಳಿದನೋ ಅಥವಾ ಯಾರೋ ದಾರಿಹೋಕರನ್ನೇ ಹಾಗೆಂದು ಕಲ್ಪಿಸಿಕೊಂಡನೋ ಬಲ್ಲವರ್‍ಯಾರು?

ಸ್ಫೋಟ ಸಂಭವಿಸಿ ಇವತ್ತಿಗೆ ಐದು ದಿನಗಳಾಗಿವೆ. ಈತನಕ ಸಿಕ್ಕ ಪ್ರಯೋಜನಕಾರಿ ಕ್ಲೂಗಳು ಎರಡೇ. ಮೊದಲನೆಯದ್ದು ಆಂಧ್ರಜ್ಯೋತಿ ತೆಲುಗು ಪತ್ರಿಕೆಯ ಹೈದ್ರಾಬಾದ್ ಆವೃತ್ತಿಯ ಕಾಗದ ಮತ್ತು ಎರಡನೆಯದ್ದು ಇತ್ತೀಚಿಗೆ ಮಧುರೈ, ಚೆನ್ನೈ ಮತ್ತು ಪುಣೆಯಲ್ಲಿ ಸಂಭವಿಸಿದ ಸ್ಫೋಟಗಳಿಗೆ ಚರ್ಚ್‌ಸ್ಟ್ರೀಟ್‌ನ ಸ್ಫೋಟವು ಹೋಲಿಕೆಯಾಗು



...ತ್ತಿರುವುದು!

ಇದರ ಹೊರತಾಗಿ ಬೇರಾವುದೇ ನಿಖರ ಮಾಹಿತಿಯಿಲ್ಲ. ಇದನ್ನೇ ಲೆಕ್ಕ ಹಾಕಿ ಹೇಳುವುದಾದರೆ ಮಧುರೈ, ಚೆನ್ನೈ ಮತ್ತು ಪುಣೆಯ ಸ್ಫೋಟಗಳಿಗೂ ಬೆಂಗಳೂರಿನ ಸ್ಫೋಟಕ್ಕೂ ಏನೋ ಸಂಬಂಧವಿದೆ ಅಥವಾ ಹೈದರಾಬಾದಿಗೂ ಬೆಂಗಳೂರಿನ ಸ್ಫೋಟಕ್ಕೂ ಏನೋ ನಂಟಿದೆ. ಹಾಗೆಯೇ ಚರ್ಚ್‌ಸ್ಟ್ರೀಟ್ ಎಂಬ ಪದದಲ್ಲಿ ಅಡಕವಾಗಿರುವ 'ಚರ್ಚ್' ಎಂಬ ಶಬ್ದಕ್ಕೂ ಕ್ರಿಸ್ಮಸ್ ಅಥವಾ ಕ್ರೈಸ್ತ ವರ್ಷಾಚರಣೆಗೂ ಸ್ಫೋಟಕ್ಕೂ ಸಂಬಂಧವಿರಲೂ



ಆಸ್ಪತ್ರೆಯಲ್ಲಿ ಗಾಯಾಳು

ಬಹುದು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆಯಾದ್ದರಿಂದ ಸ್ಫೋಟಿಸಿದವರಿಗೆ ಇಲ್ಲಿನ ಸಿಸಿ ಟಿವಿ ವ್ಯವಸ್ಥೆ ಮತ್ತು ಸ್ಥಳ ಪರಿಚಯ ಚೆನ್ನಾಗಿರುವುದರಿಂದ ಸ್ಥಳೀಯ ರಾಜಕಾರಣಕ್ಕೂ ಸ್ಫೋಟಕ್ಕೂ ಸಂಬಂಧವಿರಲಿಕ್ಕೂ ಸಾಕು.

ಐಸಿಸ್ ಭ್ರಮೆಯಲ್ಲಿ...!

ಇದೆಲ್ಲದರ ಹೊರತಾಗಿಯೂ ಮೆಹದಿ ಬಿಸ್ವಾಸ್ ಎಂಬ ಐಸಿಸ್ ಉಗ್ರರ ಅಭಿಮಾನಿಯನ್ನು ಪೊಲೀಸರು ಬಂಧಿಸಿದ್ದಕ್ಕೆ ಪ್ರತೀಕಾರವಾಗಿ ಮುಸ್ಲಿಂ ಉಗ್ರರೇ ಸ್ಫೋಟ ನಡೆಸಿರಬಹುದೆಂಬ ಮತ್ತೊಂದು ಲೆಕ್ಕಾಚಾರವನ್ನೇ ತೆಗೆದುಕೊಂಡರೆ ಅದು ಬೇರೆಯದೇ ಅರ್ಥ ಕೊಡುತ್ತದೆ. ಮೆಹದಿ ಬಿಸ್ವಾಸ್ ಬಂಧನದ ವಿರುದ್ಧ ಡಿಸಿಪಿ ಅಭಿಷೇಕ್ ಗೋಯಲ್‌ರ ಟ್ವಿಟ್ಟರ್‌ಗೆ ಬಂದ ಬೆದರಿಕೆಯನ್ನು ಬೆನ್ನತ್ತಿದ ಪೊಲೀಸರಿಗೆ ಅದು ಮಧ್ಯ ಪ್ರಾಚ್ಯದ ಯಾವುದೋ ದೇಶದಿಂದ ಬಂದಿದ್ದೆಂದು ಗೊತ್ತಾಯಿತಾದರೂ ಅದನ್ನು ಕಳಿಸಿದಾತ ಯಾರು ಎತ್ತ ಎಂಬುದೇ ಸ್ಪಷ್ಟವಾಗಿಲ್ಲ. ಮೆಹದಿ ಐಸಿಸ್‌ನ ಅಭಿಮಾನಿಯೇ ಹೊರತು ಐಸಿಸ್‌ನ ಯಾರೊಬ್ಬರೊಂದಿಗೂ ನೇರ ಸಂಪರ್ಕವಿದ್ದವನಲ್ಲ. ಅಭಿಮಾನದ ಹುಚ್ಚಿಗೆ ಬಿದ್ದು ಐಸಿಸ್ ಹೆಸರಲ್ಲಿ ಟ್ವಿಟ್ಟರ್ ಖಾತೆ ತೆರೆದಿದ್ದು ನಿಜವೆ. ಅದು ಆತನ ಇಸ್ಲಾಂ ಧರ್ಮಾಂಧ ಮನಸ್ಸಿನ ಪ್ರತೀಕವಷ್ಟೆ. ಐಸಿಸ್ ಹೆಸರಲ್ಲಿ ಟ್ವಿಟರ್ ಖಾತೆ ನಡೆಸುತ್ತಿದ್ದವನನ್ನು ಬಂಧಿಸಿದ್ದರ ವಿರುದ್ಧ ಮಧ್ಯಪ್ರಾಚ್ಯದ ಮತ್ತಾರೋ ಐಸಿಸ್ ಅಭಿಮಾನಿಯೊಬ್ಬ ಬೆದರಿಕೆ ಸಂದೇಶ ಹಾಕಿರಲೂಬಹುದು.

ಆದರೆ ಇದೇ ಕಾರಣಕ್ಕೆ ಚರ್ಚ್‌ಸ್ಟ್ರೀಟ್‌ನ ಸ್ಫೋಟ ಸಂಭವಿಸಿದೆಯೆನ್ನಲಾಗದು. ಏಕೆಂದರೆ ಇಷ್ಟು ವೇಗವಾಗಿ ಇಂಥದೊಂದು ವಿಧ್ವಂಸಕ ನಡೆಸುವಷ್ಟು ನೆಟ್‌ವರ್ಕಾಗಲಿ, ತಾಕತ್ತಾಗಲಿ ಐಸಿಸ್‌ಗಿಲ್ಲ. ಹಾಗೊಮ್ಮೆ ಐಸಿಸ್ ಅಭಿಮಾನಕ್ಕೆ ಬಿದ್ದು ಸಿಮಿ, ಇಂಡಿಯನ್ ಮುಜಾಹಿದ್ದೀನ್ ಅಥವಾ ಅಲ್‌ಉಮ್ಮಾದಂಥ ಪಳಗಿದ ಭಯೋತ್ಪಾದಕರು ಕೃತ್ಯವೆಸಗಿರಬಹುದೆ? ಈ ಪ್ರಶ್ನೆಗೂ ಸಮಂಜಸ ಕಾರಣ ಸಿಗುತ್ತಿಲ್ಲ. ಜೈಲಿನಲ್ಲಿರುವ ತಮ್ಮ ಕಟ್ಟರ್ ಉಗ್ರರನ್ನೇ ಬಿಡಿಸಿಕೊಳ್ಳಲು ದುಸ್ಸಾಹಸಕ್ಕೆ ಕೈಹಾಕದ ಇಸ್ಲಾಮಿಕ್ ಗುಂಪುಗಳು ಯಾರೋ ಟ್ವಿಟರ್ ಖಾತೆ ತೆರೆದವನಿಗಾಗಿ ತಲೆಕೆಡಿಸಿಕೊಳ್ಳುವುದುಂಟಾ? ಹಾಗೊಮ್ಮೆ ಐಸಿಸ್ ನಂಟಿರುವ ಸಿಮಿಯೇ ಈ ಕೃತ್ಯವೆಸಗಿದ್ದರೆ ಅದು ಮೆಹದಿ ಬಿಸ್ವಾಸ್‌ನನ್ನು ಮತ್ತಷ್ಟು ತೊಂದರೆಗೆ ಸಿಲುಕಿಸುವ ಪ್ರಯತ್ನವಾಗುತ್ತದೆಯೇ ಹೊರತು ಪ್ರಯೋಜನವಿಲ್ಲ. ಮೆಹದಿಗೆ ಐಸಿಸ್ ನೇರ ಸಂಪರ್ಕವಿರುವುದನ್ನು ಇಸ್ಲಾಮಿಕ್ ಗುಂಪುಗಳೇ ಸಾಬೀತು ಮಾಡಿದಂತಾಗುತ್ತದೆ ಮತ್ತು ಮೆಹದಿಯ ಪಾಲಿಗೆ ಮತ್ತಷ್ಟು ಸಮಸ್ಯೆಗಳೇ ಹೆಚ್ಚಾಗುತ್ತದೆ ಎಂಬ ಪ್ರಜ್ಞೆಯಿಲ್ಲದಷ್ಟು ಮೂರ್ಖರಲ್ಲ ಮುಸ್ಲಿಂ ಉಗ್ರರು.

ಈ ಎಲ್ಲಾ ಸಾಧ್ಯತೆಗಳ ಹಿನ್ನೆಲೆಯಲ್ಲೇ ಬೆಂಗಳೂರು ಪೊಲೀಸರು ಇದೆಲ್ಲದರ ಹೊರತಾದ ಮತ್ತೂ ಒಂದು ದೃಷ್ಟಿಕೋನದಿಂದಲೂ ತನಿಖೆಗಿಳಿದಿದ್ದಾರೆ. ಅದು ಬಲಪಂಥೀಯ ಕಟ್ಟರ್ ಗುಂಪುಗಳು. ಅಂದರೆ ಸಂಘ ಪರಿವಾರದ ಅಥವಾ ಅದಕ್ಕೆ ಸಮಾನ ಮನಸ್ಥಿತಿಯ ಸಂಘಟನೆಗಳು. ಅಂಥಾದ್ದೊಂದು ಸಾಧ್ಯತೆಯನ್ನೂ [illegible] ಎನ್ನುತ್ತಾರೆ ಹಿರಿಯ [illegible] ಅಧಿಕಾರಿಯೊಬ್ಬರು. [illegible] ಬಲ್ಲವರಾರು?

● ರಾ. ಸೋಮನಾಥ್

...ಂದ್ರಮಂತ್ರಿ ಸದಾನಂದಗೌಡರಿಗೆ ಸ್ಫೋಟದ ಕನಸು ಬಿದ್ದಿತ್ತೆ?


ರಾಷ್ಟ್ರ ಬಿಜೆಪಿ ಅಧ್ಯಕ್ಷ ಅಮಿತ್ ಷಾನ ಬೆಂಗಳೂರು ಭೇಟಿಗೂ ಚರ್ಚ್‌ಸ್ಟ್ರೀಟ್ ...ಟಕ್ಕೂ ಸಂಬಂಧವಿದೆಯೆ?


ಈ ನಿಟ್ಟಿನಲ್ಲೂ ಪೊಲೀಸರು ತನಿಖೆಗಿಳಿಯುವುದಕ್ಕೂ ಕಾರಣವಿದೆ. ಇದೇ ಜನವರಿ ...ರಕ್ಕೆ ಬೆಂಗಳೂರಿನಲ್ಲಿ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಿಗದಿಯಾಗಿತ್ತು. ...ದ ಅಧಿಕಾರಸ್ಥ ರಾಜ್ಯಗಳೆಲ್ಲವನ್ನೂ ಹೊರತುಪಡಿಸಿ ಕಾಂಗ್ರೆಸ್ ಅಧಿಕಾರದಲ್ಲಿರುವ ...ಟಕದಲ್ಲೇ ಬಿಜೆಪಿ ತನ್ನ ಕಾರ್ಯಕಾರಿಣಿ ಸಭೆ ನಡೆಸುತ್ತದೆಯೆಂದರೆ ಅದರ ಉದ್ದೇಶ ... ಹುನ್ನಾರವೇ ಬೇರೆಯಿರುತ್ತದೆ. ಬಿಜೆಪಿ ಮತ್ತು ಕೆಜೆಪಿ ವಿಭಜನೆಯಿಂದಾಗಿ ...ಸ್ ಅಧಿಕಾರಕ್ಕೆ ಬರುವಂತಾಗಿದ್ದರ ಲೆಕ್ಕಾಚಾರವೂ ಸಂಘ ಪರಿವಾರಕ್ಕಿದೆ. ...ತ ಸುಮ್ಮನಾಗುವಂತಿಲ್ಲವಲ್ಲ, ಲವ್ ಜಿಹಾದ್, ಮುಝಫರ್‌ನಗರ ...ಚಾರ, ಮುಸ್ಲಿಮರಿಗೆ ಮೀಸಲಾತಿ ವಿಚಾರ; ಇತ್ಯಾದಿ ಕೋಮು ...ಯ ಕಿಚ್ಚು ಹಚ್ಚಿಯೇ ಉತ್ತರ ಪ್ರದೇಶದಲ್ಲಿ ದೊಡ್ಡಮಟ್ಟದ ... ಕಂಡ ಅಮಿತ್ ಷಾಗೆ ರಕ್ತದ ರುಚಿ ಕರಗತವಾಗಿ ಬಿಟ್ಟಿದೆ.

ಇದನ್ನು ಯಥಾವತ್ತಾಗಿ ಕರ್ನಾಟಕಕ್ಕೆ ಅಳವಡಿಸುವ ...ನಾಗೇ ಸಂಘ ಪರಿವಾರ ತೀರ್ಥಹಳ್ಳಿಯ ನಂದಿತಾ ...ಕ್ಕೆ ಕೈಯಿಟ್ಟಿತು. ಬೆನ್ನಲ್ಲೇ ಮೌಢ್ಯ ವಿರೋಧಿ ...ಯನ್ನೂ ಇದೇ ಉದ್ದೇಶಕ್ಕೆ ತಿರುಚಲಾಯಿತು. ಇದಕ್ಕೆ ...ಗಿ ಹಿಂದೂ ಧಾರ್ಮಿಕ ದತ್ತಿ ಕಾಯ್ದೆಗೆ ಕಾಂಗ್ರೆಸ್ ...ದಿ ತರಹೊರಟದ್ದು ಬಿಜೆಪಿಯ ರೊಟ್ಟಿ ಜಾರಿ ... ಬಿದ್ದಂತಾಯ್ತು. ದಕ್ಷಿಣ ಭಾರತದ ರಾಜ್ಯಗಳ ... ಕರ್ನಾಟಕವನ್ನೇ ತನ್ನ ಬೆಂಕಿ ರಾಜಕಾರಣದ ...ಗಶಾಲೆಯನ್ನಾಗಿ ಮಾಡಹೊರಟ ಅಮಿತ್ ... ಈ ಎಲ್ಲಾ ಲೆಕ್ಕ ಹಾಕಿಯೇ ಬಿಜೆಪಿ ...ರಿಣಿಯನ್ನು ಬೆಂಗಳೂರಿನಲ್ಲಿ ನಿಗದಿಗೊಳಿಸಿದ್ದು!


...ಪರಾಸ್ತವೋ ಕಾಕತಾಳೀಯವೋ ಬೆಂಗಳೂರು ...ರಿಣಿಗೆ ಆರು ದಿನ ಬಾಕಿಯಿರುವಂತೆ ಬಾಂಬ್ ...ಸಿದೆ. ಸ್ಫೋಟಿಸಿದ ಇಷ್ಟಕ್ಕೇ ನಿಮಿಷಕ್ಕೆ ಕೇಂದ್ರ ... ಸದಾನಂದಗೌಡರು ಪಕ್ಕದಲ್ಲೆಲ್ಲೋ ಹೊಂಚು ...ಕುತ್ತಿದ್ದರೋ ಎಂಬಂತೆ ಚರ್ಚ್‌ಸ್ಟ್ರೀಟ್‌ಗೆ ಭೇಟಿ ...ಟ್ಟರು. ಜೊತೆಗೆ ರಾಜ್ಯ ಸರ್ಕಾರದ ವೈಫಲ್ಯವನ್ನೂ ...ಟ್ಟರು. ಎಷ್ಟೇ ವೇಗ ಹಾಕಿದರೂ ಸದಾನಂದಗೌಡರು ಆ ವೇಗದಲ್ಲಿ ಸ್ಫೋಟ ... ಬರುವುದು ಸಾಧ್ಯವೇ ಇಲ್ಲ. ಅಂದರೆ ಮೊದಲೇ ಸೂಚನೆಯಿತ್ತೆ?

...ಕ್ಕೆ ಸಕ್ಕರೆಯೇ [illegible] ಮೀಡಿಯಾಗಳು, ಟೀವಿ ಚಾನಲ್ಲುಗಳು ಸ್ಫೋಟಿಸಿದ





ಅಮಿತ್ ಶಾ




ಒಂದೇ ಗಂಟೆಯಲ್ಲಿ ಎನ್‌ಐಎ ಅಂದರೆ ರಾಷ್ಟ್ರೀಯ ತನಿಖಾ ದಳ ಸ್ಫೋಟದ ತನಿಖೆ ಕೈಗೆತ್ತಿಕೊಳ್ಳಲಿದೆ ಎಂದು ಸುದ್ದಿ ಬಿತ್ತರಿಸುತ್ತಾರೆ. ರಾಜ್ಯ ಪೊಲೀಸರೇ ತನಿಖೆ ನಡೆಸುತ್ತಿರುವಾಗ ರಾಷ್ಟ್ರೀಯ ತನಿಖಾ ದಳ ತನಿಖೆ ಮಾಡುತ್ತದೆಯೆಂಬ ಆತುರ ಈ ಟಿವಿಗಳಿಗೇಕೆ?

ಇದ್ದಕ್ಕಿದ್ದಂತೆ ಇದು ನಿಷೇಧಿತ ಸಿಮಿ ಸಂಘಟನೆಯ ಕೃತ್ಯವೆಂದು, ಯಾಸಿನ್ ಭಟ್ಕಳ್ ನೇತೃತ್ವದ ಇಂಡಿಯನ್ ಮುಜಾಹಿದ್ದೀನ್ ಕೃತ್ಯವೆಂದು, ಅದು ತಪ್ಪಿದರೆ ಐಸಿಸ್ ಉಗ್ರರೇ ಮಾಡಿರಬೇಕೆಂದೂ, ಇವರ್‍ಯಾರೂ ಮಾಡದ ಪಕ್ಷದಲ್ಲಿ ತಮಿಳುನಾಡಿನ ಅಲ ಉಮ್ಮಾವೇ ಎಸಗಿರಬೇಕೆಂದೂ ಊಹಾತ್ಮಕ ಸಾಧ್ಯತೆಯ ತನಿಖಾ ವರದಿಗಳನ್ನು ಟಿವಿಗಳು ಬಿತ್ತರಿಸಿದ್ದೇಕೆ? ಯಾವೊಂದು ಇಸ್ಲಾಮಿಕ್ ಸಂಘಟನೆಯೂ ತಾನೇ ಹೊಣೆಯೆಂದು ಹೇಳಿಕೊಂಡಿಲ್ಲ, ಪೊಲೀಸರು ಕೂಡ ಇಂಥವರೇ ಮಾಡಿರುವ ಸಾಧ್ಯತೆ ಇದೆಯೆಂದು ಹೇಳಿಕೆ ಕೊಟ್ಟಿಲ್ಲ. ಹಾಗಿದ್ದ ಮೇಲೆ ಮೀಡಿಯಾಗಳು ಯಾವ ಲೆಕ್ಕಾಚಾರದ ಮೇಲೆ ಇದನ್ನು ಮುಸ್ಲಿಂ ಉಗ್ರರೇ ಮಾಡಿರಬೇಕೆಂಬ ಆರೋಪ ಹೊರಿಸುತ್ತಾರೆ?

ಟಿವಿಗಳ ಆತುರ, ಸದಾನಂದಗೌಡರ ಅನುಮಾನಾಸ್ಪದ ಭೇಟಿ, ಬಿಜೆಪಿ ಕಾರ್ಯಕಾರಿಣಿ ಮತ್ತು ಅಮಿತ್ ಷಾ ಭೇಟಿ ಜೊತೆಗೆ ಬಿಜೆಪಿಯ ಇತ್ತೀಚಿನ ಕೇಸರೀಕರಣ ಹಿನ್ನೆಲೆಯಲ್ಲಿ ಬರುವ ಮತ್ತೊಂದು ಅನುಮಾನವೆಂದರೆ- ಇದು ಬಲಪಂಥೀಯ ಉಗ್ರರ ಕೈವಾಡವೂ ಏಕಿರಬಾರದು? ಹಾಕೇಕೆತ್ಯೆನೆಂದರೆ ಮುಸ್ಲಿಂ ಸಂಘಟನೆಗಳಿಗಿಂತ ಬಲಪಂಥೀಯ ಉಗ್ರ ಗುಂಪುಗಳ ಮೇಲೆಯೇ ಪೊಲೀಸರ ಅನುಮಾನ ಹೆಚ್ಚಾಗಿದೆ.

ಏಕೆಂದರೆ ಅಮಿತ್ ಷಾ ಕಾಲಿಟ್ಟಲೆಲ್ಲ ನರಬಲಿ, ರಕ್ತ ತರ್ಪಣ ಇರಲೇಬೇಕಲ್ಲವೆ?

ಮತಾಂತರ ನಿಷೇಧ ಕಾನೂನು ಮತ್ತು ರಹಸ್ಯ ಉದ್ದೇಶಗಳು




ಮೋದಿ ಸರ್ಕಾರ ಅಧಿಕಾರಕ್ಕೆ ಬಂದಂದಿನಿಂದ ಸಂಘ ಪರಿವಾರವೆಂಬ ಬಹುತಲೆಗಳ ವಿಷಸರ್ಪ ತನ್ನೆಲ್ಲಾ ಹೆಡೆಗಳನ್ನು ಪೂರ್ತಿ ಬಿಚ್ಚಿ ಘೂತ್ಕರಿಸತೊಡಗಿದೆ. ಧರ್ಮ ಜಾಗರಣ ಸಮಿತಿ, ವಿಹಿಂಪ, ಬಜರಂಗದಳದಂಥವುಗಳು ನೇರವಾಗಿ ಅಲ್ಪಸಂಖ್ಯಾತರನ್ನು ಬೆದರಿಸುವುದರೊಂದಿಗೆ ಕಚ್ಚಲೂ ಆರಂಭಿಸಿವೆ. ಚಡ್ಡಿಪಡೆಗಳ ಉಗ್ರ ಭಾಷಣ, ಕೋಮು ಗಲಭೆ, ಕೇಸರೀಕರಣ, 'ಲವ್ ಜಿಹಾದ್', 'ಕ್ರಿಸ್‌ಮಸ್ ಬದಲು ಉತ್ತಮ ಆಡಳಿತ', ಗೋಡ್ಸೆ ಮಂದಿರ ಇತ್ಯಾದಿ ಅನರ್ಥಗಳ ಸರಮಾಲೆಯಲ್ಲಿ ಇತ್ತೀಚಿನ ಎರಡು ಹೊಸ ವರಸೆಗಳೆಂದರೆ 'ಘರ್ ವಾಪಸಿ' ಮತ್ತು 'ಬಹು ಲಾವೊ ಬೇಟಿ ಬಚಾವೊ'. 'ಘರ್ ವಾಪಸಿ' ಅಥವಾ 'ಮರಳಿ ಮನೆಗೆ' ಅಂದರೆ ಒಂದಾನೊಂದು ಕಾಲದಲ್ಲಿ ಇಸ್ಲಾಂ, ಕ್ರೈಸ್ತ ಮತಗಳನ್ನು ಸ್ವೀಕರಿಸಿದ್ದ ಜನರ ಇಂದಿನ ಪೀಳಿಗೆಗಳನ್ನು ಮರಳಿ ಹಿಂದೂ ಧರ್ಮಕ್ಕೆ ಕರೆತರುವುದಂತೆ! ಆದರೆ ಹೀಗೆ ಮರುಮತಾಂತರ ಆದವರೆಲ್ಲ ಯಾವ ಜಾತಿಗೆ ಮರಳುತ್ತಾರೆಂಬ ಪ್ರಶ್ನೆಗೆ ಸ್ಪಷ್ಟ ಉತ್ತರವಿನ್ನೂ ಸಿಕ್ಕಿಲ್ಲ!! ಇನ್ನು ಸದ್ಯದಲ್ಲೆ ಆರಂಭವಾಗಲಿರುವ 'ಬಹು ಲಾವೊ ಬೇಟಿ ಬಚಾವೊ' ಅರ್ಥಾತ್ 'ಸೊಸೆಯನ್ನು ತನ್ನಿ, ಮಗಳನ್ನು ರಕ್ಷಿಸಿ' ಎಂಬ ಕಾರ್ಯಕ್ರಮದ ಉದ್ದೇಶ ಮುಸ್ಲಿಂ ಅಥವಾ ಕ್ರೈಸ್ತ ಯುವತಿಯರನ್ನು ಮದುವೆಯಾಗುವ ಹಿಂದೂ ಯುವಕರನ್ನು ರಕ್ಷಿಸುವುದು ಮತ್ತು ಹಿಂದೂ ಯುವತಿಯರು ಮುಸ್ಲಿಂ ಅಥವಾ ಕ್ರೈಸ್ತ ಯುವಕರನ್ನು ವಿವಾಹವಾಗದಂತೆ ನೋಡಿಕೊಳ್ಳುವ ಕುರಿತು ಅರಿವು ಮೂಡಿಸುವುದು ಎಂದು ಹೇಳಲಾಗಿದೆ. ಇರಲಿ.


ಈಗ ದೇಶಾದ್ಯಂತ ಆರಂಭವಾಗಿರುವ ಈ 'ಘರ್ ವಾಪಸಿ' ಕಾರ್ಯಕ್ರಮ ಇಷ್ಟರತನಕ ಬುಡಕಟ್ಟು ಪ್ರದೇಶಗಳಿಗಷ್ಟೆ ಸೀಮಿತವಾಗಿತ್ತು, ಬುಡಕಟ್ಟು ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಸಂಘ ಪರಿವಾರ ಘಟಕಗಳೆಂದರೆ 'ವಿವೇಕಾನಂದ ಕೇಂದ್ರ', 'ಭಾರತ್ ಕಲ್ಯಾಣ್ ಪರಿಷತ್', 'ಫ್ರೆಂಡ್ಸ್ ಆಫ್ ಇಂಡಿಯ ಸೊಸೈಟಿ', 'ವನವಾಸಿ ಕಲ್ಯಾಣ ಆಶ್ರಮ', 'ಏಕಲ್ ವಿದ್ಯಾಲಯ' ಮತ್ತು 'ಸೇವಾ ಭಾರತಿ'. ಅವುಗಳು ನಡೆಸುವ ಆದಿವಾಸಿಗಳ ಶಿಕ್ಷಣ, ಹಿಂದೂಕರಣ ಮುಂತಾದ ಕಾರ್ಯಕ್ರಮಗಳಿಗೆ ಅಮೆರಿಕದಲ್ಲಿರುವ ಇಂಟರ್‌ನ್ಯಾಷನಲ್ ರಿಲೀಫ್ ಫಂಡ್‌ನಿಂದ ಮಿಲಿಯನ್‌ಗಟ್ಟಲೆ ಡಾಲರ್‌ಗಳು ಹರಿದುಬರುತ್ತದೆ. 'ವನವಾಸಿ ಕಲ್ಯಾಣ ಆಶ್ರಮ', 'ಏಕಲ್ ವಿದ್ಯಾಲಯ', 'ಸೇವಾ ಭಾರತಿ' ಮೇಲೆ ಮಧ್ಯಪ್ರದೇಶದಲ್ಲಿ ಕ್ರೈಸ್ತರ ವಿರುದ್ಧ ನಡೆದ ದಾಳಿಗಳಲ್ಲಿ ಭಾಗಿಯಾಗಿರುವ ಆರೋಪವಿದೆ. ಅಸ್ಸಾಮಿನಲ್ಲಿ ಸ್ವಾಮಿ ಲಕ್ಷ್ಮಣಾನಂದ (ಈತ 2008ರಲ್ಲಿ ನಕ್ಸಲರಿಂದ ಹತ್ಯೆಗೀಡಾದಾಗ ಚಡ್ಡಿಗಳು ಅಸ್ಸಾಂ ಮತ್ತು ಕರ್ನಾಟಕಗಳಲ್ಲಿ ಚರ್ಚ್ ದಾಳಿ ನಡೆಸಿದ್ದರು), ಗುಜರಾತಿನಲ್ಲಿ ಸ್ವಾಮಿ ಅಸೀಮಾನಂದ (ಮಾಲೆಗಾಂವ್ ಸ್ಫೋಟಗಳ ಆರೋಪಿ) ಮೊದಲಾದವರು 'ವನವಾಸಿ ಕಲ್ಯಾಣ ಆಶ್ರಮ'ಗಳ ಮೂಲಕ ಬುಡಕಟ್ಟುಗಳ ಹಿಂದೂಕರಣ ಕಾರ್ಯದಲ್ಲಿ ನಿರತರಾಗಿದ್ದವರು. ಗುಜರಾತಿನ ಡಾಂಗ್ಸ್ ಜಿಲ್ಲೆಯಲ್ಲಿ 'ವನವಾಸಿ ಕಲ್ಯಾಣ ಆಶ್ರಮ' ಸ್ಥಾಪಿಸಿದ ಅಸೀಮಾನಂದ ಅಲ್ಲಿನ ದಲಿತ, ಆದಿವಾಸಿ ಸಮುದಾಯಗಳಲ್ಲಿ ಕೋಮು ವಿಷ ಹರಡಿಸುವ ಕೆಲಸ ಆರಂಭಿಸಿದ್ದ, ಅಲ್ಲಲ್ಲಿ ವಿಹಿಂಪ, ಬಜರಂಗ ದಳ, ಹಿಂದೂ ಜಾಗರಣ್ ಮಂಚ್ ಘಟಕಗಳನ್ನು ಸ್ಥಾಪಿಸಿ ಕೋಮು ಸಂಘರ್ಷಗಳ ವೇಳೆ ಬಳಸಲೆಂದು 15ರಿಂದ 25ರ ಹರೆಯದ ಯುವಕರನ್ನು ನೇಮಿಸಿದ್ದ. ನಂತರ ಕ್ರೈಸ್ತರು, ಅವರ ಪ್ರಾರ್ಥನಾಕೇಂದ್ರಗಳು, ಚರ್ಚುಗಳು, ಶಾಲೆಗಳು ಮುಂತಾದುವನ್ನು ಗುರಿಯಾಗಿಸಿ ದಾಳಿಗಳನ್ನು ಆಯೋಜಿಸಿದ್ದ. ಬುಡಕಟ್ಟು ಜನರನ್ನು ಹಿಂದೂಕರಣಗೊಳಿಸುವ ಕಾರ್ಯದ ಭಾಗವಾಗಿ ಹಿಂದೂ ದೇವತಾ ಮೂರ್ತಿಗಳ ವಿತರಣೆ, ದೇಗುಲಗಳ ನಿರ್ಮಾಣ, ಹಿಂದೂ ಹಬ್ಬಗಳ ಆಚರಣೆ, ಆರತಿ ಕಾರ್ಯಕ್ರಮ ಇತ್ಯಾದಿಗಳನ್ನು ದೊಡ್ಡ ಮಟ್ಟದಲ್ಲಿ ನಡೆಸುತ್ತಿದ್ದ. ಕ್ರೈಸ್ತ ಆದಿವಾಸಿಗಳನ್ನು ಹಿಂದೂ ಧರ್ಮಕ್ಕೆ ಮರುಮತಾಂತರ ಮಾಡುತ್ತಾ ಇದ್ದ. ಇವೆಲ್ಲದರ ಅರಿವು ಮೋದಿಗೆ ಇತ್ತು. 2002ರ ನರಮೇಧದಲ್ಲಿ ಸಕ್ರಿಯವಾಗಿ ಪಾಲ್ಗೊಂಡವರಲ್ಲಿ ಡಾಂಗ್ಸ್‌ನ ಕೆಲವು ದಲಿತ, ಬುಡಕಟ್ಟು ಯುವಕರೂ ಇದ್ದರು ಎನ್ನಲಾಗುತ್ತದೆ.



ಈಗಂತೂ ತಮ್ಮದೇ ಮೋದಿ ಸರ್ಕಾರ ಬಂದಮೇಲೆ ರೆಕ್ಕೆಪುಕ್ಕ ಬಲಿತುಕೊಂಡ ಚಡ್ಡಿಪಡೆಗಳಿಗೆ ಕಾಯ್ದೆ ಕಾನೂನು, ಕೋರ್ಟುಗಳ ಭಯವೆ ಇರುವಂತಿಲ್ಲ, ಇದ್ದಕ್ಕಿದ್ದಂತೆ ಬಲಾತ್ಕಾರ, ಬೆದರಿಕೆ, ಲಕ್ಷಗಟ್ಟಲೆ ದುಡ್ಡು, ಬಿಪಿಎಲ್ ಕಾರ್ಡು ಮುಂತಾದ ಆಮಿಷಗಳನ್ನೊಡ್ಡುವ ಮೂಲಕ ಕಡು ಬಡತನದಲ್ಲಿರುವ ಮುಸಲ್ಮಾನರನ್ನೂ ಕ್ರೈಸ್ತರನ್ನೂ ಹಿಂದೂ ಧರ್ಮಕ್ಕೆ ಮರುಮತಾಂತರಿಸುವ ಕೆಲಸವನ್ನು ದೊಡ್ಡ ಮಟ್ಟದಲ್ಲಿ ಆರಂಭಿಸಲಾಗಿದೆ. ಇದರ ಮರ್ಮವೇನು? ನಿಜ ಸಂಗತಿ ಏನೆಂದರೆ ಇದೆಲ್ಲ ಬೇಕಂತಲೆ ಎಬ್ಬಿಸಲಾಗುತ್ತಿರುವ ಗಲಾಟೆ ಮತ್ತು ಅದರ ಉದ್ದೇಶ ಹೊಸ ದೇಶವ್ಯಾಪಿ ಮತಾಂತರ ನಿಷೇಧ ಕಾನೂನನ್ನು ಜಾರಿಗೆ ತರುವುದು. ಪ್ರತಿಪಕ್ಷಗಳು, ಪ್ರಗತಿಪರರು ಆಕ್ಷೇಪಿಸಿದಾಗ ಬಿಜೆಪಿ ನಾಯಕರು "ಬನ್ನಿ, ಮತಾಂತರ ನಿಷೇಧ ಕಾನೂನು ಜಾರಿಗೊಳಿಸಲು ಸಹಕರಿಸಿ" ಎನ್ನುತ್ತಿದ್ದಾರೆ. ಈಗಾಗಲೆ ಕೆಲವು ರಾಜ್ಯಗಳು ಇಂತಹ ಮತಾಂತರ ನಿಷೇಧ ಕಾಯಿದೆಗಳನ್ನು ಜಾರಿಗೆ ತಂದಿವೆ ಎಂದು ವಾದಿಸುತ್ತಿದ್ದಾರೆ. ವಾಸ್ತವವಾಗಿ ರಾಜ್ಯಗಳ ಈ ಕಾಯಿದೆಗಳಿಗೆ ಆಯಾ ಸದನಗಳ ಅನುಮೋದನೆ ದೊರೆತಿದೆಯಷ್ಟೆ ಹೊರತು ರಾಜ್ಯಪಾಲರುಗಳ ಅಂಕಿತವಿನ್ನೂ ಬಿದ್ದಿಲ್ಲ, ಅಂದರೆ ಅವಿನ್ನೂ ನೆಲದ ಕಾನೂನುಗಳಾಗಿಲ್ಲ, ಕೆಲವು ಕಾಯಿದೆಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದ್ದು ಅವೆಲ್ಲವೂ ಇತ್ಯರ್ಥಕ್ಕೆ ಬಾಕಿ ಇವೆ. ವಿಪರ್ಯಾಸ ಏನೆಂದರೆ ಈಗಾಗಲೆ ಆ ಕಾಯಿದೆಗಳಡಿ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಛತ್ತೀಸ್‌ಗಢದಲ್ಲಿ ಸುಮಾರು 270 ಪ್ರಕರಣಗಳನ್ನು ದಾಖಲಿಸಲಾಗಿದೆ. ನೂರಾರು ಪಾಸ್ಟರ್‌ಗಳನ್ನು ಬಂಧಿಸಿ ಜಾಮೀನಿನಲ್ಲಿ ಬಿಡುಗಡೆ ಮಾಡಲಾಗಿದೆ. ಮಧ್ಯಪ್ರದೇಶ, ಗುಜರಾತ್‌ಗಳಲ್ಲಿಯೂ ಈ ಕಾಯಿದೆಯ ದುರ್ಬಳಕೆ ಆಗುತ್ತಿರುವುದು ಅನುಭವಕ್ಕೆ ಬಂದಿದೆ. ಅಲ್ಲಿ ಮತಾಂತರ ಹೊಂದಬಯಸುವ ಯಾರೇ ಆಗಲಿ ಮೊದಲು

ತಿಂಥಣಿಯಲ್ಲಿ ಅಭೂತಪೂರ್ವ ಸಮಾವೇಶ








ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಜೊತೆಗೆ 'ಪತ್ರಿಕೆ' ಮತ್ತು ಅದರ ಬಳಗ ವೇದಿಕೆಯ ಹುಟ್ಟಿನಿಂದಲೂ ನೇರವಾಗಿ ಜೊತೆಗೂಡುತ್ತಾ ಬಂದಿದೆ. ಪತ್ರಿಕೆಯು ಪ್ರತಿಪಾದಿಸುವ ಪ್ರಜಾತಂತ್ರ ಮತ್ತು ಸೌಹಾರ್ದತೆಯನ್ನು ತನ್ನ ಪ್ರಧಾನ ಉದ್ದೇಶವಾಗಿ ಹೊಂದಿರುವ ಕೋಮು ಸೌಹಾರ್ದ ವೇದಿಕೆಯು ಕಳೆದ 12 ವರ್ಷಗಳಿಂದ ಕರ್ನಾಟಕದಲ್ಲಿ ಮಾಡುತ್ತಾ ಬಂದಿರುವ ಕೆಲಸವು ಹಲವು ರೀತಿಯಲ್ಲಿ ಅನನ್ಯವಾದುದು. ಈ ಮಾತುಗಳನ್ನು ಹೇಳಿದ್ದು ವೇದಿಕೆಯ ಪದಾಧಿಕಾರಿಗಳಲ್ಲ, ದೇಶಾದ್ಯಂತ ಕೋಮುವಾದದ ವಿರುದ್ಧ ಹೋರಾಡುತ್ತಾ, ದೇಶದ ಹಲವು ರಾಜ್ಯಗಳ ಜೊತೆ ಒಡನಾಟ ಹೊಂದಿರುವ ತೀಸ್ತಾ ಸೆಟ್ಲ್‌ವಾಡ್ ಅವರು ಅವಕಾಶ ಸಿಕ್ಕಾಗಲೆಲ್ಲ ಈ ಮಾತನ್ನು ಹೇಳುತ್ತಿರುತ್ತಾರೆ.

ಅದಕ್ಕೆ ಕಾರಣವನ್ನು ತೀಸ್ತಾ ತಿಂಥಣಿಯಲ್ಲಿ ಮತ್ತೊಮ್ಮೆ ಕಂಡುಕೊಂಡರು. ತಿಂಥಣಿ ಕ್ಷೇತ್ರವನ್ನು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು 4ನೇ ರಾಜ್ಯ ಸಮ್ಮೇಳನಕ್ಕೆ ಆಯ್ದುಕೊಂಡಿದ್ದುದರಲ್ಲೇ ಆ ಮಹತ್ವವಿತ್ತು. ಮೌನುದ್ದೀನ್ ಯಾನೆ ಮೋನಪ್ಪಯ್ಯ, ಅಲ್ಲಿ ಮನುಷ್ಯ ಬದುಕಿನ ಕುರಿತಾಗಿ, ಹಿಂದೂ–ಮುಸ್ಲಿಮರ ಸಹಬಾಳ್ವೆಯ ಬದುಕಿನ ಕುರಿತಾಗಿ ಪ್ರಯೋಗ ನಡೆಸಿದ್ದಾನೆ. ಒಂದೇ ಕಟ್ಟಡದಲ್ಲಿ ದರ್ಗಾ ಮತ್ತು ಮೌನೇಶ್ವರನ ಗುಡಿ ಯಾವ ತಕರಾರೂ ಇಲ್ಲದೇ ನೆಲೆಸಿವೆ. ಪಕೀರರಿಗೆ, ಬರುವ ಭಕ್ತರಿಗೆ ಮತ್ತು ಅನುಭಾವಿಗಳಿಗೆ ಅವೆರಡೂ ಬೇರೆ ಬೇರೆಯಲ್ಲ,

ವೇದಿಕೆಯ ಕಾರ್ಯದರ್ಶಿ ಕೆ.ಎಲ್.ಅಶೋಕ್ ಹೇಳಿದಂತೆ, ಇಂತಹ ಸೌಹಾರ್ದದ ಕ್ಷೇತ್ರಗಳು (ಬಾಬಾಬುಡನ್‌ಗಿರಿಯೂ ಒಳಗೊಂಡಂತೆ) ಯಾವುದೇ ಗೊಂದಲಗಳಿಲ್ಲದೇ ನಡೆಯುತ್ತಿರುವುದಕ್ಕೂ ನಮ್ಮ ಸರ್ಕಾರಗಳ ಧೋರಣೆಗೂ ಸಂಬಂಧವಿದೆ. ವ್ಯಾಪಾರವೇ ಪ್ರಧಾನವಾಗಿರುವ ಧಾರ್ಮಿಕ ಕ್ಷೇತ್ರಗಳು, ಪಕಾಲದಲ್ಲಿ ಶಾಪಿಂಗ್ ಸೆಂಟರ್‌ಗಳೂ, ಪಿಕ್‌ನಿಕ್ ತಾಣಗಳೂ ಇನ್ನೂ ಏನೇನೋ ಆಗಿರುತ್ತವೆ. ಆದರೆ ತಿಂಥಣಿಗೆ ಸಾಕಷ್ಟು ಬಸ್ಸುಗಳೂ ಇಲ್ಲ, ಕುಡಿಯುವ ನೀರು, ಶೌಚಾಲಯ ಒಳಗೊಂಡಂತೆ ಯಾವುದೂ ಸುಲಭಕ್ಕೆ ಸಿಗುವುದಿಲ್ಲ, ಇಂತಹ ಜಾಗದಲ್ಲಿ ಹೈದರಾಬಾದ್ ಕರ್ನಾಟಕದ ಗೆಳೆಯರು ಮತ್ತು ವೇದಿಕೆಯ ಕೇಂದ್ರ ಸಮಿತಿ ತನ್ನ ಎರಡು ದಿನಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನಿಶ್ಚಯಿಸಿದ್ದರು.

ಆದರೆ, ಆಯೋಜಕರ ನಿರೀಕ್ಷೆಗೆ ಮೀರಿ ಪ್ರತಿನಿಧಿಗಳು ಹಾಗೂ ಜನರು ಬಂದರು ಎನ್ನುವುದಕ್ಕೆ ಸಾಕ್ಷಿಯೆಂದರೆ, ಮೊದಲ ದಿನದ ಪ್ರತಿನಿಧಿಗಳ ಸಮಾವೇಶ ಹಾಗೂ ಎರಡನೆಯ ದಿನದ 'ಸಹಬಾಳ್ವೆಯ ಪರಂಪರೆಯ ಸಮಾಗಮ'ಗಳೆರಡಕ್ಕೂ ಹಾಕಿದ ಕುರ್ಚಿಗಳ ಸಂಖ್ಯೆ ಸಾಲದೇ ಬಂದವು! ಯಥಾಪ್ರಕಾರ ವೇದಿಕೆಯ ಮೇಲೆ ಪ್ರತಿ ಗೋಷ್ಠಿಯಲ್ಲೂ ನಾಡಿನ ವಿವಿಧ ಭಾಗಗಳ, ವಿವಿಧ ಕ್ಷೇತ್ರಗಳ ಹಾಗೂ ವಿವಿಧ ಪ್ರಗತಿಪರ ಧಾರೆಗಳ ಪ್ರಾತಿನಿಧಿಕ ಸಮಾಗಮವಾಗಿತ್ತು. 2002-03ರಲ್ಲಿ ಚಿಕ್ಕಮಗಳೂರಿನಲ್ಲಿ ಯಾವ ರೀತಿಯಲ್ಲಿ ಎಲ್ಲಾ ಎಡ, ಪ್ರಗತಿಪರ ಆಲೋಚನೆಯ ಸಂಘಟನೆಗಳು ಹಾಗೂ ಎಡಪಕ್ಷಗಳ ಪ್ರತಿನಿಧಿಗಳು ಸೇರಿಕೊಂಡಿದ್ದರೋ, ಈ ಸಾರಿಯೂ ಎಲ್ಲರ ಪ್ರಾತಿನಿಧ್ಯ ಎದ್ದು ಕಾಣುತ್ತಿತ್ತು, ಎಲ್ಲರನ್ನೂ ಒಳಗೊಳ್ಳುವ ಹಾಗೂ ಕಾರ್ಯಕ್ರಮದ ಸಕಲ ಸಿದ್ಧತೆಗಳನ್ನೂ ಅಚ್ಚುಕಟ್ಟಾಗಿ ಮಾಡಿದ್ದರಲ್ಲಿ, ಹಿಂದಿನೆಲ್ಲಾ ಕಾರ್ಯಕ್ರಮಗಳಿಗಿಂತ ಇದು ಇನ್ನೂ ಒಂದು ಕೈ ಮೇಲಾಗಿತ್ತು.

ಹಿಂದಿಗಿಂತಲೂ ಭಿನ್ನವಾಗಿದ್ದ ಮತ್ತೊಂದು ಅಂಶವೆಂದರೆ, ಹೈದರಾಬಾದ್ ಕರ್ನಾಟಕದ ಶ್ರೀಮಂತ ಕಲಾಪ್ರಕಾರಗಳ ಪ್ರದರ್ಶನ. ಚೌಡಿಕೆ, ಬಂಡಿಗಾಲಿಯ ಹೆಜ್ಜೆ ಮೇಳ, ಮೊಹರಂ ಪದಗಳು, ಮೋನಪ್ಪಯ್ಯನ ಪದಗಳು. ಕಡಕೋಳ ಮಡಿವಾಳಪ್ಪನ ತತ್ವಪದಗಳು, ಒಬ್ಬರಿಗಿಂತ ಒಬ್ಬರು ಹೋರಾಟದ ಹಾಡುಗಳನ್ನು ಹಾಡುವವರು, ಹೆಣ್ಣು ಮಕ್ಕಳ ದೊಳ್ಳು ಕುಣಿತ, ಆಯನೂರಿನ ತಮಟೆ ತಂಡ, ಜಾನಪದ ಹಾಡುಗಳು ಎಲ್ಲವೂ ಅಲ್ಲಿದ್ದವು. ಸಹಬಾಳ್ವೆಯ ಪರಂಪರೆಯ ಶ್ರೀಮಂತ ಸಾಂಸ್ಕೃತಿಕ ಆಯಾಮವನ್ನು ತೆರೆದಿಟ್ಟವು. ಮೊದಲ ದಿನ ಬಂದು ಮಾತನಾಡಿದ ಗದುಗಿನ ಡಂಬಳ ಮಠದ ಡಾ.ತೋಂಟದಾರ್ಯ ಸ್ವಾಮೀಜಿಗಳು ಇಲ್ಲಿನ ಪರಂಪರೆಯ ಎಲ್ಲಾ ಮಗ್ಗುಲುಗಳನ್ನು ಅರ್ಥಪೂರ್ಣವಾಗಿ ಬಿಡಿಸಿಟ್ಟರು. ಬಸವ ಪರಂಪರೆಯ ಜೀವಂತಿಕೆಗೆ ಎರಡನೆಯ ದಿನ ಉದ್ಘಾಟನೆ ನೆರವೇರಿಸಿದ ನಿಡುಮಾಮಿಡಿ ಸ್ವಾಮೀಜಿಯವರು, ಬಸವಲಿಂಗ ಪಟ್ಟದೇವರು,



ಜಿಲ್ಲಾಧಿಕಾರಿಯ ಅನುಮತಿ ಪಡೆಯಬೇಕು! ಅನುಮತಿ ನಿರಾಕರಿಸಲು ಜಿಲ್ಲಾಡಳಿತ ನೂರೆಂಟು ಸಬೂಬುಗಳನ್ನು ನೀಡಬಹುದಾಗಿದೆ. ಮಧ್ಯಪ್ರದೇಶದಲ್ಲಿ 2006ರ ಹಳೆ ವಿಧೇಯಕದ ಧೂಳನ್ನು ಕೊಡವಿ 2013ರಲ್ಲಿ ಮತ್ತೊಮ್ಮೆ ತಿದ್ದುಪಡಿ ಮಾಡಿ ಸದನದಲ್ಲಿ ಚರ್ಚೆಗೆತ್ತಿಕೊಳ್ಳದೆ ನೇರವಾಗಿ ರಾಜ್ಯಪಾಲರಿಗೆ ಕಳುಹಿಸಲಾಯಿತು. ಆದರೆ ರಾಜ್ಯಪಾಲರು ಸಹಿ ಹಾಕಲು ನಿರಾಕರಿಸಿದ್ದಾರೆ. ಗುಜರಾತಿನಲ್ಲಿ ಧಾರ್ಮಿಕ ಸ್ವಾತಂತ್ರ್ಯ ವಿಧೇಯಕಕ್ಕೆ 2003ರಲ್ಲೆ ಚಾಲನೆ ನೀಡಲಾಗಿದ್ದರೂ ನಿಯಮಗಳನ್ನು ರೂಪಿಸಿದ್ದು 2008ರಲ್ಲಿ. ತದನಂತರ ಇದನ್ನು ಪ್ರಶ್ನಿಸಿ ರಾಜ್ಯ ಹೈಕೋರ್ಟಿನಲ್ಲಿ ಪ್ರಕರಣ ದಾಖಲಾಗಿದೆ. ಹೈಕೋರ್ಟು ಕಳುಹಿಸಿರುವ ನೋಟಿಸಿಗೆ ಸರಕಾರ ಇದುವರೆಗೂ ಉತ್ತರಿಸಿಲ್ಲ.

ಇವತ್ತು ಚಿಡ್ಡಿಗಳು ತರಬಯಸುತ್ತಿರುವ ಈ ಮತಾಂತರ ನಿಷೇಧ ಕಾನೂನು ಬಹಳ ಅಪಾಯಕಾರಿಯಾದುದು. ಅದರ ನೈಜ ಉದ್ದೇಶ ಪ್ರಜೆಯೊಬ್ಬನ ತನಗಿಷ್ಟ ಬಂದ ಧರ್ಮಕ್ಕೆ ಸೇರುವ ವ್ಯಕ್ತಿಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದೆ ಆಗಿದೆ. ಸಂಘ ಪರಿವಾರಿಗರು ಇಂತಹದೊಂದು ದೇಶವ್ಯಾಪಿ ಕಾಯಿದೆಗಾಗಿ ಒತ್ತಾಯಿಸುತ್ತಿರುವುದೇಕೆಂದರೆ ಅವರಿಗೆ ದಲಿತರು ಮತ್ತು ಆದಿವಾಸಿಗಳು ಅನ್ಯ ಧರ್ಮಗಳಿಗೆ ಮತಾಂತರ ಆಗುವುದನ್ನು ತಡೆಯಬೇಕಾಗಿದೆ. ಹಾಗಾಗಿ ಇದೆಲ್ಲಾದರೂ ಜಾರಿಯಾದಲ್ಲಿ ಮೊದಲ ಕೊಡಲಿಯೇಟು ಬೀಳುವುದೆ ಇಸ್ಲಾಂ ಅಥವಾ ಕ್ರೈಸ್ತ ಅಥವಾ ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳಲು ಬಯಸುವ ಆದಿವಾಸಿಗಳು ಹಾಗೂ ದಲಿತರ ಮೇಲೆ. ಅದೇ ವೇಳೆ 'ಮರಳಿ ಮನೆಗೆ' ಹೆಸರಲ್ಲಿ ನಡೆಸುವ ಬಲವಂತದ ಮರುಮತಾಂತರಗಳು ಅಡೆತಡೆಯಿಲ್ಲದೆ ಮುಂದುವರಿಯುವುದು ನಿಶ್ಚಿತ. ಅಂದಹಾಗೆ ಪ್ರಧಾನಮಂತ್ರಿ ಮೋದಿ ಚಿಡ್ಡಿಪಡೆಗಳ (ಕೆಲವು ಮಾಧ್ಯಮಗಳ ಪ್ರಕಾರ ಇವು ಅಂಚಿನಲ್ಲಿರುವ ಗುಂಪುಗಳಂತೆ!) ದುಷ್ಕೃತ್ಯಗಳನ್ನು ಏಕೆ ಖಂಡಿಸುತ್ತಿಲ್ಲವೆಂದು ಪ್ರಶ್ನಿಸುವವರು ಬಹುಶಃ ಇನ್ನೂ ತಮ್ಮ ಭ್ರಮಾಲೋಕದಿಂದ ಹೊರಬಂದಿಲ್ಲ. ಏಕೆಂದರೆ ಓರ್ವ ನಿಷ್ಠಾವಂತ ಆರೆಸ್ಸೆಸ್ ಪ್ರಚಾರಕನಾಗಿರುವ ಮೋದಿ ಇದೇ ಹಾದಿಯಲ್ಲಿ ಕ್ರಮಿಸಿ ಬಂದವನು ಮತ್ತು ಮುಂದುವರಿಯುವವನು. ಆದುದರಿಂದ ಆತ ಚಿಡ್ಡಿಪಡೆಗಳ ಕುಕೃತ್ಯಗಳನ್ನು ಖಂಡಿಸುತ್ತಾನೆ ಅಥವಾ ತಡೆಯುತ್ತಾನೆಂದು ನಿರೀಕ್ಷಿಸುವುದೂ ಒಂದೇ, ಸೂರ್ಯ ಪಶ್ಚಿಮದಲ್ಲಿ ಉದಯಿಸುವನೆಂದು ನಿರೀಕ್ಷಿಸುವುದೂ ಒಂದೇ.

(ಆಧಾರ: ಔಟ್‌ಲುಕ್, 29.12.2014 ಮತ್ತು ಇತರ ಆಕರಗಳು)

ಸಿದ್ಧಬಸವಕಬೀರ ಸ್ವಾಮೀಜಿ ಮತ್ತಿತರರು ಸಾಕ್ಷಿಯಾಗಿದ್ದರು.

2002ರಿಂದ ಆರಂಭಿಸಿ ಇಲ್ಲಿಯವರೆಗಿನ ಕಾರ್ಯಚಟುವಟಿಕೆಗಳ ಫೋಟೋ ಹಾಗೂ ಪತ್ರಿಕಾ ವರದಿಗಳ ಪ್ರದರ್ಶನವೇ ವಿಸ್ತಾರವಾದ ಮಳಿಗೆಯನ್ನು ಆವರಿಸಿಕೊಂಡಿತ್ತು. ಮೂರು ಹೊಸ ಪುಸ್ತಕಗಳು ಬಿಡುಗಡೆಯಾದವು. ಸಾಹಿತಿ-ವಿಮರ್ಶಕರ ದೊಡ್ಡ ಬಳಗ ಎರಡೂ ದಿನ ಭಾಗವಹಿಸಿತ್ತು. ಯಾವುದೂ ಕೊರತೆಯೆನ್ನಿಸದ ಹಾಗೆ ನೋಡಿಕೊಂಡಿದ್ದರಲ್ಲಿ ವೇದಿಕೆಯ ಕಾರ್ಯಕರ್ತರ ಶ್ರಮ ದೊಡ್ಡದು. ಒಂದು ವಾರ ಕಾಲ ಆ ಭಾಗದ ಹಳ್ಳಿ-ಪಟ್ಟಣಗಳಲ್ಲಿ ಪ್ರಚಾರವನ್ನೂ ಮಾಡಿ ಸಮಾವೇಶದ ಸಿದ್ಧತೆಯ ಕೆಲಸದಲ್ಲೂ ಅವರೆಲ್ಲರೂ ಎಡೆಬಿಡದೇ ತೊಡಗಿಕೊಂಡಿದ್ದರು. ಊಟ ಹಾಗೂ ಇನ್ನಿತರ ವ್ಯವಸ್ಥೆಗಳು ಸರಳವಾಗಿದ್ದೂ ಅಚ್ಚುಕಟ್ಟಾಗಿದ್ದವು. ಜೋಳದ ರೊಟ್ಟಿ, ಗೋಧಿ ಹುಗ್ಗಿ, ಪುಟಾಣಿ ಚಟ್ನಿ ಪ್ರತಿಯೊಂದೂ ರೋಗದನ್ನು ಹೆಚ್ಚಿಸಿದ್ದವು. ಊಟ ಮತ್ತು ಟೀ ಕೌಂಟರಿಗೆ ಬಿಡುವೆಂಬುದೇ ಇದ್ದಂತಿರಲಿಲ್ಲ, ಎಲ್ಲವನ್ನೂ ಸಾಧ್ಯವಾಗಿಸುವಲ್ಲಿ ಸ್ತ್ರೀಯರ ಸಹಕಾರವೂ ದೊಡ್ಡದಿತ್ತು.

ಎರಡೂ ದಿನಗಳ ಸಮಾವೇಶ ನೀಡಿದ ಸಂದೇಶ ಸ್ಪಷ್ಟವಾಗಿತ್ತು. ಕಷ್ಟಕಾಲ ನಮ್ಮ ಮುಂದೆ ಕಾದಿದೆ. ಆದರೆ ಈ ನಾಡಿನ ಸಹಬಾಳ್ವೆಯ ಪರಂಪರೆಯನ್ನು ಉಳಿಸಿಕೊಳ್ಳುವಲ್ಲಿ, ದೃಢವಾದ ಮತ್ತು ಎಲ್ಲರನ್ನೂ ಒಳಗೊಳ್ಳುವಂತಹ ಹೋರಾಟ ಮತ್ತು ಒಡನಾಟ ಇದ್ದರೆ ಅದನ್ನು ನಾವು ಎದುರಿಸಬಹುದು! ಇಂತಹದೊಂದು ವಿಶ್ವಾಸವನ್ನು 2002ರಿಂದು ಬಾಬಾಬುಡನ್‌ಗಿರಿಯ ಹೋರಾಟ ನೀಡಿತ್ತು. ಇಂದಿಗೂ ಬಾಬಾಬುಡನ್‌ಗಿರಿಯ ಬೆಂಕಿ ಆರಿಲ್ಲ, ಆದರೆ ಅದು ಕಾಳ್ಗಿಚ್ಚಾಗದಂತೆ ತಡೆಯುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಆ ಮೂಲಕ ಅದನ್ನು ದಕ್ಷಿಣದ ಅಯೋಧ್ಯೆಯನ್ನಾಗಿಸುವ [illegible] ಸೋಲಿಸಲಾಗಿದೆ. ಗುಜರಾತ್‌ನ ಪ್ರಯೋಗಕ್ಕೆ ಪ್ರತಿಯಾಗಿ ಬಾಬಾಬುಡನ್‌ಗಿರಿ ಪ್ರಯೋಗ ಎಂದು ಇದು ಘೋಷಿಸಲಾಗಿತ್ತು, ಆ ಪ್ರಯೋಗ ಹಲವು ಏಳು ಬೀಳುಗಳೊಂದಿಗೆ ಮುಂದೆ ಸಾಗುತ್ತಾ ಬಂದಿದೆ.


ಇಂದು ಗುಜರಾತ್ ಪ್ರಯೋಗ ನಡೆಸಿದವರು ದೇಶದ ಚುಕ್ಕಾಣಿಯನ್ನೇ ಹಿಡಿದಿರುವಾಗ, ನಾವು ಪರ್ಯಾಯವನ್ನೂ [illegible] ಚಿಂತನೆ ಹಾಗೂ ಪ್ರಯೋಗಗಳಿಂದ [illegible] ಹಾಗೂ ರೂಪಿಸುವ ಜವಾಬ್ದಾರಿಯನ್ನು [illegible]. ಅದಕ್ಕೆ ಹಿಂಥಾ ಒಳಿಯ ಮುನ್ನುಡಿಯನ್ನು [illegible]. ಅಲ್ಲಿಗೆ ಬೇರೆ ಬೇರೆ ಕಡೆಗಳಿಂದ ಬರದೇ [illegible], ಬರಲಾಗದವರಿಗೆ ಹಿಂಥಾ ಸಮಾವೇಶದ [illegible], ಬರೆದು ಮಾತುಗಳಲ್ಲಿ ತಲುಪಿಸಬೇಕಾದುದು ಕಷ್ಟ. [illegible] ಇಷ್ಟು ಕೊಡಲಾಗಿದೆ. [illegible] ವಿವರವಾದ ವರದಿಗಳನ್ನು, ಸದ್ಯದಲ್ಲೇ ವೇದಿಕೆಯು [illegible].

– ಲಂಕೇಶ್ ಬಳಗ

ಭಾವಪೂರ್ಣ ತತ್ತ್ವನಿಷ್ಠುರಿ ನೀಲಾಂಬಿಕೆ

12ನೇ ಶತಮಾನದಲ್ಲಿ ಬಸವಕಲ್ಯಾಣದಲ್ಲಿ ನಡೆದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯ ಫಲವಾಗಿ ಮಹಿಳೆಯರು ಪುರುಷರ ಜೊತೆ ಸಮಾನ ಸ್ಥಾನ ಪಡೆದರು. ಅವರಲ್ಲಿ ಅನೇಕರು ಶರಣೆಯರಾದರು. ವಚನಗಳನ್ನೂ ಬರೆದು ಅಮರರಾದರು. ಅಂಥ ಶರಣೆಯರಲ್ಲಿ ಬಸವಣ್ಣನವರ ಪತ್ನಿ ನೀಲಮ್ಮನವರ ವ್ಯಕ್ತಿತ್ವ ವಿಶಿಷ್ಟವಾಗಿದೆ. ನೀಲಮ್ಮ, ನೀಲಾಂಬಿಕೆ ಮತ್ತು ನೀಲಲೋಚನೆ ಎಂಬ ಹೆಸರುಗಳಿಂದ ನೀಲಮ್ಮ ಪ್ರಸಿದ್ಧಳಾಗಿದ್ದಾಳೆ.

ಬಿಜ್ಜಳನ ಮಂತ್ರಿ ಬಲದೇವ ಮತ್ತು ದಣ್ಣಾಯಕ ಸಿದ್ಧರಸರು ಬಸವಣ್ಣನವರ ತಾಯಿ ಮಾದಲಾಂಬಿಕೆಯ ಸಹೋದರರು. ಬಲದೇವರ ಮಗಳು ಗಂಗಾಂಬಿಕೆ ಮತ್ತು ಸಿದ್ಧರಸರ ಮಗಳು ನೀಲಾಂಬಿಕೆ ಒಡಹುಟ್ಟಿದವರಂತೆ ಬೆಳೆದವರು. ಸಿದ್ಧರಸರ ಪತ್ನಿ ಪದ್ಮಗಂಧಿ. ಬಿಜ್ಜಳನ ತಮ್ಮ ಕರ್ಣದೇವ ಜನಿಸಿದ ಸಂದರ್ಭದಲ್ಲಿ ತಂದೆ ಪೆರ್ಮಾಡಿ ತೀರಿಕೊಂಡ. ಬಿಜ್ಜಳನ ತಾಯಿ ಸತಿಹೋದಳು. ಆಗ ಪದ್ಮಗಂಧಿ ತನ್ನ ಕೂಸು ನೀಲಾಂಬಿಕೆಗೆ ಮತ್ತು ಕರ್ಣದೇವನಿಗೆ ಜೊತೆಯಾಗಿಯೇ ಮೊಲೆಯುಣಿಸಿ ಬೆಳೆಸಿದಳು. ಪದ್ಮಗಂಧಿ ಮತ್ತು ಸಿದ್ಧರಸರು ನಿಧನರಾದ ನಂತರ ಬಿಜ್ಜಳ ನೀಲಾಂಬಿಕೆಯನ್ನು ಅರಮನೆಗೆ ಕರೆತಂದು ಬೆಳೆಸಿದ. ಆಕೆಯನ್ನು ಬಿಜ್ಜಳ ತನ್ನ ತಂಗಿಯಂತೆಯೆ ನೋಡಿಕೊಂಡ. ನೀಲಲೋಚನೆ ಸಿದ್ಧರಸನ ಮಗಳು ಮತ್ತು ಬಿಜ್ಜಳನ ಸಾಕುತಂಗಿ ಎಂದು ಸಿಂಗಿರಾಜನು 'ಅಮಲ ಬಸವ ಚಾರಿತ್ರ'ದಲ್ಲಿ ಸೂಚಿಸುತ್ತಾನೆ.



ಬಲದೇವರ ಮಗಳು ಗಂಗಾಂಬಿಕೆಯೊಂದಿಗೆ ಬಸವಣ್ಣನವರ ಮದುವೆಯಾಯಿತು. ನಂತರ ಬಸವಣ್ಣನವರು ನೀಲಾಂಬಿಕೆಯನ್ನು ಮದುವೆಯಾದರು. ಈ ಎರಡನೆಯ ಮದುವೆಗೆ ವಿವಿಧ ಕಾರಣಗಳನ್ನು ಕಲ್ಪಿಸಬಹುದು. ಬಸವಣ್ಣನವರ ದಿವ್ಯ ಪ್ರತಿಭೆಯನ್ನು ಗುರುತಿಸಿದ ಬಿಜ್ಜಳ ತನ್ನ ರಾಜ್ಯದ ಪ್ರಧಾನಿಯಾಗಿ ಮಾಡುವ ಮೊದಲು ಅವರನ್ನು ತನ್ನ ರಕ್ತಸಂಬಂಧಿಯಾಗಿಸಿಕೊಳ್ಳುವುದು ಅನಿವಾರ್ಯ ಎನಿಸಿರಬೇಕು. ಅವರನ್ನು ತನ್ನ ಕರುಳಬಳ್ಳಿಯ ಸಂಬಂಧಿಕರಂತೆ ಮಾಡಿಕೊಳ್ಳುವ ಉದ್ದೇಶದಿಂದ ನೀಲಾಂಬಿಕೆಯನ್ನು ಮದುವೆ ಮಾಡಿ ಕೊಟ್ಟಿರಬಹುದು. ಗಂಗಾಂಬಿಕೆ ಮತ್ತು ನೀಲಾಂಬಿಕೆ ಎರಡು ದೇಹ ಒಂದೇ ಆತ್ಮದಂತೆ ಇದ್ದುದರಿಂದ ನೀಲಾಂಬಿಕೆ ಬಸವಣ್ಣನವರ ಎರಡನೇ ಪತ್ನಿಯಾಗಿ ಬರುವುದರಲ್ಲಿ ಯಾವುದೇ ಸಮಸ್ಯೆಗಳು ಉಂಟಾಗದಿರಬಹುದು. ನೀಲಾಂಬಿಕೆ ಬಿಜ್ಜಳನ ಅರಮನೆಯಲ್ಲೇ ಬೆಳೆದಳು. ಅರಮನೆಯ ವಾತಾವರಣದಲ್ಲಿ ಯೋಗ, ತತ್ತ್ವಜ್ಞಾನ, ಸಂಗೀತ, ಕಲೆ, ಸಾಹಿತ್ಯ ಯುದ್ಧಕಲೆ, ರಾಜನೀತಿ ಮುಂತಾದವುಗಳಲ್ಲಿ ಪಾರಂಗತಳಾದ ನೀಲಾಂಬಿಕೆಯನ್ನು ಬಸವಣ್ಣನವರು ಎರಡನೆಯ ಪತ್ನಿಯಾಗಿ ಸ್ವೀಕರಿಸಿರಬಹುದು. ಸರ್ವಸಮತ್ವದ ಮಾನವಧರ್ಮ ದ್ರಷ್ಟಾರ ಬಸವಣ್ಣನವರ ಮಹಾಕ್ರಾಂತಿಯ ಬಗ್ಗೆ ಪರಿಪೂರ್ಣ ಜ್ಞಾನ ಹೊಂದಿದ್ದ ನೀಲಾಂಬಿಕೆ, ಅವರ ಕನಸನ್ನು ನನಸಾಗಿಸುವುದರ ಮೂಲಕ ಸಹಸ್ರ ಸಹಸ್ರ ಕಾಯಕಜೀವಿಗಳ ಘನತೆಯನ್ನು ಎತ್ತಿಹಿಡಿದು ಎಲ್ಲ ವಿಧವಾದ ಶೋಷಣೆಗಳಿಂದ ಮುಕ್ತವಾದ ಸಮಾಜ ನಿರ್ಮಾಣದ ಉದ್ದೇಶ ಹೊಂದಿದ್ದರು. ಈ ಮಹೋನ್ನತ ಕಾರಣದಿಂದಲೇ ನೀಲಾಂಬಿಕೆಯು ಬಸವಣ್ಣನವರ ವಿಚಾರ ಪತ್ನಿಯಾಗಿ ಬದುಕುತ್ತ ಸರ್ವಶರಣರ ಯೋಗಕ್ಷೇಮ ನೋಡಿಕೊಳ್ಳುವುದರೊಂದಿಗೆ ಅಪ್ರತಿಮ ಸಾಧನೆಗೈದವರು. ಹೀಗೆ ನೀಲಾಂಬಿಕೆಯ ಘನವ್ಯಕ್ತಿತ್ವವನ್ನು ಅರಿಯುವುದು ಹೆಚ್ಚು ಯೋಗ್ಯವಾಗಿದೆ.

ತಬ್ಬಲಿಯಾದ ನಂತರ ಬಿಜ್ಜಳನ ತಂಗಿಯಂತೆ ಸಲುಗೆಯಿಂದ ಅರಮನೆಯಲ್ಲಿ ಬೆಳೆದ ನೀಲಾಂಬಿಕೆ ಬಿಜ್ಜಳನ ಜೊತೆ ವಾಗ್ವಾದ ಮಾಡುವ ಹಕ್ಕನ್ನು ಕೂಡ ಹೊಂದಿದವಳಾಗಿದ್ದಳು. ಬಸವಣ್ಣ ಮತ್ತು ಬಿಜ್ಜಳನ ಮಧ್ಯೆ ಬ್ರಾಹ್ಮಣ ಮಂತ್ರಿಗಳು ಭಿನ್ನಾಭಿಪ್ರಾಯ ಮೂಡಿಸುವಲ್ಲಿ ತಲ್ಲೀನರಾದಾಗ ನೀಲಮ್ಮ ಬಿಜ್ಜಳನ ಸಂಶಯ ದೂರು ಮಾಡಿ ಬಸವಣ್ಣನವರ ಲೋಕಹಿತ ಕಾರ್ಯಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳುತ್ತಿದ್ದಳು. ವಚನಕಾರರ ಚಳವಳಿ ಮತ್ತು ಬಿಜ್ಜಳನ ರಾಜಸತ್ತೆಯ ಮಧ್ಯೆ ನೀಲಾಂಬಿಕೆಯು ಮಹತ್ವದ ಸಂಯಮಶೀಲ ಪಾತ್ರ ವಹಿಸಿದ್ದರಿಂದಲೇ ಪಟ್ಟಭದ್ರ ಪುರೋಹಿತಶಾಹಿ ಶಕ್ತಿಗಳ ಮತ್ತು ವಚನಕಾರರ ಮಧ್ಯದ ಘರ್ಷಣೆಯ ಪ್ರಸಂಗಗಳು ಮುಂದೂಡುವಂಥ ಪರಿಸ್ಥಿತಿಗಳು ನಿರ್ಮಾಣವಾಗಲು ಸಾಧ್ಯವಾಯಿತು. ಶರಣ ಚಳವಳಿಯ ಪ್ರಮುಖರಲ್ಲಿ ಒಬ್ಬಳಾಗಿದ್ದ ನೀಲಾಂಬಿಕೆ, ಬಿಜ್ಜಳನ 'ತಂಗಿ' ಎಂಬ ಹಕ್ಕಿನಿಂದಾಗಿ ಅರಮನೆಯ ಮೇಲೂ ಭಾವನಾತ್ಮಕ ಹಿಡಿತ ಸಾಧಿಸಿದ್ದು ಆಕೆಯ ಘನತೆಗೆ ಹಿಡಿದ ಕನ್ನಡಿಯಾಗಿದೆ.

ಹೀಗೆ ಬಸವಣ್ಣನವರ ಭಕ್ತಿ ಮಾರ್ಗಕ್ಕೆ ನೀಲಮ್ಮ ಆಕರ್ಷಿತಳಾದಳು. ನಂತರ ಅವರ ವಿಚಾರಪತ್ನಿಯಾಗಿ ಎಲ್ಲ ರೀತಿಯಿಂದ ನವಸಮಾಜ ನಿರ್ಮಾಣದಲ್ಲಿ ಪಾಲ್ಗೊಂಡಳು. ನವಸಮಾಜ ಎಂದರೆ ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳಿಲ್ಲದ ಸಮಾಜ. ಇದೊಂದು ಅತ್ಯುನ್ನತವಾದ ಸಮಾನತೆಯ ಸಮಾಜವಾಗಿದೆ. ಇಂಥ ಸುಂದರ ಸಮಾಜ ರಚನೆ ಎಲ್ಲಿಯೂ ಆಗಿದ್ದಿಲ್ಲ ಎಂಬುದು ಗಮನಾರ್ಹ.

ಮಹಾಮನೆಯ ದಾಸೋಹದ ಜವಾಬ್ದಾರಿಯನ್ನೂ ನೀಲಾಂಬಿಕೆ ಹೊತ್ತಿದ್ದಳು. ಪ್ರತಿ ಜೀವಿಯಲ್ಲೂ ದೇವರನ್ನು ಕಾಣುವಂಥ ಉನ್ನತ ಮಟ್ಟಕ್ಕೆ ನೀಲಾಂಬಿಕೆ ಬೆಳೆದಳು. ಅನುಭಾವಿ ನೀಲಮ್ಮನ 288 ವಚನಗಳು ಸಿಕ್ಕಿವೆ. 'ಸಂಗಯ್ಯ' ಎಂಬ ವಚನಾಂಕಿತದಿಂದ ನೀಲಮ್ಮ ವಚನಗಳನ್ನು ಬರೆದಿದ್ದಾಳೆ. ಇಲ್ಲಿಯವರೆಗೆ 35 ವಚನಕಾರ್ತಿಯರ ವಚನಗಳು ಸಿಕ್ಕಿವೆ. ಅವರಲ್ಲಿ ಅಕ್ಕಮಹಾದೇವಿಯ ನಂತರ ಅತಿಹೆಚ್ಚು ವಚನಗಳನ್ನು ಬರೆದವಳೆಂದರೆ ನೀಲಾಂಬಿಕೆ ಎಂಬುದು ತಿಳಿದುಬರುತ್ತದೆ.

ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯಿಂದಾಗಿ ಕಲ್ಯಾಣದ ಸನಾತನವಾದಿಗಳು ಶರಣರ ಮೇಲೆ ಕಿಡಿ ಕಾರಿದರು. ಬಸವಣ್ಣನವರು ಮಂತ್ರಿ ಪದವಿ ಬಿಟ್ಟು ಕೂಡಲಸಂಗಮಕ್ಕೆ ಹೋಗಬೇಕಾಯಿತು. ಸನಾತನವಾದಿಗಳಿಂದಾಗಿ ಕಲ್ಯಾಣದಲ್ಲಿ ಭಾರಿ ಕೋಲಾಹಲ ಉಂಟಾಯಿತು. ಶರಣರ ಹೊಸ ಸಮಾಜ ವ್ಯವಸ್ಥೆಯ ವಿರೋಧಿಗಳು ಶರಣರ ವಚನಕಟ್ಟುಗಳನ್ನು ಸುಟ್ಟರು. ಶರಣರ ಮೇಲೆ ಹಲ್ಲೆ ಮಾಡಿದರು. ಈ ಹಲ್ಲೆಯಿಂದಾಗಿ ಅನೇಕ ಶರಣರು ಹುತಾತ್ಮರಾದರು. ಗಂಗಾಂಬಿಕೆಯವರು ಅಕ್ಕನಾಗಮ್ಮ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ನುಲಿಯ ಚಂದಯ್ಯ ಕಿನ್ನರಿ ಬ್ರಹ್ಮಯ್ಯ ಡೋಹರ ಕಕ್ಕಯ್ಯ ಮುಂತಾದ ಶರಣರ ಜೊತೆ ಉಳವಿಯ ಕಡೆಗೆ ಹೊರಟಾಗ ಅಳಿದುಳಿದ ಶರಣರ ರಕ್ಷಣೆಗಾಗಿ ನೀಲಮ್ಮನವರು ಕಲ್ಯಾಣದಲ್ಲೇ ಉಳಿದದ್ದು ಅವರ ಯೋಜನಾಬದ್ಧ ಮುಂದಾಲೋಚನೆ ಮತ್ತು ಶೌರ್ಯದ ಪ್ರತೀಕವಾಗಿದೆ.

ಗಂಗಾಂಬಿಕೆಯವರು ಕಾದರವಳ್ಳಿಯ ಬಳಿ, ಮಡಿವಾಳ ಮಾಚಿದೇವರು ಕಾರಿಮನೆಯಲ್ಲಿ, ಡೋಹರ ಕಕ್ಕಯ್ಯನವರು ಕಕ್ಕೇರಿಯಲ್ಲಿ ಬಿಜ್ಜಳನ ಸೈನ್ಯದ ಜೊತೆ ಹೋರಾಡುತ್ತ ಲಿಂಗೈಕ್ಯರಾದ ಕಾರಣ ಉಳವಿ ತಲುಪಲಿಕ್ಕಾಗಲಿಲ್ಲ.

ಕಲ್ಯಾಣದಲ್ಲಿ ಸಂಭವಿಸಿದ ದುರಂತ ಘಟನೆಯಲ್ಲಿ ಶರಣರು ಸಾವು ನೋವಿಗೀಡಾಗಿದ್ದು ಮತ್ತು ಅಳಿದುಳಿದ ಶರಣರು ದಿಕ್ಕಾಪಾಲಾಗಿ ಹೋಗಿದ್ದರ ಬಗ್ಗೆ ಕೂಡಲಸಂಗಮದಲ್ಲಿದ್ದ ಬಸವಣ್ಣನವರು ಅರಿತು ಬಹಳ ನೊಂದುಕೊಂಡರು. ನೀಲಮ್ಮನವರನ್ನು ಕೂಡಲಸಂಗಮಕ್ಕೆ ಕರೆದುಕೊಂಡು ಬರಲು ಹಡಪದ ಅಪ್ಪಣ್ಣನವರಿಗೆ ತಿಳಿಸಿದರು. ಅಪ್ಪಣ್ಣನವರು ನೀಲಮ್ಮನವರ ಬಳಿಗೆ ಹೋಗಿ ಬಸವಣ್ಣನವರ ಇಚ್ಛೆಯ ಕುರಿತು ವಿವರಿಸಿದರು. ಆಗ ನೀಲಮ್ಮನವರು 'ಅಲ್ಲಿರುವ ಸಂಗನು ಇಲ್ಲಿಲ್ಲವೆ?' ಎಂದು ಹೇಳುವ ಮೂಲಕ ಅನುಭಾವದ ಎತ್ತರಕ್ಕೆ ಏರಿದ್ದು ಕಂಡುಬರುತ್ತದೆ.

ನೋಡು ನೋಡು ನೋಡು ನೋಡು ನೋಡು
ಲಿಂಗವೆ
ನೋಡು ಬಸವಯ್ಯನವರು ಮಾಡಿದಾಟವ //ಪ//

ಹರಳಯ್ಯ ಮಧುವಯ್ಯಸವರಿಗೆ ಎಳೆಹೂಟೆ
ದುರುಳ ಬಿಜ್ಜಳನು ಕಟ್ಟಿದನೆಂದರೆ
ಇರಬಾರದಲ್ಲೀಗ ಶರಣರಿಗರುಹಿರೆಂ
ದರಸು ಬಸವರಾಜ ಪೇಳ್ದರಂತೆ.

ನುಡಿಯ ಲಾಲಿಸು ಬೇಗ ಕೆಡುವುದೀ ಕಲ್ಯಾಣ
ಒಡೆಯ ಸಂಗಮನೊಳು ಬೆರೆವರಂತೆ.
ತಡ ಮಾಡಬೇಡಿರಿ ಮಡದಿಯರಿಗರುಹಿರೆಂದು
ಒಡೆಯ ಬಸವರಾಜ ನುಡಿದರಂತೆ.

ಅಲ್ಲಿಗೆ ಎಮ್ಮನು ಬರಲು ಹೇಳಿದರಂತೆ
ಅಲ್ಲಿದ್ದ ಸಂಗಮನಿಲ್ಲಿಲ್ಲವೆ?
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು
ಬಲ್ಲ ಮಹಾತ್ಮರಿಗಿದು ಗುಣವೆ?

ಅಪ್ಪ ಅಣ್ಣಯ್ಯಗಳೆನ್ನ ಕರೆಯ ಬಂದಿಹರು
ಕಪ್ಪಡಿ ಸಂಗಮನಾಥ ಕೇಳೋ
ಪುಷ್ಪಕ್ಕೆ ಪರಿಮಳವ ಬೆರೆದಂತೆ ಎನ್ನ
ನಪ್ಪಿದ ಲಿಂಗವೆ ಮಾತನಾಡೋ.

ಸಂಗನಬಸವನ ನಿರೂಪವ ತಾಳುತೆ
ಹಿಂಗದೆ ಕರವೆತ್ತಿ ನಮಿಸುತಲಿ
ಸಂಗಮನಾಥನೆ ಈತನೆಂದು ಎ
ನ್ನಂಗಯ್ಯ ಲಿಂಗವೆ ಮಾತನಾಡೋ.

–ನೀಲಮ್ಮ


ನೀಲಮ್ಮನವರ ಈ ಸ್ವರವಚನ ಕಲ್ಯಾಣ ಅನಾಹುತದ ಕೊನೆಯ ದಿನಗಳ ಸ್ಥಿತಿಗತಿಗಳ ಮತ್ತು ಬಸವಣ್ಣನವರ ತೀವ್ರ ಕಾಳಜಿಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಯಾಗಿದೆ. ಎಳೆಹೂಟೆ ಶಿಕ್ಷೆಯಾದದ್ದು ಹರಳಯ್ಯ ಮತ್ತು ಮಧುವರಸರಿಗೆ ಮಾತ್ರ ಎಂಬುದು ಇದರಿಂದ ತಿಳಿದು ಬರುತ್ತದೆ. ಬ್ರಾಹ್ಮಣ ಮೂಲದ ಲಿಂಗವಂತ ಮಧುವರಸರ ಮಗಳು ಲಾವಣ್ಯಳನ್ನು ಸಮಗಾರ ಮೂಲದ ಲಿಂಗವಂತ ಹರಳಯ್ಯನವರ ಮಗ ಶೀಲವಂತ ಮದುವೆಯಾದ ಕಾರಣ ಆತನಿಗೂ ಎಳೆಹೂಟೆ ಶಿಕ್ಷೆಯಾಗಿತ್ತು ಎಂಬುದನ್ನು ಈ ಐತಿಹಾಸಿಕ ದಾಖಲೆ ಅಲ್ಲಗಳೆಯುತ್ತದೆ.

ಹೀಗೆ ಹೇಳಿದರೂ ನೀಲಮ್ಮನವರು ಕಲ್ಯಾಣದಿಂದ ಕೃಷ್ಣಾ ನದಿಯ ದಡದಲ್ಲಿರುವ ತಂಗಡಗಿಗೆ ಬಂದರು. ಅಷ್ಟರೊಳಗೆ ಆಚೆ ದಡದಲ್ಲಿರುವ ಕೂಡಲಸಂಗಮದಲ್ಲಿ ಬಸವಣ್ಣನವರು ಲಿಂಗೈಕ್ಯರಾಗಿದ್ದರು. ಇದನ್ನರಿತ ನೀಲಮ್ಮನವರು ತಂಗಡಿಯಲ್ಲೇ ಉಳಿದು ಲಿಂಗೈಕ್ಯರಾದರು. ಲಿಂಗೈಕ್ಯರಾಗುವ ಮುಂಚೆ ನೀಲಮ್ಮನವರು ಬಸವಣ್ಣನವರ ಕುರಿತು ಅನೇಕ ಹೃದಯಸ್ಪರ್ಶಿ ವಚನಗಳನ್ನು ಬರೆದಿದ್ದಾರೆ.

"ಎನಗೆ ಲಿಂಗವು ನೀವೆ ಬಸವಯ್ಯಾ
ಎನಗೆ ಸಂಗವು ನೀವೆ ಬಸವಯ್ಯಾ
ಎನಗೆ ಪ್ರಾಣವು ನೀವೆ ಬಸವಯ್ಯಾ
ಎನಗೆ ಪ್ರಸಾದವು ನೀವೆ ಬಸವಯ್ಯಾ
ಎನಗೆ ಪ್ರಭೆಯ ಮೂರ್ತಿಯು ನೀವೆ ಬಸವಯ್ಯಾ
ಎನಗೆ ಸಂಗಯ್ಯನು ನೀವೆ ಬಸವಯ್ಯಾ"

ಎಂದು ಹೇಳುವ ಮೂಲಕ ಭಾವಪೂರ್ಣ ತತ್ತ್ವನಿಷ್ಠುರಿ ನೀಲಮ್ಮನವರು ಪತಿ ಬಸವಣ್ಣನವರ ಬಗ್ಗೆ ಅತೀವ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ನೀಲಮ್ಮನವರ ಕುಟುಂಬ ಪ್ರೀತಿ, ಸಮಾಜಪ್ರೀತಿ, ಮಹಾಮನೆಯ ಕಾರ್ಯನಿರ್ವಹಣಾ ಸಾಮರ್ಥ್ಯ ಮತ್ತು ಶಿವಯೋಗಜ್ಞಾನ ಮಹಿಳೆಯರಿಗೆ ಆದರ್ಶಪ್ರಾಯವಾಗಿವೆ.

ಬಸವಣ್ಣನವರ ಮೊದಲ ಪತ್ನಿ ಗಂಗಾಂಬಿಕೆಯ ತ್ಯಾಗ ಕೂಡ ಅಮರವಾಗಿದೆ. ಪತಿಯ ಮಹಾನ್ ಕಾರ್ಯಕ್ಕೆ ಸರ್ವರೀತಿಯಿಂದಲೂ ಯೋಗ್ಯಳಾದ ನೀಲಾಂಬಿಕೆಯನ್ನು ತನ್ನ ಬದುಕಿನ ಭಾಗವಾಗಿ ಸ್ವೀಕರಿಸಿದ್ದು ಗಂಗಾಂಬಿಕೆಯ ಸಾಮಾಜಿಕ ಪ್ರಜ್ಞೆಯ ಪ್ರತೀಕವಾಗಿದೆ.



● ರಂಜಾನ್ ದರ್ಗಾ



ನಿರಾಶ್ರಿತರ ಶಿಬಿರಕ್ಕೆ ಪ್ರೇತಾತ್ಮಗಳ ಭೇಟಿ

ಕತೆ

ಶಾಹ್ ಆಲಂ ನಿರಾಶ್ರಿತರ ಶಿಬಿರದಲ್ಲಿ ಹಗಲುಗಳು ಹೇಗೋ ಕಳೆಯುತ್ತಿವೆ. ಆದರೆ ರಾತ್ರಿಗಳು ಮುಗಿಯದ ದುಃಸ್ವಪ್ನಗಳಾಗಿ ಪರಿಣಮಿಸಿವೆ. ಈ ನರಕ ಯಾತನೆಯಿಂದ ದೇವರೇ ನಮ್ಮನ್ನು ಬಿಡುಗಡೆ ಮಾಡಬಲ್ಲನು. ಘನ ಘೋರವಾದ ಕೋಲಾಹಲ! ಸ್ವಂತದ ಧ್ವನಿ ಯಾರಿಗೂ ಕೇಳದಾಗಿದೆ. ಎಲ್ಲೆಲ್ಲೂ ರೋದನ ಆಕ್ರಂದನ, ಬಡಬಡಿಕೆ ಸ್ವಗತ, ನರಳಾಟ ಗೋಳಾಟ, ನಿಟ್ಟುಸಿರು ಏದುಸಿರು...!

ಮಧ್ಯ ರಾತ್ರಿ ನಂತರ ಪ್ರೇತಾತ್ಮಗಳು ತಮ್ಮ ಮಕ್ಕಳನ್ನು ಕಾಣಲು ಬರುತ್ತವೆ. ಅವು ತಮ್ಮ ಅನಾಥ ಮಕ್ಕಳನ್ನು ಸಂತೈಸುತ್ತವೆ. ತಲೆ ನೇವರಿಸುತ್ತವೆ. ತಮ್ಮ ಪಾಳು ಬಿದ್ದ ಬರಿದಾದ ಕಣ್ಣುಗಳಿಂದ ಏನನ್ನೋ ಸೂಚಿಸಲೆತ್ನಿಸುವಂತೆ ಅವರ ನಿರ್ಜೀವ ಕಣ್ಣುಗಳನ್ನು ದಿಟ್ಟಿಸುತ್ತವೆ. ನಂತರ ತಮ್ಮ ಮಕ್ಕಳನ್ನು ಎದೆಗವಚಿಕೊಳ್ಳುತ್ತವೆ. ಧಗಧಗಿಸುವ ಬೆಂಕಿಯಲ್ಲಿ ತಮ್ಮನ್ನು ಜೀವಂತ ಸುಟ್ಟು ಹಾಕುತ್ತಿದ್ದಾಗ ಪಾರಾಗಿ ಬದುಕಿ ಉಳಿದಿದ್ದ ಆ ಮಕ್ಕಳ ಮತ್ತದೇ ಕರುಳು ಕಿವುಚುವ ಚೀತ್ಕಾರದ ಪ್ರತಿಧ್ವನಿ.

ನಿರಾಶ್ರಿತರ ಶಿಬಿರದ ಉಳಿದ ಪ್ರದೇಶ ಗಾಢ ನಿದ್ರೆಗೆ ಜಾರಿದರೂ ಮಕ್ಕಳು ಕಣ್ಣು ತೆರೆದೇ ಇರುತ್ತವೆ. ಅವು ತಮ್ಮ ತಾಯಂದಿರನ್ನು ಕಾಣಲು, ತಮ್ಮ ತಂದೆಯರೊಂದಿಗೆ ಊಟ ಮಾಡಲು ಕಾದಿರುತ್ತವೆ.

"ಹೇಗಿದಿಯೋ, ಸಿರಾಜ್?" ಅವನ ಕೂದಲ ಮೇಲೆ ಕೈಯಾಡಿಸುತ್ತ ಮುದ್ದಾಡುತ್ತ ತಾಯಿ ಪ್ರೇತಾತ್ಮ ಕೇಳಿತು.

"ನೀ ಹೇಗಿದ್ದೀ ಅಮ್ಮಾ?"

ತಾಯಿಗೆ ಹಿಗ್ಗೋ ಹಿಗ್ಗು. "ನಾನೊಂದು ಪ್ರೇತಾತ್ಮ, ಸಿರಾಜ್. ಯಾರೂ ಇನ್ನು ನನ್ನನ್ನು ಜೀವಂತ ಸುಡಲಾರರು."

"ಅಮ್ಮಾ, ನಾನು ನಿನ್ನ ಹಾಗೆಯೇ ಆಗುವುದು ಸಾಧ್ಯವೆ...?"

ಒಮ್ಮೆ ತಳಮಳಗೊಂಡ ಉದ್ವಿಗ್ನಗೊಂಡ ಒಬ್ಬ ಮಹಿಳೆಯ ಪ್ರೇತಾತ್ಮ ಮಧ್ಯ ರಾತ್ರಿ ನಂತರ ಶಾಹ್ ಆಲಂ ಶಿಬಿರ ತಲುಪಿತು. ಪರಲೋಕದಲ್ಲೂ ಕಾಣಸಿಗದ ಇಲ್ಲೂ ಕಾಣಸಿಗದ ತನ್ನ ಮಗನನ್ನು ಹುಡುಕಾಡುತ್ತದೆ. ತಾಯಿ ಪ್ರೇತಾತ್ಮದ ಹೃದಯ ದುಃಖ ಮತ್ತು ಭೀತಿಯಿಂದ ಒಡೆದು ಚೂರಾಗುವುದರಲ್ಲಿತ್ತು. ಇತರ ಮಹಿಳೆಯರು ಅವಳ ಮಗನ ಹುಡುಕಾಟದಲ್ಲಿ ಅವಳಿಗೆ ನೆರವಾದರು. ಅವರು ಇಡೀ ಶಿಬಿರವನ್ನು ಜಾಲಾಡಿಸಿಬಿಡುತ್ತಾರೆ. ನಂತರ ತಮ್ಮ ನೆರೆಮನೆಯ ಆ ಪ್ರೇತಾತ್ಮದ ಹಿಂದಿನ ಓಣಿಗೆ ಹೋಗುತ್ತಾರೆ. ಇಡೀ ಓಣಿ ಧಗಧಗ ಉರಿಯುತ್ತಿದೆ, ಕಟ್ಟಿಗೆ ರಾಶಿಗೆ ಬೆಂಕಿ ಬಿದ್ದಿದೆಯೇನೋ ಎನ್ನುವಂತೆ. ಈಗ ಅವು ಪ್ರೇತಾತ್ಮಗಳಾಗಿದ್ದು ಅವು ಬೇಕೆನಿಸಿದಾಗ ಬರುತ್ತವೆ ಬೇಕೆನಿಸಿದಾಗ ಹೋಗುತ್ತವೆ. ಅವು ಧಗಧಗಿಸುವ ಈ ಬೆಂಕಿಯನ್ನು ತೀರ ಆರಾಮಾಗಿ ಪ್ರವೇಶಿಸುತ್ತವೆ. ಅವು ಹೊಗೆ ಆವೃತ ಮೂಲೆಮೂಲೆ ಹೊಕ್ಕು ಆ ಹುಡುಗನನ್ನು ಹುಡುಕುತ್ತವೆ. ಆ ಮಹಿಳೆಯ ಮಗ ಸಿಗುವುದಿಲ್ಲ.

ಹತಾಶೆಯಿಂದ ಅವು ಗಲಭೆಕೋರರ ಮನೆಗೆ ಹೋಗುತ್ತವೆ. ಅಲ್ಲಿ ದುಷ್ಕರ್ಮಿಗಳು ಪೆಟ್ರೋಲ್ ಬಾಂಬಗಳನ್ನು ತಯಾರಿಸುತ್ತಿದ್ದಾರೆ, ಬಂದೂಕುಗಳನ್ನು ಸ್ವಚ್ಛಗೊಳಿಸುತ್ತಿದ್ದಾರೆ ಮತ್ತು ತಮ್ಮ ಆಯುಧಗಳನ್ನು ಹರಿತಗೊಳಿಸುತ್ತಿದ್ದಾರೆ. ಆ ತಾಯಿ ತನ್ನ ಕಳೆದುಹೋದ ಮಗನ ಬಗ್ಗೆ ಅವರನ್ನು ವಿಚಾರಿಸಿದಾಗ ಅವರು ನಗತೊಡಗಿದರು. "ಎಲೆ ಹುಚ್ಚು ಮುದುಕಿ; ನೂರಾರು ಜನ ಜೀವಂತ ಸುಟ್ಟು ಹೋಗುತ್ತಿದ್ದಾಗ ಒಬ್ಬ ಪುಟ್ಟ ಹುಡುಗನ ಮೇಲೆ ಕಣ್ಣಿಡುವುದು ಹೇಗೆ ಸಾಧ್ಯ? ಅವನು ಎಲ್ಲಾದರೂ ಬೂದಿ ಮತ್ತು ಅವಶೇಷಗಳಡಿ ಬಿದ್ದುಕೊಂಡಿರಬಹುದು" ಎಂದು ಹೇಳುತ್ತಾರೆ.

ತಾಯಿ ಪ್ರೇತಾತ್ಮ ಅನ್ನುತ್ತದೆ: "ಇಲ್ಲ, ಇಲ್ಲ, ನಾನು ಎಲ್ಲಾ ಕಡೆ ಹುಡುಕಿದೆ. ಎಲ್ಲೂ ಅವನು ಕಾಣ ಸಿಗಲಿಲ್ಲ."

ಆಗ ಒಬ್ಬ ಗಲಭೆಕೋರನಿಗೆ ನೆನಪಾಗುತ್ತದೆ. "ಓ! ಆ ತ್ರಿಶೂಲಕ್ಕೆ ನೇತಾಡುತ್ತಿದ್ದ ಆ ಹುಡುಗನ ತಾಯಿ ಇದು...."

ಆ ಪ್ರೇತಾತ್ಮಗಳು ಮಧ್ಯ ರಾತ್ರಿ ನಂತರ ಶಾಹ್ ಆಲಂ ಶಿಬಿರಕ್ಕೆ ಬರುತ್ತವೆ. ಪರಲೋಕದಿಂದ ಅನ್ನ, ನೀರು, ಬಟ್ಟೆ ಮತ್ತು ಔಷಧಿಗಳನ್ನು ತರುತ್ತವೆ. ಆ ಕಾರಣಕ್ಕಾಗಿ ರೋಗಗ್ರಸ್ತ ಬಟ್ಟೆ ಇಲ್ಲದ ಹಸಿದ ಮತ್ತು ನೀರಡಿಸಿದ ಮಕ್ಕಳು ಕಾಣಸಿಗುತ್ತಿಲ್ಲ. ಆ ಕಾರಣಕ್ಕಾಗಿಯೇ ಶಾಹ್ ಆಲಂ ಶಿಬಿರ ಇಷ್ಟೊಂದು ಪ್ರಸಿದ್ಧವಾಗಿದೆ. ಅದರ ಪ್ರಸಿದ್ಧಿ ದೂರದೂರದ ಪ್ರದೇಶದಲ್ಲಿ ಸತ್ತು ಹೋದವರವರೆಗೂ ಹಬ್ಬುತ್ತದೆ. ಆ ಶಿಬಿರವನ್ನು ಸಮೀಕ್ಷಿಸಲು ದೆಹಲಿಯಿಂದ ಆಗಮಿಸಿದ ಗಣ್ಯರೊಬ್ಬರು ಅಲ್ಲಿನ ವ್ಯವಸ್ಥೆಯನ್ನು ತಾವೇ ಕಣ್ಣಾರೆ ಕಂಡು ಸಂತುಷ್ಟಗೊಂಡು "ಇದು ಬಲು ಸುಂದರ ಸ್ಥಳ. ಭಾರತದ ಎಲ್ಲೆಡೆಯಿಂದ ಮುಸ್ಲಿಂ ಮಕ್ಕಳನ್ನು ಇಲ್ಲಿಗೇ ತಂದು ಇರಿಸಬಹುದು" ಎನ್ನುತ್ತಾರೆ....

ಪ್ರೇತಾತ್ಮಗಳು ಮಧ್ಯ ರಾತ್ರಿ ನಂತರ ಶಾಹ್ ಆಲಂ ಶಿಬಿರಕ್ಕೆ ಬರುತ್ತವೆ. ಇಡೀ ರಾತ್ರಿ ಅವು ತಮ್ಮ ಮಕ್ಕಳ ಜೊತೆ ಕಳೆಯುತ್ತವೆ. ಪ್ರೀತಿವಿಶ್ವಾಸದಿಂದ ಮಕ್ಕಳನ್ನು ದಿಟ್ಟಿಸುತ್ತವೆ. ಅವುಗಳ ಬಗ್ಗೆ ಚಿಂತಿತವಾಗುತ್ತವೆ. ಅವುಗಳ ಭವಿಷ್ಯದ ಬಗ್ಗೆ ತಲೆ ಕೆಡಿಸಿಕೊಳ್ಳುತ್ತವೆ. ಅವುಗಳೊಂದಿಗೆ ಮಾತಾಡುತ್ತಿರುತ್ತವೆ....

"ಸಿರಾಜ್, ನೀನಿನ್ನು ನಿನ್ನ ಮನೆಗೆ ಹೋಗಬೇಕು" ಒಬ್ಬ ತಾಯಿ ಪ್ರೇತಾತ್ಮ ತನ್ನ ಮಗನಿಗೆ ಹೇಳುತ್ತದೆ.

"ಮನೆ?" ಸಿರಾಜ್ ತೊದಲು ನುಡಿಯಲ್ಲಿ ಹೇಳುತ್ತಾನೆ. ಭೀತಿ ಅವನ ಕಣ್ಣಲ್ಲಿ ಮನೆ ಮಾಡಿರುತ್ತದೆ.

"ಹೌದು ಮನೆಗೆ. ಎಷ್ಟು ದಿನ ಅಂತಾ ನೀನು ಇಲ್ಲಿ ಉಳಿದುಕೊಳ್ಳುವೆ? ನಾನು ಪ್ರತಿ ರಾತ್ರಿ ಬಂದು ನಿನ್ನನ್ನು ನೋಡಿ ಹೋಗುವೆ ಎಂದು ಮಾತು ಕೊಡುತ್ತೇನೆ."

"ನಾನು ಮನೆಗೆ ಹೋಗಲಾರೆ. ಎಂದಿಗೂ ಹೋಗಲಾರೆ." ಹೊಗೆ, ಬೆಂಕಿ, ಚೀತ್ಕಾರ, ಕೋಲಾಹಲ....

"ನಾನು ನಿನ್ನೊಟ್ಟಿಗೆ, ಅಬ್ಬಾನೊಟ್ಟಿಗೆ ಇರುವೆ."

"ನನ್ನ ಮುದ್ದು ಸಿಕ್ಕು, ನೀನು ನಮ್ಮೊಂದಿಗೆ ಇರುವುದು ಹೇಗೆ ಸಾಧ್ಯ?"

"ಆದರೆ ಭೈಜಾನ್ (ಅಣ್ಣ) ಮತ್ತು ಆಪಾ (ಅಕ್ಕ) ನಿಮ್ಮೊಂದಿಗೇ ಇದ್ದಾರಲ್ಲ?"

"ಏಕೆಂದರೆ ಅವರನ್ನು ಸಹ ನಮ್ಮೊಂದಿಗೇ ಜೀವಂತ ಸುಟ್ಟು ಬಿಡಲಾಯಿತು."

"ಹಾಗಾದರೆ ನಾನು ಮನೆಗೆ ವಾಪಸ್ಸು ಹೋಗುವೆ, ಅಮ್ಮಾ...."

ಒಂದು ಪ್ರೇತಾತ್ಮ ಮಗು ಕತ್ತಲ ರಾತ್ರಿಯಲ್ಲಿ ಒಂದು ಮಿಂಚು ಹುಳುವಿನಂತೆ ಆ ಕ್ಷಣ ಶಾಹ್ ಆಲಂ ಶಿಬಿರಕ್ಕೆ ಆಗಮಿಸುತ್ತದೆ. ಅದು ಶಿಬಿರದ ಎಲ್ಲೆಡೆ ತೂರಾಡುತ್ತದೆ, ಹಾರಾಡುತ್ತದೆ, ಕುಣಿದಾಡುತ್ತದೆ, ನೆಗೆದಾಡುತ್ತದೆ, ಎಲ್ಲರನ್ನೂ ಭೇಟಿಸುತ್ತದೆ. ಅದು ತೊದಲುವುದಿಲ್ಲ, ಸ್ಪಷ್ಟವಾಗಿ ಮಾತಾಡುತ್ತದೆ. ಅದು ಓಡಿ ಹೋಗಿ ತನ್ನ ತಾಯಿಯ ಬಟ್ಟೆಯಲ್ಲಿ ಅಡಗಿಕೊಳ್ಳುತ್ತದೆ. ಅದು ತನ್ನ ತಂದೆಯ ಬೆರಳು ಹಿಡಿದು ಪುಟ್ಟ ಪುಟ್ಟ ಹೆಜ್ಜೆ ಇಟ್ಟು ನಡೆದಾಡುತ್ತದೆ.

ಆ ಮಗು ಪ್ರೇತಾತ್ಮ ಶಾಹ್ ಆಲಂ ಶಿಬಿರದ ಇತರ ಮಕ್ಕಳಂತೆ ಇರದೆ ಅಪಾರ ಸಂತೋಷದಿಂದ ಇರುತ್ತದೆ.

ಯಾರೋ ಕೇಳುತ್ತಾರೆ "ನೀನು ಏಕೆ ಇಷ್ಟೊಂದು ಸಂತೋಷದಿಂದ ಇದ್ದೀಯ?"

"ನಿನಗೆ ಗೊತ್ತಾಗಲಿಲ್ಲವೆ? ನಿಮಗೆಲ್ಲ ಗೊತ್ತಿರಬೇಕು ಎಂದುಕೊಂಡಿದ್ದೆ."

"ಏನು ಗೊತ್ತಿರಬೇಕಿತ್ತು?"

"ಅದೇನೆಂದರೆ ನಾನು ಸಾಕ್ಷಿಯಾಗಿದ್ದೇನೆ ಎನ್ನುವುದು."

"ಸಾಕ್ಷಿ? ಯಾವುದಕ್ಕೆ ಸಾಕ್ಷಿ?"

"ನಾನು ಶೌರ್ಯಕ್ಕೆ ಸಾಕ್ಷಿಯಾಗಿದ್ದೇನೆ."

"ನೀನು ಯಾರ ಶೌರ್ಯಕ್ಕೆ ಸಾಕ್ಷಿಯಾಗಿದ್ದೀಯ?"

"ನನ್ನ ತಾಯಿಯ ಗರ್ಭ ಸೀಳಿ, ನನ್ನನ್ನು ಹೊರಗೆಳೆದು ಎರಡು ತುಂಡು ಮಾಡಿದವರ ಶೌರ್ಯಕ್ಕೆ ಸಾಕ್ಷಿಯಾಗಿದ್ದೇನೆ...."

ಮಧ್ಯ ರಾತ್ರಿ ನಂತರ ಪ್ರೇತಾತ್ಮಗಳು ಶಾಹ್ ಆಲಂ ಶಿಬಿರಕ್ಕೆ ಬರುತ್ತವೆ. ತಾಯಿ ಪ್ರೇತಾತ್ಮವೊಂದು ತನ್ನ ಮಗನನ್ನು ಕಾಣಲು ಬರುತ್ತದೆ. ಮಗ ತನ್ನ ತಾಯಿಯ ಅವಸ್ಥೆ ಕಂಡು ನಿಬ್ಬೆರಗಾಗುತ್ತದೆ.

"ಮಾ, ಇಂದು ನೀನು ಇಷ್ಟೇಕೆ ಖುಷಿಯಾಗಿರುವೆ?"

"ಸಿರಾಜ್, ಇಂದು ನಿನ್ನ ಅಜ್ಜನನ್ನು ಸ್ವರ್ಗದಲ್ಲಿ ಕಂಡೆ. ಅವನು ತನ್ನ ತಂದೆಯನ್ನು ನನಗೆ ಪರಿಚಯಿಸಿದ. ಅವನು ತನ್ನ ತಂದೆಯನ್ನು ಅಷ್ಟೇ ಅಲ್ಲ ತನ್ನ ಅಜ್ಜ ಮತ್ತು ಮುತ್ತಜ್ಜನನ್ನು ಸಹ ಭೇಟಿ ಮಾಡಿಸಿದ. ನಾನು ನಿನ್ನ ಮುತ್ತಜ್ಜನ ಮುತ್ತಜ್ಜನನ್ನು ಭೇಟಿಯಾದೆ ಎನ್ನುವುದನ್ನು ಊಹಿಸಿಕೋ" ಎನ್ನುತ್ತಾಳೆ ತಾಯಿ. ಅದರ ದನಿ ಸಂತಸದ ಚಿಲುಮೆಯಾಗಿರುತ್ತದೆ. "ಸಿರಾಜ್, ನಿನ್ನ ಮುತ್ತಜ್ಜನ ಮುತ್ತಜ್ಜನ ಅಜ್ಜ ಹಿಂದೂ ಆಗಿದ್ದ, ಹಿಂದೂ. ನಿನಗೆ ಗೊತ್ತಾಯಿತೆ? ಇದನ್ನು ಎಲ್ಲರಿಗೂ ತಪ್ಪದೆ ಹೇಳಬೇಕು, ಸಿರಾಜ್..."

ಪ್ರೇತಾತ್ಮಗಳು ಮಧ್ಯ ರಾತ್ರಿ ನಂತರ ಶಾಹ್ ಆಲಂ ಶಿಬಿರಕ್ಕೆ ಬರುತ್ತವೆ. ಒಬ್ಬ ಸೋದರಿ ಪ್ರೇತ ತನ್ನ ಸೋದರನನ್ನು ಹುಡುಕುತ್ತ ಬರುತ್ತದೆ. ಅದು ಎಲ್ಲೆಡೆ ಅವನನ್ನು ಹುಡುಕಾಡುತ್ತದೆ. ಕೊನೆಗೆ ಸೋಪಾನದ ಒಂದು ಮೆಟ್ಟಿಲ ಮೇಲೆ ಅವನು ಕುಳಿತುಕೊಂಡಿದ್ದನ್ನು ಗಮನಿಸುತ್ತದೆ. ಸೋದರಿ ಪ್ರೇತಕ್ಕೆ ಹಿಗ್ಗೋ ಹಿಗ್ಗು. ತನ್ನ ಸೋದರನನ್ನು ಕಾಣಲು ಓಡುತ್ತದೆ.

"ಭೈಯಾ" ಅದು ಅರಚಿಕೊಳ್ಳುತ್ತದೆ. ಸೋದರ ಕೇಳಿಯೂ ಕೇಳದವನಂತೆ ನಟಿಸುತ್ತಾನೆ. ಅವನು ಕುಳಿತಲ್ಲೇ ಕುಳಿತಿರುತ್ತಾನೆ. ಕಲ್ಲಿನ ಮೂರ್ತಿಯಂತೆ ಮಿಸುಕಾಡದೆ ಮೂಕನಂತೆ ಕುಳಿತಿರುತ್ತಾನೆ.

"ಭೈಯ್ಯಾ ಕೇಳಿಲ್ಲಿ" ಮತ್ತೆ ಸೋದರಿ ಪ್ರೇತಾತ್ಮ ಹೇಳುತ್ತದೆ.

ಅವನು ಪುನಃ ಅದರ ಮಾತು ಕೇಳಿಸಿಕೊಂಡದ್ದರ ಸುಳುಹು ನೀಡುವುದಿಲ್ಲ, ಅವಳತ್ತ ನೋಡುವುದೂ ಇಲ್ಲ.

"ನನ್ನ ಮಾತಿಗೆ ಏಕೆ ಕಿವಿಗೊಡುತ್ತಿಲ್ಲ, ಭೈಯ್ಯಾ?" ಸೋದರಿ ಪ್ರೇತ ಜೋರಾಗಿ ಅರಚಿಕೊಳ್ಳುತ್ತದೆ. ಈ ಸಲ ಸೋದರನ ಮುಖ ಅಗ್ನಿಕುಂಡವಾಗಿ ನಿಗಿನಿಗಿ ಎನ್ನುತ್ತದೆ. ಅವನ ಕಣ್ಣು ಕೆಂಡ ಕಾರುತ್ತವೆ. ಕೋಪದಿಂದ ಮೇಲೆದ್ದವನೇ ಅದನ್ನು ಅಮಾನುಷವಾಗಿ ಥಳಿಸತೊಡಗುತ್ತಾನೆ. ಜನ ಗುಂಪುಗೂಡುತ್ತಾರೆ.

"ನಿನ್ನ ಸೋದರನನ್ನು ಇಷ್ಟೊಂದು ಕೆರಳುವಂತೆ ನೀನೇನು ಮಾತಾಡಿದೆ?" ಅದ್ಯಾರೋ ಕೇಳುತ್ತಾನೆ.

ಸೋದರಿ ಪ್ರೇತ "ಭೈಯ್ಯಾ ಎಂದು ಕರೆದೆ, ಅಷ್ಟೇ" ಎನ್ನುತ್ತದೆ.

ಒಬ್ಬ ಮುದುಕ "ಇಲ್ಲ ಸಲೀಮಾ. ಅದು ನಿನ್ನ ತಪ್ಪು, ಹಾಗೇಕೆ ಹೇಳಬೇಕಿತ್ತು? ಹಾಗೆ ಹೇಳುವುದು ಖಚಿತವಾಗಿ ತಪ್ಪು" ಎನ್ನುತ್ತಾನೆ. ಮಗುವಿನಂತೆ ಅಳಲಾರಂಭಿಸುತ್ತಾನೆ. ಸೋದರ ಗೋಡೆಗೆ ತನ್ನ ಹಣೆ ಜಜ್ಜಿಕೊಳ್ಳುತ್ತಾನೆ....

ಪ್ರೇತಾತ್ಮಗಳು ಮಧ್ಯ ರಾತ್ರಿ ನಂತರ ಶಾಹ್ ಆಲಂ ಶಿಬಿರಕ್ಕೆ ಬರುತ್ತವೆ. ಒಂದು ರಾತ್ರಿ ಮುದುಕ ಪ್ರೇತಾತ್ಮ ಇತರ ಪ್ರೇತಾತ್ಮಗಳೊಂದಿಗೆ ಬರುತ್ತದೆ. ಒಂದು ತುಂಡು ಲಂಗೋಟ ಹೊರತಾಗಿ ಅದು ಬೆತ್ತಲಾಗಿರುತ್ತದೆ. ಕಾಲಲ್ಲಿ ಚಪ್ಪಲಿ ಧರಿಸಿರುತ್ತದೆ. ಕೈಯಲ್ಲಿ ಕಟ್ಟಿಗೆ ಕೋಲು ಇರುತ್ತದೆ. ಅದರ ಲಂಗೋಟ ಮೇಲೆ ಹಳೆಯ ಮಾದರಿಯ ಗಡಿಯಾರವೊಂದು ನೇತಾಡುತ್ತಿರುತ್ತದೆ.

ಯಾವನೋ ಒಬ್ಬ "ನೀನು ಸಹ ನಿನ್ನ ಸಂಬಂಧಿಕನನ್ನು ಈ ಶಿಬಿರದಲ್ಲಿ ಹುಡುಕುತ್ತಿರುವೆಯ?" ಎಂದು ಕೇಳುತ್ತಾನೆ.

ಮುದುಕ ಪ್ರೇತ ಉತ್ತರಿಸುತ್ತದೆ "ಹೌದು ಮತ್ತು ಇಲ್ಲ."

ಅದೊಂದು ಮುದಿ ಹುಚ್ಚ ಎಂದು ಅದರಷ್ಟಕ್ಕೇ ಇರಗೊಡುತ್ತಾರೆ. ಮುದುಕ ಶಿಬಿರದ ಎಲ್ಲೆಡೆ ಸಂಚರಿಸುತ್ತದೆ.

ಪುನಃ ಯಾವನೋ ಒಬ್ಬ "ಬಾಬಾ, ಯಾರನ್ನು ಹುಡುಕುತ್ತಿದ್ದೀಯ?" ಎಂದು ಕೇಳುತ್ತಾನೆ.

ಮುದುಕ ಪ್ರೇತ ಹೇಳುತ್ತದೆ "ನನ್ನನ್ನು ಕೊಲ್ಲಬಹುದಾದ ವ್ಯಕ್ತಿಯನ್ನು ನಾನು ಹುಡುಕುತ್ತಿದ್ದೇನೆ."

"ಯಾಕೆ?"

"ಐವತ್ತು ವರ್ಷಗಳ ಹಿಂದೆ ಒಂದು ಗುಂಡಿನಿಂದ ನನ್ನನ್ನು ಸುಟ್ಟು ಹಾಕಲಾಗಿತ್ತು, ಈಗ ಗಲಭೆಕೋರರು ನನ್ನನ್ನು ಜೀವಂತ ಸುಡಬೇಕು ಎಂದು ನಾನು ಬಯಸಿದ್ದೇನೆ."

"ಹೀಗೇಕೆ ನೀನು ಬಯಸುತ್ತೀಯ ಬಾಬಾ?"

"ಅವರ ಗುಂಡಿನಿಂದ ನನ್ನನ್ನು ಕೊಲ್ಲಲಾಗಲಿಲ್ಲ, ಈಗ ಜೀವಂತ ಸುಟ್ಟರೂ ನಾನು ಸಾಯಲಾರೆ ಎಂದು ಜಗತ್ತಿಗೆ ಸಾರಿ ಹೇಳಬೇಕಾಗಿದೆ..."

ಶಾಹ್ ಆಲಂ ಶಿಬಿರಕ್ಕೆ ಭೇಟಿ ಕೊಡಲು ಬಂದಿದ್ದ ಒಂದು ಪ್ರೇತಾತ್ಮಕ್ಕೆ ರಾಜಕೀಯ ಧುರೀಣನೊಬ್ಬ "ನಿನಗೆ ತಂದೆ ತಾಯಿಯರು ಇದ್ದಾರೆಯೆ" ಎಂದು ಕೇಳುತ್ತಾನೆ.

"ಇಲ್ಲ, ಅವರಿಬ್ಬರನ್ನೂ ಕೊಲ್ಲಲಾಯಿತು."

"ಸೋದರ ಸೋದರಿಯರು?"

"ಇಲ್ಲ."

"ಬೇರೆ ಯಾರಾದರೂ ಸಂಬಂಧಿಕರು ಬದುಕಿ ಉಳಿದಿದ್ದಾರೆಯೆ?"

"ಇಲ್ಲ, ಅವರೆಲ್ಲ ಸತ್ತು ಹೋಗಿದ್ದಾರೆ."

"ನೀನು ಇಲ್ಲಿ ನೆಮ್ಮದಿಯಾಗಿ ಇದ್ದೀಯ?"

"ಹಾಂ, ಇದ್ದೇನೆ."

"ತಿನ್ನಲು ಸಾಕಷ್ಟು ಸಿಗುತ್ತಿದೆಯೆ?"

"ಹಾಂ, ಸಿಗುತ್ತಿದೆ."

"ನಿನಗೆ ಬಟ್ಟೆ ಬರೆ ಇದೆಯೆ?"

"ಹಾಂ, ಇದೆ."

"ನಿನಗೆ ಇನ್ನೇನಾದರೂ ಬೇಕೆ?"

"ಇಲ್ಲ, ಏನೂ ಬೇಕಿಲ್ಲ."

"ಏನೂ ಬೇಡವೆ?"

"ಬೇಡವೇ ಬೇಡ."

ಧುರೀಣ ಸಂತುಷ್ಟನಾಗುತ್ತಾನೆ. "ಹುಡುಗ ಚುರುಕಾಗಿದ್ದಾನೆ. ಬೇರೆ ಮುಸ್ಲಿಮರಂತಿಲ್ಲ" ಎಂದು ತನ್ನಷ್ಟಕ್ಕೇ ಹೇಳಿಕೊಳ್ಳುತ್ತಾನೆ....

ಪ್ರೇತಾತ್ಮಗಳು ಮಧ್ಯ ರಾತ್ರಿ ನಂತರ ಶಾಹ್ ಆಲಂ ಶಿಬಿರಕ್ಕೆ ಬರುತ್ತವೆ. ಒಂದು ರಾತ್ರಿ ಸೈತಾನನ ಪ್ರೇತ ಇತರರೊಂದಿಗೆ ಬರುತ್ತದೆ. ಅದು ಸುತ್ತಮುತ್ತ ಕಣ್ಣು ಹಾಯಿಸುತ್ತದೆ. ಅದಕ್ಕೆ ತೀವ್ರ ಅಚ್ಚರಿಯಾಗುತ್ತದೆ. ಅಷ್ಟೇ ಅಲ್ಲ, ತಾನು ಕಂಡಿದ್ದ ದೃಶ್ಯ ನಾಚಿ ನೀರಾಗುವಂತೆ ಮಾಡುತ್ತದೆ. ಕಣ್ಣೆತ್ತಿ ನೋಡುವುದೇ ಸಾಧ್ಯವಾಗುವುದಿಲ್ಲ, ಕಣ್ಣಲ್ಲೇ ಎಲ್ಲರೂ ನೆಲೆ ನಿಂತಿರುತ್ತಾರೆ. ಹೇಡಿಯಂತೆ ಅದು ತನ್ನ ದೃಷ್ಟಿ ಬೇರೆಡೆ ತಿರುಗಿಸುತ್ತದೆ. ತಲೆ ತಗ್ಗಿಸುತ್ತದೆ, ಪಾರಾಗಿ ಹೋಗಲು ಗುಪ್ತ ದಾರಿಗಾಗಿ ಕಳ್ಳನೋಟ ಬೀರುತ್ತದೆ. ಬೇರೆ ಯಾವ ಆತ್ಮವೂ ಕಣ್ಣಿಗೆ ಬೀಳುವ ಸಾಧ್ಯತೆಯೇ ಇಲ್ಲದಂಥ ಗುಪ್ತ ಮಾರ್ಗಕ್ಕಾಗಿ ಚಡಪಡಿಸುತ್ತದೆ. ಆ ವಿಚಿತ್ರ ಜೀವಿಯನ್ನು ದಿಗ್ಭ್ರಮೆಗೊಂಡ ಜನ ಹಿಡಿದು ಕುತ್ತಿಗೆಗೆ ಹಾಕಿ ಅಲ್ಲಾಡಿಸತೊಡಗುತ್ತಾರೆ.

ನಾಚಿಕೆಯಿಂದ ತತ್ತರಿಸಿ ಹೋದ ಆ ಪ್ರೇತ "ಇದರಲ್ಲಿ... ಈಗ ನಡೆದಿರುವುದರಲ್ಲಿ ನನ್ನದೇನೂ ಕೈವಾಡವಿಲ್ಲ, ನಿಜವಾಗಿಯೂ ಇದರಲ್ಲಿ... ನನ್ನ ಕೈವಾಡವಿಲ್ಲ, ಅಲ್ಲಾಹ್‌ನಾಣೆ ಮಾಡಿ ಹೇಳುತ್ತೇನೆ. ನನಗೂ ಈ ಯಾವ ಘಟನೆಗೂ ಸಂಬಂಧವಿಲ್ಲ" ಎಂದು ಗೋಗರೆಯುತ್ತದೆ.

ಜನ ಅನ್ನುತ್ತಾರೆ "ಹೌದು, ಹೌದು. ನಮಗೆ ಗೊತ್ತಿದೆ. ನೀನು ಏನೂ ಮಾಡಿರಲಿಕ್ಕಿಲ್ಲ, ನಿನಗೆ ನಿನ್ನದೇ ಆದ ಯೋಚನೆಯ ಮಾನದಂಡಗಳಿವೆ."

ಸಮಾಧಾನದ ನಿಟ್ಟುಸಿರು ಬಿಟ್ಟ ಸೈತಾನ್ ಪ್ರೇತ "ನನ್ನ ಹೃದಯದ ಮೇಲಿಂದ ಎಂಥ ಭಾರ ನೀವು ಇಳಿಸಿದಿರಿ ಎನ್ನುವುದು ನಿಮಗೆ ಗೊತ್ತಾಗಲಾರದು. ಅಮಾಯಕರಾದ ನಿಮಗೆ ಸತ್ಯ ಗೊತ್ತಿರುತ್ತದೆ."

ಅವರು ಎನ್ನುತ್ತಾರೆ: "ಕೆಲ ದಿನಗಳ ಹಿಂದೆ ಅಲ್ಲಾಹ್ ಮಿಯಾಂ ಬಂದಿದ್ದ ಅವನೂ ಇದೇ ಮಾತನ್ನು ಹೇಳಿದ...."

(ಪ್ರಸಿದ್ಧ ನಾಟಕಕಾರ ಹಾಗೂ ಕತೆಗಾರ ಅಸ್ಗರ್ ವಜಾಹತ್ ಅವರು ದೆಹಲಿಯ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯದಲ್ಲಿ ಹಿಂದಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಗುಜರಾತನಲ್ಲಿ 2002ರಲ್ಲಿ ನಡೆದ ಕೋಮು ಹಿಂಸಾಚಾರದಿಂದ ತತ್ತರಿಸಿಹೋಗಿದ್ದ ಅವರ ಹೃದಯದಾಳದಿಂದ ಒತ್ತರಿಸಿ ಹೊರಹೊಮ್ಮಿದ ಕಲಾಕೃತಿ ಇದು.)


ಮೂಲ ಹಿಂದಿ: ಅಸ್ಗರ್ ವಜಾಹತ್

ಕನ್ನಡಕ್ಕೆ: ಹಸನ್ ನಯೀಂ ಸುರಕೋಡ

ಪುಸ್ತಕ ವಿಮರ್ಶೆ

ಮಲೆನಾಡ ಗ್ರಾಮಬದುಕಿನ ಪಲ್ಲಟದ ಕಥನ

• ಅರುಣ್ ಜೋಳದಕೂಡ್ಲಿಗಿ



ಹೊಸ ತಲೆಮಾರಿನ ಲೇಖಕರು ಕಾದಂಬರಿ ಬರೆಯುತ್ತಿರುವುದು ಕಡಿಮೆ. ಈ ಮಧ್ಯೆ ದಯಾನಂದ ಅವರು ಕಾದಂಬರಿ ಪ್ರಕಾರಕ್ಕೆ ತೆರೆದುಕೊಂಡಿದ್ದಾರೆ. ಈ ಮುಂಚೆ ಒಂದು ಕಥಾಸಂಕಲನವನ್ನು ಪ್ರಕಟಿಸಿದ ಇವರ ಮೊದಲ ಕಾದಂಬರಿ 'ನರಸಾಪುರ'. ಕಲ್ಕುಳಿ ವಿಠ್ಠಲ ಹೆಗಡೆ ಅವರ 'ಮಂಗನ ಬ್ಯಾಟೆ' ಕಾದಂಬರಿ ಬದಲಾದ ಮಲೆನಾಡನ್ನು ಕಟ್ಟಿಕೊಡುವಲ್ಲಿ ಯಶ ಕಂಡ ಬಗ್ಗೆ ಚರ್ಚೆಗೊಳಗಾಗಿತ್ತು. ಇದೇ ಹೊತ್ತಲ್ಲಿ ಮಲೆನಾಡಿನ ಮತ್ತೊಂದು ಆಯಾಮವನ್ನು ದಯಾನಂದ ಜಕ್ಕಣಿಕಿ ಅವರ 'ನರಸಾಪುರ' ಕಾದಂಬರಿ ಕಟ್ಟಿಕೊಡುತ್ತಿದೆ.

'ನರಸಾಪುರ' ಕಾದಂಬರಿ ಕಾಲಾನಂತರದಲ್ಲಿ ಒಂದು ಗ್ರಾಮದಲ್ಲಾದ ಜನಬದುಕಿನ ಪಲ್ಲಟಗಳನ್ನು, ಕಾಡಿನ ಜತೆಗಿನ ಸಂಬಂಧದಲ್ಲಿ ಉಂಟಾದ ಬದಲಾವಣೆಯನ್ನು ದಾಖಲಿಸುತ್ತದೆ. ಹೊರ ಜಗತ್ತಿನ ಪಲ್ಲಟ ನರಸಾಪುರಕ್ಕೆ ಅಪ್ಪಳಿಸಿದಾಗ ಎದ್ದ ಅಲೆಗಳನ್ನು ಈ ಕಾದಂಬರಿ ಕಟ್ಟಿಕೊಡಲು ಪ್ರಯತ್ನಿಸಿದೆ.

ಮುಖ್ಯವಾಗಿ ಮಲೆನಾಡ ಗ್ರಾಮಬದುಕಿನ ಹಲವು ತಗ್ಗಲುಗಳು ಇಲ್ಲಿ ದಾಖಲಾಗಿದೆ. ಸುಟ್ಟ ಊರೊಂದರ ಪರಿಚಯದ ಮೂಲಕ ಕಥನ ಆರಂಭವಾಗುತ್ತದೆ. ಊರಿನ ಹಿರಿಯ ಪುಟ್ಟಣ್ಣಯ್ಯ ಈ ನರಸಾಪುರದ ಕಥೆ ಹೇಳಲು ಆರಂಭಿಸುತ್ತಾರೆ. ಪತ್ರಕರ್ತರು ಈ ಕಥೆಯನ್ನು ಬರೆಯಲು ತೊಡಗುತ್ತಾರೆ. ಹೀಗೆ ಆರಂಭವಾದ ಕಥೆ ನರಸಾಪುರದ ಭಿನ್ನ ಪದರುಗಳನ್ನು ಬಿಚ್ಚುತ್ತಾ ಸಾಗುತ್ತದೆ. ದಯಾನಂದ ವೃತ್ತಿಯಲ್ಲಿ ಪತ್ರಕರ್ತರಾದ ಕಾರಣವೂ ಈ ನಿರೂಪಣಾ ಮಾದರಿ ಪ್ರಭಾವಿಸಿರಬಹುದು. ಹಾಗಾಗಿ ಇಡೀ ಕಾದಂಬರಿಯೇ ಪತ್ರಕರ್ತ ಬರೆದುಕೊಂಡ ವರದಿ ರೂಪದ ಕಥನವಾಗಿದೆ.

ನರಸಾಪುರ ಗ್ರಾಮ, ಅದಕ್ಕೆ ಹೊಂದಿಕೊಂಡ ಕಾಡು, ಆಂತೋಣಿ ಎಸ್ಟೇಟ್ ನಡುವಿನ ಸಂಬಂಧದ ಎಳೆಗಳನ್ನು ಕಾದಂಬರಿ ಒಳಗೊಂಡಿದೆ. ಇದರಲ್ಲಿ ಶಿಕಾರಿಯ ಚಿತ್ರಣ, ದೈಯ್ಯದ ಹರಕೆ, ಬೆಳೆಗಳನ್ನು ನಾಶ ಮಾಡುವ ಆನೆಗಳ ಹಾವಳಿಯ ಚಿತ್ರಣ, ಕಾಫಿ ತೋಟದ ಪರಿಸರದಲ್ಲಿ ಆಳು ಧನಿಯ ವಿನ್ಯಾಸದ ಭಿನ್ನ ನೆಲೆಗಳು, ಶರಾಬು ಕಾಯಿಸುವಿಕೆ ಮತ್ತದರ ಕಳ್ಳಜಾಲದ ಕಥೆಗಳು, ಮನುಷ್ಯನ ದುರಾಸೆಗೆ ಕಾಡು ಬಲಿಯಾಗುವುದು, ಕೊನೆಗೆ ಕಾಡ್ಗಿಚ್ಚು ಮನುಷ್ಯರ ವಾಸದ ನೆಲೆಗೂ ಆವರಿಸಿ ತನ್ನ ಸಿಟ್ಟನ್ನು ತೋರಿಕೊಳ್ಳುವುದು ಒಟ್ಟು ಕಾದಂಬರಿಯ ಆವರಣ.

ಸಾಮಾನ್ಯವಾಗಿ ಮಲೆನಾಡಿನ ಭಾಗದ ಯಾವುದೇ ಕಥನ ಕಾಡು-ನಾಡನ್ನು ಬೆಸೆದ ಸ್ವರೂಪದಲ್ಲೇ ಇರುತ್ತದೆ. ಅದು ನರಸಾಪುರ ಕಾದಂಬರಿಯಲ್ಲೂ ಸಂಭವಿಸಿದೆ. ಇಲ್ಲಿ ನೆನಪುಗಳಲ್ಲಿ ಕಾಡಿನ ಸಮೃದ್ಧಿಯನ್ನು ಚಿತ್ರಿಸುತ್ತಾ ವಾಸ್ತವದಲ್ಲಿ ಅದರ ದಟ್ಟತೆ ಕಡಿಮೆಯಾಗುವ ಸೂಕ್ಷ್ಮಗಳನ್ನು ಕಟ್ಟುತ್ತಾ ಹೋಗುತ್ತಾರೆ. ಹಾಗಾಗಿ ಮಲೆನಾಡಿನ ನಿನ್ನೆ ಮತ್ತು ನಾಳೆಯನ್ನು ಈ ಕಾದಂಬರಿ ಒಟ್ಟೊಟ್ಟಿಗೆ ಹಿಡಿಯಲು ಪ್ರಯತ್ನಿಸಿದೆ.

ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಒಡೆಯುವುದಕ್ಕೂ ಕಾಡಿನ ಉತ್ಪನ್ನಗಳು ನಾಶವಾಗುವುದಕ್ಕೂ ಇರುವ ಸಂಬಂಧವನ್ನು ಇಲ್ಲಿ ಶೋಧಿಸಲಾಗಿದೆ. ನರಸಾಪುರದ ತುಂಡು ಭೂಮಿಗಳನ್ನೆಲ್ಲಾ ನುಂಗಿದ, ಎಂಟುನೂರು ಎಕರೆ ವಿಸ್ತಾರದ ಆಂತೋಣಿ ಎಸ್ಟೇಟ್ ಮತ್ತು ನರಸಾಪುರದ ಸಣ್ಣ ರೈತರ ನಡುವಿನ ತಾಕಲಾಟವನ್ನು ಈ ಕಾದಂಬರಿಯಲ್ಲಿ ಹಿಡಿಯಲಾಗಿದೆ. ಇಲ್ಲಿ ಆಂತೋಣಿ ಎಸ್ಟೇಟ್ ನರಸಾಪುರಕ್ಕೆ ದೊಡ್ಡದೊಂದು ನಿಗೂಢ ಜಗತ್ತಿನಂತೆಯೇ ಕಾಣುತ್ತದೆ. ಎಸ್ಟೇಟಿಗೆ ಬರುವ ಉತ್ತರಕರ್ನಾಟಕದ ಲಂಬಾಣಿಗಳು ಇತರೆ ಕೂಲಿಯಾಳುಗಳನ್ನು ನಡೆಸಿಕೊಳ್ಳುತ್ತಿರುವ ದಾರುಣತೆಯನ್ನು ಸೂಕ್ಷ್ಮವಾಗಿ ಕಟ್ಟಿಕೊಡಲಾಗಿದೆ. ಆಂತೋಣಿ ಎಸ್ಟೇಟ್‌ನಲ್ಲಿ ಬೇಲಿ ದಾಟಿಸಿ ದನ ಬಿಡುವ ಪ್ರಕ್ರಿಯೆ ಇತ್ತು. ಬೇಸಾಯ ಮುಗಿದ ನಂತರ ಹೀಗೆ ಎತ್ತುಗಳನ್ನು ಬಿಟ್ಟರೆ, ಮತ್ತೆ ಮಳೆಗಾಲಕ್ಕೆ ತೋಟದಿಂದ ಹೊರಕ್ಕೆ ದಾಟಿಸಿಕೊಳ್ಳುತ್ತಿದ್ದರು. ಈ ಚಿತ್ರಣ ಹೊಸತೆರನಾಗಿದೆ. ಎಸ್ಟೇಟಿನಲ್ಲಿ ಬಿಟ್ಟ ನೀರನ್ನು ಕದಿಯುವ ಪ್ರಸಂಗವೊಂದು ಬರುತ್ತದೆ. ನೀರಾಯಿಸುವ ಕೂಲಿಯಾಳು ಪಕ್ಕದ ಹೊಲದವರಿಗೆ ದೋಣಿ ಹಾಕಿ ನೀರು ಹಾಯಿಸಿ ಮಾರಿಕೊಳ್ಳುವುದು ಕುತೂಹಲ ಮೂಡಿಸುತ್ತದೆ. ಎಸ್ಟೇಟಿಗೆ ದನ ಬಿಡುವುದನ್ನು, ಜನ ನುಗ್ಗುವುದನ್ನು ತಡೆಯಲು ಆಂತೋಣಿ ಎಸ್ಟೇಟಿನ ಮೆನೇಜರ್ ಥಾಮಸ್ ಮೋರಾಸ್‌ಗೆ ಮೇಸ್ತ್ರಿ ತಿಮ್ಮಪ್ಪನು 'ವೀರಭದ್ರ ಸ್ವಾಮಿಗೆ, ಚಾಮುಂಡೇಶ್ವರಿಗೆ ಹರಕೆ ಹಾಕೀವಿ ಅಂತ ಬೋರ್ಡ ಹಾಕಬಹುದು' ಎಂದು ಹೇಳುತ್ತಾನೆ. ಆದರೆ ಥಾಮಸ್ 'ಅಯ್ಯೋ ನಮ್ಮ ಜಾತೀಲಿ ವೀರಭದ್ರೇಶ್ವರ, ಚಾಮುಂಡಿಯನ್ನು ನಂಬಲ್ಲವಲ್ಲ, ಅದಕ್ಕೇನು ಮಾಡೋದು?' ಎನ್ನುತ್ತಾರೆ. ಆಗ ತಿಮ್ಮಪ್ಪ 'ನೀವು ನಂಬದಿದ್ರೆ ಏನಂತೆ, ನರಸಾಪುರದವ್ರು ನಂಬ್ತಾರೆ, ದೇವರಂದ್ರೆ ಭಾರಿ ಎದ್ರಿಕೆ' ಎನ್ನುತ್ತಾನೆ. ಈ ಮೂಲಕ ಜನರ ದೈವದ ನಂಬಿಕೆಯನ್ನೇ ಎಸ್ಟೇಟಿನ ಕಾವಲಿಗೆ ಬಳಸಿಕೊಳ್ಳುವ ವಿನ್ಯಾಸ ಭಿನ್ನವಾಗಿದೆ.

ನರಸಾಪುರ ಪಕ್ಕದ ಸಬ್ಳಿ, ಕುಪ್ಪನಳ್ಳಿ, ಮೇಲ್ಮಕ್ಕಿ ಮುಂತಾದ ಹಳ್ಳಿಗಳ ಬದಲಾದ ಜೀವನವನ್ನು ಅವುಗಳ ಕೊಡುಕೊಳೆ ಸಂಬಂಧವನ್ನು ಅಲ್ಲಲ್ಲಿ ಚಿತ್ರಿಸಲಾಗಿದೆ. ಪುಟ್ಟಣ್ಣಯ್ಯನ ಲೈಸೆನ್ಸ್ ಇರುವ ಕೋವಿಯೊಂದು ಉಂಟುಮಾಡಿದ ತಲ್ಲಣಗಳನ್ನು, ಕಳ್ಳಕೋವಿಗಳ ಬಳಕೆಯ ನೆಲೆಯನ್ನೂ ಈ ಕಾಲದ ವೈರುಧ್ಯಗಳಲ್ಲಿ ಕಟ್ಟಿಕೊಡಲಾಗಿದೆ. ಏಡಿ ಬಗ್ರ, ಕೊಕ್ಕಡ ಸೋಮ, ಶಿಕಾರಿ ಬುಡ್ಡನ ಚಾಕಚಕ್ಯತೆಯನ್ನು ನೋಡುತ್ತಿದ್ದರೆ, ತೇಜಸ್ವಿ ಚಿತ್ರಿಸುವ ಮಂದಣ್ಣನ ನೆನಪಾಗುತ್ತದೆ. ನರಸಾಪುರದಲ್ಲಿ ಕಳ್ಳಬಟ್ಟಿ ಇಳಿಸುತ್ತ ಬದುಕು ರೂಪಿಸಿಕೊಳ್ಳುವ ತಮಿಳುನಾಡಿದ ರಾಜನಿ ತನ್ನ ರಕ್ಷಣೆಗಾಗಿ ತಮಿಳು ದೆವ್ವದ ಮೊರೆ ಹೋಗುವುದು ಕುತೂಹಲಕಾರಿಯಾಗಿದೆ.

ಮಲೆನಾಡಿನ ಕೃಷಿಯ ಸ್ಥಿತ್ಯಂತರವನ್ನು ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಕೃಷಿ ಕೂಲಿಗೆ ಜನ ಬರುವ ಫರಕುಗಳನ್ನು ಹಿಡಿಯಲಾಗಿದೆ. ಗೊಬ್ಬರ ಹಾಕಲು ಯಾರೂ ಕೂಲಿಗೆ ಬರುವುದಿಲ್ಲ, ಬದಲಾಗಿ ಕಾಫಿಗಿಡವನ್ನು ಕಸಿ ಮಾಡಲು, ಅಗತೆ ತೆಗೆಯಲು ಜಾಸ್ತಿ ಬರುತ್ತಿದ್ದರು. ಕಾರಣ ಒಂದು ಗಿಡದ ಕಸಿಗೆ ಇಂತಿಷ್ಟು ಎಂದು ಸಿಗುತ್ತಿದ್ದರಿಂದ ಮಧ್ಯಾಹ್ನದ ಹೊತ್ತಿಗೆ ನೂರು ರೂಪಾಯಿ ದುಡಿಯಬಹುದಿತ್ತು. ಇದು ಕಡಿಮೆ ಶ್ರಮ ಮತ್ತು ಸಮಯದಲ್ಲಿ ಹೆಚ್ಚು ದುಡಿಮೆ ಬಯಸುವ ರೈತರ ಬದಲಾದ ಮನಸ್ಥಿತಿಯನ್ನು ತೋರುತ್ತಿದೆ. ಕಾಡುಪ್ರಾಣಿಗಳ ಜತೆ ಜನರ ಸಂಬಂಧಗಳಲ್ಲಿ ಆದ ಬದಲಾವಣೆಗಳನ್ನು ಹಿಡಿದಿದ್ದಾರೆ. 'ಮೊದ್ಲೆಲ್ಲಾ ಆನೆಗಳು ಗದ್ದೆ ತುಳುದ್ರೆ ಬತ್ತ ಜಾಸ್ತಿಯಾಗುತ್ತೆ ಅಂತ ಹೇಳ್ತಿದ್ರು. ಆನೆಸ್ವಾಮಿ ಅಂತ ಪೂಜೆ ಮಾಡ್ತಿದ್ರು. ಈಗ ಯಾರು ಆನೆ ಬಂದ್ರೆ ಒಳ್ಳೇದು ಅಕ್ಕಾತಿ ಅನ್ನುತ್ತಾರೆ?' ಎಂಬಂತಹ ಮಾತುಗಳಲ್ಲಿ ಈ ಬದಲಾವಣೆಯನ್ನು ಗುರುತಿಸಬಹುದು.



ನರಸಾಪುರ
ಕಾದಂಬರಿ
ಜಕ್ಕಣಿಕಿ ದಯಾನಂದ
ಪುಟ: 308, ಬೆಲೆ: 200/-
ಪಾಂಚಜನ್ಯ ಪಬ್ಲಿಕೇಶನ್ಸ್, ಬೆಂಗಳೂರು-72


ಈ ಕಾದಂಬರಿಯ ಮಿಲಿಟರಿ ಮತ್ತು ಚಾರ್‌ಕೋಲಿನವರ ಭಾಗ ವಿಶಿಷ್ಟವಾಗಿದೆ. ಸ್ವತಂತ್ರಪೂರ್ವ ಸೈನಿಕರ ದಬ್ಬಾಳಿಕೆಯನ್ನು ಈ ಭಾಗ ಕಟ್ಟಿಕೊಡುತ್ತದೆ. ಮಿಲಿಟರಿಯವರ ದಬ್ಬಾಳಿಕೆಗೆ ಬಲಿಯಾಗಿ ಮದುವೆಗೆ ಮುಂಚೆಯೇ ಬಸಿರಾದ ಹೆಣ್ಣುಮಕ್ಕಳು ಕೂಸನ್ನು ಹತ್ಯೆಮಾಡುವ ಕೃತ್ಯಕ್ಕೆ ಇಳಿವ ದಾರುಣತೆಯನ್ನು ಚಿತ್ರಿಸಲಾಗಿದೆ. ಕೆಲವು ಹೆಂಗಸರು ಮಿಲಿಟರಿಯವರಿಗೆ ಹುಟ್ಟಿದ ಮಕ್ಕಳನ್ನು ಹತ್ಯೆ ಮಾಡದೆ ಬೆಳೆಸಿದರು. ಹೀಗೆ ಹುಟ್ಟಿದವನೇ ಶಿಕಾರಿ ಅಣ್ಣಪ್ಪ. ಮದುವೆಯ ನಂತರ ಮಕ್ಕಳಾಗದ ತಾಯಂದಿರು ಮಿಲಿಟರಿಯವರಿಂದ ತಾಯಂದಿರಾದ ಧನ್ಯತೆಯ ವೈಚಿತ್ರ್ಯವನ್ನೂ ಹಿಡಿಯಲಾಗಿದೆ.

ಹಾಗೆಯೆ ಕೇರಳದ ಕಡೆಯಿಂದ ಬಂದವರು ಚಾರ್‌ಕೋಲಿನವರು. ಇಲ್ಲಿನ ಮರಗಳನ್ನು ಕಡಿದು ಸಾಗಿಸಲು ಈ ಭಾಗಕ್ಕೆ ಬಂದು ಇಲ್ಲಿಯೇ ಕೆಲ ತಿಂಗಳುಗಳ ಕಾಲ ಉಳಿಯುತ್ತಿದ್ದರು. ಕೆಲವು ದಿನ್ನೆಗಳನ್ನು ಕಡಿದು ಸಾಗಿಸಿದರೆ ಮತ್ತೆ ಕೆಲವನ್ನು ಸುಟ್ಟು ಇದ್ದಿಲು ಮಾಡಿ ಇದ್ದಿಲನ್ನು ರೈಲುಗಳಿಗೆ ಕಳಿಸುತ್ತಿದ್ದರು. ಮಿಲಿಟರಿವರಂತೆಯೇ ಚಾರ್‌ಕೋಲಿನವರೂ ಇಲ್ಲಿನ ಹಳ್ಳಿಯ ಹೆಣ್ಣುಮಕ್ಕಳನ್ನು ಲೈಂಗಿಕ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದ ಚಿತ್ರಣ ಭಿನ್ನವಾಗಿದೆ.

ನರಸಾಪುರ ಕಾದಂಬರಿಯಲ್ಲಿ ಸಮೃದ್ಧವಾದ ಅನುಭವವಿದೆ, ಆದರೆ ಇದರ ಜತೆ ಪ್ರಖರವಾದ ಚಿಂತನೆ ಮಿಳಿತವಾಗಿಲ್ಲ. ವೈಚಾರಿಕ ದೃಷ್ಟಿಕೋನವೊಂದು ಕಾದಂಬರಿಯನ್ನು ಗಟ್ಟಿಗೊಳಿಸುವಷ್ಟು ಖಚಿತತೆ ಕಾಣುವುದಿಲ್ಲ. ಮಲೆನಾಡಿನ ವಾಸ್ತವತೆಯನ್ನು ಕಂಡುಂಡ ವ್ಯಕ್ತಿಯೊಬ್ಬರ ಅನುಭವ ನಿರೂಪಣೆಯಿದೆ, ಆದರೆ ಅನುಭವಕ್ಕೆ ಬೇಕಾದ ಕಲ್ಪಕತೆ ಪರಿಣಾಮಕಾರಿಯಾಗಿ ಮೂಡಿಲ್ಲ. ಕುವೆಂಪು, ಬಿಳುಮನೆ ರಾಮದಾಸ್, ಕಡಿದಾಳು ಶಾಮಣ್ಣ, ತ್ಯಾನಂದೂರು ಪುಟ್ಟಣ್ಣ, ಗಂಗಾಧರ್, ಸರ್ಜಾಶಂಕರ್, ಕಲ್ಕುಳಿ ವಿಠ್ಠಲ ಹೆಗಡೆ ಮುಂತಾದವರು ಕಟ್ಟಿಕೊಟ್ಟ ಮಲೆನಾಡಿನ ಜತೆಗಾರ ಸಂಬಂಧವನ್ನು ಈ ಕಾದಂಬರಿ ದಾಖಲಿಸುತ್ತದೆ. ಆದರೆ ಭಿನ್ನ ದಾರಿಯಲ್ಲಿ ಪಯಣಿಸುವಲ್ಲಿ ಯಶಕಂಡಿಲ್ಲ. ಈ ಕಥನದಲ್ಲಿರುವ ಮಲೆನಾಡಿನ ಚಿತ್ರಣ ಹಲವು ಬಾರಿ ನೆನಪುಗಳ ಹಳಹಳಿಕೆಯ ಹಂತದಲ್ಲೇ ಉಳಿಯುತ್ತದೆ.

ಈತನಕದ ಮಲೆನಾಡ ಚಿತ್ರಣಗಳನ್ನು ಓದಿರುವವರಿಗೆ ಇಲ್ಲಿನ ಚಿತ್ರಗಳು ಹೊಸತಾಗಿ ಕಾಣದಿರಬಹುದು, ಆದರೆ ಬಾಳೆಹೊನ್ನೂರು ಸುತ್ತಣ ಪರಿಸರದ ಭಿನ್ನ ಮಲೆನಾಡೊಂದನ್ನು ಕಾದಂಬರಿಕಾರರು ಕಾಣಿಸುತ್ತಾರೆ. ಇದು ಮಲೆನಾಡಿನ ದುಂಡು ಚಿತ್ರಕ್ಕಿಂತ ಪ್ರಾದೇಶಿಕ ಫರಕೊಂದನ್ನು ಒಡೆದು ತೋರುತ್ತದೆ. ಈ ಕಾರಣಕ್ಕೆ ನರಸಾಪುರ ಕಾದಂಬರಿ ವಿಶಿಷ್ಟವಾಗಿದೆ. ಮಲೆನಾಡಿನ ಸಾಂಸ್ಕೃತಿಕ ವೈವಿಧ್ಯಗಳ ಜತೆಗೆ ಅಲ್ಲಲ್ಲಿ ಅವುಗಳ ವೈರುಧ್ಯಗಳನ್ನು ಕಾಣಿಸಲು ಈ ಕಾದಂಬರಿ ಯತ್ನಿಸಿದೆ. ಹಾಗಾಗಿ ಜಕ್ಕಣಿಕಿ ದಯಾನಂದ ಅವರು ತಮ್ಮ ಮೊದಲ ಕಾದಂಬರಿಯಲ್ಲಿ ಕೆಲವು ಮಿತಿಗಳ ಮಧ್ಯೆಯೂ ಒಳ್ಳೆಯ ಪ್ರಯತ್ನವನ್ನು ಮಾಡಿದ್ದಾರೆ. ಮುಂದೆಯೂ ಅವರು ಕಾದಂಬರಿ ಕ್ಷೇತ್ರದಲ್ಲಿ ತೊಡಗಿಕೊಂಡಲ್ಲಿ ಉತ್ತಮ ಕಾದಂಬರಿಗಳನ್ನು ಬರೆಯಬಲ್ಲ ವಿಶ್ವಾಸವನ್ನು ಈ ಕಾದಂಬರಿ ಹುಟ್ಟಿಸುತ್ತದೆ.

ಪ್ರತಿಯೊಬ್ಬರೂ ನೋಡಲೇಬೇಕಾದ 'ಪಿಕೆ'



ಮೊನ್ನೆ 'ಪಿಕೆ' ಚಿತ್ರವನ್ನು ಎರಡು ಬಾರಿ ನೋಡಿದೆ. ಪಿಕೆ ಎಂಬ ಅನ್ಯ ಗ್ರಹಜೀವಿಯು ದೇವರ ಬಗ್ಗೆ ಭೂಮಿಯಲ್ಲಿರುವ ವೈವಿಧ್ಯಮಯ ನಂಬಿಕೆಗಳನ್ನು [illegible]ಡು ಅಚ್ಚರಿಗೊಂಡು ದೇವರನ್ನು ಹುಡುಕಲು ಹೊರಟು ವಿಫಲವಾದಾಗ [illegible]ವರುಗಳು ಎಂದು ಕರೆಸಿಕೊಳ್ಳಲಾಗುವ ಕೆಲವು ಚಿತ್ರಗಳನ್ನು ತನ್ನ ಅಂಗೈಯಲ್ಲಿ [illegible]ದು ಕಾಣೆಯಾಗಿದ್ದಾರೆಂದು ಹುಡುಕುವ ಪರಿಕಲ್ಪನೆಯು ಅದ್ಭುತವೆನಿಸುತ್ತದೆ. [illegible] ಯುವಕ-ಯುವತಿಯರ ಪ್ರೇಮದ ಚಿತ್ರವಾಗಿ 'ಪಿಕೆ' ಹೊರಹೊಮ್ಮಿದೆ. ಈ ಸಿನಿಮಾದಲ್ಲಿ ಪಿಕೆ ಪಾತ್ರದ ಮೂಲಕ ಮೂರ್ತಿಪೂಜೆಯ ಅಗತ್ಯತೆಯನ್ನು [illegible]ಸುವುದಲ್ಲದೇ, ವಿವಿಧ ಧರ್ಮಗಳ ಮೌಢ್ಯ ಆಚರಣೆಗಳನ್ನು ಅತ್ಯಂತ [illegible]ಕವಾಗಿ ಪ್ರಶ್ನಿಸಲಾಗಿದೆ. "ಜೋ ಡರ್‌ತಾ ಹೈ ವೋ ಮಂದಿರ್ ಜಾತಾ [illegible]" ಎಂಬ ವಾಕ್ಯ ಜನರ ದುರ್ಬಲ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. [illegible]ವಾಗಿಯೂ ದೇವರುಗಳೆಂಬ ಹೆಸರಿನ ಸೆರಗಿನಡಿಯಲ್ಲಿ ಬಚ್ಚಿಟ್ಟುಕೊಂಡು [illegible] ಕೊಬ್ಬುತ್ತಿರುವ ಢೋಂಗಿ ಬಾಬಾಗಳಿಗೆ ಈ ಸಿನಿಮಾ ಚಾಟಿಯೇಟು [illegible]ದುತ್ತದೆ. ಧರ್ಮಗಳನ್ನು ಕಂಪನಿಗಳೆಂದು ಹಾಗು ಧರ್ಮಗುರುಗಳನ್ನು [illegible]ಜರ್‌ಗಳೆಂದು ಕರೆದಿರುವುದು ಅದ್ಭುತ ಹೋಲಿಕೆಗಳು.

ಆದರೆ, ಹಿಂದೂ ಸಂಘಟನೆಗಳು 'ಪಿಕೆ' ಚಿತ್ರವನ್ನು ಅಪಹಾಸ್ಯ [illegible] ಆಗಿದೆ. ಚಿತ್ರದಲ್ಲಿ ಹಿಂದೂ ಧಾರ್ಮಿಕ ಭಾವನೆಗಳಿಗೆ [illegible] ಸಂಘಟನೆಗಳು [illegible] [illegible] ಚಿತ್ರವನ್ನು [illegible]ದ್ದಾರೆ. ಚಿತ್ರ ಕೋಟಿ ಕೋಟಿ ದುಡ್ಡು ಮಾಡುತ್ತಿರುವುದು ಕೂಡ ಕೆಲವರ ಕಣ್ಣು ಕೆಂಪಗಾಗಿಸಿರುವಂತಿದೆ. ಚಿತ್ರದ ಬಗ್ಗೆ ಹಿಂದೂ ಮೂಲಭೂತವಾದಿಗಳು ತಮಗನ್ನಿಸಿದಂತೆ ವ್ಯಾಖ್ಯಾನ ನೀಡುತ್ತಿರುವುದು ನಿಜಕ್ಕೂ ಅವರ ಕರ್ಮ. ಆದರೆ ಚಿತ್ರ ಚೆನ್ನಾಗಿದೆ, ಇವತ್ತಿನ ಸಂದರ್ಭಕ್ಕೆ ಅತ್ಯಂತ ಅಗತ್ಯವಾಗಿ ಪ್ರತಿಯೊಬ್ಬ ಭಾರತೀಯನೂ ನೋಡಲೇಬೇಕಾದ ಚಿತ್ರವಿದು.

- ಮೇಘನಾ ರವೀಶ್, ಚಿತ್ರದುರ್ಗ

(ದ್ವಿತೀಯ ಬಿಎಸ್ಸಿ, ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ)

'ಪಿಕೆ' ಚಿತ್ರ ಒಂದು ಒಳ್ಳೆಯ ಪ್ರಯತ್ನ ಎನ್ನಲೇಬೇಕು. ಹೊಸ ಆಲೋಚನೆ ಮತ್ತು ಕ್ರಿಯಾಶೀಲತೆಗಳ ಸಂಗಮ. ಅದು ಯಶಸ್ವಿಯಾಗಿದೆ. ಜನರ ಮನಸ್ಸಿನಾಳವನ್ನು ತಟ್ಟಿಬಿಟ್ಟಿದೆ. ಸಂಘ ಪರಿವಾರದ ಜಂತುಗಳು 'ಪಿಕೆ' ಪೋಸ್ಟರ್ ಹರಿಯುವ ಶೌರ್ಯದಲ್ಲಿ ಗದ್ದಲ ಎಬ್ಬಿಸಿವೆ. ಅಮೀರ್ ಖಾನನ ಮುಖಕ್ಕೆ ಮೋದಿ ಮತ್ತು ಅಮಿತ್ ಷಾಗಳ ಚಿತ್ರವನ್ನು ಹಾಸನದಲ್ಲಿ ಎಲ್ಲೆಡೆ ಅಂಟಿಸಲಾಗಿದೆ. ಸಂಘ ಪರಿವಾರದ ಮಂದಿ ಶೂರರೇ ಆಗಿದ್ದರೆ ದೇವಾಲಯಗಳಲ್ಲಿ ಜರುಗುವ ಪಂಕ್ತಿಭೇದವನ್ನು ಪ್ರತಿಭಟಿಸಬಹುದಲ್ಲ, ಅವರೆಲ್ಲ ಹೋಗಲಿ ಉಡುಪಿಗೆ. ಊಟಕ್ಕೆ ಕೂತವರನ್ನೂ ಎಬ್ಬಿಸಿ ಅವಮಾನ ಮಾಡುವ ಶ್ರೀ ಕೃಷ್ಣ ದೇವಾಲಯಕ್ಕೆ ಮುತ್ತಿಗೆ ಹಾಕಿ ಘನ ಘೋರ ಘೋಷಣೆ ಕೂಗಲಿ ನೋಡೋಣ. ಹಿಂದೂ ಗಳಿಂದಲೇ ಹಿಂದೂಗಳಿಗೆ ಅವಮಾನವಾದರೂ ಇವರ ಪೌರುಷ ಎಲ್ಲಿ ಹುದುಗಿ ಕುಳಿತಿರುತ್ತದೆ? ಜೇಸುದಾಸ್ ಸುಮಧುರ ಗಾಯಕನೆಂಬುದು ಇಡೀ ದೇಶಕ್ಕೇ ಗೊತ್ತು, ಹಿಂದೂ ದೇವದೇವಿಯರ ಕುರಿತು ಅವರು ಹಾಡಿದ ಹಾಡುಗಳು ಬಹಳ ಜನಪ್ರಿಯ. ಆದರೆ ಆತನಿಗೆ ಗುರುವಾಯೂರು ದೇವಾಲಯಕ್ಕೆ ಇಂದಿಗೂ ಪ್ರವೇಶವಿಲ್ಲ, ಕಾರಣ ಆತ ಕ್ರಿಶ್ಚಿಯನ್. ಸಂಘ ಪರಿವಾರದ ಆತ್ಮವಂಚಕರು ಎಂದಾದರೂ ಜೇಸುದಾಸ್ ಪರವಾಗಿ ಗದ್ದಲ ಎಬ್ಬಿಸಿದ್ದಾರೇನು? ಆತ ಕೃಷ್ಣನನ್ನು ಸ್ಪರ್ಶಿಸಿದರೆ ಆಯಿತು. ಆದರೆ ಪೇಸಿಕರ ಪಾವಿತ್ರ(?)ಕ್ಕೆ ಆತನಿಂದ ಧಕ್ಕೆಯಾಗಬಾರದು. ಇದೆಂತಹ ಹೊಲಸು ನಿಲುವು? ಭಾರತಕ್ಕೆ ಬೇರೆ ಶತ್ರುಗಳೇ ಬೇಡ. ಆರೆಸ್ಸೆಸ್‌ನ ಅಕ್ರಮ ಸಂತತಿಗಳೇ ಸಾಕು.

- ರವಿಕುಮಾರ್, ಹಾಸನ


ಪ್ರಸ್ತುತ ಬಲಪಂಥೀಯರ ಆಳ್ವಿಕೆಯಲ್ಲಿ ಮೂಢನಂಬಿಕೆಗಳ ವಿರುದ್ಧ ಮಾತನಾಡುವುದಿರಲಿ ಚಿಂತಿಸುವುದೇ ತಪ್ಪು ಎನ್ನುವ ವಾತಾವರಣ ಸೃಷ್ಟಿಯಾಗುತ್ತಿದೆ. ಇತ್ತೀಚೆಗೆ ಹಿಂದೂ ಪರ ಸಂಘಟನೆಗಳೆಲ್ಲ ಕೀಲಿ ಕೊಟ್ಟ ಗೊಂಬೆಗಳಂತೆ ಮರುಮತಾಂತರಕ್ಕೆ ಪಣತೊಟ್ಟು ನಿಂತಿರುವಾಗ 'ಪಿಕೆ'ಯಂತಹ ಹೊಸ ಅಲೆಯ ಸಿನಿಮಾದ ಅಗತ್ಯವಿತ್ತು. ಸೋಕಾಲ್ಡ್ ಬಾಲಿವುಡ್ ಸ್ಟಾರ್‌ಗಳೆಲ್ಲ ದುಡ್ಡಿನ ಹಿಂದೆ ಓಡುತ್ತಿರುವಾಗ ಅಮೀರ್ ಖಾನ್‌ರ ಸಾಮಾಜಿಕ ಕಳಕಳಿ ಅತ್ಯಂತ ಶ್ಲಾಘನೀಯ. ಅವರ 'ಸತ್ಯಮೇವ ಜಯತೆ' ಕೂಡ ಇದಕ್ಕೆ ಜ್ವಲಂತ ಉದಾಹರಣೆ. 'ಪಿಕೆ' ಸಿನಿಮಾದಲ್ಲಿ ಪ್ರತಿಯೊಬ್ಬ ಆಸ್ತಿಕನೂ ಒಪ್ಪುವಂತಹ ನಾಸ್ತಿಕತೆ ಇದೆ ಮತ್ತು ಪ್ರತಿಯೊಬ್ಬ ನಾಸ್ತಿಕನೂ ಒಪ್ಪುವಂತಹ ಆಸ್ತಿಕತೆ ಇದೆ.

ಇಷ್ಟು ಸರಳ ಮತ್ತು ಪ್ರಖರವಾದ ಪ್ರಶ್ನೆಗಳನ್ನು ಎತ್ತಲು ಸಾಧ್ಯವೇ ಎನ್ನಿಸುವಷ್ಟು ನಿರ್ದೇಶಕ ಹಿರಾನಿ ಕತೆ ಹೆಣೆದಿದ್ದಾರೆ. ಅದಕ್ಕೋಸ್ಕರ ಒಬ್ಬ ಅನ್ಯಗ್ರಹದ ಜೀವಿಯನ್ನು ಆಶ್ರಯಿಸಿದ್ದಾರೆ. ಪಾತ್ರ ಕಾಲ್ಪನಿಕವಾಗಿದ್ದರೂ ವಿಚಾರ ಕಟುವಾಸ್ತವ. ಎಂದಿನಂತೆ ಹಿಂದೂ ಧರ್ಮವನ್ನಷ್ಟೇ ಕೇಂದ್ರವಾಗಿಸಿಕೊಂಡು ಟೀಕಿಸಿದ್ದಾರೆ ಎಂಬ ಪೊಳ್ಳು ವಾದವನ್ನು ಮುಂದಿಟ್ಟುಕೊಂಡು ಕೆಲ ಹಿಂದೂ ಸಂಘಟನೆಗಳು ಪ್ರತಿಭಟನೆಗಳಿಗೆ ಕರೆಕೊಟ್ಟಿವೆ.

ಅಷ್ಟು ನೈತಿಕತೆ ಇದ್ದರೆ ಧರ್ಮಾಂಧತೆಯಿಂದ ಕಲುಷಿತಗೊಂಡ ಎಲ್ಲರ ಮನಸ್ಸನ್ನು ಶುಚಿಯಾಗಿರಿಸಲು 'ಸ್ವಚ್ಛ ಮನಸ್ಸಿನ ಅ[illegible] ವಿರೋಧಿ ಅಭಿಯಾನ' ಆರಂಭಿಸಲಿ. ಇವನ್ನೆಲ್ಲ [illegible] ಪೂರ್ವಾಗ್ರಹ ಪೀಡಿತ ಹಿತಾಸಕ್ತಿಯಿಂದ ನಿರೀಕ್ಷಿಸುವುದು ಬರಿ ಕಲ್ಪಿಸಿಕೊಳ್ಳಲು [illegible]? ಅದಕ್ಕೆಂದೇ [illegible] "[illegible]" ಬಿಟ್ಟು ತೋರಿದ್ದು, [illegible] ಬಾಂಧವರೇ....." ಎಂದು.

[illegible]

ಬಲಿಯ ಸ್ಥಾನದಲ್ಲಿ ಆ್ಯಂಡರ್‌ಸನ್!



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್
nvasanth1@hotmail.com

ಎಲ್ಲಾ ವಿಷಯಗಳನ್ನು ಸಂಗ್ರಹಿಸುವಷ್ಟರಲ್ಲಿ ಒಂದು ವಾರ ಕಳೆದಿದ್ದು ಹುಲಿಯ ಮುಂದಿನ ಭೇಟಿಗೆ ಇನ್ನು ಒಂದೇ ವಾರ ಉಳಿದಿತ್ತು. ನಾನು ಸಂಗ್ರಹಿಸಿದ ಮಾಹಿತಿಯ ಪ್ರಕಾರ ಪೊದೆ ಕಾಡುಗಳಲ್ಲಿ ಸಾವನ್ನಪ್ಪಿದವರೆಲ್ಲಾ ದನಗಾಹಿಗಳು ಅಥವಾ ಮರಕಡಿಯುವವರಾಗಿದ್ದರು. ಈ ಪ್ರದೇಶದ ಚಿರತೆಗಳು ಅಪರೂಪಕ್ಕೊಮ್ಮೆ ಸಾಕುಪ್ರಾಣಿಗಳ ಮೇಲೆ ಆಕ್ರಮಣ ಮಾಡಿದ್ದರೂ ನರಭಕ್ಷಕ ಹುಲಿ ಅವುಗಳಿಂದ ದೂರವೇ ಉಳಿದಿತ್ತು. ಹಾಗಾಗಿ ನಾನು ಒಂದು ಬಹಳ ಬುದ್ಧಿವಂತಿಕೆಯ ಯೋಜನೆ ಹಾಕಿದೆ. ಒಂದು ದೊಡ್ಡ ಮರದ ಹದಿನೈದು ಅಡಿ ಎತ್ತರದ ರೆಂಬೆಗೆ ಕುರ್ಚಿಯೊಂದನ್ನು ಕಟ್ಟಿಸಿದೆ. ಆರು ಅಡಿ ಉದ್ದದ ಒಂದು ಗಟ್ಟಿ ಮರದ ತುಂಡನ್ನು ಹಗ್ಗದಿಂದ ಮರಕ್ಕೆ ಬಿಗಿದು ಅದರ ಇನ್ನೊಂದು ತುದಿಗೆ ಕಟ್ಟಿದ ಹಗ್ಗದ ತುದಿಯನ್ನು ಕುರ್ಚಿಯ ಕಾಲಿನ ಬಳಿ ಬರುವಂತೆ ಬಿಟ್ಟುಕೊಂಡೆ. ಈ ಹಗ್ಗದ ತುದಿಯನ್ನು ನನ್ನ ಪಾದಗಳಿಗೆ ಕಟ್ಟಿಕೊಂಡು ಅಲ್ಲಾಡಿಸಿದಾಗ ಅದರ ಇನ್ನೊಂದು ತುದಿಯಲ್ಲಿದ್ದ ದೊಣ್ಣೆ ಮರಕ್ಕೆ ಬಡಿದು ಮರಕಡಿಯುವವರು ಮಾಡುವ ಸದ್ದನ್ನು ಮಾಡುತ್ತಿತ್ತು. ಹೀಗೆ ದಿಮ್ಮಿಯನ್ನು ಎರಡೂ ಕಾಲುಗಳೂ ಅಥವಾ ಕೈಗಳಿಂದಲೂ ಚಲಿಸಲು ಸಾಧ್ಯವಾಗುವಂತಹ ವ್ಯವಸ್ಥೆ ಮಾಡಿಕೊಂಡೆ. ಬಿಸಿಲಿನಿಂದ ರಕ್ಷಣೆಗೆ ತಲೆಯ ಮೇಲೆ ಎಲೆಗಳಿಂದ ಮರೆಯನ್ನು ಮಾಡಿಕೊಂಡೆ. ಕುರ್ಚಿಯಲ್ಲಿ ಆರಾಮವಾಗಿ ಕುಳಿತು ನಾನು ಕುಡಿಯುವುದು, ತಿನ್ನುವುದು ಮತ್ತು ತಂಬಾಕು ಸೇದುವುದನ್ನೂ ಕೂಡ ಮಾಡಬಹುದಿತ್ತು. ನಾನು ಗಲಾಟೆ ಹೆಚ್ಚು ಮಾಡಿದಷ್ಟೂ ಹುಲಿ ನನ್ನೆಡೆಗೆ ಬರುವ ಸಾಧ್ಯತೆಗಳು ಹೆಚ್ಚುತ್ತಿತ್ತು.

ಊರಿನ ಪಟೇಲ ನನಗೆ ಸಂಪೂರ್ಣ ಸಹಕಾರ ನೀಡಲು ಸಮ್ಮತಿಸಿದ. ನಾನು ಕುರ್ಚಿಯಲ್ಲಿ ಕುಳಿತುಕೊಳ್ಳುವ ದಿನದಿಂದ ಯಾರೂ ಕಾಡು ಅಥವಾ ತೋಟಗಳಿಗೆ ಹೋಗಬಾರದೆಂದು ನಾನು ತಾಕೀತು ಮಾಡಿದ್ದೆ. ಇದರಿಂದ ಹುಲಿಗೆ ಬೇರೆ ಯಾರನ್ನಾದರೂ ಬೇಟೆಯಾಡುವ ಸಾಧ್ಯತೆಯನ್ನು ತಪ್ಪಿಸಿದಂತಾಗುತ್ತಿತ್ತು. ಪಟೇಲ ಈ ಬಗೆಗೆ ಸುತ್ತಲಿನ ಜನರಿಗೆ ಸೂಕ್ತ ಎಚ್ಚರಿಕೆ ನೀಡಿದ. ಜನರು ಪಟೇಲನ ಆದೇಶವನ್ನು ಪಾಲಿಸಲು ಇದ್ದ ಮತ್ತೊಂದು ಆಕರ್ಷಣೆಯೆಂದರೆ ಮುಂದಿನ ಹಲವಾರು ದಿನಗಳು ಅವರು ಕೆಲಸಕ್ಕೆ ಹೋಗದೆ ಸೋಮಾರಿಗಳಾಗಿ ಕಳೆಯಬಹುದಾಗಿತ್ತು!

ಹೊಗರೆಹಳ್ಳಿಗೆ ಬಂದ ಹತ್ತನೇ ದಿನದಿಂದ ನನ್ನ ಯೋಜನೆಯನ್ನು ಕಾರ್ಯರೂಪಕ್ಕಿಳಿಸಿದೆ. ಅವತ್ತು ಮಧ್ಯಾಹ್ನ ಬೇಗ ಊಟ ಮುಗಿಸಿ ಸುಮಾರು 1 ಗಂಟೆಯ ಸಮಯಕ್ಕೆ ಮರಕ್ಕೆ ಕಟ್ಟಿದ್ದ ಕುರ್ಚಿಯಲ್ಲಿ ಆಸೀನನಾದೆ. ನಿರಂತರವಾಗಿ ಕಾಲನ್ನು ಚಲಿಸುತ್ತಾ ಹಗ್ಗವನ್ನು ಎಳೆದು ಮರ ಕಡಿಯುವ ಶಬ್ದವನ್ನು ಮಾಡುತ್ತಲೇ ಇರುವುದು ಎಂತಹ ಬೇಸರದ ಕೆಲಸ ಎಂದು ನನಗೆ ಸ್ವಲ್ಪವೇ ಸಮಯದಲ್ಲಿ ತಿಳಿಯಿತು. ಜೊತೆಗೆ ಸುತ್ತಲೂ ಹರಡಿದ್ದ ಪ್ರಖರ ಬಿಸಿಲಿನಲ್ಲಿ ಎಲ್ಲಾ ಕಡೆಯ ಪೊದೆಗಳ ಕಡೆ ಗಮನವಿಟ್ಟು ನೋಡುತ್ತಲೇ ಇರುವುದೂ ಕಣ್ಣಿಗೆ ಬಹಳ ಶ್ರಮದಾಯಕವಾಗಿತ್ತು. ಈ ಅನಾನುಕೂಲಗಳನ್ನು ಸಹಿಸಿಕೊಂಡು ನಾನು ಕತ್ತಲಾಗುವವರೆಗೂ ಕುಳಿತೇ ಇದ್ದೆ.

ಬೇಟೆಗಾರನ ತಾಳ್ಮೆಯ ಪರೀಕ್ಷೆ

ಹುಲಿಯ ಆಗಮನದ ನಿರೀಕ್ಷೆಯಲ್ಲಿ ಮುಂದಿನ ಒಂದು ವಾರ ಹೀಗೆಯೇ ಕಳೆದಿದ್ದೆ. ಈ ಸಮಯದಲ್ಲಿ ನನ್ನ ಕಣ್ಗಾವಲಿನಲ್ಲಿದ್ದ ಸುತ್ತಲಿನ ಎಲ್ಲಾ ಪೊದೆಗಳು, ಹುಲಿ ಬರಬಹುದಾದ ದಾರಿಗಳು, ನನ್ನನ್ನು ಬೇಟೆಯಾಡಲು ಅದು ಅಡಗಿಕೊಂಡು ಕಾಯಬಹುದಾದ ಸ್ಥಳಗಳು-ಹೀಗೆ ಆ ಪ್ರದೇಶದ ಸಂಪೂರ್ಣ ಭೂಗೋಳವನ್ನು ಅಭ್ಯಾಸ ಮಾಡಿದೆ.

ಮೊದಲನೆ ವಾರ ಹೀಗೆ ಬೇಸರದಲ್ಲಿ ಕಳೆದ ನಂತರ ನಾನು ಬೇರೂರಿನ ಪುಸ್ತಕದ ಅಂಗಡಿಯಲ್ಲಿ ಕೆಲವು ಕಾದಂಬರಿಗಳನ್ನು ಕೊಂಡು ಓದುವುದಕ್ಕೆ ಶುರುಮಾಡಿದೆ. ಜೊತೆಜೊತೆಗೆ ಹಗ್ಗವನ್ನು ಎಳೆಯುತ್ತಾ ಸದ್ದನ್ನು ಹೊರಡಿಸುವುದಲ್ಲದೆ ಹುಲಿ ಆಗಮನದ ಸೂಚನೆಗಳ ಬಗೆಗೂ ಗಮನವಿಟ್ಟಿರುತ್ತಿದ್ದೆ. ಹೀಗೆ ಎರಡನೇ ವಾರದ ಅಂತ್ಯಕ್ಕೆ ಬಂದರೂ ಹುಲಿಯ ಆಗಮನದ ಯಾವುದೇ ಸೂಚನೆಗಳಿರಲಿಲ್ಲ. ನಾನು ನಿಧಾನವಾಗಿ ತಾಳ್ಮೆಯನ್ನು ಕಳೆದುಕೊಳ್ಳುತ್ತಿದ್ದೆ. ಈ ರೀತಿ ನನ್ನ ಮೇಲೆ ನಾನೇ ಹೇರಿಕೊಂಡ ಒತ್ತಾಯದ ನಿಷ್ಕ್ರಿಯತೆಯ ಬದಲಾಗಿ ಇನ್ನೂ ಉತ್ತಮವಾದ ಯೋಜನೆಯ ಬಗೆಗೆ ಬಹಳಷ್ಟು ಯೋಚಿಸಿದರೂ ಯಾವುದೂ ಹೊಳೆಯಲಿಲ್ಲ.

ಹುಲಿ ಹೊಗರೆಹಳ್ಳಿಗೆ ಬರದೆ ನಾಲ್ಕು ತಿಂಗಳಾಗಿದ್ದು, ಅದು ತನ್ನ ನಿಯಮಿತ ಮಾರ್ಗದಲ್ಲಿ ಚಲಿಸುತ್ತಿದ್ದರೆ ಯಾವುದೇ ಕ್ಷಣದಲ್ಲಿ ಇಲ್ಲಿಗೆ ಬರಬಹುದಿತ್ತು. ಸುತ್ತಲೂ ನಡೆಯಬಹುದಾದ ನರಬಲಿಗಳ ಬಗೆಗೆ ನನಗೆ ತಕ್ಷಣ ಮಾಹಿತಿ ನೀಡಲು ನಾನು ಸರ್ಕಾರೀ ಅಧಿಕಾರಿಗಳಿಗೆ ಹೇಳಿದ್ದೆ. ನನಗೆ ಅವರಿಂದ ಆಗಾಗ ಬಂದ ಮಾಹಿತಿಗಳ ಪ್ರಕಾರ ಹುಲಿ ತನ್ನ ನಿರ್ದಿಷ್ಟ ಮಾರ್ಗದಲ್ಲೇ ಚಲಿಸುತ್ತಿದ್ದು ತೀರಾ ಹತ್ತಿರದಲ್ಲಿತ್ತು. ಹಾಗಾಗಿ ನಾಳೆ ನಾಡಿದ್ದರಲ್ಲಿ ಅದಕ್ಕೆ ಹಸಿವು ಹೆಚ್ಚಾಗಿ ಹೊಸ ನರಬಲಿಯನ್ನು ತೆಗೆದುಕೊಳ್ಳುವ ಸಾಧ್ಯತೆಗಳಿದ್ದವು. ನಾನು ಊರ ಪಟೇಲನಿಗೆ ಎಚ್ಚರಿಕೆಯ ಸಂದೇಶವನ್ನು ಮತ್ತೆ ಜನರಿಗೆ ಕಳಿಸಲು ಹೇಳಿದೆ. ಮರುದಿನ ನಾನು ಮರದ ಮೇಲಿನ ನನ್ನ ಸ್ಥಳಕ್ಕೆ ಎಂದಿಗಿಂತ ಮೊದಲೇ ಹೋಗಿ ಕುಳಿತೆ. ಜೋರಾಗಿ ಮರದಿಂದ ಬರುವ ಸದ್ದನ್ನು ಮಾಡುತ್ತಿದ್ದುದಲ್ಲದೆ, ಕೆಮ್ಮುವುದು ಮತ್ತು ಇತರ ಚಲನೆಗಳ ಮೂಲಕ ಹುಲಿಗೆ ನಾನು ಅಲ್ಲಿ ಇರುವ ಸಂದೇಶ ಕಳಿಸಲು ಯತ್ನಿಸುತ್ತಿದ್ದೆ. ಅದರೂ ಮುಂದಿನ ಎರಡು ದಿನಗಳಲ್ಲಿ ಏನೂ ನಡೆಯಲೇ ಇಲ್ಲ. ಅಂದರೆ-ಹೊಗರೆಹಳ್ಳಿಯ ಕಾಡುಗಳಲ್ಲಿ ಹುಲಿ ಹಸಿದುಕೊಂಡಿರಬೇಕು ಅಥವಾ ಈ ಊರನ್ನು ದಾಟಿ ಮುಂದಿನ ಊರುಗಳಿಗೆ ಹೋಗಿರಬೇಕು ಎಂದು ನನಗೆ ಅನ್ನಿಸಿತು. ಮುಂದಿನ ಎರಡು ದಿನಗಳಲ್ಲಿ ಹುಲಿಯ ಆಗಮನದ ನಿರೀಕ್ಷೆಯಲ್ಲಿ ಇಡೀ ರಾತ್ರಿಯನ್ನೂ ನಾನು ಕುರ್ಚಿಯಲ್ಲಿ ಕುಳಿತೇ ಕಳೆಯಲು ನಿರ್ಧರಿಸಿದೆ. ಹಿಂದಿನ ಹದಿನೈದು ದಿನಗಳ ಶ್ರಮದಿಂದ ಬಳಲಿದ್ದ ನನಗೆ ಇದು ಹೆಚ್ಚು ಕಷ್ಟಕರವಾಗಿದ್ದರೂ, ಹುಲಿಯನ್ನು ಬೇಟೆಯಾಡಲೇ ಬೇಕೆನ್ನುವ ನನ್ನ ನಿರ್ಧಾರ ಅಚಲವಾಗಿತ್ತು. ಮರುದಿನ ಮಧ್ಯಾಹ್ನ ನನ್ನ ಎಂದಿನ ಸರಂಜಾಮುಗಳ ಜೊತೆಗೆ ನಿದ್ದೆಯನ್ನು ತಡೆಯಲು ಮೂರು ಮಾತ್ರೆಗಳನ್ನೂ ತೆಗೆದುಕೊಂಡು ಹೋದೆ!

ನಾನು ಮಾಡುತ್ತಿದ್ದ ಸದ್ದಲ್ಲದೆ, ಆಗಾಗ ಕೇಳುತ್ತಿದ್ದ ಗೂಬೆಯ ಮತ್ತು ಕಾಡು ಕುರಿಗಳ ಕೂಗಿನ ಹೊರತಾಗಿ ಅರಣ್ಯ ಮೌನವಾಗಿತ್ತು. ರಾತ್ರಿ 3.30ರ ಹೊತ್ತಿಗೆ ನನಗೆ ನಿದ್ದೆಯ ಎಳೆತ ಹೆಚ್ಚಾದಾಗ ಎರಡು ಮಾತ್ರೆಗಳನ್ನು ನುಂಗಿದೆ. ಆಗ ಪ್ರಾಣಿಯೊಂದರ ನಡಿಗೆಯ ಚರಪರ ಸದ್ದಿನೊಂದಿಗೆ ಹಯೀನಾದ ಕೂಗು ಕೇಳಿಸಿತು. ನನ್ನನ್ನು ನೋಡಿದ್ದೇನೆಂದು ಘೋಷಿಸಿ ಅದು ಕತ್ತಲೆಯಲ್ಲಿ ಮಾಯವಾಯಿತು. ಸಮಯ ಕಳೆದು ಬೆಳಗಾದ ಮೇಲೆ ಕಾಡುಕೋಳಿಯ ಕೂಗನ್ನು ಕೇಳಿ ನಾನು ಹೊಗರೆಹಳ್ಳಿಗೆ ಹಿಂತಿರುಗಿದೆ. ನಾಲ್ಕು ಗಂಟೆ ನಿದ್ದೆ ಮಾಡಿ ಬೆಳಗ್ಗೆ 11ಕ್ಕೆ ಮತ್ತೆ ನನ್ನ ಜಾಗಕ್ಕೆ ಬಂದು ಕುಳಿತೆ. ಇನ್ನೂ ಹೆಚ್ಚಿನ ಶ್ರಮವನ್ನು ತಾಳುವುದು ಅಸಾಧ್ಯ ಎನ್ನುವ ಸ್ಥಿತಿಯನ್ನು ನಾನು ತಲುಪಿದ್ದೆ. ಸಂಜೆಯಾದಂತೆ ಕೋಳಿ, ಪಕ್ಷಿಗಳು ಮತ್ತು ನವಿಲಿನ ಕೂಗು ಕೇಳಿಸಿತು.

ಕೊನೆಗೂ ದರ್ಶನ ಕೊಟ್ಟ ನರಭಕ್ಷಕ

ರಾತ್ರಿ ಸುಮಾರು 10 ಗಂಟೆಯ ಹೊತ್ತಿಗೆ ಚುಕ್ಕಿ ಜಿಂಕೆಗಳ ಎಚ್ಚರಿಕೆಯ ಕೂಗು ಕೇಳಿಸಿತು. ನಿಸ್ಸಂದೇಹವಾಗಿ ಯಾವುದೋ ಮಾಂಸಾಹಾರಿ ಪ್ರಾಣಿಯನ್ನು ಇವು ನೋಡಿವೆ ಎಂದುಕೊಂಡೆ. ಈ ಮಾಂಸಾಹಾರಿ ಹುಲಿಯೇ, ಚಿರತೆಯೇ? ಹುಲಿಯೇ ಆಗಿದ್ದರೆ ಇದೇ ನರಭಕ್ಷಕನಿರಬಹುದೇ? ನಾನು ಜೋರಾಗಿ



ಸದ್ದು ಮಾಡತೊಡಗಿದೆ. ನಿಮಿಷಗಳು ಕಳೆದಂತೆ ಸಾಂಬಾರ್ ಜಿಂಕೆಯ ಕೂಗು ಅರ್ಧಮೈಲು ದೂರದಿಂದ ಕೇಳಿತು. ಮತ್ತೆ ಆವರಿಸಿದ ನಿಶಬ್ದವನ್ನು ಸೀಳಿಕೊಂಡು ನಾನು ಮಾಡುತ್ತಿದ್ದ ಸದ್ದು ಕೇಳುತ್ತಿತ್ತು. ಅರ್ಧ ಚಂದ್ರನ ಬೆಳಕಿನಲ್ಲಿ ನಾನು ಸುತ್ತಲಿನ ಪೊದೆಗಳನ್ನು ಪರಿಶೀಲಿಸುತ್ತಾ ಹುಲಿ ಮರೆಯಿಂದ ಆಕ್ರಮಣ ಮಾಡಬಹುದಾದ ಸ್ಥಳಗಳ ಬಗೆಗೆ ಗಮನವಿಟ್ಟಿದ್ದೆ. ಆದರೆ ಯಾವುದೇ ಚಲನೆಯೂ ಕಂಡುಬರಲಿಲ್ಲ.

ಸ್ವಲ್ಪ ಸಮಯದ ನಂತರ ನನ್ನನ್ನು ಯಾರೋ ಗಮನಿಸುತ್ತಿದ್ದಾರೆ ಮತ್ತು ಯಾವುದೇ ಕ್ಷಣದಲ್ಲಿ ಏನಾದರೂ ಸಂಭವಿಸಬಹುದು ಎನ್ನುವ ವಿಚಿತ್ರ ಭಾವನೆಗಳು ನನ್ನಲ್ಲಿ ಮೂಡಿದವು. ಆದರೆ ಯಾವುದೇ ಸದ್ದುಗಳೂ ಕೇಳಿಬರಲಿಲ್ಲ. ನಾನು ದೊಡ್ಡದಾಗಿ ಕೆಮ್ಮುತ್ತಾ ಭಾರತೀಯ ಶೈಲಿಯಲ್ಲಿ ಕ್ಯಾಕರಿಸಿ ಉಗಿದೆ. ಕೆಲವೇ ಕ್ಷಣಗಳಲ್ಲಿ ನಾನು ನಿರೀಕ್ಷಿಸಿದ್ದಂತೆ ಬಂದೇ ಬಿಟ್ಟಿತು.

"ವೂಫ್.. ವೂಫ್.." ಎಂದು ಘರ್ಜಿಸುತ್ತಾ ಹತ್ತು ಗಜ ದೂರದಲ್ಲಿದ್ದ ಪೊದೆಯೊಂದರ ಹಿಂದಿನಿಂದ ಬೂದು ಬಣ್ಣದ ಭಾರೀ ಆಕೃತಿಯೊಂದು ನೆಗೆದು ಬಂದು ನಾನು ಕುಳಿತಿದ್ದ ಮರದ ಬುಡವನ್ನು ತಲುಪಿತು. ಟಾರ್ಚ್ ಬೆಳಕನ್ನು ಹರಿಸಿ ನನ್ನ ಕೆಳಗೆ ಮೂರೇ ಗಜ ದೂರದಲ್ಲಿ ಕಂಡ ಅದರ ತಲೆಯ ನಡುವೆ ಹೊಳೆಯುತ್ತಿದ್ದ ಕಣ್ಣುಗಳ ಮಧ್ಯೆ ಗುರಿಯಿಟ್ಟು ನಾನು ಗುಂಡನ್ನು ಹಾರಿಸಿದೆ. ಭಯಾನಕವಾದ ಘರ್ಜನೆಯೊಂದಿಗೆ ಹಿಂದೆ ಹಾರಿದ ಹುಲಿಯ ಮೇಲೆ ಮತ್ತೊಂದು ಗುಂಡನ್ನು ಹಾರಿಸಿದೆ. ಮತ್ತೊಮ್ಮೆ ಘರ್ಜಿಸಿದ ಅದು ಮರುಕ್ಷಣದಲ್ಲಿಯೇ ಅಲ್ಲಿಂದ ಮಾಯವಾಗಿತ್ತು. ಕೆಲವು ನಿಮಿಷಗಳ ನಂತರ ನೂರು ಗಜ ದೂರದಲ್ಲಿ ಮತ್ತೆ ಕೇಳಿಬಂದ ಅದರ ಘರ್ಜನೆಯ ನಂತರ ಸಂಪೂರ್ಣ ಮೌನ ಆವರಿಸಿತು.

ನಾನು ಹೊಡೆದ ಗುಂಡುಗಳು ಗುರಿತಪ್ಪಿಲ್ಲವೆಂದು ನನಗೆ ಖಾತ್ರಿಯಾಗಿದ್ದರೂ ಹುಲಿಯನ್ನು ಅಲ್ಲೇ ಕೊಲ್ಲದೇ ಹೋದುದಕ್ಕಾಗಿ ನನ್ನನ್ನೇ ಶಪಿಸಿಕೊಂಡೆ. ಹುಲಿ ತೀವ್ರವಾಗಿ ಗಾಯಗೊಂಡಿದ್ದು ಬಹಳ ದೂರ ಹೋಗುವ ಸಾಧ್ಯತೆಗಳಿರಲಿಲ್ಲ. ರಾತ್ರಿಯ ಉಳಿದ ಸಮಯವನ್ನು ತೂಕಡಿಸುತ್ತಾ ಕಳೆದು ಹಳ್ಳಿಗೆ ಹಿಂತಿರುಗಿದೆ.

ಗಾಯಗೊಂಡ ಹುಲಿಯ ಹುಡುಕಾಟ

ಮುಂದಿನ ಕಾರ್ಯಾಚರಣೆಗೆ ಊರ ಪಟೇಲ ನನಗೆ ಸಂಪೂರ್ಣ ಸಹಕರಿಸಿದ. ಒಂದು ಎಮ್ಮೆಗಳ ಗುಂಪನ್ನು ಹುಲಿ ಅಡಗಿಕೊಂಡಿರಬಹುದಾದ ಪೊದೆಗಳ ಕಡೆ ಓಡಿಸಿ ಹುಲಿ ಅದರಿಂದ ಹೊರಗೆ ಬರುವಂತೆ ಮಾಡಬೇಕೆಂದು ನಾವು ನಿರ್ಧರಿಸಿದೆವು. ಒಂಬತ್ತು ಗಂಟೆಯ ಹೊತ್ತಿಗೆ 15 ಎಮ್ಮೆಗಳ ಗುಂಪು, ಅದರ ಮಾಲಿಕ, ಊರಿನ ಪಟೇಲ ಮತ್ತು ಎರಡು ಜನ ಸಹಾಯಕರೊಂದಿಗೆ ನಾನು ಕುಳಿತುಕೊಳ್ಳುತ್ತಿದ್ದ ಮರದ ಬುಡಕ್ಕೆ ಬಂದೆ. ಮರವನ್ನು ಏರಿ ಸುತ್ತಲೂ ಪರಿಶೀಲಿಸಿದಾಗ ಹುಲಿಯ ಸುಳುಹು ಸಿಗಲಿಲ್ಲ. ಹಾಗಾಗಿ ಮರದ ಕೆಳಗಿನಿಂದ ಪ್ರಾರಂಭವಾಗಿದ್ದ ಹುಲಿಯ ರಕ್ತದ ಜಾಡನ್ನು ಹಿಡಿದು ಹೊರಟೆವು. ಎಮ್ಮೆಗಳನ್ನು ಅದೇ ಜಾಡಿನಲ್ಲಿ ಮುನ್ನಡೆಸುತ್ತಾ ನಾನು ಹಿಂದಿನಿಂದ ಹೋಗುತ್ತಿದ್ದೆ. ನನ್ನ ಹಿಂದೆ ಇಬ್ಬರು ಸಹಾಯಕರು ಬರುತ್ತಿದ್ದರು. ಪಟೇಲ ಮತ್ತು ಎಮ್ಮೆಗಳ ಮಾಲಿಕ ಮರದ ಹತ್ತಿರವೇ ನಿಂತಿದ್ದರು.

ನಾವು 200 ಗಜ ಮುಂದೆ ಹೋಗುವಷ್ಟರಲ್ಲಿ ಹುಲಿಯ ಆಳವಾದ ಗೊರಗೊರ ಸದ್ದು ಕೇಳಿಸಿತು. ಕೂಡಲೇ ಎಮ್ಮೆಗಳ ಗುಂಪು ಮುಂದುವರೆಯುವುದನ್ನು ನಿಲ್ಲಿಸಿ ತಲೆತಗ್ಗಿಸಿ ಶಬ್ದ ಬಂದ ದಿಕ್ಕಿಗೆ ತಮ್ಮ ಕೋಡುಗಳನ್ನು ಮುಖಮಾಡಿದವು. ನಮ್ಮ ಎಡಗಡೆ ಒಂದು ಮರವಿತ್ತು. ನನ್ನ ಸಹಾಯಕನಿಗೆ ಅದನ್ನು ಹತ್ತಿ ಏನಾದರೂ ಕಾಣಬಹುದೇ ಎಂದು ನೋಡುವಂತೆ ಪಿಸುಮಾತಿನಲ್ಲಿ ಹೇಳಿದೆ. ಅವನಿಗೆ ಮರದ ಮೇಲಿನಿಂದ ಏನೂ ಕಾಣಲಿಲ್ಲ. ಎಮ್ಮೆಗಳು ಈಗಾಗಲೇ ಹಿಂದೆ ಸರಿದಿದ್ದು ಅವುಗಳನ್ನು ಮುಂದೆ ಕಳಿಸುವ ನಮ್ಮ ಪ್ರಯತ್ನ ಸಫಲವಾಗಲಿಲ್ಲ. ಆದ್ದರಿಂದ ನಾನು ಹಿಂದೆ ಬಂದು ಊರ ಪಟೇಲನಿಗೆ ನಮ್ಮ ಸಹಾಯಕ್ಕೆಂದು ಕೆಲವು ನಾಯಿಗಳನ್ನು ಊರಿನಿಂದ ಕರೆತರಲು ಕೇಳಿಕೊಂಡೆ. ಅರ್ಧಗಂಟೆಯ ನಂತರ ಹಿಂತಿರುಗಿದ ಅವನಿಗೆ ಎರಡು ಕಂತ್ರಿನಾಯಿಗಳನ್ನು ಕರೆತರಲು ಮಾತ್ರ ಸಾಧ್ಯವಾಗಿತ್ತು. ಈ ನಾಯಿಗಳನ್ನು ಎಮ್ಮೆಗಳ ಗುಂಪಿನ ಮೇಲೆ ಛೂಬಿಟ್ಟು ಅವುಗಳನ್ನು ಸುಮಾರು 25 ಗಜ ಮುಂದೆ ಹೋಗುವಂತೆ ಮಾಡಿದೆವು. ಎಮ್ಮೆಗಳು ಮತ್ತೆ ಸ್ತಬ್ಧವಾದೊಡನೆ ನಾಯಿಗಳು ಜೋರಾಗಿ ಬೊಗಳತೊಡಗಿದವು. ಮುಂದೆ ನಿಂತಿದ್ದ ಎರಡು ಎಮ್ಮೆಗಳ ಹಿಂಗಾಲುಗಳವರೆಗೆ ನಾನು ತೆವಳಿಕೊಂಡು ಹೋಗಿ ಅವುಗಳ ಕಾಲುಗಳ ಮಧ್ಯದಿಂದ ಪೊದೆಗಳ ಸಂದುಗಳಲ್ಲಿ ಹುಲಿಯೇನಾದರೂ ಕಾಣುತ್ತದೆಯೇ ಎಂದು ನೋಡಲು ಪ್ರಯತ್ನಿಸಿದೆ. ಆದರೆ ಏನೂ ಕಾಣಲಿಲ್ಲ. ನಾನು ಅವುಗಳನ್ನು ಮುಂದೆ ಕಳಿಸಲು ಪ್ರಯತ್ನಿಸುತ್ತಿರುವಾಗ ಒಂದು ಎಮ್ಮೆ ಹಿಂದೆ ತಿರುಗಿ ಜೋರಾಗಿ ಕೋಡನ್ನು ಬೀಸಿತು. ಆ ಉದ್ದ ಕೋಡುಗಳ ಹೊಡೆತದಿಂದ ನಾನು ಸ್ವಲ್ಪದರಲ್ಲಿಯೇ ತಪ್ಪಿಸಿಕೊಂಡೆ.

ಆಗ ನಾನು ಬಹಳ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದೆ. ಯಾವ ಕ್ಷಣದಲ್ಲಾದರೂ ಆಕ್ರಮಣ ಮಾಡಬಹುದಾದ ಗಾಯಗೊಂಡ ಹುಲಿ ಒಂದು ಕಡೆಯಾದರೆ ಇನ್ನೊಂದು ಕಡೆ ಭಯಗೊಂಡು ತಮ್ಮನ್ನು ರಕ್ಷಣೆ ಮಾಡಿಕೊಳ್ಳಲು ಕೋಡುಗಳನ್ನು ಬೀಸುತ್ತಾ ಯಾವಾಗಲಾದರೂ ಒಟ್ಟಾಗಿ ನುಗ್ಗಬಹುದಾದ ಎಮ್ಮೆಗಳಿದ್ದವು. ಕೆಲವು ಹೆಜ್ಜೆ ಹಿಂದೆ ಸರಿದ ನಾನು ನನ್ನ ಸಹಾಯಕನನ್ನು ಮರದಿಂದ ಇಳಿಯುವಂತೆ ಸೂಚಿಸಿದೆ. ನಾವು ಮೂರೂ ಜನ ಸೇರಿಕೊಂಡು ಹುಲಿಯ ಸದ್ದು ಕೇಳಿದ ಪೊದೆಯ ಕಡೆ ಕಲ್ಲು ಬೀಸತೊಡಗಿದೆವು. ಇದರಿಂದ ಹುಲಿಯ ಘರ್ಜನೆ ಮತ್ತೆ ಕೇಳಿಬಂದಿತೇ ಹೊರತು ಅದು ಪೊದೆಗಳ ಮರೆಯಿಂದ ಹೊರಬರಲಿಲ್ಲ. ಆದರೆ ಹುಲಿ ನಮ್ಮಿಂದ ದೂರ ಓಡಿಹೋಗುವ ಪ್ರಯತ್ನವನ್ನೂ ಮಾಡದಿರುವುದನ್ನು ನೋಡಿದರೆ ಅದರ ಪರಿಸ್ಥಿತಿ ಬಹಳ ಕೆಟ್ಟದಾಗಿರಬೇಕು ಎನ್ನಿಸಿತು.

ಎಮ್ಮೆಗಳ ಗುಂಪಿನಲ್ಲಿ ಸಿಕ್ಕಿಬಿದ್ದ ಹುಲಿ


ಮತ್ತೆಮತ್ತೆ ಹುಲಿಯ ಕಡೆ ಕಲ್ಲು ತೂರಿದಾಗಲೂ ಯಾವ ಪ್ರತಿಕ್ರಿಯೆ ಬರದಿದ್ದಾಗ ನಾನು ಯೋಜನೆಯನ್ನು ಬದಲಾಯಿಸಿದೆ. ನಾಯಿಗಳು ಮತ್ತು ಸಹಾಯಕರನ್ನು ಕರೆದುಕೊಂಡು ಬಳಸುದಾರಿಯನ್ನು ಹಿಡಿದು ಹುಲಿ ಅಡಗಿಗೊಂಡಿದ್ದ ಪೊದೆಗಳ ಹಿಂದುಗಡೆ ಸುಮಾರು 300 ಗಜ ದೂರದಲ್ಲಿನ ಸ್ಥಳಕ್ಕೆ ಬಂದೆವು. ಇಲ್ಲಿಂದ ನಾವು ಎಚ್ಚರಿಕೆಯಿಂದ ನಿಧಾನವಾಗಿ ತೆವಳಿಕೊಂಡು ಹುಲಿಯ ದಿಕ್ಕಿನಲ್ಲಿ ಮುಂದುವರೆಯತೊಡಗಿದೆವು. ಒಬ್ಬ ಸಹಾಯಕ ಮರಗಳನ್ನು ಹತ್ತಿ ಸುತ್ತಲಿನ ಎಲ್ಲಾ ಪೊದೆಗಳ ಪರಿಶೀಲನೆ ಮಾಡುತ್ತಿದ್ದ. ಹೀಗೆ ಸುಮಾರು 200 ಗಜ ಮುಂದೆ ಹೋಗಿದ್ದೆವು ಆಗ ಒಬ್ಬ ಸಹಾಯಕ ಮರದಿಂದ ಗಮನಿಸುತ್ತಿದ್ದಾಗ 50 ಗಜ ದೂರದ ಪೊದೆಗಳಲ್ಲಿ ಯಾವುದೋ ಕಂದು ಬಣ್ಣದ ಆಕೃತಿಯನ್ನು ನೋಡಿದ್ದಾಗಿ ಪಿಸುಮಾತಿನಲ್ಲಿ ಹೇಳಿದ. ನಾನೂ ಅವನ ಜೊತೆ ಮರವೇರಿ ನೋಡಿದಾಗ ಕಂದು ಬಣ್ಣದ ಆಕೃತಿ ಅಸ್ಪಷ್ಟವಾಗಿ ಗೋಚರಿಸಿತು. ಅದನ್ನೇ ಗುರಿಯಾಗಿಟ್ಟುಕೊಂಡು ನಾನು ಬಂದೂಕನ್ನು ಚಲಾಯಿಸಿದೆ. ಗುಂಡು ಬಂದ ದಿಕ್ಕನ್ನು ತಪ್ಪಾಗಿ ತಿಳಿದ ಹುಲಿ ಎಮ್ಮೆಗಳಿದ್ದ ಕಡೆ ಘರ್ಜರಿಸುತ್ತಾ ಹೋಗಿ ಮುಂದೆ ನಿಂತಿದ್ದ ಎಮ್ಮೆಯ ಮೇಲೆ ಆಕ್ರಮಣ ಮಾಡಿತು. ಕೆಳಗೆ ಬಿದ್ದಿದ್ದ ಎಮ್ಮೆ ತನ್ನ ಮೈಮೇಲೆ ಕುಳಿತಿದ್ದ ಹುಲಿಯಿಂದ ಬಿಡುಗಡೆ ಹೊಂದಲು ಯತ್ನಿಸುತ್ತಿದ್ದಾಗಲೇ ಉಳಿದಿದ್ದ ಎಮ್ಮೆಗಳು ಕೋಡುಗಳನ್ನು ಮುಂದೆಮಾಡಿಕೊಂಡು ಪ್ರತ್ಯಾಕ್ರಮಣಕ್ಕಾಗಿ ಅದರ ಕಡೆ ನುಗ್ಗಿ ಹೋದವು. ಆದರೆ ಹುಲಿ ತನ್ನ ದೇಹದ ಕೆಳಗಿದ್ದ ಎಮ್ಮೆಯನ್ನು ಅಲುಗಾಡದಂತೆ ಹಿಡಿದು ಕುಳಿತಿತ್ತು.

ನಾನು ಕುಳಿತಿದ್ದ ಮರದ ಮೇಲಿನಿಂದ ನನಗೆ ಎಲ್ಲವೂ ಸ್ಪಷ್ಟವಾಗಿ ಕಾಣುತ್ತಿತ್ತು. ಆದರೂ ಕೆಳಗೆ ಬಿದ್ದಿರುವ ಅಥವಾ ನುಗ್ಗಿ ಬರುತ್ತಿರುವ ಎಮ್ಮೆಗಳಲ್ಲಿ ಒಂದನ್ನು ಕೊಲ್ಲುವ ಅಪಾಯವಿದ್ದುದರಿಂದ ನಾನು ಮತ್ತೆ ಗುಂಡು ಹಾರಿಸಲಿಲ್ಲ.

ಉಳಿದ ಎಮ್ಮೆಗಳು ಹುಲಿಯಿದ್ದ ಸ್ಥಳಕ್ಕೆ ತಲುಪಿದಾಗ ಅಲ್ಲಿ ದೊಡ್ಡ ಕೋಲಾಹಲವೇ ಎದ್ದಿತು. ತಾನು ತೀರಾ ಅಪಾಯದಲ್ಲಿದ್ದೇನೆಂದು ಅರಿತ ಹುಲಿ ಮತ್ತೆ ಹಿಂದೆ ಸರಿದು ಪೊದೆಯ ಮರೆಗೆ ಸೇರಿಕೊಂಡಿತು. ನನ್ನ ಮುಂದುಗಡೆ ಕೇವಲ 25 ಗಜ ದೂರದಲ್ಲಿ ದೊಗ್ಗಾಲಿನಲ್ಲಿ ಕುಳಿತು ಎಮ್ಮೆಗಳ ಕಡೆ ಗಮನಿಸುತ್ತಿದ್ದ ಹುಲಿ ಈಗ ನನಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಎಡ ಭುಜದ ಹಿಂಭಾಗಕ್ಕೆ ಗುರಿಹಿಡಿದು ಹಾರಿಸಿದ ಒಂದೇ ಗುಂಡು ಅದನ್ನು ಮೌನವಾಗಿಸಿತು.

ನಂತರ ನಾನು ಹುಲಿಯನ್ನು ಪರೀಕ್ಷಿಸಿದಾಗ ಕಾರ್ ಶಿಕಾರಿಗಳು ಹಾರಿಸಿದ ಗುಂಡು ಅದರ ಕೆಳದವಡೆಯನ್ನು ಘಾಸಿಮಾಡಿದ್ದು ಗಮನಕ್ಕೆ ಬಂತು. ಗಾಯ ವಾಸಿಯಾಗಿದ್ದರೂ ಹುಲಿಗೆ ಆಹಾರವನ್ನು ಕಚ್ಚಲಾಗದೆ ಅದು ನರಭಕ್ಷಕನಾಗಿ ಬದಲಾಗಿತ್ತು. ಹುಲಿಯಿಂದ ಗಾಯಗೊಂಡಿದ್ದ ಎಮ್ಮೆ ಮುಂದೆ ಗುಣವಾಗಬಹುದಾಗಿದ್ದರೂ ಅದರ ಯಜಮಾನನಿಗೆ ಪರಿಹಾರವನ್ನು ನೀಡಿ ನಾನು ಖುಷಿಪಡಿಸಿದೆ.

ಹೀಗೆ ಯೆಮ್ಮೆಯದೊಡ್ಡಿಯ ನರಭಕ್ಷಕನ ಅಂತ್ಯವಾಗಿತ್ತು. ಕಾರ್ ಶಿಕಾರಿಗಳ ಬೇಜವಾಬ್ದಾರಿಯಿಂದಾಗಿ 29 ಜನ ಮುಗ್ಧ ಮನುಷ್ಯರು ಜೀವ ಕಳೆದುಕೊಂಡಿದ್ದರು.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಅರ್ಧನಾರೀಶ್ವರವೋ, ನಾರಿಯೇ ಈಶ್ವರವೋ!

ವಿಶ್ವದಲ್ಲಿ ಎಲ್ಲವೂ ವಸ್ತುವಿನ ಆಧಾರದಲ್ಲಿಯೇ ದೃಷ್ಟಿಗೆ ಗೋಚರವಾಗುತ್ತಿದ್ದು ನಂತರ ಆಯಾ ವಸ್ತುವಿನ ಒಳಗೆ ತನ್ನ ದೃಷ್ಟಿಯನ್ನು ಹರಿಸಲು ಯತ್ನಿಸುತ್ತಾ ಪರಿಕಲ್ಪನೆಗಳನ್ನೂ ಮತ್ತು ವಿಜ್ಞಾನವನ್ನೂ ಕಂಡುಕೊಳ್ಳತೊಡಗಿದ. ಜೀವಿಯೂ, ವಿಶ್ವವೂ ಸೇರಿದಂತೆ ಈ ಯಾವುದೇ ವಸ್ತುವಿನ ಇರುವಿಕೆಯನ್ನು ಮೂರು ಭಾಗವಾಗಿ ಕಂಡಿತು.

1. ವಸ್ತುವಿನ ಪ್ರವೇಶ: ಯಾವುದೇ ಒಂದು ವಸ್ತುವು ಹೇಗೆ ಹುಟ್ಟಿತು? ಅದಕ್ಕೆ ಕಾರಣಗಳೇನು? ಅದರ ಮೂಲವೇನು? ಹುಟ್ಟಿದ ಬಗೆ ಹೇಗೆ ಇತ್ಯಾದಿ. ಇದನ್ನು ಸೃಷ್ಟಿ ಎನ್ನೋಣ.

2. ವಸ್ತುವಿನ ಇರುವಿಕೆ: ಸೃಷ್ಟಿಯಾದ ವಸ್ತುವು ನಂತರ ಹೇಗೆ ಬೆಳೆಯುವುದು? ವಿಕಾಸವಾಗುವುದು? ಒಟ್ಟಾರೆ ಇರುವುದು. ಹೇಗೆ ಇರುವುದು, ಏನು ಮಾಡುತ್ತಿರುವುದು ಇತ್ಯಾದಿಗಳು. ಇದು ಸ್ಥಿತಿ.

3. ವಸ್ತುವಿನ ನಿರ್ಗಮನ: ಯಾವುದೇ ಒಂದು ವಸ್ತುವು ಸೃಷ್ಟಿಯಾದ ಮೇಲೆ, ಒಂದಷ್ಟು ಕಾಲ ಒಂದು ಸ್ಥಿತಿಯಲ್ಲಿ ಇದ್ದಾದ ಮೇಲೆ ನಿರ್ಗಮಿಸಬೇಕು. ಭೌತಿಕವಾಗಿ ಇದ್ದದ್ದು ಭೌತಿಕವಾಗಿಯೇ ಇಲ್ಲವಾಗಬೇಕು. ಅದು ಲಯ ಹೊಂದುವುದು.

ಹೀಗೆ ಭೌತಿಕವಾಗಿ ವಸ್ತುವನ್ನು ಅಥವಾ ವಸ್ತುವಿನ ಅಸ್ತಿತ್ವವನ್ನು ನೋಡುವುದರಲ್ಲಿ ಮೂರು ಕಡೆ ದೃಷ್ಟಿ ಹಾಯಿಸಬೇಕಾಯ್ತು. ಅದೇ ಸೃಷ್ಟಿ, ಸ್ಥಿತಿ ಮತ್ತು ಲಯ.

ಸಿಂಧೂ ಕಣಿವೆಯೇ ಮೊದಲಾಗಿ ಪ್ರಾಚೀನ ಚೀನಾ, ಈಜಿಪ್ಟ್ ಮತ್ತು ಗ್ರೀಕ್ ಸಂಸ್ಕೃತಿಗಳೂ ಸೃಷ್ಟಿಯ ಮೂಲವನ್ನು ಹೆಣ್ತನದಲ್ಲಿಯೇ ಕಂಡವರು. ಹೀಗೆ ಸೃಷ್ಟಿಯನ್ನು ನೇರವಾಗಿ ಹೆಣ್ತನಕ್ಕೆ ಅಥವಾ ತಾಯಿಗೆ ಸಮೀಕರಿಸಲಾಯಿತು. ಇದರಲ್ಲಿ ಯಾವ ಅನುಮಾನವೂ ಇಲ್ಲ, ಆದರೆ ಲಯವನ್ನು ಅಂದರೆ ಇಲ್ಲವಾಗುವಿಕೆಯನ್ನು ಪುರುಷನಿಗೆ ಸಮೀಕರಿಸಿದ್ದಕ್ಕೆ ಕಾರಣ ಅಸ್ಪಷ್ಟ.

ಭೂಮಿ ಹೆಣ್ಣಾದರೆ ಆಕಾಶ ಗಂಡಾಯಿತು. ನೀರು ಹೆಣ್ಣಾದರೆ ಸಮುದ್ರ ಗಂಡಾಯಿತು. ಸಾಮಾನ್ಯವಾಗಿ ನದಿಗಳಲ್ಲಿ ಹೆಣ್ಣನ್ನೇ ಗುರುತಿಸುವುದಾದರೂ, ಗಂಡು ನದಿಗಳೂ ಇವೆ. ಅವುಗಳನ್ನು 'ನದ'ಗಳೆಂದು ಕರೆಯಲಾಗುವುದು. ನದಿನದಗಳು. ಹಾಗೆಯೇ ಪರ್ವತಗಳಲ್ಲಿಯೂ ಗಂಡಸ್ತನದ ಯಜಮಾನಿಕೆಯನ್ನು ಗುರುತಿಸಿದರೂ ಕೂಡ ಭೂಮಿಯ ಸ್ತನಗಳಂತೆ ಅವನ್ನು ನೋಡುತ್ತಾ ಸ್ತ್ರೀತನದ ಭಾಗವನ್ನಾಗಿಯೇ ಮಾಡಿಬಿಡುತ್ತಾರೆ. ಈ ಬಿಡಿ ಬಿಡಿ ಅಂಶಗಳೇನೇ ಇರಲಿ, ಆಕಾಶವನ್ನು ಪುರುಷನಿಗೆ ಹೋಲಿಸುವುದು ಮಾತ್ರ ಅಸಂಗತ ಕಾರಣ. ಲಯವನ್ನು ಪುರುಷನ ಅಧಿಪತ್ಯಕ್ಕೆ ಕೊಡುವುದಕ್ಕೆ ಆಗಿನ ಸಮಾಜದ ಒಂದು ಸರಳ ಗಮನದಿಂದ ಅರ್ಥೈಸಲು ನನ್ನ ಒಬ್ಬ ಪಂಡಿತ ಮಿತ್ರರು ಯತ್ನಿಸಿದರು. ಅದನ್ನು ಪೂರ್ಣವಾಗಿ ಒಪ್ಪಲಾಗದಿದ್ದರೂ, ಆಲೋಚಿಸಬೇಕಾದ ವಿಷಯವಿದೆ.

ರಜಸ್ವಲೆ

ಮನುಷ್ಯನ ಅಲೆಮಾರಿ ಜೀವನ ಒಂದು ಹಂತಕ್ಕೆ ಬಂತು. ಹೆಣ್ಣು ತನ್ನ ಸಂತಾನದ ಮತ್ತು ಕೃಷಿಯ ವಿಷಯದಲ್ಲಿ ಸೃಷ್ಟಿ ಮತ್ತು ಪಾಲನೆಯ ಕಾರ್ಯದಲ್ಲಿ ತೊಡಗಿಕೊಂಡಿರುವಾಗ್ಗೆ ಗಂಡಸು ಬೇಟೆಯೇ ಮೊದಲಾದುವನ್ನು ಮಾಡುವುದರೊಂದಿಗೆ ಹೋರಾಟಗಳನ್ನೂ ಕೂಡ ಮಾಡುವ ಅಗತ್ಯ ಹೆಚ್ಚಳವಾಗಿದ್ದ, ಶತ್ರುಗಳೊಂದಿಗೆ ಹೋರಾಡುವುದಾಗಲಿ, ದಾಳಿಗಳನ್ನು ಎದುರಿಸುವುದಾಗಲಿ ಮಾಡುತ್ತಾ ಅವನು ನಾಶದ ಕ್ರಿಯೆಯನ್ನು ಅನಿವಾರ್ಯವಾಗಿ ಮಾಡಲೇಬೇಕಿತ್ತು.

ಹೊರನೋಟದಲ್ಲಿ ಲೌಕಿಕವಾಗಿ ಈ ರೀತಿಯಾಗಿ ಕಂಡರೂ, ಲಯ ಅಥವಾ ಸಂಹಾರವೆಂದರೆ ಕೊಲ್ಲುವುದಲ್ಲ, ತಾನು ಸೃಷ್ಟಿಸಿದುದನ್ನು ಪುನಃ ತನ್ನೊಳಗೇ ಸೆಳೆದುಕೊಳ್ಳುವ ಕ್ರಿಯೆ.

ಇರಲಿ, ಸ್ತ್ರೀಯರಿಗೆ ಸಾಮಾನ್ಯವಾಗಿ ಇಪ್ಪತ್ತೆಂಟು ದಿನಗಳಿಗೊಮ್ಮೆ ಋತುಸ್ರಾವವಾಗುತ್ತದೆ. ಆ ಸಮಯದಲ್ಲಿ ದೇಹದಲ್ಲಿ ಕೊಂಚಮಟ್ಟಿಗೆ ಹಾರ್ಮೋನಿನಲ್ಲಿ ಏರುಪೇರು ಉಂಟಾಗುತ್ತದೆ. ಕೆಲವರಿಗೆ ಈ ಬದಲಾವಣೆ ಅನಾರೋಗ್ಯದ ರೀತಿಯೇ ಆಗಿ ಬರುತ್ತದೆ. ಹೊಟ್ಟೆನೋವು, ತಲೆನೋವು, ಆಯಾಸ, ಜ್ವರ ಬಂದಹಾಗೆ ಉತ್ಸಾಹ ಕುಗ್ಗುವುದು ಇತ್ಯಾದಿ ಆದರೆ, ಕೆಲವೊಮ್ಮೆ ಅಕಾಲಿಕವಾದ ನಿದ್ದೆ ಬರುವುದು, ಹಸಿವು, ಬೇಜಾರು ಇತ್ಯಾದಿಗಳೂ ಹೆಚ್ಚಿ ಅವರಿಗೆ ವಿಶ್ರಾಂತಿ ತೆಗೆದುಕೊಳ್ಳುವ ಅನಿವಾರ್ಯತೆಯನ್ನು ಕಂಡುಕೊಂಡರು.

ಋತುಮತಿಯಾದ ಮೇಲೆ ಕೆಲವೇ ದಿನಗಳಲ್ಲಿ (ಹತ್ತರಿಂದ ಹದಿನೈದು ದಿನಗಳು) ಅವಳಲ್ಲಿ ಸಂತಾನಕ್ಕೆ ಯೋಗ್ಯವಾದ ಅಂಡೋತ್ಪತ್ತಿಯೂ ಆಗುವುದರಿಂದ ಅವಳಿಗೆ ಆ ದಿನಗಳು ಮಹತ್ವದ್ದಾದವು. ಒಟ್ಟಾರೆ ಸ್ತ್ರೀಯು ಸೃಷ್ಟಿ ಕಾರ್ಯದಲ್ಲಿ ಫಲಪ್ರದವಾಗಿರಲು ಅವಳಿಗೆ ವಿಶ್ರಾಂತಿಯ ಅಗತ್ಯವಿದ್ದುದರಿಂದ ಅವಳನ್ನು ಮೂಲೆಗೆ ಕೂರಿಸಲಾಯಿತು. ಆದರೆ ಅವಳನ್ನು ಮೈಲಿಗೆ ಎಂದು ಕಡೆಗಣಿಸುವುದಾಗಿರಲಿಲ್ಲ, ಆದರೆ ಮಡಿ ಮೈಲಿಗೆಯಂತಹ ದೃಷ್ಟಿ ನಿಧಾನವಾಗಿ ಸ್ಪರ್ಶಾಸ್ಪೃಶ್ಯಗಳ ಪರಿಕಲ್ಪನೆಗಳ ರೂಢಿಯ ನಂತರವಾಯಿತು. ವೈದಿಕರಲ್ಲಿ ಇದೇ ಕಾರಣಕ್ಕೆ ಅವಳನ್ನು ಶೂದ್ರಳೆಂದೂ ಕರೆದರು. ಅವಳಿಗೆ ಪೂಜಾದಿಗಳ ಸಂಸ್ಕಾರಗಳಲ್ಲಿ ಸ್ಥಾನವನ್ನು ನಿಷೇಧಿಸಿದ್ದರು. ಅವಳಿಗೆ ಅವರ ಪ್ರಕಾರ ಪವಿತ್ರವೆನಿಸಿದ್ದ ಯಜ್ಞೋಪವೀತವನ್ನು ಧಾರಣೆ ಮಾಡಿಸಲಿಲ್ಲ. ಸಂಧ್ಯಾವಂದನೆಯಾದಿಯಾಗಿ ಇತರ ಸಂಸ್ಕಾರಗಳೂ ಇರದೆ



ಅವಳಿಗೆ ಪುರುಷರಿಗಿರುವ ಸ್ಥಾನ ಮತ್ತು ಅಧಿಕಾರವನ್ನು ನೀಡಿರಲಿಲ್ಲ.

ಕ್ಷೇತ್ರಪ್ರಧಾನದಿಂದ ಬೀಜಪ್ರಧಾನಕ್ಕೆ

ಕ್ಷೇತ್ರಪ್ರಧಾನವಿರದ ಆದರೆ ಬೀಜಪ್ರಧಾನಕ್ಕೆ ಒತ್ತುಕೊಟ್ಟ ವೈದಿಕವು ಅವಳನ್ನು ಅಶುದ್ಧವೆಂದವು. ಅವರನ್ನು ಅನುಸರಿಸಿದ ಇತರ ಅವೈದಿಕ ಸಂಸ್ಕೃತಿಗಳೂ ಕಾಲಾನುಕ್ರಮದಲ್ಲಿ ರಜಸ್ವಲೆಯಾದ ಆಕೆಯನ್ನು ಅಶುದ್ಧಳೆಂದು ಕರೆದವು.

ಕುಲಕ್ಕೆ ಮೂಲವಾಗಿ ಹೆಣ್ಣನ್ನು ಕಂಡ ಕುಲಗಳಾವುವೂ ಕೌಲಿನಿ ಎಂದು ಹೆಣ್ಣನ್ನು ಕರೆದವು ಮತ್ತು ಅವಳ ಪ್ರಕೃತಿಯ ವಿದ್ಯಮಾನಗಳನ್ನು ಮೈಲಿಗೆಯೆಂದು ಕರೆಯಲಿಲ್ಲ, ರಜಸ್ವಲೆಯಾದ ಹೆಣ್ಣಿನ ರಕ್ತದ ಬಟ್ಟೆಗಳನ್ನು ಗೌರವದಿಂದ ಕಾಣುವ ಮತ್ತು ಅವುಗಳನ್ನು ಬಳಸಿಕೊಂಡು ಕೆಲವು ತಂತ್ರಸಾಧನೆಯಲ್ಲಿ ಮಾಟಗಳನ್ನು ಮಾಡುವ ಬಗ್ಗೆ ಕೇಳಿದ್ದೇನೆ.

ತಂತ್ರಶಾಸ್ತ್ರದಲ್ಲಿ ಎಂದಿಗೂ ಸ್ತ್ರೀಯನ್ನು ಕಡೆಗಣಿಸಿಲ್ಲ ಎಂಬುದು ಸ್ಪಷ್ಟವಾದರೂ, ಕೆಲವರು ಅದನ್ನು ವೇದಗಳಲ್ಲೇ ಗುರುತಿಸುವ ಪ್ರಯತ್ನ ಮಾಡುತ್ತಾರೆ. ಆದರೆ ತಂತ್ರಶಾಸ್ತ್ರವು ವೇದಕ್ಕೂ ಪೂರ್ವಕ್ಕೆ ಒಯ್ಯುವ ಪಂಡಿತರೂ ಇದ್ದಾರೆ. ಕೌಲೋಪನಿಷತ್ತು ಮತ್ತು ಕುಲಾರ್ಣವತಂತ್ರ ಇತ್ಯಾದಿ ಗ್ರಂಥಗಳು ಈ ವಾದಿಗಳ ಆಕರವಾಗಿವೆ. ಇದಕ್ಕೆ ಪೂರಕವಾಗಿ ಪೃಶ್ನಿಸೂಕ್ತದಲ್ಲಿ ಶ್ರೀಚಕ್ರವು ಸಕಲಭುವನಗಳ ರೂಪವಾಗಿದ್ದು ಅದು ಅಮೃತತ್ವವನ್ನು ನೀಡುತ್ತದೆ ಎಂದು ಉಲ್ಲೇಖಿಸುತ್ತಾ, ಬೇರೆ ಇಂದ್ರಾದಿ ದೇವತೆಗಳನ್ನು ಸ್ತುತಿಸಿ ಪೂಜಿಸುವವರು ಅಂಧಸ್ತಮಲೋಕಗಳಿಗೆ ಹೋಗುತ್ತಾರೆ ಎಂದು ಬೋಧಿಸುತ್ತದೆ.

ವೈದಿಕತೆಯೊಳಗೆ ತಂತ್ರಶಾಸ್ತ್ರ

ತಂತ್ರಶಾಸ್ತ್ರವು ವೇದಗಳ ಅಧೀನದಲ್ಲಿ ಒಳಪಡದೇ ಇದ್ದ ಸ್ವತಂತ್ರ ಶಾಸ್ತ್ರವಾಗಿದ್ದರೂ ಅದರ ಗಂಭೀರವಾದ ಖ್ಯಾತಿ, ಆದರ ಪ್ರಭಾವಗಳ ಸೆಳೆತಗಳಿಂದಾಗಿ ವೈದಿಕಕ್ಕೆ ಅಳವಡಿಸುವ, ಯಜ್ಞ ಯಾಗಾದಿಗಳನ್ನು ಅವುಗಳೊಂದಿಗೆ ಸಮನ್ವಯಗೊಳಿಸುವ ಪ್ರಯೋಗಗಳು ಹದಿನಾರು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ, ವಿಶೇಷವಾಗಿ ದಕ್ಷಿಣಭಾರತದಲ್ಲಿ ನಡೆಯಿತು. ಲಕ್ಷ್ಮೀಧರದೇಶಿಕರು ಮತ್ತು ಭಾಸ್ಕರರಾಯಮಖೀಂದ್ರರು ತಮ್ಮ ತಂತ್ರಶಾಸ್ತ್ರದ ಪ್ರಯೋಗಗಳಲ್ಲಿ ವೈದಿಕವನ್ನು ತಂದರು. ಇವರು ಋಗ್ವೇದ, ತೈತ್ತೀರಿಯ ಸಂಹಿತ, ತೈತ್ತೀರಿಯ ಆರಣ್ಯಕ, ತೈತ್ತೀರಿಯ ಬ್ರಾಹ್ಮಣ ಮತ್ತು ತೈತ್ತೀರಿಯ ಉಪನಿಷತ್ತುಗಳಿಗೂ ತಂತ್ರಶಾಸ್ತ್ರದ ಶ್ರೀ ವಿದ್ಯಾಪಂಚದಶೀಮಂತ್ರವನ್ನು ಸಮನ್ವಯ ಮಾಡಿದ್ದರು. ಹದಿನೆಂಟನೆಯ ಶತಮಾನದಿಂದೀಚೆಗೆ ಯಾಗ ಯಜ್ಞಾದಿಗಳನ್ನು ತಂತ್ರಶಾಸ್ತ್ರದೊಳಗೆ ಸೇರಿಸಲಾಯಿತು. ಅದಕ್ಕೆ ಮುನ್ನ ಕೆಲವು ಉಪನಿಷತ್ತುಗಳು ತಂತ್ರಶಾಸ್ತ್ರದ ಪರವಾಗಿ ಉದಯಿಸಿದ್ದವು. ಅರುಣಾ, ತ್ರಿಪುರಾ, ಭಾವನಾ, ಕಾಮರಾಜಕೀಲಿತೋದ್ಧಾರ, ಗುಹ್ಯಾಕಾಲಿ ಅನೇಕ ಉಪನಿಷತ್ತುಗಳು ರಚಿತವಾದವು.

ಆದರೆ ಈ ತಂತ್ರಶಾಸ್ತ್ರಕ್ಕೆ ದೇವಿಯು ಅಂದರೆ ಶಕ್ತಿಯು ಮೂಲಳೋ ಅಥವಾ ಶಿವನೇ ಮೂಲನೋ? ಇಲ್ಲಿ ಹೊರ ನೋಟಕ್ಕೆ ದ್ವಂದ್ವ ಕಾಣುತ್ತದೆಯಾದರೂ, ಬಗೆಹರಿಸಲಾಗದಷ್ಟು ಕಠಿಣವಾದಂತಹ ವಿಷಯವೇನಲ್ಲ, ರಹಸ್ಯವನ್ನು ತನ್ನಲ್ಲಿ ಅಡಗಿಸಿಕೊಂಡಿರುವ ಪ್ರಕೃತಿಯೇ ಶಕ್ತಿಯ ಕ್ಷೇತ್ರ. ಅದರಲ್ಲಿ ತನ್ನ ಶಕ್ತಿಯನ್ನು ವಿಲೀನಗೊಳಿಸಿ ತಾನೂ ಅದರಷ್ಟೇ ಶಕ್ತಿವಂತನಾಗುವುದು (ನೀರಿನ ಹನಿ ಎಂಬ ಬಿಂದುವು, ಸಾಗರವೆಂಬ ಮಹಾದೇಹದಲ್ಲಿ ಸೇರಿ ಸಿಂಧುವಾಗಿ ಅಷ್ಟೇ ಶಕ್ತಿಶಾಲಿಯಾಗುವುದು) ಪುರುಷನಾದ ಶಿವನ ಸಾಧನೆ. ಪ್ರಕೃತಿಯು ವ್ಯಾಪಕವಾಗಿ ಉಚಿತವಾಗಿ ಎಲ್ಲರಿಗೂ ಲಭ್ಯವಿರುವಂತಹುದ್ದೇ ಆಗಿದ್ದರೂ, ಅದರ ವ್ಯಾಪ್ತಿಯಲ್ಲಿ ಪ್ರವೇಶಿಸಿ ಮಂಥನಗಳನ್ನು ಸಾಕ್ಷೀಕರಿಸಿ ಅಥವಾ ಎದುರಿಸಿ ಮಿಥುನದಿಂದ ಉಂಟಾಗಿಸಿಕೊಳ್ಳುವ ಎರಡಲ್ಲದ ಐಕ್ಯಭಾವದ ಸಾಧನೆ ಮಾಡುವವನೂ ಅತ್ಯಂತ ಶ್ರೇಷ್ಠನೆನಿಸಿಕೊಂಡ. ಹಾಗಾಗಿ ಪುರುಷನಿಗೂ ಕೂಡ ಪ್ರಕೃತಿಗೆ ಅಥವಾ ಶಕ್ತಿಗೆ ನೀಡುವಷ್ಟೇ ಪ್ರಮಾಣದ ಅಥವಾ ಸಮದ ಗೌರವವನ್ನು ಸಾಧಕನ ದೃಷ್ಟಿಯಿಂದ ನೀಡಲಾಯಿತು. ಉಪಾಸಕನೂ ಉಪಾಸಿತ ವಸ್ತುವಿನೊಡನೆ ಐಕ್ಯವನ್ನು ಹೊಂದಿದಾಗ ಅವೆರಡಕ್ಕೂ ಭೇದವಿರುವುದಿಲ್ಲ. ತಂತ್ರದಲ್ಲಿ ಉಪಾಸಕ, ಉಪಾಸನೆ ಮತ್ತು ಉಪಾಸಿತವಸ್ತು; ಈ ಮೂರೂ ಮಹತ್ವದ್ದೇ ಆಗಿರುತ್ತದೆ. ಯಾವುದೂ ಒಂದಕ್ಕಿಂತ ಮತ್ತೊಂದು ಶ್ರೇಷ್ಠವೆಂಬ ಸ್ಪರ್ಧೆಗೆ ಬೀಳುವುದಿಲ್ಲ.

ನಾರಿಯೇ ಈಶ್ವರ

ನಾನಾ ಪ್ರಕಾರದ ಮನಸ್ಥಿತಿಗಳು ಒಂದೇ ವಿಷಯದ ಮೇಲೆ ತಮ್ಮ ಪ್ರಭಾವವನ್ನು ಬೀರುವುದರಿಂದ ಪುರುಷಾಧಿಕ್ಯದ ಭಾವನೆಗಳೂ ಮುಂದಿನ ಕಾಲಘಟ್ಟದಲ್ಲಿ ಬೆರೆತಿದ್ದರೆ ಆಶ್ಚರ್ಯವೇನಿಲ್ಲ, ಮುಂದೆ ತಂತ್ರಶಾಸ್ತ್ರದಲ್ಲಿ ಪರಬ್ರಹ್ಮನೆಂದು ಶಿವನನ್ನು ಕರೆದರು. ಶಕ್ತಿಯು ವಿಲೋಮಗತಿಯಲ್ಲಿ ಪರಬ್ರಹ್ಮದ ಪ್ರಕಾಶದಲ್ಲಿ ಲೀನವಾಗುವುದರ ಸ್ವಾನುಭವಕ್ಕೆ ಮೋಕ್ಷವೆಂದು ಕರೆದರು. ಶಕ್ತಿಯು ಸ್ತ್ರೀಯಾಗಿದ್ದು, ಅದೇ ಪರಬ್ರಹ್ಮನ ಕಡೆಗೆ ನಡೆಯುತ್ತದೆ ಎಂದು ಹೇಳುವ ಮೂಲಕ ಸ್ತ್ರೀ ಸಂಕೇತವನ್ನು ಪುರುಷ ಸಂಕೇತಕ್ಕೆ ಅಧೀನಗೊಳಿಸಲಾಯಿತು. ಪುರುಷ ಪ್ರಾಧಾನ್ಯತೆಯನ್ನು ನೀಡುವಲ್ಲಿ ಎಷ್ಟೇ ಪ್ರಯತ್ನಗಳಿದ್ದರೂ ಶಿವಶಕ್ತಿ ಮಿಥುನಕ್ಕೆ ಸಾಮರಸ್ಯವೆಂಬ ಸಂಜ್ಞೆಯನ್ನು ನೀಡಲು ಸಾಧ್ಯವಾಯಿತೇ ಹೊರತು ಮೇಲಾಟಗಳನ್ನು ನಡೆಸಲು ಸಾಧ್ಯವಾಗಲಿಲ್ಲ, ಆದರೆ, ತಂತ್ರಶಾಸ್ತ್ರ ಸಾಹಿತ್ಯದಲ್ಲಿ ಮಾತ್ರ ಕೆಲವು ಅಧಿಕಾರಗಳನ್ನು ಹಿಡಿಯಲು ಸಾಧ್ಯವಾಯಿತು. ಆಗಮವೆಂದರೆ ಶಿವನು ದೇವಿಗೆ ಉಪದೇಶಿಸುವ ಗ್ರಂಥವಾದರೆ, ನಿಗಮವು ದೇವಿಯು ಶಿವನಿಗೆ ಉಪದೇಶಿಸಿದ್ದು.

ಈಗ ಲಭ್ಯವಿರುವ ತಂತ್ರಶಾಸ್ತ್ರದಲ್ಲಿ ಆರು ಪ್ರಕಾರಗಳನ್ನು ಗುರುತಿಸಿದರೆ, ಗಣಪತಿ, ಕುಮಾರ (ಸ್ಕಂದ), ವಿಷ್ಣು, ಶಿವ, ಸೂರ್ಯ, ಶಕ್ತಿಗಳೆಂಬ ದೇವತಾಮೂರ್ತಿಗಳನ್ನು ಉಪಾಸ್ಯರೆಂದು ಇಟ್ಟುಕೊಂಡಾಗ ಇವುಗಳಿಗೆ ಕ್ರಮವಾಗಿ ಗಾಣಪತ್ಯ, ಕೌಮಾರ, ವೈಷ್ಣವ, ಶೈವ, ಸೌರ, ಶಾಕ್ತ ಎಂಬ ಹೆಸರುಗಳಾಗುತ್ತವೆ. ಈ ಎಲ್ಲಾ ದರ್ಶನದೃಷ್ಟಿಯು ಪ್ರಮುಖವಾಗಿ ಶಾಕ್ತತಂತ್ರದ್ದಾದರೂ ಅಲ್ಪಸ್ವಲ್ಪ ಮಾರ್ಪಾಡುಗಳೊಡನೆ ಉಳಿದ ತಾಂತ್ರಿಕ ಪದ್ಧತಿಗಳಿಗೂ ಅನ್ವಯಿಸುತ್ತದೆ. ಏಕೆಂದರೆ ಎಲ್ಲಾ ತಂತ್ರಮಾರ್ಗಗಳಲ್ಲಿಯೂ ಆಯಾ ದೇವತೆಯ ಶಕ್ತಿಯದೇ ಎಂದರೆ ಪ್ರಕೃತಿರೂಪದ ಶಕ್ತಿತತ್ವದ್ದೇ ಉಪಾಸನೆ. ಆಯಾ ದೇವತೆಯನ್ನು ಶಕ್ತಿಸಹಿತವೆಂದೇ ಭಾವಿಸಿ ಉಪಾಸನೆಯು ನಡೆಯುತ್ತದೆ.

ಗಣಪತಿಯೆಂದರೆ ಬಹಳಷ್ಟು ಜನ ದಿಢೀರನೆ ಆನೆ ಮುಖದ ಪ್ರತಿಮೆಯನ್ನು ತಮ್ಮ ಕಣ್ಣ ಮುಂದೆ ತಂದುಕೊಳ್ಳುವ ರೂಢಿ ಇಂದಿಗಿದ್ದರೂ ವಾಸ್ತವದಲ್ಲಿ ಹಾಗೇನಿಲ್ಲ. ಸ್ವತಂತ್ರವೂ ಪ್ರತ್ಯೇಕವೂ ಆಗಿದ್ದ ಆಯಾ ಗಣದ ಅಧಿಪತಿ ಯಾರೇ ಆಗಿದ್ದರೂ ಅವರಿಗೆ ಆಯಾ ಗಣ ಸಂಬಂಧಿತ ಆರಾಧನೆ ಅಥವಾ ಮತ್ತೊಂದೇನೋ ನಡೆದಾಗ ಆ ಗಣದ ಒಡೆಯನಿಗೆ ಅಂದರೆ ಗಣಪತಿಗೆ ಆದ್ಯತೆಯ ಪೂಜೆ ನಡೆಯುತ್ತಿತ್ತು. ಆನೆ ಮುಖದ ಗಣಪತಿಯ ಆರಾಧನೆಯು ಶೈವ ಮತ್ತು ವೈಷ್ಣವರ ನಡುವಿನ ಸಂಘರ್ಷವನ್ನು ಉಪಶಮನಗೊಳಿಸಲು ನಡು ಮಧ್ಯೆ ಸೇರಿಸಿದ ದೇವತೆಯೆಂಬುದಾಗಿಯೂ ಒಂದು ವ್ಯಾಖ್ಯಾನ ವಾದರೆ, ಶೂದ್ರರೇ ಮೊದಲಾದ ತಳಸಮುದಾಯದವರನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಬ್ರಾಹ್ಮಣಾಧಿಕ್ಯದ ವರ್ಗವು ರೂಪಿಸಿಕೊಂಡ ಉಪಜೀವನದ ಮಾರ್ಗವು ಎಂದೂ ಕೆಲವು ವಿವರಣೆಗಳು ಕೇಳಿಬರುತ್ತವೆ. ಅದು ನಿಜವೆನಿಸುವಷ್ಟರ ಮಟ್ಟಿಗೆ ನಮಗೆ ಇಂದು ನಿದರ್ಶನಗಳೂ ಸಿಗುತ್ತವೆ.

ಆದರೆ, ಇನ್ನೂ ಸ್ವಲ್ಪ ಹಿಂದಕ್ಕೆ ಹೋದರೆ ಪಶು ಸಂಕೇತಗಳನ್ನು ಹೊಂದಿದ ಸ್ಥಾಪಿತ ಗಣಗಳಿಗೂ ಮುನ್ನ, ಆದಿಮ ಕಾಲದ ಗಣಗಳಿಗೆ ಅಥವಾ ಗುಂಪುಗಳಿಗೆ ಮಹಿಳೆಯೇ ಒಡತಿಯಾಗಿರುತ್ತಿದ್ದಳು. ನಾರಿಯೇ ಈಶ್ವರ ಅಂದರೆ ಒಡತಿಯಾಗಿರುತ್ತಿದ್ದಳು. ಹೀಗಾಗಿ ಗಾಣಪತ್ಯದ ಆಚರಣೆಯ ಆರಾಧನಾ ಮೂರ್ತಿಯನ್ನು ಸ್ತ್ರೀಯದ್ದಾಗಿ ಕಾಣುವುದಾದರೂ ಅದು ಮುಂದೆ ಸ್ತ್ರೀ ರೂಪದ ಆನೆಯ ಮುಖದ ಗಣಪತಿಯನ್ನಾಗಿಯೇ ಕಾಣಿಸಿದ್ದು ಮಾತ್ರ ಗಜಮುಖನ ಪ್ರಸಿದ್ಧಿಯ ಪ್ರಭಾವವೆಂದೇ ನನ್ನ ವಿಶ್ಲೇಷಣೆ.

ಇನ್ನು ಕುಮಾರ, ವಿಷ್ಣು, ಸೂರ್ಯಗಳೆಲ್ಲದರ ತಂತ್ರಶಾಸ್ತ್ರಗಳು ತೀರಾ ಕೊನೆಯ ಭಾಗದವೇನೋ ಎನಿಸುತ್ತದೆ. ಏಕೆಂದರೆ ಕುಮಾರನೂ ಅಥವಾ ಸುಬ್ರಹ್ಮಣ್ಯನೂ ಪುರಾಣದ ಪಾತ್ರವಾಗಿದ್ದು, ವೇದಗಳಲ್ಲಿ ಕಾಣಬರುವುದಿಲ್ಲ, ಕೆಲವೊಂದು ಹೈಪೋಥಿಸಿಸ್ ಪ್ರಕಾರ ಸುಬ್ರಹ್ಮಣ್ಯನ ಪಾತ್ರವು ಸೃಷ್ಟಿಯಾಗಿದ್ದೇ ಅಲೆಕ್ಸಾಂಡರ್ ಭಾರತಕ್ಕೆ ಬಂದು ಹೋದಮೇಲೆ, ಅದರಲ್ಲೂ ಅವನ ಪಾತ್ರದ ನೇರ ಪ್ರಭಾವ ಎನ್ನುತ್ತಾರೆ. ಅವನ ಸೇನಾಧಿಪತ್ಯದ ಪ್ರಭಾವದಿಂದ ಸುಬ್ರಹ್ಮಣ್ಯನೆಂಬ ಸಂಕೇತ ಪ್ರತಿಮೆಯು ಸೃಷ್ಟಿಯಾಗಿ ಅದು ದೇವಸೇನಾಧಿಪತಿ ಎಂದು ಹೇಳುತ್ತಾರೆ. ಇದರ ಬಗ್ಗೆ ತೀರಾ ಕಡಿಮೆ ಪ್ರಮಾಣದ ಸಂಶೋಧನಾಗ್ರಂಥಗಳು ದೊರಕಿದ್ದು, ಅವೂ ಕೂಡ ಅಷ್ಟು ಸ್ಪಷ್ಟ ಮಾಹಿತಿ ಕೊಡುವುದಿಲ್ಲ.

ಅದೇನೇ ಇದ್ದರೂ ತಂತ್ರಶಾಸ್ತ್ರವು ಪ್ರಾರಂಭದಲ್ಲಿ ವೈದಿಕವಲ್ಲ ಎಂಬುದು ಮಾತ್ರ ನಿಜ. ವೈದಿಕವು ತನ್ನ ಪ್ರಾಬಲ್ಯವನ್ನು ಗಟ್ಟಿಗೊಳಿಸಿಕೊಳ್ಳಲು ವ್ರಾತ್ಯರಿಂದ ಮಹಾಚರಣೆಗಳನ್ನು ತೆಗೆದುಕೊಂಡಂತೆ, ತಂತ್ರಶಾಸ್ತ್ರವನ್ನೂ ತನ್ನ ಆಚರಣೆಗಳ ಜೊತೆಗೆ ವಿಲೀನಗೊಳಿಸಿಕೊಂಡಿತು.

ಅರ್ಧ ದೇಹ ಶಿವ ಮತ್ತರ್ಧ ದೇಹ ಪಾರ್ವತಿಯಾಗಿ ನೋಡುವ ಅರ್ಧನಾರೀಶ್ವರ ತತ್ವವು ಪ್ರಕೃತಿ ಮತ್ತು ಪುರುಷರ ಮಥನವನ್ನು, ಮಿಥುನವನ್ನು, ಮಿಲನವನ್ನು ಸಮಭಾವದಲ್ಲಿ ನೋಡುವುದು. ಆದರೆ, ಶಕ್ತಿಯೇ ತನ್ನಿಂದ ಪುರುಷನನ್ನು ಸೃಷ್ಟಿಸಿತು ಎಂದು ಹೇಳುವ ಸಿದ್ಧಾಂತವು ಬ್ರಹ್ಮನನ್ನು ಬ್ರಾಹ್ಮಿಯಾಗಿಯೂ, ವಿಷ್ಣುವನ್ನು ವೈಷ್ಣವಿಯಾಗಿಯೂ, ಇಂದ್ರನನ್ನು ಇಂದ್ರಾಣಿಯನ್ನಾಗಿಯೂ, ಮಹೇಶ್ವರನಿಂದ ಮಾಹೇಶ್ವರಿಯನ್ನಾಗಿಯೂ, ಕುಮಾರನಿಂದ ಕೌಮಾರಿಯನ್ನಾಗಿಯೂ ನೋಡುತ್ತದೆ. ಇದು ಮೂಲ ಶಕ್ತಿಯಾದ ಸ್ತ್ರೀತನದ ಪುರುಷರೂಪದ ಘಟನೆಯಾಗಿ ಕಾಣುತ್ತದೆ.

ಟೊಳ್ಳು ಬುನಾದಿಯ ಮೇಲೆ ನಿಂತಿರುವ ಹಿಂದೂ ಧರ್ಮ

ಹೊಗಳಿಕೆ ತೆಗಳಿಕೆ

ಇದೀಗ ಕೋಮುವಾದಿಗಳು ದೇಶಾದ್ಯಂತ 'ಘರ್ ವಾಪಸಿ' ಎನ್ನುವ ಕುತಂತ್ರದ ಕಾರ್ಯಾಚರಣೆಯನ್ನು ಶುರು ವಿಟ್ಟುಕೊಂಡಿದ್ದಾರೆ. ಮೋದಿ ಅಧಿಕಾರಕ್ಕೇರಿದಾಕ್ಷಣ ಬಾಲ ಬಿಚ್ಚ ಹೊರಟ ಕೋಮುವಾದಿಗಳು ಈ 'ಘರ್ ವಾಪ್ಸಿ' ಎನ್ನುವ ನಾಟಕವನ್ನು ಇದೀಗ ಸಕಾಲಿಕವಾಗಿ ಶುರು ವಿಟ್ಟುಕೊಂಡಿವೆ. ಇದರ ಪ್ಲಸ್ ಮೈನಸ್ ಎಲ್ಲದರ ಅರಿ ವಿರುವ ಕೋಮುವಾದಿಗಳು ಕೇವಲ ಇದನ್ನೊಂದು 'ಲಿಟ್ಮಸ್ ಟೆಸ್ಟ್' ಎನ್ನುವ ಮಾದರಿಯಲ್ಲಿ ಹೊಸ ಬಾಣವನ್ನು ಬಿಟ್ಟು ಎಲ್ಲವನ್ನು ಗಮನಿಸುತ್ತಾ ತಮ್ಮ ಮುಂದಿನ ನಡೆಯ ಕುರಿತು ರೂಪುರೇಷೆಯನ್ನು ತಣ್ಣಗೆ ಹಣೆಯ ತೊಡಗಿವೆ. ತಮ್ಮ ಮನುಷ್ಯತ್ವವಿಲ್ಲದ ಜಾತೀಯತೆ ಮೊದಲಾದ ಸಾಮಾಜಿಕ ಕೀಳುನಡೆಗಳಿಂದಾಗಿಯೇ ಕೆಳವರ್ಗದವರು ಮತಾಂತರ ಗೊಂಡಿದ್ದಾರೆನ್ನುವ ಅಲ್ಲಗಳೆಯಲಾಗದ ಸ್ಪಷ್ಟ ಕಾರಣ ಎದುರಿಗಿರುವುದೇ ಮರು ಮತಾಂತರಕ್ಕೆ ಈ ವರೆಗಿನ ದೊಡ್ಡ ತಡೆಯಾಗಿತ್ತು. (ಸಾರ್ವತ್ರಿಕವಲ್ಲದಿದ್ದರೂ ಯಾವನೋ ಇದಕ್ಕೆ ತೇಪೆ ಹಚ್ಚುವ ಕೆಲಸಕ್ಕಾಗಿ "ಮರು ಮತಾಂತರ ಗೊಂಡಿರುವವರು ಯಾವ ಜಾತಿಯನ್ನಾದರೂ ಆರಿಸಿಕೊಳ್ಳ ಬಹುದು" ಎಂದಿದ್ದಾನೆ. ಅಂದರೆ ಘ.ವಾ ಮೂಲಕ ಮರಳಿ ಬಂದ ಶೂದ್ರನೊಬ್ಬ ಬ್ರಾಹ್ಮಣನಾಗಿ ಹೊಸ ಗೆಟಪ್ಪಿನಲ್ಲಿ ಬಂದು ಪೇಜಾವರರ ಉತ್ತರಾಧಿಕಾರಿಯಾಗಬಹುದು ಎಂದಾಯಿತು. ಜಗದೀಶ ಕಾರಂತನಿಂದ ಹಿಡಿದು ಅಶೋಕ್ ಸಿಂಘಾಲನ ಕುಟುಂಬದ ಹೆಣ್ಣುಗಳಿಗೆ ಧೈರ್ಯದಿಂದ ತಾಳಿ ಕಟ್ಟಬಹುದೂ ಎಂದೆನ್ನಬಹುದೇ..!?)

ವಾಸ್ತವವಾಗಿ ಕೆಳವರ್ಗದ ಜನರನ್ನು ಮರಳಿ ಹಿಂದೂತ್ವದ ಕೊಚ್ಚೆಯಲ್ಲಿ ನೂಕುವಂತ ಸನಾತನಿಗಳ ಈ ಕಾರ್ಯಕ್ರಮಕ್ಕೆ ಪ್ರಯೋಗಿಸಲಾದ ಘರ್ ವಾಪ್ಸಿ (ಮರಳಿ ಮನೆಗೆ) ಎನ್ನುವ ಪದ ಯಾವ ರೀತಿಯಲ್ಲೂ ಸೂಕ್ತವೆನಿಸದು. ಮತಾಂತರಗೊಂಡಿದ್ದ ಶೂದ್ರ ವರ್ಗದವರ ಮೂಲ ಮನೆ ಹುಡುಕ ಹೋದರೆ ಅದು ಹಿಂದೂ ಧರ್ಮದೆಡೆಗೆ ಬೊಟ್ಟು ಯಾವತ್ತಿಗೂ ಮಾಡದು. ಯಾಕೆಂದರೆ, ಐತಿಹಾಸಿಕವಾಗಿ ಈ ಹಿಂದೂ ಧರ್ಮ ಮೂಲ ರೂಪದಲ್ಲಿ ವಿಚಿತ್ರವಾದ ಸ್ವರೂಪವನ್ನು ಹೊಂದಿತ್ತು. ಅಸಲಿಗೆ ಸರಿಯಾದ ಹೆಸರನ್ನೇ ಹೊಂದಿರದಿದ್ದ (ಇಲ್ಲಿನ ಜನಾಂಗ ಹಾಗು ಇಲ್ಲಿನ ಭಾಷೆಗೆ ಸಂಬಂಧಿಸಿದ ಹಿಂದೂ ಹಾಗು ಹಿಂದೀ ಶಬ್ದದ ಮೂಲ ಇಲ್ಲಿನ ಪ್ರಾದೇಶಿಕತೆಗೆ ಸಂಬಂಧಿಸಿ ಯಾರೋ ಕರೆದಿದ್ದೇ ವಿನಹ ಯಾವುದೇ ಧಾರ್ಮಿಕ ಕಟ್ಟುಪಾಡುಗಳಿಗಲ್ಲ. ಹಾಗಾಗಿ ಇದೀಗ 'ಸನಾತನ' ಎನ್ನುವ ಹೊಸ ಪದ ಹೆಚ್ಚು ಚಾಲ್ತಿಯಲ್ಲಿದೆ) ಈಗಿನ ಹಿಂದೂ ಧರ್ಮ ಮೂಲತಃ ಸಣ್ಣ ಸಂಖ್ಯೆಯಲ್ಲಿದ್ದ ವೈದಿಕರ ಗುಂಪಿಗಷ್ಟೇ ಸೀಮಿತವಿತ್ತು. ಕ್ರಮೇಣ ರಾಜಾಶ್ರಯದ ಹಿಡಿತ ಮೊದಲಾದ ಕಾರಣಗಳಿಂದ ಸಣ್ಣ ಸಂಖ್ಯೆಯಲ್ಲಿದ್ದೂ ಕೂಡ ಪ್ರಭಾವವನ್ನು ಗಿಟ್ಟಿಸಿಕೊಂಡ ಈ ವರ್ಗ ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುತ್ತಲೇ ತಮ್ಮ ಸಾಮಾಜಿಕ ಆಧಾರದ ಅನುಕೂಲಕ್ಕೆಂದು ಸಮಾಜದಲ್ಲಿರುವ ಆಯಾಯ ಕಸುಬುದಾರರುಗಳನ್ನು ಚಾತುರ್ವರ್ಣಗಳೆಂದು ವಿಂಗಡಿಸಿಕೊಂಡು ನಿಧಾನವಾಗಿ ಇದೇ ಸಂಪ್ರದಾಯ ಸಮಾಜದಲ್ಲಿ ಬೆಳೆಯುವಂತೆ ಮಾಡಿದರೂ ತಮ್ಮ ಅಸ್ತಿತ್ವವನ್ನು ಮಾತ್ರ ಉದ್ದೇಶಪೂರ್ವಕವಾಗಿ ಪ್ರತ್ಯೇಕವಾಗೇ ಇಟ್ಟುಕೊಂಡವು.

ಹಲವಾರು ಬಗೆಯ ಸಂಪ್ರದಾಯ-ಆಚರಣೆಗಳು ಇತ್ಯಾದಿಗಳನ್ನು ಹೊಂದಿರುವ ಪ್ರಾಚೀನ ಭಾರತವೆಂಬ ಉಪಖಂಡದಲ್ಲಿ ವೈದಿಕರು ತಮ್ಮ ಅನುಕೂಲಕ್ಕಾಗಿ ಹುಟ್ಟು ಹಾಕಿದ ಈ ಚಾತುರ್ವರ್ಣ ಎಂಬ ಪ್ರಕ್ರಿಯೆ ಕಾಲಾನುಕ್ರಮದಲ್ಲಿ ಬಲಾಢ್ಯರ ಅನುಕೂಲಕ್ಕೆ ತಕ್ಕಂತೆ ನಿಧಾನವಾಗಿ ಮುಂದುವರೆಯುತ್ತಾ ಸಮಾಜದಲ್ಲಿ ಶ್ರೇಷ್ಠ-ಕನಿಷ್ಠಗಳೆಂಬ ಜಾತಿಗಳಾಯಿತಾದರೂ ಇಲ್ಲಿ ಧರ್ಮದ ಹೆಸರಿನ ಫಲಾನುಭವಿಗಳೆನಿಸದೇ ಇದ್ದ ತಳಸ್ತರದ ಅಬ್ರಾಹ್ಮಣರಿಗೆ ಮೂಲತಃ ಧರ್ಮದ ಹಂಗೇ ಇದ್ದಿರಲಿಲ್ಲ. ಅಂದರೆ ಇವರೆಲ್ಲ ಇಲ್ಲಿನ ಯಾವುದೋ ಸಾಂದರ್ಭಿಕ ಸುಳಿಗೆ ಸಿಲುಕಲ್ಪಟ್ಟವರೇ ವಿನಹ ಹಿಂದೂಗಳಲ್ಲವೇ ಅಲ್ಲ. ನಮ್ಮ ಐತಿಹಾಸಿಕ ಕಾಲಘಟ್ಟದಲ್ಲೂ ಕೂಡ ಶೈವ, ಶಾಕ್ತ, ನಾಥ, ಗಾಣಪತ್ಯ ಮೊದಲಾದವರಲ್ಲದೇ ಅನೇಕಾನೇಕ ವಿಭಿನ್ನ ಬುಡಕಟ್ಟು ಸಂಪ್ರದಾಯಗಳು ದೇಶದಲ್ಲಿದ್ದವು. ಶೈವ-ವೈಷ್ಣವರೊಳಗೆ ನಡೆದ ಕಾಳಗ- ಮಾರಣ ಹೋಮಗಳು, ವೈದಿಕರು ಶಂಕರನ ನೇತೃತ್ವದಲ್ಲಿ ನಡೆಸಿದ-ಬೌದ್ಧರ ಕಗ್ಗೊಲೆ ಹಾಗು ವಿನಾಶ ಇತ್ಯಾದಿಗಳೆಲ್ಲ ಈಗ ಆರೋಪಿಸಲ್ಪಡುತ್ತಿರುವ ಹಿಂದೂ ಧರ್ಮದ ಮೂಲ ರೂಪದ ಟೊಳ್ಳುತನವನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ. ಇಂತಹ ಉದಾಹರಣೆಗಳು ಇತಿಹಾಸದಲ್ಲಿ ಬೇಕಷ್ಟಿವೆ. (ಎದುರಿಗೆ ಹುಲಿ ಅಟ್ಟಿಸಿಕೊಂಡು ಬಂದರೂ ಶಿವಾಲಯವನ್ನು ಮಾತ್ರ ಆಶ್ರಯಿಸ ಬೇಡ ಎನ್ನುತ್ತದೆ ವೈಷ್ಣವ ಶಾಸ್ತ್ರ ಶಂಕರಾಚಾರ್ಯನನ್ನು ಎಲ್ಲಾ ವಿಪ್ರ ಜನಾಂಗ ಹೊಗಳುತ್ತದೆ ಎಂದೇನಿಲ್ಲ, ಮಾಧ್ವರು ಆತನನ್ನು ಬಹಿರಂಗವಾಗಿ ನಾಯಿ, ಕತ್ತೆ ಎಂದು "ಕೊಂಡಾಡುವ" ಪರಿಪಾಠ ಉಡುಪಿಯಲ್ಲಿದೆ) ಒಂದು ವೇಳೆ ಮೊಗಲರು ಹಾಗು ಬ್ರಿಟಿಷರು ಭಾರತವನ್ನು ಕೈವಶ ಮಾಡಿಕೊಳ್ಳದೇ ಇದ್ದಿದ್ದರೆ ಭಾರತದಲ್ಲಿ ಇಲ್ಲಿನ ಕೆಲ ಪಂಗಡಗಳು ಕೂಡಿಕೊಂಡಂತಿರುವ ಸಂಯುಕ್ತ ಹಿಂದೂ ಧರ್ಮದ ಹುಟ್ಟಿನ ಕಲ್ಪನೆಗೇ ಅವಕಾಶವಿರುತ್ತಿರಲಿಲ್ಲ. ಸದಾ ಕಚ್ಚಾಡುತ್ತಿದ್ದ ಊರಿನ ಮಂದಿ ಹೊಸದಾಗಿ ಸೇರಿಕೊಂಡ ಪರದೇಶಿಯೊಬ್ಬನನ್ನು ಓಡಿಸುವ ಸಲುವಾಗಿ ಒಮ್ಮತಕ್ಕೆ ಬಂದಂತಹ ಕಥೆ ಇದು. ಅಷ್ಟೆ.

ಘ.ವಾ ಬಗ್ಗೆ ವಿಎಚ್‌ಪಿ ನಾಯಕನೊಬ್ಬ ಇದು ಮರು ಮತಾಂತರವಲ್ಲ; ತಿಳಿಯದೇ ದಾರಿ ತಪ್ಪಿದವರ ಮನಪರಿವರ್ತನಾ ಕಾರ್ಯಕ್ರಮ ಎಂದಿದ್ದಾನೆ. ಮನ ಪರಿವರ್ತನೆ ಆಗಬೇಕಾದುದು ಜನರ ಜನರ ನಡುವೆ ಮೇಲುಕೀಳು ಜಾತೀಯತೆಯ ವಿಷ ಬಿತ್ತಿ ಬೇಳೆ ಬೇಯಿಸಿಕೊಳ್ಳುವಂತಹ



ನೀಚರದ್ದೇ ವಿನಹ ಇಂತಹ ಮುಗ್ಧರದ್ದಲ್ಲ. ಮೊದಲು ನಿಮ್ಮ ಬುಡವೇ ಸರಿಪಡಿಸಿಕೊಂಡರೆ ಎಲ್ಲವೂ ತಂತಾನೆ ಸರಿಗುತ್ತದೆಂಬ ಅರಿವಿರಲಿ. ಕೆಲ ವರ್ಷದ ಹಿಂದೆ ಉಡುಪಿಯಲ್ಲಿ ದಲಿತರು ಬೌದ್ಧ ಧರ್ಮಕ್ಕೆ ಸೇರುವ ಕಾರ್ಯಕ್ರಮ ಆಯೋಜಿಸಿದಾಗ ಹೊಟ್ಟೆ ಉರಕೊಂಡು ಮತಾಂತರ ಬೇಡಿ ಎಂದು ಕರಪತ್ರ ಹಂಚಿದ್ದ ಪೇಜಾವರ ಸ್ವಾಮಿ ಈಗ "ಎಲ್ಲರೂ ಮರು ಮತಾಂತರವನ್ನು ವಿರೋಧಿಸುತ್ತಿದ್ದಾರೆ. ಆದರೆ ಮತಾಂತರದ ಕಾರ್ಯಕ್ಕೆ ನಿಮ್ಮಗಳ ಮೌನವೇಕೆ?" ಎಂದು ಪ್ರಶ್ನಿಸಿದ್ದಾರೆ. ಸ್ವಾಮೀ, ಹಿಂದೂ ಧರ್ಮದಿಂದ ರೋಸಿಹೋದ ದಲಿತರ ಮತಾಂತರ ದಲಿತರು ಹಾಗು ಅವರು ಹೋಗುವ ಧರ್ಮಕ್ಕಷ್ಟೇ ಸಂಬಂಧಿಸಿದ್ದು, ಇಲ್ಲಿ ಮೂರನೆಯ ದೊಣ್ಣೆ ನಾಯಕನ ಮೂಗು ತೂರಿಸುವಿಕೆ ಬೇಕಿಲ್ಲ ತಾನೆ? ಒಳ್ಳೆಯದಿರಲಿ ಕೆಟ್ಟದೇ ಇರಲಿ ಅದು ಆ ಸಂಬಂಧಿಸಿದವನಿಗಷ್ಟೇ ಅನ್ವಯ. ಅದೇ ರೀತಿ, ಮರು ಮತಾಂತರವೂ ಕೂಡ. ಅವರದ್ದೇ ಅಂದರೆ ದಲಿತ ಯಾ ಕೆಳಸ್ತರದವರ ಸ್ವಇಚ್ಛೆಯಿಂದಲೇ ಮೂರನೆಯವರ ಯಾವ ಮಧ್ಯಸ್ಥಿಕೆಗಳೂ ಇಲ್ಲದೇ ನಡೆದರೆ ಅಲ್ಲಿ ಸಮಸ್ಯೆ ಇಲ್ಲ. ಆದರೆ ಇಲ್ಲೂ ನಿಮ್ಮಂಥವರ ಮೇಲ್ಜಾತಿ ದೊಣ್ಣೆ ನಾಯಕರ ಉಸ್ತುವಾರಿಯ ಪ್ರಯತ್ನ ಹಾಗು ಕಾರ್ಯಕ್ರಮ ನಿರ್ವಹಣೆಗಳು ಬಂದಲ್ಲಿ ಘರ್ ವಾಪಸಿ ಹೆಸರಲ್ಲಿ ಮರಳಿ ಕೊಚ್ಚೆಗೆ ನೂಕುವ ಈ ನಿಮ್ಮ ಕುತಂತ್ರವನ್ನು ವಿರೋಧಿಸದೇ ಇರಲಾದೀತೆ?

- ಅವಿನಾಶ್ ಎಂ.ಎಸ್. ನೆಲ್ಲಿಕಾರ್

ಜನವರಿ 7, 2015ರ ಸಂಚಿಕೆಯಲ್ಲಿ ಡಾ.ವಾಸು ಬಗ್ಗೆ 'ಬಿ ಟಿವಿ'ಯಲ್ಲಿ ಬಂದಿದ್ದ ಸುಳ್ಳು ವರದಿಯ ಬಗ್ಗೆ ಓದಿದೆ. ಪ್ರಸಕ್ತ ಜಾಗತಿಕ ವಾತಾವರಣದಲ್ಲಿ ಪ್ರತಿ ದಿನವೂ ಸಾವಿರಾರು ರೂಪಾಯಿಗಳನ್ನು ಸಂಪಾದನೆ ಮಾಡಬಹುದಾಗಿದ್ದ ವೈದ್ಯನೊಬ್ಬ ತನ್ನದೆಲ್ಲವನ್ನೂ ತೊರೆದು ಸಿದ್ಧಾಂತಕ್ಕೆ ಮಾರುಹೋಗಿ ಜನಪರ ಚಳವಳಿಯಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ಮತ್ತು ಅವರ ವೈಯಕ್ತಿಕ ವಾಸ್ತವ್ಯದ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಕನಿಷ್ಟ ಒಂದು ವೈಯಕ್ತಿಕ ಸಂದರ್ಶನವನ್ನೂ ಮಾಡದೆ ವರದಿ ಮಾಡಿರುವುದು, ಆ ಟಿ.ವಿ. ವರದಿಗಾರ ತನ್ನ ಪತ್ರಿಕಾ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡಿರುವ ಸಂಕೇತವಷ್ಟೇ.

ಯಾವ ಹೆಸರಿನ ಸಂಘವನ್ನೂ ನೋಂದಾಯಿಸದೆ ಈ ದೇಶಕ್ಕಾಗಿ ಗಾಂಧೀಜಿಯವರು ಹೋರಾಟ ಮಾಡಲಿಲ್ಲವೇ? ಇಂತಹ ಸಾಮಾನ್ಯ ತಿಳಿವಳಿಕೆಯೂ ಇಲ್ಲದ ಆ ವರದಿಗಾರನಿಗೆ ಪತ್ರಿಕೋದ್ಯಮದ ಪ್ರಾಥಮಿಕ ಜ್ಞಾನವೂ ಇಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ! ಅಷ್ಟಕ್ಕೂ ಡಾ. ವಾಸು ತಲೆ ಮರೆಸಿಕೊಂಡು ನಾಪತ್ತೆಯಾಗಿಲ್ಲ! ಅವರು ಕನ್ನಡದ ಪತ್ರಿಕೋದ್ಯಮದಲ್ಲಿ ಮತ್ತು ಸಾರ್ವಜನಿಕರಲ್ಲಿ ಚಿರಪರಿಚಿತರು. ಪೂರ್ವಗ್ರಹಪೀಡಿತ ವರದಿಗಾರರು ಪತ್ರಿಕೋದ್ಯದಲ್ಲಿ ಹೆಚ್ಚು ಕಾಣಿಸುತ್ತಿರುವುದು ಸಮಾಜಕ್ಕೆ ಆಘಾತ ಮತ್ತು ಅಪಾಯಕಾರಿ ಬೆಳವಣಿಗೆಯೇ. ನಿಮ್ಮ ವರದಿಗಾರರು ಹೇಳಿರುವಂತೆ ಮಂಡ್ಯದ ಸ್ಥಳೀಯ ವರದಿಗಾರರು ಮತ್ತು ಸಾರ್ವಜನಿಕರು, ಹೆಚ್ಚಾಗಿ ಇಲ್ಲಿನ ಹಿರಿಯರು ಮತ್ತು ಪೊಲೀಸರು ಎಂಥದೇ ಸಂಘರ್ಷವಿದ್ದಾಗ್ಯೂ - ಅದು ಪ್ರೇಮಪ್ರಕರಣವಿರಲಿ ಅಥವಾ ಮತೀಯ ಗಲಭೆಗಳಿರಲಿ - ಸಮಸ್ಯೆ ಉದ್ಭವವಾದಾಗ ಯಾವ ಒತ್ತಡಕ್ಕೂ ಮಣಿಯದೇ ತಮ್ಮದೇ ನಿಯಂತ್ರಣದಲ್ಲಿ ಸಾರ್ವಜನಿಕರಲ್ಲಿ ಸಾಮರಸ್ಯ-ಸಮತೋಲನ ಕಾಪಾಡಿಕೊಂಡಿರುವುದು ಸತ್ಯ. ಮಂಡ್ಯದಲ್ಲಿ ಸಾಕಷ್ಟು ಪ್ರಜ್ಞಾವಂತರು, ಚಿಂತಕರು ಇದ್ದು ಮತೀಯವಾದಿಗಳಿಗೆ ಒಂದು ಚುನಾವಣೆಯಲ್ಲೂ ಗೆಲ್ಲಲು ಅವಕಾಶ ಮಾಡಿಕೊಡದಿರುವುದೇ ಇದಕ್ಕೆ ಸಾಕ್ಷಿ! ಆದರೆ, 4-5 ವರ್ಷಗಳ ಇತ್ತೀಚೆಗೆ ಇಲ್ಲಿನ ಹಿರಿಯರು ತಮ್ಮ ಸಹಜ ವಯಸ್ಸು ಮತ್ತು ಇತರೆ ಕಾರಣಗಳಿಂದ ಬದಿಗೆ ಸರಿಯುತ್ತಿದ್ದು ಪರ್ಯಾಯವಾಗಿ ಪರಿವಾರಿಗಳು ರಿಯಲ್ ಎಸ್ಟೇಟ್‌ನಲ್ಲಿ ಸ್ವಲ್ಪ ದುಡ್ಡು ಮಾಡಿಕೊಂಡು, ತಮ್ಮೊಂದಿಗೆ ಶಾಲೆ ಮತ್ತು ಕಾಲೇಜಿನಿಂದ ಡ್ರಾಪ್ ಔಟ್ ಆದವರನ್ನು ಸೇರಿಸಿಕೊಂಡು ಶಾಲಾ-ಕಾಲೇಜುಗಳಲ್ಲಿ ಮತ್ತು ಮಂಡ್ಯದ ಅಕ್ಕ ಪಕ್ಕದ ಹಳ್ಳಿಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಯ ಹೆಸರಿನಲ್ಲಿ ಜಾತಿವೈಷಮ್ಯ ಬಿತ್ತಲು ಪ್ರಯತ್ನಿಸುತ್ತಿರುವುದು ಕೂಡ ನಗ್ನ ಸತ್ಯ.

ಹರೆಯದ ಯುವಕರು ಇವರಿಗೆ ಹೆಚ್ಚಾಗಿ ಬಲಿಯಾಗುತ್ತಿರುವುದು ಮಂಡ್ಯದ ದುರಂತ. ಅದರಲ್ಲೂ ಮಧ್ಯಮ ವರ್ಗದ ಆರ್ಥಿಕವಾಗಿ ಅಷ್ಟೇನು ದುರ್ಬಲರಲ್ಲದ ಸೋಮಾರಿ ಯುವಕರು ಪರಿವಾರಿಗಳ ಸಹವಾಸ ಮಾಡುತ್ತಿರುವಾಗ, ಮಂಡ್ಯದ ನಾಗರಿಕರು ತಮ್ಮ ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ಚಿಂತಿಸದೆ ನಿರ್ಲಕ್ಷಿಸುತ್ತಿರುವುದು ವಿಪರ್ಯಾಸವಲ್ಲದೇ ಮತ್ತೇನು?

ಮಂಡ್ಯದಲ್ಲೀಗ ಅನೇಕ ರೈತ ಸಮಸ್ಯೆಗಳು, ನಗರಸಭೆ ಮತ್ತು ನಗರಾಭಿವೃದ್ಧಿಯ ಅಖಂಡ ಭ್ರಷ್ಟಾಚಾರ, ಮೈಸೂರು ಸಕ್ಕರೆ ಕಂಪನಿಯ ತುಂಬಲಾರದ ನಷ್ಟ, ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಹೆಣ್ಣು ಶಿಶು ಹತ್ಯೆಯಂತಹ ಜ್ವಲಂತ ಸಮಸ್ಯೆಗಳಿರುವಾಗ ಮತ್ತು ಈ ದೇಶದ, ಈ ನೆಲದ ಕಾನೂನನ್ನು ನಮ್ಮ ಸಂವಿಧಾನದ ಜಾತ್ಯತೀತ ಮೌಲ್ಯವನ್ನು ಅರಿಯದ ಈ ಪುಂಡರು ಮದಿಯ ರಾಷ್ಟ್ರಾಭಿಮಾನ, ಹಿಂದೂಸ್ತಾನದ ಕಲ್ಪನೆ ಮತ್ತು ಉತ್ತಮ ಆಡಳಿತದ ಗಿಳಿಪಾಠ ಒಪ್ಪಿಸುತ್ತಾ ಮುಂದಿನ ವಿಧಾನಸಭೆ ಚುನಾವಣೆಗೆ ಕನಸು ಕಾಣುತ್ತಿದ್ದಾರೆ!

ಪತ್ರಿಕೆಯ ಈ ವರದಿಯಿಂದಾದರೂ ಇನ್ನು ಮುಂದೆ ಮಂಡ್ಯದ ಪ್ರಜ್ಞಾವಂತರು, ಚಿಂತಕರು ಮತ್ತು ಪೋಷಕರು ತಮ್ಮ ಮಕ್ಕಳ ಬಗ್ಗೆ ಜಾಗೃತರಾಗದೇ ಪರಿವಾರಿಗಳನ್ನು ಬೆಳೆಯಬಿಟ್ಟಲ್ಲಿ ಮಂಡ್ಯ ನಗರವೂ ಮತ್ತೊಂದು ಉಡುಪಿ/ ಮಂಗಳೂರು ಹಾಗೂ ಕರ್ನಾಟಕ ರಾಜ್ಯ ಗುಜರಾತ್ ಆಗುವುದರಲ್ಲಿ ಅನುಮಾನವೇ ಬೇಡ!

- ಎಂ.ಎಸ್. ಲತಾ ಪುಟ್ಟರಾಜು, ಮಂಡ್ಯ

ಈಗ ಹಿಂದೂ ಸಂಸ್ಕೃತಿ ಬಗ್ಗೆ ಮಾತನಾಡುವ ಜನರಿಗೆ ಹಿಂದೆ ಅವರ ರಾಜಮನೆತನದವರು ಮುಸ್ಲಿಮರೊಂದಿಗೆ ಮದುವೆ ಆಗುತ್ತಿದ್ದದ್ದು ಗೊತ್ತಿಲ್ಲವೇ ಆದರೀಗ ಒಬ್ಬ ಸಾಮಾನ್ಯ ಮನೆಯ ಹುಡುಗ-ಹುಡುಗಿ ಅಂತರ ಧರ್ಮೀಯ ಮದುವೆಯಾದರೆ 'ಲವ್ ಜಿಹಾದ್' ಎಂದು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಭಾರತಿಯ ಸಂಸ್ಕೃತಿ ಮಾತನಾಡುವ ಜನಗಳಿಗೆ, ಈಗಲೂ ಅವರಿಗೆ ಇಂಗ್ಲಿಷ್ ಕಾನ್ವೆಂಟ್, ಫೇಸ್ಬುಕ್ (ಅದರಲ್ಲೂ ಕನ್ನಡ ಭಾಷೆ ಬರೆಯಲೂ ನಾಚಿಕೆ, ಏಕೆಂದರೆ ಇಂಗ್ಲಿಷ್ ಇವರಿಗೆ ಪ್ರತಿಷ್ಠೆಯ ಸಂಕೇತ) ಬೇಕು, ಪೆಪ್ಸಿ ಕೋಲಾ, ಬ್ರಾಂಡೆಡ್ ಬಟ್ಟೆ, ವಿದೇಶಿ ಕಾರುಗಳು ಬೇಕು. ಆದರೆ ಇಲ್ಲಿಯವರೇ ಆದ ಜನ ಮಾತ್ರ ಬೇಡ.

ಈಗಲೂ ಭಾರತದ ದೇಶದಲ್ಲಿ 90% ಜನರ ವಿದ್ಯಾಭ್ಯಾಸ ಬ್ರಿಟಿಷರು ಕೊಟ್ಟ ಬಳುವಳಿಯಲ್ಲವೇ? ಅದರಲ್ಲೂ ಕರ್ನಾಟಕದಲ್ಲಿ ಮೊದಲು ವಿದ್ಯೆಯ ಕೊಡುಗೆ ಕೊಟ್ಟವರು ಕ್ರೈಸ್ತರು ಮತ್ತು ಲಿಂಗಾಯತರು.

ಗೋ ರಕ್ಷಣೆ ಎಂದು ಫೇಸ್‌ಬುಕ್‌ನಲ್ಲಿ ಬೊಬ್ಬೆ ಹೊಡೆಯುವ ಜನ, ತಮ್ಮ ಮನೆಯಲ್ಲಿ ಹಸು-ಎಮ್ಮೆ ಸಾಕಿಕೊಂಡಿದ್ದಾರೆಯೇ? ಸೆಗಣಿ ಗಂಜಲ ಸ್ವಚ್ಛ ಮಾಡಿದ್ದಾರೆಯೇ?

-ಯು.ಬಿ.ಪಾಲಾಕ್ಷ, ಇಮೇಲ್ ಮೂಲಕ

ದೊರೆಸ್ವಾಮಿಯವರ ರಾಕ್‌ಸ್ಟಾರ್ ಎಂಬುದು ಕರುನಾಡಿಗೆ ಹೆಮ್ಮೆಯ ವಿಷಯ. ಅವರ ಮನೋಧೈರ್ಯ ಮತ್ತು ಚಟುವಟಿಕೆ ಅತ್ಯಮೂಲ್ಯವಾದದ್ದು. ಇಂದಿನ ಸಮಾಜಕ್ಕೆ ಅವರ ಅಗತ್ಯತೆ ಇದೆ. ಬಿಜೆಪಿ ಪಕ್ಷದ ಶಾಸಕರು ಕೆಲವರು ವಿವೇಚನೆಯನ್ನು ಕಳೆದುಕೊಂಡಿರುವುದು ಶೋಚನೀಯ.

ಕವಿತಾರವರು ರಾಜ್ ಪುತ್ರರ ಮೌಲ್ಯವನ್ನು ತಿಳಿಸಿದ್ದು ಒಳ್ಳೆಯದು ಎನ್ನಿಸಿತು.

-ಬಿ.ಇ. ಶಿವಪ್ರಸಾದ್, ಬೇಲೂರು

ಪತ್ರಿಕೆ ಬಹಳ ಚೆನ್ನಾಗಿ ಮೂಡಿಬರುತ್ತಿದೆ. ಇದೇ ನಮೂನೆ ಮುಂದುವರೆಯಲಿ ಎಂದು ಆಶಿಸುವೆ.

ದೇಶದ ಪರಿಸ್ಥಿತಿ ಗಮನಿಸಿದರೆ ಭಯ ಉಂಟಾಗುತ್ತಿದೆ. ಮತಾಂತರದ ಅಟ್ಟಹಾಸ, ಜಾತಿವಾದ, ಮಠಾಧೀಶರ ನಗ್ನ ಪೌರುಷ ವಿಜೃಂಭಣೆ, ವಿದ್ಯುನ್ಮಾನ ಮಾಧ್ಯಮಗಳ ತಲೆಹಿಡುಕತನ ಕಂಡು ರೋಸಿಹೋಗುತ್ತಿದೆ. ತಮ್ಮಂಥ ಜೀವಪರ, ಮಾನವಪರ ಜನರು ಸಮಾಜದಲ್ಲಿ ಇರುವುದರಿಂದ ಬದುಕಲು ಪ್ರೇರಣೆಯಾಗುತ್ತಿದೆ. ದಲಿತರು, ಅಲ್ಪಸಂಖ್ಯಾತರು ಮೈಚಳಿ ಬಿಟ್ಟು ಮುಖ್ಯವಾಹಿನಿಗೆ ಸೇರಬೇಕು. ಹಿಂದೂ ಮತಾಂಧ ಸನಾತನಿಗಳ ತಲೆಗಳು, ಆರೆಸ್ಸೆಸ್‌ನ ಶನಿಸಂತಾನಗಳು, ತಮ್ಮ ಕ್ರೂರ ಉಗುರುಗಳನ್ನು ಚೂಪಾಗಿಸಿಕೊಳ್ಳುತ್ತಿದ್ದಾರೆ.

ಹಿಮ್ಮೆಟ್ಟಿಸಲು ಎಲ್ಲ ಪ್ರಗತಿಪರ ಶಕ್ತಿಗಳ ಕ್ರೋಢೀಕರಣವಾಗಲಿ. ಮಾನವತಾವಾದಿಗಳು ಎದ್ದು ನಿಲ್ಲಲಿ.

-ಶಿವಕುಮಾರ್

ಪತ್ರಿಕೆಯ ನವೆಂಬರ್ 19 ಮತ್ತು 31, 2014 ಸಂಚಿಕೆಗಳಲ್ಲಿ ಪ್ರಕಟವಾದ 'ಸಾವಂತ್ರಿಯವರ ಘನತೆಯ ಸಾವು' ಮತ್ತು ಡಾ. ವಾಸುರವರ 'ದೇಹದಾನ' ಲೇಖನಗಳೆರಡೂ ಚೆನ್ನಾಗಿದ್ದವು. ಬಹುಶಃ ತಮ್ಮ ಪತ್ರಿಕೆ ಬಿಟ್ಟರೆ ಭಾರತೀಯ ಭಾಷೆಗಳ ಇನ್ಯಾವುದೇ ಪತ್ರಿಕೆಯಲ್ಲಿ ಈ ತರಹದ ಲೇಖನಗಳು ಬಂದಿರುವುದು ಸಂದೇಹವೇ. ಇದಕ್ಕಾಗಿ ಅಭಿನಂದನೆಗಳು.

ಡಾ. ವಾಸು ಬರೆದಿರುವ ಪ್ರಕಾರ ಜನಗಳಿಗೆ ದೇಹದಾನದ ಬಗ್ಗೆ ಬಹಳಷ್ಟು ಗೊಂದಲಗಳಿವೆ. ಇತ್ತೀಚೆಗೆ ನನ್ನ ತಂಗಿ ಮಾಲತಿ ಕ್ಯಾನ್ಸರ್‌ನಿಂದ ಅಲ್ಲದೆ ಅದಕ್ಕೆ ನೀಡುವ ಚಿಕಿತ್ಸೆ ಕಿಮೋಥೆರಪಿಯಿಂದ ತೀರಿಕೊಂಡಳು. ವೈದ್ಯರ ನಿರ್ಲಕ್ಷ್ಯದಿಂದಾಗಿ (12 ಕಿಮೋಥೆರಪಿ) ರೋಗದ ಬದಲು ಔಷಧಿಯೇ ಅವಳನ್ನು ಕೊಂದು ಹಾಕಿತು.

ಸತ್ತ ನನ್ನ ತಂಗಿಯ ಕಣ್ಣುಗಳೆರಡನ್ನೂ ದಾನ ಮಾಡಲಾಯಿತು. ಅವಳ ದೇಹವನ್ನು ಇಟ್ಟುಕೊಂಡು ಕ್ಯಾನ್ಸರ್‌ಗೆ ಚಿಕಿತ್ಸೆ ಕಂಡುಹಿಡಿಯುತ್ತಾರೆ ಅನ್ನೋ ಭ್ರಮೆಯಲ್ಲಿ ಸಂಶೋಧನೆಗೆ ಅನುಕೂಲವಾಗುವ ರೀತಿಯಲ್ಲಿ ಪೋಸ್ಟ್ ಮಾರ್ಟಂ ಮಾಡದೇ ಅವಳ ದೇಹವನ್ನು ಕೋಲಾರದ ದೇವರಾಜ ಅರಸು ಆಸ್ಪತ್ರೆಗೆ ದಾನ ಮಾಡಲಾಯಿತು. ಇಲ್ಲಿ ದೇಹದಾನವು ಬರೀ ಭಾವನಾತ್ಮಕ ವಿಚಾರವಾಗಿ ನೋಡಲಾಯಿತೆ ಹೊರತು ವೈಜ್ಞಾನಿಕ ನೆಲಗಟ್ಟೇನೂ ಇರಲಿಲ್ಲ. ಇಂದು ಚಾಲ್ತಿಯಲ್ಲಿರುವ ಕಿಮೋಥೆರಪಿ ಎಂಬ ವಿಷಕಾರಿ ಮದ್ದಿನ ಚಿಕಿತ್ಸೆ ಬಿಟ್ಟರೆ ಕ್ಯಾನ್ಸರ್‌ಗೆ ಪರ್ಯಾಯ ಚಿಕಿತ್ಸೆಯೇ ಇಲ್ಲವೆಂದು ಪ್ರಚಾರ ಮಾಡಲಾಗುತ್ತಿದೆ. ತೀರಾ ದುಬಾರಿಯಷ್ಟೇ ಅಲ್ಲದೆ ವಿಷಕಾರಿಯಾದ ಈ ಚಿಕಿತ್ಸೆ ಹಿಂದೆ ಬಹುರಾಷ್ಟ್ರೀಯ ಔಷಧಿ ಕಂಪನಿಗಳು, ವಿಮೆ ಕಂಪನಿಗಳು, ಡಾಕ್ಟರ್‌ಗಳ ಹಣ ಮಾಡುವ ದೊಡ್ಡ ಲಾಬಿಯಿದೆ. ದುಬಾರಿಯಲ್ಲದ ಬಹಳಷ್ಟು ಪರಿಣಾಮಕಾರಿ ಫಲಿತಾಂಶ ಲಭ್ಯವಿರುವ ಗೆರೆಸನ್ ಥೆರಪಿ, ಹೋಮಿಯೋಪತಿ, ಸಿದ್ಧ, ಆಯುರ್ವೇದಿಕ್ ವೈದ್ಯ ಪದ್ಧತಿಗಳ ಬಗ್ಗೆ ಅಪಪ್ರಚಾರವೇ ಹೆಚ್ಚಿದೆ.

ಭಾರತದಲ್ಲಿ ಮಹಿಳೆಯರಿಗೆ ಆರೋಗ್ಯದ ಬಗ್ಗೆ ತಿಳಿವಳಿಕೆ ತೀರಾ ಕಡಿಮೆ. ಮಹಿಳೆಯ ಸ್ಥಿತಿಗತಿಗಳ ನಿರ್ಧಾರಗಳೆಲ್ಲಾ ಪುರುಷ ಪ್ರಧಾನ ಸಮಾಜದ ಪ್ರಕಾರ ಅವಳ ಗಂಡ, ತಂದೆ, ಅಣ್ಣತಮ್ಮಂದಿರೇ ತೀರ್ಮಾನಿಸುವ ಸ್ಥಿತಿಯಲ್ಲಿದೆ. ಇಂತಹ ಸಂದರ್ಭದಲ್ಲಿ ಬ್ರಿಟನಿನ ಮೈನಾರ್ಡ್ ಧೈರ್ಯ ಮೆಚ್ಚಲೇಬೇಕು.


ವಿವಿಧ ರೀತಿಯ ಕ್ಯಾನ್ಸರ್‌ಗಳು ಇಂದಿನ ಮಹಿಳೆಯರನ್ನು ಕಾಡುತ್ತಿದೆ. ಮಹಿಳೆಯ ಸಂಪಾದಕಿ ಆಗಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಜವಾಬ್ದಾರಿಯುತವಾಗಿ ಬರೆಯುತ್ತಿರುವ ಪತ್ರಿಕೆ ಯಾತಕ್ಕಾಗಿ ಮಹಿಳೆಯರಲ್ಲಿ ಕ್ಯಾನ್ಸರ್ ಕುರಿತಾದ ತಿಳಿವಳಿಕೆ ಮೂಡಿಸುವ ಲೇಖನಗಳು ಮತ್ತು ಅದಕ್ಕೆ ಪರ್ಯಾಯವಾಗಿರುವ ಚಿಕಿತ್ಸಾ ಪದ್ಧತಿಗಳನ್ನು ಪತ್ರಿಕೆ ಪ್ರಕಟಿಸಬಾರದು? ಬಹುಶಃ ಕರ್ನಾಟಕದ ಮಹಿಳೆಯರಿಗೊಂದು ವರದಾನವಾಗಬಲ್ಲದು.

- ಎ. ನಾಗರಾಜನ್, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಸಿನಿಮಾ ಹೀಗೂ ಇರಬಹುದು ಎಂದು ತೋರಿಸಿದ ಬಾಲಚಂದರ್






ಬಾಲಚಂದರ್ ಯಾವತ್ತೂ ಹೆಣ್ಣನ್ನು ಅಬಲೆ ಎಂದಾಗಲೀ, ಅಶಕ್ತೆ ಎಂದಾಗಲೀ ತಮ್ಮ ಚಿತ್ರಗಳಲ್ಲಿ ತೋರಿಸಿಲ್ಲ. ಹೆಣ್ಣನ್ನು ದೃಢಚಿತ್ತದವಳೂ, ಪುರುಷಪ್ರಧಾನ ಸಮಾಜದ ಶೋಷಣೆ, ನಿಂದನೆಯನ್ನು ದಿಟ್ಟವಾಗಿ ಎದುರಿಸಿ ತಾನೂ ಗಂಡಸಿಗೆ ಸಮಾನಳಾಗಿ ಬದುಕಬಲ್ಲೆನು, ತನ್ನ ಅನ್ನ, ಬಟ್ಟೆಗಳನ್ನು ತಾನೇ ಹುಟ್ಟಿಸಿಕೊಳ್ಳಬಲ್ಲೆನು, ಯಾವ ಗಂಡಸಿಗೂ ಕಡಿಮೆ ಇಲ್ಲದಂತೆ ತನ್ನ ಕುಟುಂಬವನ್ನು ಸಾಕಬಲ್ಲೆನು, ಸ್ವಾಭಿಮಾನದಿಂದ ಬದುಕಿ ತೋರಬಲ್ಲೆನು ಎಂಬ ಸಕಾರಾತ್ಮಕ ಆಶಯ ಹೊತ್ತ ಪಾತ್ರಗಳನ್ನು ಅವರು ಸೃಷ್ಟಿಸಿದರು. ಆ ಮೂಲಕ ಸ್ತ್ರೀ ಸಮುದಾಯದಲ್ಲಿ ಸಂಚಲನ ಉಂಟುಮಾಡಿದರು.

ಇವರ ಪೂರ್ಣ ಹೆಸರು ಕೈಲಾಸಂ ಬಾಲಚಂದರ್. ನಿರ್ದೇಶಕರಾಗಿ, ನಿರ್ಮಾಪಕರಾಗಿ, ಸ್ಕ್ರಿಪ್ಟ್ ಬರಹಗಾರರಾಗಿ ಪ್ರಖ್ಯಾತರಾದವರು. 'ಮರೋಚರಿತ', 'ಎದಿರ್ ನೀಚಲ್', 'ಉನ್ನಾಲ್ ಮುಡಿಯುಂ ತಂಬಿ', 'ಮನ್ಮಥ ಲೀಲಾ', 'ಅರಂಗೇಟ್ರಂ', 'ತಣ್ಣೀರ್ ತಣ್ಣೀರ್', 'ಪುನ್ನಗೈ ಮಣ್ಣನ್' ಮುಂತಾದ ಚಿತ್ರಗಳನ್ನು ತೆಗೆದ ಬಾಲಚಂದರ್ ಇತ್ತೀಚೆಗಷ್ಟೇ ತಮ್ಮ ಎಂಬತ್ತನಾಲ್ಕನೇ ವಯಸ್ಸಿನಲ್ಲಿ ತೀರಿಕೊಂಡರು. ಆ ಮೂಲಕ ಅಸಂಖ್ಯಾತ ಚಿತ್ರಪ್ರೇಮಿಗಳ ಆತಂಕಕ್ಕೆ, ದುಃಖಕ್ಕೆ ಕಂಬನಿಗೆ ಕಾರಣರಾದರು. ಇವರನ್ನು ಚಿತ್ರರಂಗದ ಮಂದಿ ಪ್ರೀತಿ, ಗೌರವಗಳಿಂದ 'ಕೆ.ಬಿ. ಸಾರ್' ಎಂದೇ ಕರೆಯುತ್ತಿದ್ದರು.

ಚಟುವಟಿಕೆಯ ವ್ಯಕ್ತಿ ಬಾಲಚಂದರ್ ಹುಟ್ಟಿದ್ದು ತಮಿಳುನಾಡಿನ ತಂಜಾವೂರು ಜಿಲ್ಲೆಯ ನನ್ನಿಲಂನಲ್ಲಿ. ಈ ಊರು ಈಗ ತಿರುವಾರೂರು ಜಿಲ್ಲೆಗೆ ಸೇರಿಕೊಂಡಿದೆ. ಚಿಕ್ಕಂದಿನಲ್ಲೇ ಸಿನಿಮಾದತ್ತ ಆಸಕ್ತಿ ಮೂಡಿ ತಮ್ಮ ಹನ್ನೆರಡನೆ ವಯಸ್ಸಿನಲ್ಲೇ ರಂಗಭೂಮಿ ಪ್ರವೇಶಿಸಿ ಒಂದಿಷ್ಟು ನಾಟಕಗಳನ್ನು ಬರೆದು, ನಿರ್ದೇಶಿಸಿ ಹಲವು ಪಾತ್ರಗಳನ್ನೂ ಮಾಡಿ ಸೈ ಅನ್ನಿಸಿಕೊಂಡರು. ಹೆಚ್ಚೂ ಕಡಿಮೆ 1949ರಲ್ಲಿ ಅಣ್ಣಾಮಲೈ ಯೂನಿವರ್ಸಿಟಿಯಲ್ಲಿ ಪ್ರಾಣಿಶಾಸ್ತ್ರದ ಪದವಿ ಪಡೆಯುವವರೆಗೆ ನಾಟಕ ಲೋಕದಲ್ಲಿ ತೊಡಗಿಸಿಕೊಂಡಿದ್ದರು. "ನನ್ನ ಎಂಟನೆ ವಯಸ್ಸಿನಿಂದಲೇ ಸಿನಿಮಾ ನೋಡಲು ಶುರುಮಾಡಿಕೊಂಡೆ" ಎಂದು ಅವರು ಹೇಳಿರುವ ಮಾತು ಕಲೆಯೆಡೆಗೆ ಅವರಿಗಿದ್ದ ಆಸಕ್ತಿಯನ್ನು ಒತ್ತಿ ಹೇಳುತ್ತದೆ.



ಪ್ರಾಣಿಶಾಸ್ತ್ರದಲ್ಲಿ ಪದವಿ ಸಿಕ್ಕ ನಂತರ ಬಾಲಚಂದರ್ ಮುತ್ತುಪೇಟೆ ಎಂಬ ಊರಲ್ಲಿ ಶಾಲಾಶಿಕ್ಷಕರಾಗಿ ವೃತ್ತಿಜೀವನ ಆರಂಭಿಸಿದರು. ಪ್ರಾಮವಾಗಿ ಮೇಷ್ಟ್ರು ಕೆಲಸ ಮಾಡಿಕೊಂಡಿದ್ದ ಬಾಲಚಂದರ್ ಬದುಕಿನಲ್ಲಿ ದೊಡ್ಡತಿರುವು ಸಿಕ್ಕಿದ್ದು ಅವರು 1950ರಲ್ಲಿ ಮದರಾಸಿಗೆ ಹೋದಾಗ. ಅವರು ಮದರಾಸಿಗೆ ಹೋಗಿದ್ದು ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ಗುಮಾಸ್ತನ ಹುದ್ದೆ ನಿರ್ವಹಿಸುವ ಸಲುವಾಗಿ. ಆ ಸುಸಂದರ್ಭದಲ್ಲಿ ಕೆ.ಬಿ.ಯೊಳಗಿನ ಕಲಾವಿದ ಮತ್ತೆ ಜಾಗೃತನಾಗತೊಡಗಿದ. 'ಯುನೈಟೆಡ್ ಅಮೆಚೂರ್ ಆರ್ಟಿಸ್ಟ್ಸ್' ಎಂಬ ನಾಟಕದ ಕಂಪನಿ ಸೇರಿಕೊಂಡರು. ರಂಗದ ಮೇಲಿನ ನೆರಳು-ಬೆಳಕಿನಾಟದ ಚೋದ್ಯಕ್ಕೆ ಮತ್ತೆ ಮತ್ತೆ ಪುಳಕಗೊಂಡರು. ಯಾವಾಗ ಬಾಲಚಂದರ್‌ಗೆ ಅಂಥದೊಂದು ಮಹತ್ವಪೂರ್ಣ ವೇದಿಕೆ ಸಿಕ್ಕಿತೋ ತಮ್ಮದೇ ಆದ ತಂಡ ರೂಪಿಸಿಕೊಂಡು ತಾವೇ ನಾಟಕ ಬರೆದು ತಮ್ಮೊಳಗಿನ ಕನಸುಗಾರನನ್ನು ರಂಗದ ಮೇಲೆ ನಿಲ್ಲಿಸಲು ಆರಂಭಿಸಿದರು. 'ಮೇಜರ್ ಚಂದ್ರಕಾಂತ್', 'ಸರ್ವರ್ ಸುಂದರಂ', 'ನೀರ್ ಕುಮಿಳಿ', 'ಮೆಳುಗುವರ್ತಿ', 'ನಾಣಲ್', 'ನವಗ್ರಹಂ' ತರಹದ ನಾಟಕಗಳು ಇವರ ನಿರ್ದೇಶನ, ನಿರ್ಮಾಣದಲ್ಲಿ ತಮಿಳು ಕಲಾರಸಿಕರನ್ನು ರಂಜಿಸಿದವು. ಬಾಲಚಂದರ್ ಎಂಬ ಸಂವೇದನಾಶೀಲ ವ್ಯಕ್ತಿ ರಂಗಕರ್ಮಿಯಾಗಿ ಮರುಜನ್ಮವೆತ್ತಿದರು..

ಕ್ರಿಯಾಶೀಲ ಜೀವವಾಗಿದ್ದ ಬಾಲಚಂದರ್ ಕಣ್ಣು ...ರಲ್ಲಿ ಚಿತ್ರರಂಗದತ್ತ ಹೊರಳಿತು. ವೃತ್ತಿಯಲ್ಲಿ ಗುಮಾಸ್ತರಾಗಿದ್ದರೂ ಪ್ರವೃತ್ತಿಯಲ್ಲಿ ನಾಟಕಕಾರರಾಗಿದ್ದ ಅವರಿಗೆ 1965ರಲ್ಲಿ 'ದೇಯ್ವತ್ತಾಯ್' ಎಂಬ ಚಿತ್ರಕ್ಕೆ ಸಂಭಾಷಣೆ ಬರೆಯುವ ಅವಕಾಶ ಬಂತು. ಎಂ.ಜಿ.ರಾಮಚಂದ್ರನ್ ನಾಯಕನಟರಾಗಿ ನಟಿಸುತ್ತಿದ್ದ ಆ ಚಿತ್ರಕ್ಕೆ ಬಾಲಚಂದರ್ ಚಿತ್ರಕತೆ ಬರೆಯುವುದರ ಜೊತೆಗೆ ಸಂಭಾಷಣಾಕಾರರೂ ಆದರು. ಅದೇ ವೇಳೆಗೆ ತಾವು ... ಮಾಡುತ್ತಿದ್ದ ಅಕೌಂಟೆಂಟ್ ಜನರಲ್ ಕಚೇರಿಯ ಗುಮಾಸ್ತಗಿರಿಯಿಂದ ಸೂಪರಿಂಟೆಂಡೆಂಟ್ ಹುದ್ದೆಗೆ ಭಡ್ತಿ ಪಡೆದರು. ಆ ಖುಷಿಯ ಜೊತೆಗೆ ಕೆ.ಬಿ.ಯವರ ಪಾಲಿಗೆ ...ಶಿತ ಮತ್ತೊಂದು ಸಂತಸದ ಸಂಗತಿಯೆಂದರೆ ತಮ್ಮ ...ಕ್ಕ ನಾಟಕ 'ಸರ್ವರ್ ಸುಂದರಂ' ಅನ್ನು ಆಧರಿಸಿ ಸಿನಿಮಾಗಿಸಲು ಎವಿಎಂ ಮೆಯ್ಯಪ್ಪ ಚೆಟ್ಟಿಯಾರ್ ಅವರು ಮುಂದೆ ಬಂದಿದ್ದು. ಬಾಲಚಂದರ್ ಅವರಿಂದ ಆ ನಾಟಕದ ಹಕ್ಕುಗಳನ್ನು ಕೊಂಡುಕೊಂಡ ಈ ಚೆಟ್ಟಿಯಾರ್ ಬೇರೆ ಯಾರೂ ಅಲ್ಲ, ಇವತ್ತಿಗೂ ಮದರಾಸಿನ ವಡಪಳನಿಯಲ್ಲಿ ...ಂದಿರುವ ದಕ್ಷಿಣ ಭಾರತದ ಪ್ರಸಿದ್ಧ ಸ್ಟುಡಿಯೋಗಳಲ್ಲಿ ...ದ ಎ.ವಿ.ಎಂ. ಸ್ಟುಡಿಯೋದ ಸಂಸ್ಥಾಪಕರು.

ಹೋಟೆಲ್ ಸರ್ವರೊಬ್ಬನ ಪಾತ್ರದ ಸುತ್ತ ಹೆಣೆಯಲ್ಪಟ್ಟಿರುವ ಈ ಚಿತ್ರದ ಕಥಾನಾಯಕನಾಗಿ ನಾಗೇಶ್ ಕಾಣಿಸಿಕೊಂಡಿದ್ದರು. ಕನ್ನಡದ 'ಮಕ್ಕಳ ರಾಜ್ಯ', 'ಗಡಿಬಿಡಿ ಗಂಡ', 'ಪ್ರೀತ್ಸು ತಪ್ಪೇನಿಲ್ಲ' ಚಿತ್ರಗಳಲ್ಲಿ ತಮ್ಮ ಚುರುಕುತನದ ಅಭಿನಯದಿಂದ ಮನಗೆದ್ದಿದ್ದರಲ್ಲಾ... ಅದೇ ನಾಗೇಶ್ ಇವರು. ಯಾವ ಘಳಿಗೆಯಲ್ಲಿ ಬಾಲಚಂದರ್ ಅವರ 'ಸರ್ವರ್ ಸುಂದರಂ' ನಾಟಕವು ಸಿನಿಮವಾಯಿತೋ, ಅದೇ ದೆಸೆಯಲ್ಲಿ ಅವರ 'ಮೇಜರ್ ಚಂದ್ರಕಾಂತ್' ನಾಟಕ ಹಿಂದಿಯಲ್ಲಿ 'ಊಂಚೇ ಲೋಗ್' ಹೆಸರಿನಲ್ಲಿ ಸಿನಿಮಾ ಆಗಿದ್ದಷ್ಟೇ ಅಲ್ಲದೆ ರಾಷ್ಟ್ರಪ್ರಶಸ್ತಿಯನ್ನೂ ಗಳಿಸಿತು.

ಅಷ್ಟರಲ್ಲಿ ತಾವೇ ಸ್ವತಂತ್ರವಾಗಿ ಸಿನಿಮಾವೊಂದನ್ನು ನಿರ್ದೇಶಿಸುವಷ್ಟು ಅನುಭವ ಮತ್ತು ಅದಕ್ಕೆ ಬೇಕಾದ ಆತ್ಮವಿಶ್ವಾಸ, ಹುಮ್ಮಸ್ಸು ಕೆ.ಬಿ.ಯವರಲ್ಲಿ ಹುಟ್ಟಿಕೊಂಡಿತ್ತು. 1965ರಲ್ಲಿ ಸೆಟ್ಟೇರಿದ 'ನೀರ್ ಕುಮಿಳಿ' ಸಿನಿಮಾ ಬಾಲಚಂದರ್ ನಿರ್ದೇಶನದ ಚೊಚ್ಚಲ ಚಿತ್ರವಾಯಿತು. ಅಲ್ಲಿಂದ ಶುರುವಾಯಿತು ಬಾಲಚಂದರ್ ಯುಗ.

ಅಲ್ಲಿಂದಾಚೆಗೆ ತಮಿಳು ಚಿತ್ರರಂಗದ ದೆಸೆಯೂ ಬದಲಾಗತೊಡಗಿತು. ತಮಿಳು ಸಿನಿಮಾ ಆಗಸದಲ್ಲಿ ಬಾಲಚಂದರ್ ಎಂಬ ಪ್ರಕಾಶಮಾನ ತಾರೆಯ ಪ್ರಜ್ವಲತೆಗೆ ನಾಂದಿಯಾಯಿತು. ಆವರೆಗೆ ಕಂಡರಿಯದ ತಾಜಾತನ ಬೆಳ್ಳಿಪರದೆಯ ಮೇಲೆ ಮೂಡತೊಡಗಿತು. 'ಸಿನಿಮಾ ಅಂದರೆ ಹೀಗೂ ಇರಲು ಸಾಧ್ಯ' ಎಂದು ಪ್ರೇಕ್ಷಕ ಬೆರಗುಗೊಳ್ಳುವಂತಾಯಿತು. ಮೊದಮೊದಲಿಗೆ ತಮ್ಮವೇ ನಾಟಕಗಳನ್ನು ಆಧರಿಸಿ ಸಿನಿಮಾ ಮಾಡುತ್ತಿದ್ದ ಬಾಲಚಂದರ್ ಎಪ್ಪತ್ತನೆ ದಶಕದ ಆರಂಭದ ಹೊತ್ತಿಗೆ ನಾಟಕದ ಗುಂಗಿನಿಂದ ಬಚಾವಾಗಿ ಒಬ್ಬ ಪ್ರೊಫೆಷನಲ್ ಫಿಲಂ ಮೇಕರ್ ಅನ್ನಿಸಿಕೊಳ್ಳುವತ್ತ ದಾಪುಗಾಲು ಹಾಕಿದ್ದು ಈಗ ಇತಿಹಾಸ.

ಫಿಲಂ ಮೇಕಿಂಗ್ ಬಗ್ಗೆ ಅಪಾರ ಅರಿವು ಹೊಂದಿದ್ದ ಬಾಲಚಂದರ್ 'ಅರಂಗೇಟ್ರಂ' ಹೊತ್ತಿಗೆ ಬೇರೆಯದೇ ಬಗೆಯಲ್ಲಿ ಅರಳಿಕೊಂಡಿದ್ದರು. 1970ರಲ್ಲಿ ರೂಪುಗೊಂಡ ಈ ಚಿತ್ರದ ಮೂಲಕ ಕಮಲ್ ಹಾಸನ್ ಎಂಬ ನಟ ಬಾಲನಟನಿಂದ ಹೀರೋ ಆಗಿ ಭಡ್ತಿ ಪಡೆದರು. ಬಡತನ, ವೇಶ್ಯಾವಾಟಿಕೆಯ ಸುತ್ತ ಬೆಳೆದು ನಿಂತ ಈ ಚಿತ್ರ ವಿವಾದಕ್ಕೂ ಗುರಿಯಾಗಿತ್ತು. ಈ ಚಿತ್ರದ ಕೇಂದ್ರ ಪಾತ್ರವಾದ ಬ್ರಾಹ್ಮಣ ಕುಟುಂಬದ ಹೆಣ್ಣು ಮಗಳೊಬ್ಬಳು ತನ್ನ ಕುಟುಂಬ ನಿರ್ವಹಣೆ ನಿಮಿತ್ತ ವೇಶ್ಯಾವಾಟಿಕೆಗೆ ಇಳಿಯುವ ಮೂಲಕ ಸಂಪ್ರದಾಯಸ್ಥ ಭಾರತೀಯ ಮನಸ್ಥಿತಿಗೆ ಶಾಕ್ ನೀಡುತ್ತಾಳೆ. ಇಂಥದೊಂದು ವಿವಾದಾತ್ಮಕ ಕಥಾವಸ್ತು ಇಟ್ಟುಕೊಂಡು ಅಲ್ಲಿಯತನಕ ತಮಿಳಿನಲ್ಲಿ ಯಾವುದೇ ಚಿತ್ರ ಬಂದಿರಲಿಲ್ಲ. ಹಾಗಾಗಿ ಈ ಚಿತ್ರ ಸಾಕಷ್ಟು ವಿವಾದಗಳು ಸೃಷ್ಟಿಯಾಗಲು ಮೂಲವಾಯಿತು. ದಿನನಿತ್ಯದಲ್ಲಿ ಕಣ್ಣಿಗೆ ಕಾಣುವ, ಹೃದಯಕ್ಕೆ ನಾಟುವ ಸಾಮಾಜಿಕ ಸಂಗತಿಗಳನ್ನೇ ತಮ್ಮ ಚಿತ್ರಗಳ ವಸ್ತುವಾಗಿ ಆಯ್ಕೆ ಮಾಡಿಕೊಂಡು, ಆ ಅಂಶವನ್ನು ಅಷ್ಟೇ ಪರಿಣಾಮಕಾರಿಯಾಗಿ ಪರದೆಯ ಮೇಲೆ ತರುವಲ್ಲಿ ಕೆ.ಬಿ. ಸಕ್ಸಸ್ ಆಗಿದ್ದರು. ಸ್ವತಃ ತಾವೇ ಕಥೆ ಬರೆದು ಚಿತ್ರಗಳನ್ನು ನಿರ್ದೇಶಿಸುವುದರ ಜೊತೆಗೆ ಮರಾಠಿ, ಬಂಗಾಳಿಯಂತಹ ಭಾಷೆಗಳಲ್ಲಿ ತಯಾರಾದ ಕೆಲವೊಂದು ಚಿತ್ರಗಳನ್ನು ತಮಿಳಿಗೆ ತರುವಲ್ಲಿಯೂ ಇವರು ಸಿದ್ಧಹಸ್ತರಾಗಿದ್ದರು. ಆ ಪೈಕಿ ಜೆಮಿನಿ ಗಣೇಶನ್, ಲಕ್ಷ್ಮಿ, ಕಮಲ್ ಹಾಸನ್ ಮುಂತಾದವರನ್ನು ಹಾಕಿಕೊಂಡು ಮಾಡಿದ 'ನಾನ್ ಅವನ್ ಇಲ್ಲೈ' ಚಿತ್ರಕ್ಕೆ ಮರಾಠಿ ನಾಟಕ 'ತೋ ಮಿ ನವ್ ಹೆಚ್' ಪ್ರೇರಣೆಯಾದಂತೆಯೇ, 'ಮೇಘೆ ಢಾಕಾ ತಾರಾ' ಎಂಬ ಬಂಗಾಳಿ ಚಿತ್ರವನ್ನು ಆಧಾರವಾಗಿಟ್ಟುಕೊಂಡು 'ಅವಳ್ ಒರು ತೊಡರ್ ಕಥೈ' ಚಿತ್ರವನ್ನು ಮಾಡಿದ್ದರು. ಈ ಚಿತ್ರದ ಮೂಲಕ ಬಾಲಚಂದರ್ 'ಅರಂಗೇಟ್ರಂ' ನಂತರ ಮತ್ತೆ ಸ್ತ್ರೀಪಾತ್ರವನ್ನು ಸಿನಿಮಾದ ಕೇಂದ್ರವಾಗಿಸಲು ಮುಂದಾದರು. ದುಡಿಯುವ ಹೆಣ್ಣೊಬ್ಬಳು ತನ್ನ ಕುಟುಂಬವನ್ನು ನಿಭಾಯಿಸಲು ಏನೆಲ್ಲಾ ಪರಿಪಾಟಲು ಪಡುತ್ತಾಳೆ ಎಂಬುದನ್ನು ಈ ಚಿತ್ರ ತೆರೆದಿಡುತ್ತದೆ...

ಬಾಲಚಂದರ್ ಯಾವತ್ತೂ ಹೆಣ್ಣನ್ನು ಅಬಲೆ ಎಂದಾಗಲೀ, ಅಶಕ್ತೆ ಎಂದಾಗಲೀ ತಮ್ಮ ಚಿತ್ರಗಳಲ್ಲಿ ತೋರಿಸಿಲ್ಲ. ಹೆಣ್ಣನ್ನು ದೃಢಚಿತ್ತದವಳೂ, ಪುರುಷಪ್ರಧಾನ ಸಮಾಜದ ಶೋಷಣೆ, ನಿಂದನೆಯನ್ನು ದಿಟ್ಟವಾಗಿ ಎದುರಿಸಿ ತಾನೂ ಗಂಡಸಿಗೆ ಸಮಾನಳಾಗಿ ಬದುಕಬಲ್ಲೆನು, ತನ್ನ ಅನ್ನ, ಬಟ್ಟೆಗಳನ್ನು ತಾನೇ ಹುಟ್ಟಿಸಿಕೊಳ್ಳಬಲ್ಲೆನು, ಯಾವ ಗಂಡಸಿಗೂ ಕಡಿಮೆ ಇಲ್ಲದಂತೆ ತನ್ನ ಕುಟುಂಬವನ್ನು ಸಾಕಬಲ್ಲೆನು, ಸ್ವಾಭಿಮಾನದಿಂದ ಬದುಕಿ ತೋರಬಲ್ಲೆನು ಎಂಬ ಸಕಾರಾತ್ಮಕ ಆಶಯ ಹೊತ್ತ ಪಾತ್ರಗಳನ್ನು ಅವರು ಸೃಷ್ಟಿಸಿದರು. ಆ ಮೂಲಕ ಸ್ತ್ರೀ ಸಮುದಾಯದಲ್ಲಿ ಸಂಚಲನ ಉಂಟುಮಾಡಿದರು. ಭರವಸೆಯತ್ತ ಹೆಜ್ಜೆ ಹಾಕುವಲ್ಲಿ ಸ್ಫೂರ್ತಿಯಾದರು. ಇಷ್ಟಕ್ಕೂ ಒಬ್ಬ ಚಿತ್ರನಿರ್ದೇಶಕನ ಜವಾಬ್ದಾರಿಗಳೇನು? ತಾನು ವಾಸಿಸುತ್ತಿರುವ ಸಮಾಜಕ್ಕೆ, ಕಾಲಮಾನಕ್ಕೆ ತಾನು ಹೇಗೆ ಸ್ಪಂದಿಸಬೇಕು? ತನ್ನ ಚಿತ್ರಗಳ ಮೂಲಕ ತನ್ನ ಸುತ್ತಣ ಜಗತ್ತಿಗೆ ಯಾವ ಸಂದೇಶವನ್ನು, ಚಿಂತನೆಯನ್ನು, ಬೆಳಕನ್ನು ರವಾನಿಸಬೇಕು? ಎಂಬುದರ ಅರಿವು ಬಾಲಚಂದರ್ ಥರದವರಿಂದ ಅರಿಯಬೇಕಾಗುತ್ತದೆ. ಒಬ್ಬ ನಿರ್ದೇಶಕ ತನ್ನ ಸಿನಿಮಾ ಮೂಲಕ ಜಗತ್ತಿಗೆ ಹೇಳಬೇಕಾದುದೇನೆಂಬುದನ್ನು ಯಾವ ಇನ್‌ಸ್ಟಿಟ್ಯೂಟ್‌ಗಳೂ ಹೇಳಿಕೊಡಲಾರವು. ಸಿನಿಮಾ ಸಂಬಂಧಿ ಯಾವೊಂದು ಕೋರ್ಸುಗಳೂ ಮನವರಿಕೆ ಮಾಡಿ ಕೊಡಲಾರವು.

ನಿರ್ದೇಶಕ ಜನಮನ್ನಣೆಯ ಅಮಲಿನಲ್ಲಿ ತೇಲುತ್ತಾ ಹೋದಂತೆಲ್ಲಾ ಆತನ ಕ್ರಿಯಾಶೀಲತೆ ಕಮರುತ್ತಾ ಹೋಗುತ್ತದೆ. ಯಾಕೆಂದರೆ ನಿರ್ದೇಶಕ ಏಕಾಂಗಿಯಾಗಿ ಧ್ಯಾನಿಸಿ ತನ್ನ ಅನಂತತೆ ಮತ್ತು ಮಿತಿಗಳನ್ನು ಲೆಕ್ಕ ಹಾಕುವ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಸಮರ್ಥ ನಿರ್ದೇಶಕನಿಗೆ ತನ್ನ ಒಂದೊಂದು ಚಿತ್ರವೂ ಹೊಚ್ಚಹೊಸದೆ. ತನ್ನನ್ನೇ ದಾಟುವ ಪ್ರಕ್ರಿಯೆ. ತನ್ನನ್ನೇ ಮೀರಿ ನಿಲ್ಲುವ ಅನಿವಾರ್ಯತೆ. ಆತ ಹೆಜ್ಜೆ ಮೂಡದ ಹಾದಿಯಲ್ಲಿ ಸಂಚರಿಸಲು ಪ್ರಯತ್ನಿಸಬೇಕಾಗುತ್ತದೆ; ತನ್ನನ್ನು ನುಂಗಿಹಾಕಬಲ್ಲ ಕ್ಲೀಷೆ, ಏಕತಾನತೆಗಳನ್ನು ಮೆಟ್ಟಿ ಮುನ್ನುಗ್ಗಬೇಕು. ಅವಲೋಕಿಸಬೇಕು, ಗ್ರಹಿಸಬೇಕು, ಸೃಷ್ಟಿಸಬೇಕು, ಭ್ರಮೆಯಲ್ಲಿ ಮುಳುಗಬಾರದು... ಆದ್ದರಿಂದ ಈ ನಿಟ್ಟಿನಲ್ಲಿ ಬಾಲಚಂದರ್ ಕ್ರಮಿಸಿದ ಹಾದಿ ಅದೆಷ್ಟೋ ಯುವನಿರ್ದೇಶಕರಿಗೆ ಮಾರ್ಗಸೂಚಿ.



ಕಮಲ್ ಹಾಸನ್, ರಜನಿಕಾಂತ್, ಸುಜಾತ, ಸರಿತಾ, ಪ್ರಕಾಶ್ ರೈ, ವಿವೇಕ್ ಮುಂತಾದವರನ್ನು ಲೈಮ್ ಲೈಟಿಗೆ ತಂದ ಬಾಲಚಂದರ್ ಒಂದು ರೀತಿಯಲ್ಲಿ ವಿಷ್ಣುವರ್ಧನ್, ಅಂಬರೀಶ್ ಥರದವರನ್ನು ಚಿತ್ರರಂಗಕ್ಕೆ ಪರಿಚಯಿಸಿದ ಕನ್ನಡದ ಪುಟ್ಟಣ್ಣ ಕಣಗಾಲ್. ಒಂದು ಗಂಭೀರ ವಸ್ತುವನ್ನು ಮನರಂಜನೆ, ಲವಲವಿಕೆಯ ಡೈಲಾಗ್ಸ್, ಪರಿಪಕ್ವ ನಿರ್ದೇಶನದ ಮೂಲಕ ಪ್ರೇಕ್ಷಕನಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದ ಬಾಲಚಂದರ್ ಮನುಷ್ಯನ ಆಳದ ಮಿಡಿತಗಳನ್ನು ಅರಿತಿದ್ದರು. ಬದುಕಿನ ನಿಗೂಢತೆ, ಮಾಂತ್ರಿಕತೆಯನ್ನು ಗ್ರಹಿಸಿದ್ದರು. ನೀವು ಇವರ ಒಂದು ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಬಾಲಚಂದರ್ ಕಣ್ಣಿನಲ್ಲಿ ನೋಡತೊಡಗಿದಾಗ ಒಬ್ಬ ನಿರ್ದೇಶಕ ಯಾಕಾಗಿ ಸಿನಿಮಾ ಮಾಡಬೇಕು ಎಂಬುದರ ಅರಿವು ತಾನೇತಾನಾಗಿ ತೆರೆದುಕೊಳ್ಳುತ್ತದೆ. ಆ ಅರಿವಿನ ಆಳಕ್ಕೆ ಇಳಿದಾಗ ಬೆಚ್ಚಿ ಬೀಳುವಂಥ ಬೆರಗು ಆವರಿಸುತ್ತದೆ. ಅಲ್ಲಿಯ ಎಷ್ಟು ಬೇಕೋ ಅಷ್ಟು ಮಾತು, ಅತಿ ಎನಿಸದ ಹಾಡು, ಸಹಜವಾಗಿ ತೇಲಿ ಬರುವ ದೃಶ್ಯಗಳು, ಅವಕ್ಕೆ ಇಂಬು ಕೊಡುವ ಹಿತಮಿತ ಹಿನ್ನೆಲೆ ಸಂಗೀತ; ಬಾಲಚಂದರ್ ಉದ್ದೇಶವನ್ನು ರಕ್ಷಿಸಿಕೊಂಡು ಮನುಕುಲದ ಒಳಗನ್ನು ಕೆದಕುವಂತೆ ಪ್ರತಿಭಾಪೂರ್ಣವಾಗಿ ಪ್ರಸ್ತುತಗೊಳ್ಳುತ್ತದೆ.

ಹಾಗಾದರೆ ಬಾಲಚಂದರ್ ಮುಟ್ಟಿದ್ದೆಲ್ಲ ಚಿನ್ನವಾಯಿತೆ? ಇಲ್ಲ- ಎಲ್ಲಾ ಸಾಧಕರಂತೆ ಬಾಲಚಂದರ್ ಕೂಡ ಗೆಲುವಿನಂತೆ ಸೋಲನ್ನೂ ಕಂಡವರೇ. ಯಾವತ್ತಿಗೂ ಸ್ಟಾರ್ ನಟರ ಬೆನ್ನು ಹತ್ತದ, ಸ್ಟಾರ್‌ಗಳನ್ನೇ ಹುಟ್ಟುಹಾಕುತ್ತಿದ್ದ ಈ ಕಿಂಗ್ ಮೇಕರ್ 1989ರಲ್ಲಿ ನಿರ್ದೇಶಿಸಿದ 'ಪುದು ಪುದು ಅರ್ಥಂಗಳ್' ಚಿತ್ರದ ತರುವಾಯ 'ಅಳಗನ್', 'ವಾನಮೇ ಎಲ್ಲೈ', 'ಜಾತಿ ಮಲ್ಲಿ' ತರಹದ ಚಿತ್ರಗಳನ್ನು ಮಾಡಿದರೂ ಅವರ ಹಿಂದಿನ ಚಿತ್ರಗಳಲ್ಲಿದ್ದ ಚಾರ್ಮ್ ಇರಲಿಲ್ಲವೆಂದೇ ಹೇಳಬಹುದು. ಇನ್ನು 'ಡ್ಯೂಯೆಟ್', 'ಪಾರ್ಥಲೇ ಪರವಶಂ', 'ಪೊಯ್' ಸುದ್ದಿಯನ್ನಂತೂ ಮಾಡಿದ್ದವು. ಇಷ್ಟಕ್ಕೂ ಎಪ್ಪತ್ತು, ಎಂಬತ್ತರ ದಶಕಗಳಲ್ಲಿ ಭಾರತವೇ ಬೆಚ್ಚಿ ಬೀಳುವಂಥ ಚಿತ್ರಗಳನ್ನು ನೀಡಿದ್ದ ಬಾಲಚಂದರ್ ತರುವಾಯದ ದಶಕಗಳಲ್ಲಿ ತಮ್ಮ ಎಂದಿನ ಖದರ್ ಉಳಿಸಿಕೊಳ್ಳುವಲ್ಲಿ ಹೆಣಗಾಟ ನಡೆಸಲೇಬೇಕಾಯಿತು. ಹೊಸಬರ ಪ್ರವೇಶ ಹಾಗೂ ಮೆಲ್ಲ ಮೆಲ್ಲ ಕವಿಯುತ್ತಿದ್ದ ಮುಪ್ಪು ಇದಕ್ಕೆ ಕಾರಣವೆನ್ನಬಹುದೇನೋ. ಹಾಗಂತ ಬಾಲಚಂದರ್ ಸುಮ್ಮನೆ ಕೂರಲಿಲ್ಲ. ಮೊದಲೆಲ್ಲಾ ತಮ್ಮ ಚಿತ್ರಗಳನ್ನು ನೋಡುತ್ತಿದ್ದ ಪ್ರೇಕ್ಷಕ ಟಿವಿಯತ್ತ ತಿರುಗುತ್ತಿದ್ದಂತೆಯೇ ತಾವೂ ಒಂದಿಷ್ಟು ಧಾರಾವಾಹಿಗಳನ್ನು ಮಾಡಿದ್ದಲ್ಲದೇ, ತಮ್ಮ ಕೊನೆಕೊನೆಯ ದಿನಗಳಲ್ಲಿ ಅದೇಕೋ ತಮ್ಮ ಕಲಾಬದುಕು ಆರಂಭವಾದ ರಂಗಭೂಮಿಯತ್ತಲೂ ಆಸಕ್ತಿ ತಳೆದಿದ್ದರು.

ಕೊನೆಯದಾಗಿ ಬರೆಯುವುದಾದರೆ ತಮಿಳು, ತೆಲುಗು, ಕನ್ನಡ, ಹಿಂದಿ ಭಾಷೆಗಳಲ್ಲಿ ಹಲವಾರು ಚಿತ್ರಗಳನ್ನು ನಿರ್ದೇಶಿಸಿ, ತಾವು ಆರಂಭಿಸಿದ ಪ್ರತಿಷ್ಠಿತ 'ಕವಿತಾಲಯ ಪ್ರೊಡಕ್ಷನ್' ಅಡಿಯಲ್ಲಿ ನೂರಾರು ಚಿತ್ರಗಳನ್ನು ನಿರ್ಮಿಸಿ, ಸಾವಿರಾರು ಹೊಸಪ್ರತಿಭೆಗಳಿಗೆ ಅವಕಾಶ ಒದಗಿಸಿಕೊಟ್ಟು, ಒಂಬತ್ತು ಬಾರಿ ರಾಷ್ಟ್ರಪ್ರಶಸ್ತಿಯನ್ನೂ, ಹದಿಮೂರು ಬಾರಿ ಫಿಲಂ ಫೇರ್ ಪ್ರಶಸ್ತಿಯನ್ನೂ, ನಾಲ್ಕು ಬಾರಿ ನಂದಿ ಅವಾರ್ಡನ್ನೂ, ಎ.ಎನ್.ಆರ್ ನ್ಯಾಷನಲ್ ಅವಾರ್ಡ್, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಸೇರಿದಂತೆ ಭಾರತದ ನಾಲ್ಕನೇ ಅತ್ಯುನ್ನತ ನಾಗರಿಕ ಪ್ರಶಸ್ತಿ ಪದ್ಮಶ್ರೀ ಪಡೆದು, ಈಚೆಗಷ್ಟೇ ಮದರಾಸಿನಲ್ಲಿ ಸಾವನ್ನಪ್ಪಿದ ಕೆ.ಬಾಲಚಂದರ್ ಚಿತ್ರರಸಿಕರ ಹೃದಯಗಳಲ್ಲಿ ಯಾವತ್ತಿಗೂ ಜೀವಂತ.

● ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 14-01-2015 RNI No. KARKAN2005/14648

ನಂಬರ್ ಒನ್ ಯಾರು?

'ಮಿಸ್ಟರ್ ಅಂಡ್ ಮಿಸಸ್ ರಾಮಾಚಾರಿ' ಸದ್ದು ಮಾಡುತ್ತಿದೆ. ಬಿಡುಗಡೆಯಾದ ಮೊದಲ ವಾರದಲ್ಲೇ ದಾಖಲೆಯ ಕಲೆಕ್ಷನ್ ದಾಖಲಿಸಿದೆ. ಈ ಬೆಳವಣಿಗೆಯಿಂದ ಯಶ್ ನಂಬರ್ ಒನ್ ಹೀರೋ ಆಗುವತ್ತ ಸಾಗುತ್ತಿದ್ದಾರೆ. ಹಾಗೆ ನೋಡಿದರೆ ಯಶ್ ಮುಟ್ಟಿದ್ದೆಲ್ಲಾ ಚಿನ್ನವಾಗುತ್ತಿದೆ. 'ಕಿರಾತಕ', 'ಡ್ರಾಮಾ', 'ಗೂಗ್ಲಿ', 'ರಾಜಾಹುಲಿ', 'ಗಜಕೇಸರಿ' ಹಾಗೂ 'ರಾಮಾಚಾರಿ' ಚಿತ್ರಗಳು ಒಂದರ ಹಿಂದೆ ಒಂದರಂತೆ ಹಿಟ್ ಲಿಸ್ಟ್ ಸೇರಿಕೊಂಡಿವೆ. ಇದೇ ವೇಳೆ 'ಸಾರಥಿ', 'ಚಿಂಗಾರಿ', 'ಬುಲ್ ಬುಲ್' ಮೂಲಕ ತಮ್ಮ ಸ್ಥಾನವನ್ನು ಗಟ್ಟಿಯಾಗಿರಿಸಿಕೊಂಡಿದ್ದ ದರ್ಶನ್ 'ಅಂಬರೀಷ' ಚಿತ್ರದ ಸೂಪರ್ ಫ್ಲಾಪ್ ನಂತರ ತಲೆ ಮೇಲೆ ಟವಲ್ ಹಾಕಿಕೊಂಡು ಮುಂದೇನು ಅನ್ನುವಂತಾಗಿದ್ದಾರೆ. ಇನ್ನು ಪುನೀತ್ ರಾಜಕುಮಾರ್ ವಿಷಯಕ್ಕೆ ಬಂದರೆ ಬಹುನಿರೀಕ್ಷೆ ಹುಟ್ಟು ಹಾಕಿದ್ದ 'ಪರಮಾತ್ಮ', 'ಯಾರೇ ಕೂಗಾಡಲಿ' ಹಾಗೂ 'ನಿನ್ನಿಂದಲೇ' ಚಿತ್ರಗಳು ಹೇಳಹೆಸರಿಲ್ಲದಂತೆ ದಬಾಕಿಕೊಂಡರೆ 'ಪವರ್' ಕಷ್ಟಪಟ್ಟು ನೂರು ದಿನ ಅನ್ನಿಸಿಕೊಂಡಿತು. ಹಾಗೆಯೇ ನಂಬರ್ ಒನ್ ಸ್ಥಾನಕ್ಕೆ ಹೋರಾಡುತ್ತಿರುವ ಮತ್ತೊಬ್ಬ ನಟ ಸುದೀಪ್. 'ಕೆಂಪೇಗೌಡ', 'ವರದನಾಯಕ', 'ಮಾಣಿಕ್ಯ' ಎಂಬ ರಿಮೇಕ್ ಚಿತ್ರಗಳ ಮೂಲಕ ಸುದೀಪ್ ಸೌಂಡ್ ಮಾಡಿದರೂ ನಂಬರ್ ಒನ್ ಅನ್ನಿಸಿಕೊಳ್ಳಲು ಆಗಲೇ ಇಲ್ಲ. ಹಾಗಾದರೆ ಸದ್ಯದ ಕನ್ನಡದ ನಂಬರ್ ಒನ್ ಹೀರೋ ಯಾರು? ಈಗಲೂ ಐದೂವರೆ ಕೋಟಿ ಡಿಮ್ಯಾಂಡ್ ಮಾಡುವ ದರ್ಶನ್ ತಾನೇ ನಂಬರ್ ಒನ್ ಎಂದರೆ, ನಾಲ್ಕಕ್ಕಿಂತ ಕಮ್ಮಿ ಇಲ್ಲ ಅನ್ನುವ ಪುನೀತ್ ತಾನೇ ನಂಬರ್ ಒನ್ ಅನ್ನುತ್ತಿದ್ದಾರೆ. ಇನ್ನು ಸುದೀಪ್ ಸಂಬಳವೂ ನಾಲ್ಕೇ ಕೋಟಿ. ಯಶ್ ಕೂಡ ನಾಕು ಕೋಟಿಯ ಪ್ರಾಡಕ್ಟ್. 'ರಾಮಾಚಾರಿ' ಹುಟ್ಟುಹಾಕುತ್ತಿರುವ ಹವಾ ನೋಡಿದರೆ ಯಶ್ ತಮ್ಮ ಸಂಭಾವನೆಯನ್ನು ಐದಕ್ಕೋ, ಆರಕ್ಕೋ ಏರಿಸಿಕೊಳ್ಳುವ ಸಂಭವವಿದೆ. ಇದರಿಂದ ನಾವು ಅರಿತುಕೊಳ್ಳಬೇಕಾದ ವಾಸ್ತವ ಯಶ್ ಮುಂದೊಮ್ಮೆ ದರ್ಶನ್, ಸುದೀಪ್, ಪುನೀತ್, ಶಿವರಾಜಕುಮಾರ್, ಧ್ರುವ ಸರ್ಜಾರನ್ನು ಹಿಂದಿಕ್ಕಿ ಕನ್ನಡದ ನಂಬರ್ ಒನ್ ಹೀರೋ ಆಗುವ ದಿನಗಳು ದೂರವಿಲ್ಲ ಅನ್ನಬಹುದು. ಅಂದಹಾಗೆ ಮುರಳಿ, ವಿಜಯರಾಘವೇಂದ್ರ, ಚಿರಂಜೀವಿ ಸರ್ಜಾ, ದುನಿಯಾ ವಿಜಯ್, ಕಾಮಿಡಿ ಟೈಮ್ ಗಣೇಶ್, ಪ್ರೇಮ್ ಅಜಯ್ ರಾವ್, ಶ್ರೀನಗರ ಕಿಟ್ಟಿ, ದಿಗಂತ್, ಪ್ರಜ್ವಲ್ ದೇವರಾಜ್, ಯೋಗಿ ಥರದ ಎರಡನೇ, ಮೂರನೇ ಬೆಂಚಿನ ಹೀರೋಗಳನ್ನು ಸದ್ಯಕ್ಕೆ ಇಲ್ಲಿ ಗಂಭೀರವಾಗಿ ಪರಿಗಣಿಸುವುದು ಬೇಡ ಅನ್ನಿಸುತ್ತದೆ. ನೀವೇನಂತೀರಿ?

'ಪಾತರಗಿತ್ತಿ' ಪವಾಡ

'ಪಾತರಗಿತ್ತಿ' ಅನ್ನುವ ಸಿನಿಮಾ ಕನ್ನಡದಲ್ಲಿ ಬರುತ್ತಿದೆ. ಈ ಚಿತ್ರದ ಮೂಲಕ ಈಶ್ವರ್ ಎಂಬ ಯುವಕ ಚೊಚ್ಚಲಬಾರಿಗೆ ನಿರ್ದೇಶಕನಾಗುವುದರ ಜೊತೆಗೆ, ಸಾಲಸೋಲ ಮಾಡಿ ಚಿತ್ರವನ್ನು ನಿರ್ಮಿಸಿದ್ದಾರೆ. ಈಗಾಗಲೇ ನೋಡಿದವರೆಲ್ಲ ಮೆಚ್ಚಿಕೊಂಡಿರುವ ಈ ಚಿತ್ರವು ಅತ್ಯಾಚಾರ ಕುರಿತಂತೆ ಸಮಾಜದಲ್ಲಿ ಜಾಗೃತಿ ಉಂಟುಮಾಡಬಲ್ಲ ಸಂದೇಶ ಹೊಂದಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಸಂದೇಶದ ಜೊತೆಗೆ ಉತ್ತಮ ರಂಜನೆಗೂ ಮೋಸವಿಲ್ಲವಂತೆ. ಈಗಾಗಲೇ ಸೌಂಡ್ ಮಾಡುತ್ತಿರುವ ಈ ಚಿತ್ರದ ಹಾಡುಗಳಲ್ಲಿನ ಮಾಧುರ್ಯತೆ ಜನರಿಗೆ ಇಷ್ಟವಾಗುತ್ತಿದೆ. ಸಾಧು ಕೋಕಿಲ, ಜಗದೀಶ್ (ಕೆಂಪ), ಲಕ್ಕಿ ಶಂಕರ್ ಮುಂತಾದವರ ಹತ್ತಿರ ಸಹಾಯಕರಾಗಿ ಕೆಲಸ ಮಾಡಿರುವ ಈಶ್ವರ್ ಈ ಚಿತ್ರದಲ್ಲಿ ಶ್ರೀಕಿ, ಪ್ರಜ್ಞು ಪೂವಯ್ಯ, ತಬಲಾ ನಾಣಿ, ಭವ್ಯ, ರಾಮಕೃಷ್ಣ, ಕುರಿಪ್ರತಾಪ್ ಮುಂತಾದವರನ್ನು ಹಾಕಿಕೊಂಡಿದ್ದಾರೆ. ಸಮೀರ್ ಕುಲಕರ್ಣಿ ಮ್ಯೂಸಿಕ್ ಮಾಡಿರುವ ಈ ಸಿನಿಮಾವನ್ನು ನೋಡಿದ ಸೆನ್ಸಾರ್ ಮಂದಿ ಭೇಷ್ ಅಂದಿದ್ದಾರೆ ಅನ್ನುವ ಸುದ್ದಿ ಇದೆ.

ಯಾರ ಜಪ್ತಿಗೂ ಸಿಗದ ಪ್ರೇಕ್ಷಕ

ಐದು ಹಾಡು, ನಾಲ್ಕು ಫೈಟು, ಗ್ಲಾಮರ್, ಒಂದಿಷ್ಟು ಶಿಳ್ಳೆ ಗಿಟ್ಟಿಸಬಲ್ಲ ಡೈಲಾಗ್ಸ್, ಆಕರ್ಷಕ ಪೋಸ್ಟರ್, ವಿಚಿತ್ರ ಟ್ರೈಲರ್- ಇವಿಷ್ಟಿದ್ದರೆ ಸಿನಿಮಾ ಗೆಲ್ಲುತ್ತದೆ ಅನ್ನುವ ನಂಬಿಕೆ ಇವತ್ತಿನ ಚಿತ್ರರಂಗದ ಅನೇಕರಲ್ಲಿದೆ. ಈ ಫಾರ್ಮುಲ ಇಟ್ಟುಕೊಂಡೇ ಅದೆಷ್ಟೋ ಚಿತ್ರಗಳು ತಯಾರಾಗುತ್ತಿವೆ. ಒಮ್ಮೊಮ್ಮೆ ವರ್ಕ್ ಔಟ್ ಆದರೆ, ತುಂಬಾ ಸಲ ಈ ಪುರಾತನ ಫಾರ್ಮುಲ ಉಲ್ಟಾ ಹೊಡೆದಿದೆ. ಈ ಮಾತು ಹೇಳಲು ಕಾರಣ ಇವತ್ತಿನ ದಿನಗಳಲ್ಲಿ ಕನ್ನಡದಲ್ಲಿ ತಯಾರಾಗುತ್ತಿವ ಬಹುತೇಕ ಚಿತ್ರಗಳು ಒಂದೇ ಬಗೆಯವಾಗಿವೆ. ಟೈಟಲ್ ಹೊರತುಪಡಿಸಿದರೆ ಬಹುತೇಕ ದರ್ಶನ್ ಚಿತ್ರಗಳು ಹೆಚ್ಚೂಕಮ್ಮಿ ಒಂದೇ ಥರ ಇರುತ್ತವೆ. ಅದೇ ಫೈಟು, ಅದೇ ಏಕತಾನತೆಯ ಡೈಲಾಗ್ಸ್. ಇನ್ನು ಸೂರಿ, ಯೋಗರಾಜ ಭಟ್, ಪ್ರೇಮ್ ಕೂಡ ತಮ್ಮ ತಮ್ಮ ಶೈಲಿ ಅನ್ನುವ ನೆಪದಲ್ಲಿ ಬಡಿಸಿದ ಊಟವನ್ನೇ ಮತ್ತೆ ಮತ್ತೆ ಬಡಿಸುವ ಸಾಹಸಕ್ಕೆ ಕೈ ಹಾಕಿ 'ಯಾಕೋ ವರ್ಕೌಟ್ ಆಗ್ತಿಲ್ವಲ್ಲಾ...' ಅಂತ ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ಇಷ್ಟೆಲ್ಲಾ ಯಾಕೆ ಬರೆಯಬೇಕಾಯಿತು ಎಂದರೆ ಇತ್ತೀಚಿಗೆ ಬಿಡುಗಡೆಯಾದ 'ಹಗ್ಗದ ಕೊನೆ' ಚಿತ್ರ ಚೆನ್ನಾಗಿದ್ದರೂ ಥಿಯೇಟರ್ ಖಾಲಿ ಹೊಡೆಯುತ್ತಿತ್ತು. ದಯಾಳ್ ಪದ್ಮನಾಭನ್ ಅಪರೂಪಕ್ಕೆ ಒಂದೊಳ್ಳೆಯ ಸಿನಿಮಾ ಮಾಡುವುದರ ಜೊತೆಗೆ ನವೀನ್ ಕೃಷ್ಣಗೆ ಒಂದು ಬ್ರೇಕ್ ನೀಡುವ ತವಕದಲ್ಲಿದ್ದರು. ಆದರೆ 'ಹಗ್ಗದ ಕೊನೆ' ಕಾಸು ಮಾಡುವಲ್ಲಿ ಸೋತಿತು. ಇಷ್ಟಕ್ಕೂ ಕನ್ನಡ ಪ್ರೇಕ್ಷಕನಿಗೆ ಎಂತಹ ಚಿತ್ರಗಳನ್ನು ಮಾಡಬೇಕು ಅನ್ನುವುದು ಇವತ್ತಿಗಿರುವ ದೊಡ್ಡ ಪ್ರಶ್ನೆ.

'ಗಾಳಿಬೀಜ'ಕ್ಕೆ ಸೆನ್ಸಾರ್ ಕಾಟ

ಸೆನ್ಸಾರ್ ಮಂಡಳಿ ತನಗೆ ಸಂಬಂಧ ಪಡದ ವಿಷಯದಲ್ಲೆಲ್ಲಾ ಮೂಗು ತೂರಿಸಲು ಶುರು ಮಾಡಿಕೊಂಡಿದೆಯಾ? ಹೌದು ಅನ್ನುತ್ತದೆ ಗಾಂಧಿನಗರ. ನಾಗೇಂದ್ರ ಸ್ವಾಮಿ ಬಂದ ನಂತರವಂತೂ ಸೆನ್ಸಾರ್ ಮಂಡಳಿ ಕಂಡರೆ ಚಿತ್ರರಂಗದ ಮಂದಿಗೆ ಒಂಥರಾ ಭೀತಿ ಶುರುವಾಗಿದೆ. ಹಾಗೆಂದ ಮಾತ್ರಕ್ಕೆ ನಾಗೇಂದ್ರ ಸ್ವಾಮಿ ಫುಲ್ ಸ್ಟ್ರಿಕ್ಟ್ ಅಂತೇನೂ ಅಲ್ಲ, ಈ ಭೀತಿಗೆ ಕಾರಣ ಅವರ ಅಧಿಕಪ್ರಸಂಗಿತನ ಅನ್ನುವ ಮಾತುಗಳು ಕೇಳಿಬರುತ್ತಿವೆ. ಇಷ್ಟೆಲ್ಲಾ ಯಾಕೆ ಹೇಳಬೇಕಾಯಿತು ಎಂದರೆ 'ಗಾಳಿಬೀಜ' ಎನ್ನುವ ಚಿತ್ರದ ಪಾಲಿಗೆ ಸೆನ್ಸಾರ್ ಮಂಡಳಿ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಮೂಲತಃ ಚಿತ್ರಕಾರರಾದ ಬಾಬು ಈಶ್ವರ್ ಪ್ರಸಾದ್ ನಿರ್ದೇಶನದ ಈ ಚಿತ್ರವನ್ನು ಕಳೆದ ಡಿಸೆಂಬರ್ ಇಪ್ಪತ್ತೈದರಂದು ಸೆನ್ಸಾರ್ ಮಂಡಳಿ ವೀಕ್ಷಿಸಿತು. ವೀಕ್ಷಿಸಿದ ನಂತರ ಚಿತ್ರದ ಬಗ್ಗೆ ಅಪಸ್ವರವೆತ್ತಿದ ಸೆನ್ಸಾರ್ ಮಂಡಳಿ "ಇದು ಡಾಕ್ಯುಮೆಂಟರಿಯೂ ಅಲ್ಲ, ಫೀಚರ್ ಫಿಲಮ್ಮೂ ಅಲ್ಲ.. ಒಟ್ಟಾರೆ ಇದು ಸಿನಿಮಾನೇ ಅಲ್ಲ" ಅನ್ನುವ ತೀರ್ಮಾನಕ್ಕೆ ಬಂದು ಸರ್ಟಿಫಿಕೇಟ್ ಕೊಡಲು ಖಡಾಖಂಡಿತವಾಗಿ ನಿರಾಕರಿಸಿದೆ. ಇಷ್ಟಕ್ಕೂ ರಸ್ತೆ ಬದುಕಿನ ಬಗ್ಗೆ ರಸ್ತೆಯಲ್ಲಿ ಕಂಡು ಬರುವ ಅಚ್ಚರಿಗಳ ಬಗ್ಗೆ ನಿರ್ಮಿಸಲಾಗಿರುವ ಈ ಚಿತ್ರ ಕನ್ನಡಕ್ಕೆ ತೀರಾ ಹೊಸದು. ಎಂದಿನ ಕಮರ್ಷಿಯಲ್ ಎಲಿಮೆಂಟ್ಸ್‌ಗಳಾದ ಸಾಂಗು, ಫೈಟು, ಅಬ್ಬರದ ಡೈಲಾಗ್ಸ್ ಈ ಚಿತ್ರದಲ್ಲಿಲ್ಲ, ಸಿನಿಮಾ ಕಲೆ ಅನ್ನುವುದು ದೃಶ್ಯಮಾಧ್ಯಮ ಅನ್ನುವ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ತೀರಾ ಸಾಂಕೇತಿಕವಾಗಿ, ಮಾರ್ಮಿಕವಾಗಿ ಈ ಚಿತ್ರವನ್ನು ತಯಾರಿಸಲಾಗಿದೆಯಂತೆ. ಏಳು ಶಾರ್ಟ್ ಫಿಲಂ ನಿರ್ದೇಶಿಸಿರುವ ಬಾಬು ಈಶ್ವರ್ ಪ್ರಸಾದ್ ಇದೇ ಮೊದಲ ಬಾರಿಗೆ ಈ ಫುಲ್ ಲೆಂತ್ ಫೀಚರ್ ಫಿಲಂ ಮಾಡಿದ್ದಾರೆ. ಗಿರೀಶ್ ಕಾಸರವಳ್ಳಿ, ಕವಿತಾ ಲಂಕೇಶ್ ತರಹದವರೊಂದಿಗೆ ಕೆಲಸ ಮಾಡಿರುವ ಅನುಭವಿ ಸಂಕಲನಕಾರ ಎನ್.ಎಂ.ಸ್ವಾಮಿಯಂತಹ ತಂತ್ರಜ್ಞರನ್ನು ಚಿತ್ರಕ್ಕೆ ಬಳಸಿಕೊಳ್ಳಲಾಗಿದೆ. ಹಾಗೆಯೇ ಕೆ.ಟಿ.ಶಿವಪ್ರಸಾದ್ ತರಹದವರ ಮಾರ್ಗದರ್ಶನದಲ್ಲಿ ಸಿನಿಮಾ ಮಾಡಿದ್ದಾರೆ. ಆದರೂ ಸೆನ್ಸಾರ್ ಮಂಡಳಿ ಅದೇಕೋ 'ಗಾಳಿಬೀಜ' ಚಿತ್ರವನ್ನು ಸಾರಾಸಗಟಾಗಿ ತಿರಸ್ಕರಿಸಿದೆ. ಕ್ಯಾಮೆರಾ ವರ್ಕ್ ಚೆನ್ನಾಗಿಲ್ಲ, ಅದು ಸರಿ ಇಲ್ಲ ಇದು ಸರಿ ಇಲ್ಲ ಸಬ್ಸಿಡಿಯ ದೃಷ್ಟಿಯಿಂದ ಸಿನಿಮಾ ಮಾಡಿದ್ದೀರಿ... ಎಂಬಂತಹ ತನ್ನ ವ್ಯಾಪ್ತಿಗೆ ಬರದಂತಹ ಮಾತುಗಳನ್ನಾಡಿದೆ. ಇನ್ನಾದರೂ ಸೆನ್ಸಾರ್ ಮಂಡಳಿ ತನ್ನ ಮಿತಿಗಳನ್ನು ಅರ್ಥಮಾಡಿಕೊಂಡರೆ ಒಳ್ಳೇದು ಅಲ್ವೇ?





ವಾಟೀಸ್ ದಿಸ್ ನಾಗು?

'ಅರಮನೆ', 'ಸಂಜು ವೆಡ್ಸ್ ಗೀತ' ಮತ್ತು 'ಮೈನಾ' ಚಿತ್ರಗಳ ಮೂಲಕ ಕನ್ನಡದ ಮಟ್ಟಿಗೆ ಒಂದಿಷ್ಟು ಭರವಸೆ ಮೂಡಿಸಿದ್ದ ನಾಗಶೇಖರ್ ಇತ್ತೀಚಿಗೆ ಸುಳ್ಳು ಹೇಳುವುದನ್ನು ಕಲಿತಿದ್ದಾರಾ? ಹೌದೆನ್ನುತ್ತದೆ ಅವರ ಇತ್ತೀಚಿನ ನಡವಳಿಕೆ. ವರ್ಷದ ಹಿಂದೆ ಸುದೀಪ್ ಹಾಕಿಕೊಂಡು 'ಗಡಿಯಾರ' ಚಿತ್ರ ಮಾಡುತ್ತೇನೆ ಅಂತ ಹೇಳಿಕೊಂಡು ಓಡಾಡುತ್ತಿದ್ದ ನಾಗಶೇಖರ್ ಆಮೇಲೆ ಅದೇಕೋ ಆ ವಿಷಯದ ಬಗ್ಗೆ ಉಸಿರೆತ್ತಲೇ ಇಲ್ಲ. ಸ್ವಲ್ಪ ಕಾಲ ಸುಮ್ಮನಿದ್ದ ನಾಗಶೇಖರ್ 'ಸಂಜು ವೆಡ್ಸ್ ಗೀತಾ- 2' ಮಾಡ್ತೀನಿ ನೋಡ್ತಾ ಇರಿ ಅಂದಿದ್ದರು. ಆ ಚಿತ್ರವನ್ನು ತಾವೇ ನಿರ್ಮಾಣ ಮಾಡುವುದರ ಜೊತೆಗೆ ತಾವೇ ಹೀರೋ ಕೂಡ ಆಗುವುದರ ಜೊತೆಗೆ ತಮ್ಮ ಸಹೋದರ ಚಿರಂಜೀವಿಯನ್ನು ಆ ಮೂಲಕ ಡೈರೆಕ್ಟರ್ ಮಾಡುವುದಾಗಿ ಹೇಳಿಕೊಂಡಿದ್ದರು. ಅದೇಕೋ ಆ ಸುದ್ದಿಯೂ ಸುದ್ದಿಯಾಗಿ ಉಳಿಯಿತೇ ಹೊರತು ಕಾರ್ಯರೂಪಕ್ಕೆ ಬರಲಿಲ್ಲ. ಇದರ ಜೊತೆಗೆ ನಾಗಶೇಖರ್ ಹೇಳಿದ ಮತ್ತೊಂದು ಕಲರ್‌ಫುಲ್ ಸುಳ್ಳೆಂದರೆ ಅಭಿಷೇಕ್ ಬಚ್ಚನ್- ಐಶ್ವರ್ಯ ರೈ ಕಾಂಬಿನೇಶನ್ನಿನಲ್ಲಿ ಒಂದು ಬಾಲಿವುಡ್ ಚಿತ್ರ ಮಾಡುವುದು, ಆ ಚಿತ್ರಕ್ಕೆ ಮಾರ್ಸ್ ಆಡಿಯೋ ಕಂಪನಿಯ ಹತ್ತತ್ತು ಪೈಸೆಯನ್ನು ಲೆಕ್ಕ ಹಾಕುವ ಭರತ್ ಜೈನ್ ಕೋಟಿಗಟ್ಟಲೆ ಕಾಸು ಸುರಿಯುವುದು. ಅಂದಹಾಗೆ 'ಕಟ್ಟೆ', 'ಸಿಗರೇಟ್' ಮತ್ತು 'ತರ್ಲೆ ನನ್ಮಕ್ಳು' ಚಿತ್ರಗಳಲ್ಲಿ ನಾಗಶೇಖರ್ ಹೀರೋ ಆಗಿ ನಟಿಸಿದರೂ ಇವ್ಯಾವೂ ಈವರೆಗೆ ರಿಲೀಸ್ ಆಗಿಲ್ಲ ಅನ್ನುವುದು ಸುಳ್ಳಲ್ಲ, ಸತ್ಯ.

ಥಿಯೇಟರ್ ಬೇಕಾಗಿವೆ

'ಸಿನಿಮಾ ಮಾಡುವುದು ಸುಲಭ, ರಿಲೀಸ್ ಮಾಡುವುದು ಕಷ್ಟ' ಅನ್ನುವ ಮಾತು ಗಾಂಧಿನಗರದ ಪಾಲಿಗೆ ಅಕ್ಷರಶಃ ಸತ್ಯ. ಹೌದು, ಕಷ್ಟಪಟ್ಟು ಸಾಲಸೋಲ ಮಾಡಿ ಹೇಗೋ ಸಿನಿಮಾ ಮಾಡಿಬಿಡುತ್ತಾರೆ. ಆದರೆ ಆ ಸಿನಿಮಾವನ್ನು ಥಿಯೇಟರ್ ಬುಕ್ ಮಾಡಿ ತೆರೆಗೆ ತರುವಷ್ಟರಲ್ಲಿ ನಿರ್ಮಾಪಕರು ಹೈರಾಣಾಗಿಬಿಡುತ್ತಾರೆ. ಈ ಸಮಸ್ಯೆಗೆ ಮುಖ್ಯಕಾರಣ ಥಿಯೇಟರ್‌ಗಳ ಕೊರತೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ತಯಾರಾಗುತ್ತಿರುವ ಚಿತ್ರಗಳು. ವರ್ಷಕ್ಕೆ ಸರಾಸರಿ ನೂರಿಪ್ಪತ್ತೈದು ಚಿತ್ರಗಳು ಸದ್ಯಕ್ಕೆ ಕನ್ನಡದಲ್ಲಿ ತಯಾರಾಗುತ್ತಿದೆ. ಆ ಪೈಕಿ ಪ್ರಮುಖ ಹೀರೋಗಳ, ಪ್ರಮುಖ ಬ್ಯಾನರ್‌ಗಳ ಚಿತ್ರಗಳು ಹೇಗೋ ಚಿತ್ರಮಂದಿರಗಳನ್ನು ಹೊಂದಿಸಿಕೊಂಡು ಬಿಡುಗಡೆ ಭಾಗ್ಯ ಪಡೆದರೆ ಉಳಿದ ಅದೆಷ್ಟೋ ಚಿತ್ರಗಳು ಡಬ್ಬದಲ್ಲೇ ಕೊಳೆಯಬೇಕಾದ ಸ್ಥಿತಿ ಇವತ್ತಿಗೆ ಕಾಮನ್ನಾಗಿದೆ. ಇತ್ತೀಚಿನ ದಿನಗಳಲ್ಲಿ ಸ್ಟಾರ್ ನಟರ ಚಿತ್ರಗಳಿಗೂ ಥಿಯೇಟರ್‌ಗಳು ಸಿಗುತ್ತಿಲ್ಲ. ಹಾಗೆ ನೋಡಿದರೆ ವಿನಯ್ ರಾಜಕುಮಾರ್ ಅಭಿನಯದ 'ಸಿದ್ಧಾರ್ಥ', ಎ.ಪಿ.ಅರ್ಜುನ್ ನಿರ್ದೇಶನದ 'ರಾಟೆ', ಪೂಜಾ ಗಾಂಧಿಯ 'ಅಭಿನೇತ್ರಿ', ಯೋಗರಾಜ ಭಟ್ಟರ 'ವಾಸ್ತು ಪ್ರಕಾರ', ಶಶಾಂಕ್ ನಿರ್ದೇಶನದ 'ಕೃಷ್ಣಲೀಲ', ಓಂ ಪ್ರಕಾಶ್ ರಾವ್ ನಿರ್ದೇಶನದ 'ಕಟ್ಟೆ', ಲಕ್ಕಿ ಶಂಕರ್ ನಿರ್ದೇಶನದ 'ಸಿಗರೇಟ್' ತರಹದ ಚಿತ್ರಗಳು ರೆಡಿಯಾಗಿದ್ದರೂ ಸರಿಯಾದ ಥಿಯೇಟರ್‌ಗಳು ಸಿಗದ ಕಾರಣ ಯಾವಾಗ ರಿಲೀಸ್ ಭಾಗ್ಯ ಕಾಣಬೇಕು ಅನ್ನುವ ಗೊಂದಲದಲ್ಲೇ ಇವೆ. ಇಷ್ಟಕ್ಕೂ ಹೀಗೆ ಥಿಯೇಟರ್‌ಗಳು ಸಿಕ್ಕದೆ ಕಷ್ಟಪಟ್ಟು ಮಾಡಿದ ಚಿತ್ರಗಳು ಡಬ್ಬದಲ್ಲೇ ಉಳಿದುಬಿಟ್ಟರೆ ನಿರ್ಮಾಪಕರ ಗತಿಯೇನು? ಇಂತಹ ಸಮಸ್ಯೆಗಳಿಂದ ಮುಂದೊದಗಬಹುದಾದ ಇನ್ನೊಂದು ಭೀಕರ ಸಮಸ್ಯೆಯೆಂದರೆ ಹೇಗಾದರೂ ಮಾಡಿ ಚಿತ್ರಗಳನ್ನು ಬಿಡುಗಡೆ ಮಾಡಲೇಬೇಕಾದ ಅನಿವಾರ್ಯತೆ. ಒಟ್ಟಿನಲ್ಲಿ ರಿಲೀಸ್ ಆದರೆ ಸಾಕು ಅನ್ನುವ ವಾತಾವರಣ ನಿರ್ಮಾಣವಾದರೆ ಎಷ್ಟೋ ದೊಡ್ಡ ದೊಡ್ಡ ಚಿತ್ರಗಳು ಒಂದೇ ವಾರದಲ್ಲಿ ಬಿಡುಗಡೆಯಾಗಿ, ಒಂದಕ್ಕೊಂದು ಢಿಕ್ಕಿ ಹೊಡೆದು ಯಾವ ಚಿತ್ರಕ್ಕೂ ಸರಿಯಾದ ಲಾಭ ಸಿಕ್ಕದೆ ನಷ್ಟವನ್ನು ಅನುಭವಿಸಬೇಕಾಗಬಹುದು. ಉಳ್ಳವರ ಕಥೆಯೇ ಹೀಗಾಗಿಬಿಟ್ಟರೆ ಸಣ್ಣಪುಟ್ಟ ನಿರ್ಮಾಪಕರ ಕಷ್ಟ ಹೇಳುವುದೇ ಬೇಡ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com